ಅಧ್ಯಕ್ಷರು.— ಹೇಳಿಕೆಯನ್ನು ಸಭೆಯ ಮುಂದೆ ಇಡಲಾಯಿತು. ಈಗ ಭಕ್ತವತ್ಸಲಂ ಅವರು ಸಭೆಯಲ್ಲಿ ಗೈರು ಹಾಜರಿರುವುದರಿಂದ ಏಕಾಂತಯ್ಯ ಅವರು ತಮ್ಮ ಭಾಷಣ ಪ್ರಾರಂಭ ಮಾಡಲಿ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಚರ್ಚೆ

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಖರ್ಗೆ ಯವರು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸುವ ಪ್ರಸ್ತಾಪವನ್ನು ಏನು ಸೂಚಿಸಿದ್ದಾರೆ, ಆ ಪ್ರಸ್ತಾವವನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮಾನ್ಯ ಆಡಳಿತ ಪಕ್ಷದ ಕೆಲವು ಸದಸ್ಯರು ಹಾಗೂ ಈ ಕಡೆ ಕೂತ ಕೆಲವು ಸದಸ್ಯರು ೯ ನೇ ವಿಧಾನಸಭೆ ಚುನಾವಣೆ ಫಲಿತಾಂಶದ ಬಗ್ಗೆ ಕೆಲವು ಮಾತುಗಳನ್ನಾಡಿದ್ದಾರೆ. ಚುನಾವಣಾ ಫಲಿತಾಂಶದ ಬಗ್ಗೆ ತಮ್ಮದೇ ಆದ ಕಾರಣಗಳನ್ನು ಕೊಟ್ಟು ಹೇಳಿದ್ದಾರೆ. ಅದರ ಬಗ್ಗೆ ನಾನುವಾ ಮಾಡುವುದಕ್ಕೆ ಇಷ್ಟಪಡುವು ದಿಲ್ಲ. ಆದರೆ ಕೆಲವು ವಿಚಾರಗಳನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ದೇಶದಲ್ಲಿ ನಾವೆಲ್ಲರೂ ಒಪ್ಪಿರುವ ಈ ಸಂಸದೀಯ ವ್ಯವಸ್ಥೆಯಲ್ಲಿ ಕೆಲಸ ಮಾಡಬೇಕಾಗಿದೆ. ಈ ಜನತಾಂತ್ರಿಕ ಆಡಳಿತ ಪದ್ಧತಿಯಲ್ಲಿ ಹೊಸ ಚುನಾವಣೆಯಾಗಲೀ, ಆ ಚುನಾವಣೆ ಮೂಲಕ ಹೊಸ ಸರ್ಕಾರ ಅಧಿಕಾರಕ್ಕೆ ಬರುವುದು ಅತ್ಯಂತ ಅಗತ್ಯ. ಕೆಲವು ಸಂದರ್ಭಗಳಲ್ಲಿ ಅನಿವಾರ್ಯವೂ ಆಗಬಹುದು. ಆದರೆ ಅದಕ್ಕೆ ಆಡಳಿತ ಪಕ್ಷದ ಸದಸ್ಯರು ತಮ್ಮದೇ ಆದ ಕಾರಣಗಳನ್ನು ಹೇಳಿದ್ದಾರೆ. ಹಿಂದೆ ಇದ್ದ ಸರ್ಕಾರ ಸರಿಯಾಗಿ ಕೆಲಸ ಮಾಡಿಲ್ಲ, ವಚನ ಪಾಲನೆ ಮಾಡಿಲ್ಲ, ಅದಕ್ಕೋಸ್ಕರ ಜನರು ನಮ್ಮ ಪಕ್ಷವನ್ನು ತಿರಸ್ಕಾರ ಮಾಡಿದ್ದಾರೆಂದು ಹೇಳಿದ್ದಾರೆ. ಜನಹಿತ ಕಾರ್ಯಕ್ರಮಗಳನ್ನು ನಾವು ಸರಿಯಾಗಿ ಮಾಡಲಿಲ್ಲ ಆದ ರಿಂದ ಜನ ನಮ್ಮನ್ನು ತಿರಸ್ಕಾರ ಮಾಡಿದ್ದಾರೆ ಮತ್ತು ಅನೇಕ ಹಗರಣಗಳ ಕಾರಣಕ್ಕಾಗಿ ನಮ್ಮ ಸರ್ಕಾರ ಹೋಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಅದು ಅವರ ಹೇಳಿಕೆಯ ಮಾತಾಗುತ್ತದೆ. ಆ ವಿಚಾರಕ್ಕೆ ನಾನು ಬರುತ್ತೇನೆ. ಯಾವುದೇ ಆಡಳಿತ ಪದ್ಧತಿಯಲ್ಲಿ ದುರದೃಷ್ಟವಶಾತ್ ಅನೇಕ ತಪ್ಪುಗಳಾಗುತ್ತವೆ ಎನ್ನುವ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ. ಅಷ್ಟೆ ಅಲ್ಲ, ಯಾವುದೇ ಒಂದು ಇನ್‌ಡೆಕ್ಟೀವ್ ಅಟಿಟ್ಯೂಡ್ ಇಲ್ಲದೆ ನಾನು ಕೆಲಸವನ್ನು ಮಾಡುತ್ತೇನೆಂದು ಹೇಳಿ ದ್ದಾರೆ. ಆ ವಿಚಾರಗಳ ಬಗ್ಗೆ ನಾನು ಅನಂತರ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕಿಂತ ಮೊದಲು ಈಗ ಚುನಾವಣಾ ಫಲಿತಾಂಶ ಏನು ಬಂದಿದೆ ಆ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಶ್ರೀ ಹಿಂಡಸಗೇರಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಚುನಾವಣೆ ಫಲಿತಾಂಶವನ್ನು ನೋಡಿದಾಗ ಜನ ಮತ ಕೊಟ್ಟಿದ್ದು ನಕರಾತ್ಮಕವಾದ ಮತ ಗಳು ಎಂಬುದನ್ನು ನಾವು ಮರೆಯಬಾರದು. ಇವತ್ತಿನ ದಿವಸ ಆಡಳಿತ ಪಕ್ಷಕ್ಕೆ ಬಂದಿರುವ ಮತಗಳ ಸಂಖ್ಯೆಯನ್ನು ನೋಡಿದಾಗ ಕೇವಲ ೩.೮ ರಷ್ಟು ಮತಗಳನ್ನು ಮಾತ್ರ ಹೆಚ್ಚಾಗಿ ಗಳಿಸಿದ್ದಾರೆ. ೧೯೮೫ ನೇ ಇಸವಿಯಲ್ಲಿ ನಡೆದ ಚುನಾವಣೆಯಲ್ಲಿ ಶೇಕಡ ೪೫.೧೦ ರಷ್ಟು ಮತಗಳನ್ನು ಪಡೆದಿದ್ದರೆ ೧೯೮೯ರ ಚುನಾವಣೆಯಲ್ಲಿ ೪೧.೪೬ ಮತಗಳನ್ನು ಮಾತ್ರ ಶೇಕಡವಾರು ಪಡೆದಿದ್ದಾರೆ. ಅದೇರೀತಿ ಜನತಾಪಕ್ಷ ಏನಿತ್ತು, ಅದು ೧೯೮೫ನೇ ಇಸವಿಯಲ್ಲಿ ಶೇಕಡ ೪೩.೮೪ ಮತಗಳನ್ನು ಪಡೆದಿದ್ದರೆ, ಆ ಪಕ್ಷ ಇಬ್ಭಾಗ ವಾಗಿ ಜನತಾ ಮತ್ತು ಜನತಾದಳ ಎಂದು ಎರಡು ಪಕ್ಷಗಳಾಗಿ ಶೇಕಡ ೩೭ ೭೫ ರಷ್ಟು ಶೇಕಡವಾರು ಮತಗಳನ್ನು ಪಡೆದಿದ್ದೇವೆ. ಈ ಮಾತನ್ನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ, ತಮಗೇ ರಾಜ್ಯದ ಜನತೆ ಮತ ಕೊಟ್ಟಿದ್ದಾರೆಂದು ಏನು ಹೇಳುತ್ತಿದ್ದೀರಿ ಅದಕ್ಕೋಸ್ಕರ ಹೇಳುತ್ತಿದ್ದೇನೆ. ಅದರ ಪ್ರಮಾಣ ಬಹಳ ಕಡಿಮೆಯಾಗಿದೆ. ಕಾಂಗ್ರೆಸ್ ವಿರೋಧಿ ಮತಗಳು ಹಂಚಿಕೆಯಾಗಿಹೋಗಿದ್ದರಿಂದ ತಾವು ಅಧಿಕಾರಕ್ಕೆ ಬರಲಿಕ್ಕೆ ಸಾಧ್ಯವಾಗಿದೆ. ತಾವು ಪ್ರಚಂಡ ಬಹುಮತದಿಂದ ಆರಿಸಿ ಬಂದಿದ್ದೇವೆಂದು ಹೇಳುತ್ತೀರಿ, ಆದರೆ ವಿರೋಧಿ ಮತಗಳು ಒಡೆದದ್ದರಿಂದ ಆ ರೀತಿಯಾಯಿತೇ ಹೊರತು ಅದಕ್ಕೆ ಮತ್ತೊಂದು ಕಾರಣ ಅಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಇನ್ನೊಂದು ವಿಚಾರವೆಂದರೆ ಚುನಾವಣೆ ಸರಿಯಾಗಿ ನಡೆಯಿತೇ ಇಲ್ಲವೆ ಎನ್ನುವ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ನಾನು ವಿಶೇಷವಾಗಿ ಯಾರ ಮೇಲಿನ ಮಮತೆಯಿಂದ ಅಥವ ದ್ವೇಷಪೂರಿತವಾದ ಭಾವನೆಯಿಂದ ಈ ಮಾತನ್ನು ಹೇಳುವು ದಿಲ್ಲ. ನಾವು ಅನೇಕ ಚುನಾವಣೆಗಳನ್ನು ಎದುರಿಸಿದ್ದೇವೆ. ಲೋಕಸಭೆ ಮತ್ತು ವಿಧಾನಸಭೆಯ ೯ನೇ ಚುನಾವಣೆಯನ್ನು ಎದುರಿಸಿದ್ದೇವೆ. ಇಂತಹ ಚುನಾವಣೆಗಳು ನಡೆದಾಗ ಕನಿಷ್ಟ ಪಕ್ಷ ಮೂರು ಸಾರಿ ಹೊಸ ಪಕ್ಷಗಳ ಸರ್ಕಾರ ಸ್ಥಾಪನೆ ಆಗಿದೆ. ೧೯೬೭ ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾದ ವೀರೇಂದ್ರ ಪಾಟೀಲರ ಸರ್ಕಾರವಿತ್ತು. ನಂತರ ಅವರ ಸರ್ಕಾರ ಹೋಯಿತು. ಆಗ ಬದಲಿ ಸರ್ಕಾರ ಬಂತು. ೧೯೭೨ ರಲ್ಲಿ ಕಾಂಗ್ರೆಸ್ (ಐ) ಸರ್ಕಾರ ರಾಜ್ಯದಲ್ಲಿ ಬಂತು ೧೯೮೩ನೇ ಇಸವಿಯಲ್ಲಿ ಮತ್ತು ೧೯೮೫ರಲ್ಲಿ ಹೊಸ ಸರ್ಕಾರಗಳು ಬಂದವು. ೧೯೮೯ ರಲ್ಲಿ ಇವತ್ತಿನ ದಿವಸ ಪುನಃ ಕಾಂಗ್ರೆಸ್ ಸರ್ಕಾರ

ಅಧಿಕಾರಕ್ಕೆ ಬಂದಿದೆ. ಸರ್ಕಾರಗಳ ಬದಲಾವಣೆಗಳಿಂದ ಏನಾದರೂ ಸುಧಾರಿಸಲಿಕ್ಕೆ ಆಗುತ್ತದೆನ್ನುವುದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಎಲ್ಲಿಯವರೆಗೆ ಒಬ್ಬ ಬಂಡವಾಳಶಾಹಿಯ ಕೃಪಾಪೋಷಿತ ಸರ್ಕಾರ ಬದಲಾವಣೆ ಆದರೆ, ಇನ್ನೊಬ್ಬ ಬಂಡವಾಳಶಾಹಿಯ ಕೃಪಾಪೋಷಿತ ಸರ್ಕಾರ ಸ್ಥಾಪನೆಯಾಗುತ್ತದೆ. ಈ ದೇಶದಲ್ಲಿ ಸಾಮಾಜಿಕ ಕ್ರಾಂತಿಯನ್ನು ತರುವುದಕ್ಕೆ ಆಗುವುದಿಲ್ಲ. ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳುತ್ತಾರೆ. ಮಾನ್ಯ ವೀರೇಂದ್ರ ಪಾಟೀಲರು ಹೋದರು, ದೇವರಾಜ ಅರಸ್‌ರವರು ಬಂದರು. ಅದೇ ರೀತಿ ಗುಂಡೂರಾಯರು ಹೋದರು, ಹೆಗಡೆಯವರು ಬಂದರು. ಹೆಗಡೆಯವರು ಹೋದರು ಆಮೇಲೆ ಬೊಮ್ಮಾಯಿಯವರು ಬಂದರು. ಈ ಬೊಮ್ಮಾಯಿಯವರು ಹೋಗಿ ವೀರೇಂದ್ರ ಪಾಟೀಲರು ಬಂದಿದ್ದಾರೆ. ಇದರಿಂದ ಬದಲಾವಣೆ ತರುವುದಕ್ಕೆ ಸಾಧ್ಯವೇ ಅಂದರೆ ಖಂಡಿತವಾಗಿಯೂ ಸಾಧ್ಯವಿಲ್ಲ. ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆಂದರೆ ಕೇವಲ ಸರ್ಕಾರ ಮತ್ತು ಪಕ್ಷಗಳ ಬದಲಾವಣೆಗಳಿಂದ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಜಾರಿಗೆ ತರಲಿಕ್ಕೆ ಸಾಧ್ಯವಿಲ್ಲ. ರಾಷ್ಟ್ರದ ರಾಜಕೀಯ ಪರಿಸ್ಥಿತಿಯಲ್ಲಿ ಏನಾಗುತ್ತದೆ, ರಾಜ್ಯ ಸರ್ಕಾರ ಬದಲಾವಣೆಯಾದರೂ ರಾಷ್ಟ್ರದಲ್ಲಿ ಸರ್ಕಾರ ಬದಲಾವಣೆಯಾದರೂ ಸಹ because of the tycoons if one tycoon is replaced by another, there will be another set of tycoons and that would not bring any social change. State has become the private property of one tycoon and afterwards private property of another tycoons...... ಈ ರೀತಿ ಖಾಸಗಿ ವ್ಯಕ್ತಿಯ ಕೃಪಾಪೋಷಿತ ಸರ್ಕಾರ ಹೋಗಿ, ಮತ್ತೊಬ್ಬ ಖಾಸಗಿ ಕೃಪಾಪೋಷಿತ ಸರ್ಕಾರ ಬರುವುದಾದರೆ, ಆ ಮುಖಾಂತರ ಯಾವುದೇ ಸಾಮಾಜಿಕ ಕ್ರಾಂತಿಯನ್ನು ಹೊಸ ಸರ್ಕಾರ ತರಲಿಕ್ಕೆ ಸಾಧ್ಯವಿಲ್ಲ. ಕೇವಲ ಸರ್ಕಾರ ಬದಲಾವಣೆ ಆಗುವುದರ ಮೂಲಕ ಈ ದೇಶದ ಸಾಮಾನ್ಯ ಜನರ ಸಂಕಷ್ಟಗಳನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಸ್ವಾಮಿ, ಸಾಮಾನ್ಯ ಜನರ ಸಂಕಷ್ಟಗಳನ್ನು ಬಗೆಹರಿಸಬೇಕಾದರೆ ನಿರ್ದಿಷ್ಟವಾಗಿರುವಂಥ ಕಾರ್ಯನೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಆಗ ಜನರು ಅಭಿವೃದ್ಧಿ ಹೊಂದುತ್ತಾರೆ. ಇಂತಹ ಒಂದು ಅಭಿವೃದ್ಧಿ ಮಾಡುವಂಥ ಕಾರ್ಯನೀತಿಯ ರಾಜ್ಯಪಾಲರ ಭಾಷಣದಲ್ಲಿ ನೋಡಬಹುದು ಎಂದು ಅದನ್ನು ಓದಿದಾಗ ಯಾವುದೇ ನಿರ್ದಿಷ್ಟವಾದಂಥ ಕಾರ್ಯನೀತಿಯಾಗಲೀ, ಕಾರ್ಯಕ್ರಮದ ವಿವರಗಳಾಗಲೀ ಇದರಲ್ಲಿ ಇಲ್ಲ. ಈ ಹಿಂದೆ ರಾಜ್ಯಪಾಲರು ಮಾಡಿದ ಭಾಷಣವನ್ನು ನಾನು ಓದಲಿಕ್ಕೆ ಇಷ್ಟಪಡುವುದಿಲ್ಲ. ಆದರೆ ಯಾವ ಪಕ್ಷದ ಬದಲಾವಣೆಯಾದ ಸರ್ಕಾರ ಇದ್ದರೋ ಅದು 1980ನೇ ಇಸವಿ ಇರಬಹುದು, 1984ನೇ ಇಸವಿ ಇರಬಹುದು. ಅದಕ್ಕೆ ಮುಂಚೆ 1972ನೇ ಇಸವಿಯಲ್ಲಿ ಸನ್ಮಾನ್ಯ ಶ್ರೀ ವೀರೇಂದ್ರಪಾಟೀಲರ ಸರ್ಕಾರ ಇದ್ದಾಗ, ತದನಂತರದ ಸರ್ಕಾರಗಳಾಗಲೀ ಏನು ಹೇಳುತ್ತವೆ ಎಂದರೆ ಯಾವ ಒಂದು ಆರ್ಥಿಕ ನೀತಿಯನ್ನು ನಾವು ಈ ಕಾರ್ಯಕ್ರಮಗಳಲ್ಲಿ ಜಾರಿಗೆ ತರಬೇಕಾದರೆ, ಯಾವ ನೀತಿಗಳನ್ನು ಅನುಸರಿಸುತ್ತೇವೆ ಎಂಬ ಮಾತನ್ನು ಸ್ಪಷ್ಟವಾದ ಪದಗಳಲ್ಲಿ ಹೇಳಿದ್ದನ್ನು ಕಂಡುಕೊಂಡಿದ್ದೇವೆ. ಆದರೆ ಈ ಒಂದು ಸ್ಪಷ್ಟತೆಯನ್ನು, ಈ ಒಂದು ಕಾರ್ಯನೀತಿಯ ವಿವರಗಳನ್ನು ಹಾಗೂ ಕಾರ್ಯಕ್ರಮದ ವಿವರಗಳನ್ನು ಈ ಒಂದು ರಾಜ್ಯಪಾಲರ ಭಾಷಣದಲ್ಲಿ ನೋಡುತ್ತಿಲ್ಲ ಎಂಬುದನ್ನು ಹೇಳಲಿಕ್ಕೋಸ್ಕರ ಈ ಹೋಲಿಕೆಯನ್ನು ನಾನು ಮಾಡುತ್ತಿದ್ದೇನೆ. ಅನೇಕ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಟ್ಟಿದ್ದರೂ ಸಹ ಸಮಯವಿಲ್ಲದ ಕಾರಣ ಕೆಲವ ವಿಚಾರಗಳನ್ನು ಮಾತ್ರ ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 'ನನ್ನ ಸರ್ಕಾರ ಜನತೆಯ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ಸರ್ವ ಪ್ರಯತ್ನವನ್ನು ಅತ್ಯಂತ ಪ್ರಾಮಾಣಿಕತೆಯಿಂದ ಮಾಡುತ್ತದೆ' ಎಂದು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ನಮಗಿನ್ನೂ ಅವರ ಪ್ರಾಮಾಣಿಕತೆಯನ್ನು ಸಂಶಯದಿಂದ ನೋಡುವಂಥ ಕಾಲ ಬಂದಿಲ್ಲ. ಅಲ್ಲಿಯವರೆಗೆ ನೋಡೋಣ. ರಾಜ್ಯಪಾಲರು ಮತ್ತೊಂದು ಮಾತನ್ನು ಹೇಳಿದ್ದಾರೆ—

> 'ಯಾವುವೇ ರಾಜ್ಯದ ಆಡಳಿತಾವಧಿಯಲ್ಲಿ ನಡೆಯಬಾರದ ಅನೇಕ ಘಟನೆಗಳು ದುರ್ದೈವವಶಾತ್ ನಡೆಯುತ್ತವೆ. ಈ ಸಂದರ್ಭದಲ್ಲಿ ಪ್ರತೀಕಾರಾತ್ಮಕ ನಿಲುವನ್ನು ತಾಳಲು ತಾನು ಬಯಸುವುದಿಲ್ಲ ಎಂಬುದನ್ನು ನನ್ನ ಸರ್ಕಾರ ಸ್ಪಷ್ಟಪಡಿಸಬಯಸುತ್ತದೆ. ಒಂದು ವೇಳೆ ತಪ್ಪೇನಾದರೂ ಆಗಿದ್ದಲ್ಲಿ ಕಾನೂನು ತನ್ನದೇ ಆದ ಸಹಜ ಕ್ರಮವನ್ನು ಕೈಗೊಳ್ಳುತ್ತದೆ''

ಇದೇರೀತಿಯಾಗಿ ವೃತ್ತಿ ಶಿಕ್ಷಣ ಕಾಲೇಜುಗಳ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ನಾನು ಇಲ್ಲಿ ಉದಹರಿಸಲು ಇಷ್ಟಪಡುತ್ತೇನೆ.

> ''ಕಳೆದ ಕೆಲವು ವರ್ಷಗಳಲ್ಲಿ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ, ವಿಶೇಷವಾಗಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವ್ಯಾಸಂಗದ ವಿಭಾಗದಲ್ಲಿ ಸ್ವಲ್ಪಮಟ್ಟಿನ ಅವ್ಯವಹಾರಗಳು

ನಡೆದಿವೆ. ಎಲ್ಲೆಲ್ಲಿ ಎಷ್ಟೆಷ್ಟು ಅವ್ಯವಹಾರ ನಡೆದಿದೆ ಎಂಬುದನ್ನು ಪೂರ್ಣವಾಗಿ ಪರಿಶೀಲಿಸಲು ಮತ್ತು ಸುಧಾರಣಾ ಕ್ರಮವನ್ನು ಕೈಗೊಳ್ಳಲು ನನ್ನ ಸರ್ಕಾರ ಉದ್ದೇಶಿಸಿದೆ ’.

ಮಾನ್ಯ ಅಧ್ಯಕ್ಷರೇ, ಈ ಮಾತನ್ನು ಹೇಳುವುದಕ್ಕೆ ಮುಂಚೆ ನಮ್ಮ ಅನೇಕ ಸ್ನೇಹಿತರು ‘ಕಳೆದ ೮೩ನೇ ಇಸವಿಯಿಂದ ಆರು ವರ್ಷಗಳ ಕಾಲ ತಾವೆಲ್ಲರೂ ಅಧಿಕಾರದಲ್ಲಿದ್ದಿರಿ. ಆಗ ಏನು ಮಾಡಿದ್ದೀರಿ.’ ಎಂಬ ಮಾತನ್ನು ಹೇಳಿದ್ದಾರೆ. ಹಾಗೆ ಹೇಳುವಾಗ ಅನೇಕ ಮಾನ್ಯ ಸದಸ್ಯರು ಅನೇಕ ವಿಧವಾದಂಥ ಗಂಭೀರವಾದ ಆರೋಪವನ್ನು ನಮ್ಮ ಮೇಲೆ ಮಾಡಿದ್ದಾರೆ. ಅನೇಕ ಹಗರಣಗಳನ್ನು ಮಾಡಿದ್ದೀರಿ, ಅದಕ್ಕೆ ನೀವು ಸಾಕ್ಷಿಗಳಿದ್ದೀರಿ. ಎಂಬ ಮಾತನ್ನು ಸಹ ಹೇಳಿದ್ದಾರೆ. ನಾವು ಯಾವುದೇ ಹಗರಣಗಳನ್ನು ಮಾಡಿದ್ದರೆ ಅದರಿಂದ ನುಣುಚಿಕೊಳ್ಳುವುದಕ್ಕೆ, ತಪ್ಪಿಸಿಕೊಳ್ಳುವುದಕ್ಕೆ ಸಿದ್ಧರಿಲ್ಲ. ಯಾವುದೇ ತಪ್ಪು ಮಾಡಿದ್ದರೆ, ಜನಪರ ಕಾರ್ಯಕ್ರಮಗಳನ್ನು ಮಾಡುವಾಗ ಜನತೆಯ ಹಿತರಕ್ಷಣೆಯನ್ನು ಕಡೆಗಣಿಸಿದ್ದರೆ, ಅದರಿಂದ ಈ ರಾಜ್ಯಕ್ಕೆ ನಷ್ಟ ಆಗಿದ್ದರೆ, ಯಾವುದೇ ವ್ಯಕ್ತಿಗೆ ಇದರಿಂದ ಲಾಭ ಆಗಿದ್ದರೆ, ಅನ್ಯಾಯವಾಗಿ ಧನಾರ್ಜನೆ ಮಾಡಿದ್ದರೆ ಅಂತಹ ಅಪರಾಧಗಳ ಮೇಲೆ ಸೂಕ್ತ ಕ್ರಮಗಳನ್ನು ನೀವು ತೆಗೆದುಕೊಳ್ಳಬಹುದು. ಖಂಡಿತವಾಗಿಯೂ ನಮಗೆ ಯಾವುದೇ ಶಿಕ್ಷೆ ವಿಧಿಸಿದರೂ ಅದನ್ನು ಒಪ್ಪಿಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. ಚುನಾವಣಾ ಫಲಿತಾಂಶ ಪ್ರಕಟವಾದ ಮೇಲೆ ಹೊಸ ಸರ್ಕಾರ ಸ್ಥಾಪನೆಯಾಗಿದೆ. ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಿದಂಥ ಜನ ಇವತ್ತು ಆಡಳಿತ ಪಕ್ಷದಲ್ಲಿ ಕುಳಿತಿದ್ದಾರೆ. ಬಹಳ ಸಂತೋಷ. ಜನರ ತೀರ್ಪನ್ನು ನಾವು ಗೌರವಿಸೋಣ. ಅದೇ ರೀತಿ ಅಲ್ಲಿ ಕುಳಿತಿದ್ದಂಥ ಜನ ಈ ಕಡೆಗೆ ಏನು ಬಂದಿದ್ದೇವೆ. ನಮ್ಮನ್ನು ಸಹ ನೀವು ಗೌರವದಿಂದ ಕಾಣುವುದು ಅವಶ್ಯಕ. ಮಾತು ಮಾತಿಗೆ ಅವರು ‘ಆರು ವರ್ಷಗಳಲ್ಲಿ ನೀವು ಏನು ಮಾಡಿದಿರಿ ? ಎಂದು ಕೇಳಿದರೆ ಖಂಡಿತವಾಗಿಯೂ ಅದು ಚರ್ಚೆಗೆ ಪ್ರಮುಖವಾದ ಅಂಶ ಆಗುವುದಿಲ್ಲ. ಆಡಳಿತ ಪಕ್ಷದಲ್ಲಿದ್ದು, ಸದಸ್ಯರಾಗಿ, ಮಂತ್ರಿಗಳಾಗಿ ನೀವು ಕೆಲಸ ಮಾಡುತ್ತಿದ್ದೀರಿ. ಹಾಗೆಯೇ ವಿರೋಧ ಪಕ್ಷದ ಸದಸ್ಯರಾಗಿ ನಾವೂ ಕೆಲಸ ಮಾಡುತ್ತೇವೆ. ನಮ್ಮ ಪಾತ್ರಗಳು ಈಗ ಬೇರೆ ಬೇರೆಯಾಗಿವೆ. ರಾಜ ಅಥವಾ ನಾಯಕನಾದವನು ಖಳನಾಯಕನ ಪಾತ್ರ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಪಾತ್ರಕ್ಕೆ ಅನುಗುಣವಾಗಿ ಅಭಿನಯ ಮಾಡಬೇಕಾಗುತ್ತದೆ. ಪ್ರತಿಯೊಂದು ಸಂದರ್ಭದಲ್ಲೂ, ನೀವೇನು ಮಾಡಿದಿರಿ ?’ ಎಂದು ಹೇಳುವುದಾದರೆ ಅದು ಖಂಡಿತವಾಗಿಯೂ ಸರಿಯಲ್ಲ. ತಪ್ಪು ಮಾಡಿದರೆ ಕ್ರಮ ತೆಗೆದುಕೊಳ್ಳಿ. ಆ ಅಧಿಕಾರವನ್ನು ಜನತೆ ನಿಮಗೆ ಕೊಟ್ಟಿದ್ದಾರೆ. ಆದರೆ ನಿಮ್ಮ ತಪ್ಪುಗಳನ್ನು ಕೇಳಬಾರದು ಎಂದು ಹೇಳುವುದಾದರೆ ಅದು ಎಷ್ಟರ ಮಟ್ಟಿಗೆ ಸರಿಯೆಂದು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ನಾನು ಇವತ್ತಿನ ದಿವಸ ಆಡಳಿತ ಪಕ್ಷದವರನ್ನು ಕೇಳುವುದು ಇಷ್ಟೆ, ನಾವು ವಿರೋಧ ಪಕ್ಷದ ಸದಸ್ಯರು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಕೊಡುವಂಥ ಔದಾರ್ಯ ನಿಮಗೆ ಇರಬೇಕು ಮತ್ತು ಇದು ಅತ್ಯಂತ ಅವಶ್ಯಕ ಎಂಬುದನ್ನು ತಾವು ಮರೆಯಬಾರದು. ಕೇವಲ ಶಕ್ತಿಯ ಆಧಾರದ ಮೇಲೆ, ತಮ್ಮ ಸಂಖ್ಯಾ ಬಲದ ಆಧಾರದ ಮೇಲೆ ಮಾತನಾಡುವುದಾದರೆ, ಪ್ರಜಾಸತ್ತಾತ್ಮಕ ನೀತಿಗೆ ಅದು ವಿರೋಧವಾಗುತ್ತದೆ ಎಂಬುದನ್ನು ನಾನು ಹೇಳಬೇಕಾಗಿಲ್ಲ. ಇವತ್ತಿನ ಬದಲಾದ ಪರಿಸ್ಥಿತಿಯಲ್ಲಿ, ನೀವು ವಿಚಾರ ಮಾಡಬೇಕು. ಅನೇಕ ಕ್ಷೇತ್ರಗಳಲ್ಲಿ ಈ ಸರ್ಕಾರ ಯಾವ ಕಾರ್ಯನೀತಿಯನ್ನು ಹಾಕಿಕೊಂಡಿದೆ ಎಂಬುದನ್ನು ನೋಡಬೇಕಾಗಿದೆ. ಸನ್ಮಾನ್ಯ ಖರ್ಗೆಯವರು ಹೇಳಿದರು, ನಮ್ಮ ಆರ್ಥಿಕ ನೀತಿಗೆ ೨೦ ಅಂಶಗಳ ಕಾರ್ಯಕ್ರಮ ಏನಿದೆ ಅದು ಮೂಲಾಧಾರ ಎಂದು ಹೇಳಿದರು. ನಾವು ಅನುಸರಿಸಿದಂಥ ಬಡತನ ವಿರೋಧಿ, ಬಡತನ ನಿರ್ಮೂಲನ ಕಾರ್ಯಕ್ರಮಗಳು ಏನಿವೆ. ಇವು ೨೦ ಅಂಶಗಳ ಕಾರ್ಯಕ್ರಮಕ್ಕೆ ಆಧಾರವಾಗಿವೆ ಎಂದು ಹೇಳಿದ್ದಾರೆ. ಜನತೆಗೆ ಒಂದು ಸಾಮಾಜಿಕ ವ್ಯವಸ್ಥೆಯನ್ನು ತರಬೇಕಾದರೆ, ಜಾತ್ಯಾತೀತ ಮತ್ತು ವರ್ಗಾತೀತ ಸಮಾಜದ ಕಲ್ಪನೆಯನ್ನು ಇಟ್ಟುಕೊಂಡು ಹೇಳಬೇಕಾದರೆ, ಅನೇಕ ಕ್ಷೇತ್ರಗಳಲ್ಲಿ ಪ್ರಗತಿಪರವಾದ ನೀತಿಯನ್ನು ಅನುಸರಿಸಬೇಕು, ಈ ಯಾವುದೇ ನೀತಿಯನ್ನು ಅನುಸರಿಸುವ ಬಗ್ಗೆ ತಾವು ಯಾವ ಚಿಂತನೆಯನ್ನು ಮಾಡಿದ್ದೀರಿ ಎಂಬುದನ್ನು ನಾನು ಕೇಳುತ್ತೇನೆ. ಕೇವಲ ಆರ್ಥಿಕ ನೀತಿಯ ಬಗ್ಗೆ ಮಾತ್ರ ಹೇಳಿದ್ದೀರಿ, ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಹೇಳಿದ್ದೀರಿ ಇದು ಹೊರತುಪಡಿಸಿ ಬೇರೆ ಏನನ್ನೂ ಹೇಳಿಲ್ಲ. ಬೇರೆ ಅಂದರೆ ಅದು ಕೈಗಾರಿಕಾ ನೀತಿಯಾಗಿರಬಹುದು, ಕಾರ್ಮಿಕ ನೀತಿಯಾಗಿರಬಹುದು, ರೈತರ ಬಗ್ಗೆ ಅನುಸರಿಸಬೇಕಾದ ನೀತಿಯಾಗಿರಬಹುದು, ಶಿಕ್ಷಣ ನೀತಿಯಾಗಿರಬಹುದು ಈ ಬಗ್ಗೆ ನಿಖರವಾಗಿ, ನಿರ್ದಿಷ್ಟವಾಗಿ ಯಾವ ಮಾರ್ಗವನ್ನು ಯಾವ ಕಾರ್ಯನೀತಿಯನ್ನು ನೀವು ಅನುಸರಿಸುತ್ತೀರಿ ಎಂಬುದನ್ನು ಈ ಭಾಷಣದಲ್ಲಿ ಹೇಳಿಲ್ಲ. ನೀವು ರಾಷ್ಟ್ರೀಕರಣ ನೀತಿಗೆ ಬದ್ಧರಾಗಿದ್ದೀರಾ ಅಥವಾ ಇಲ್ಲವೇ ಎಂಬ ಸಂಶಯ ಬರುತ್ತದೆ. ಒಂದು ಹೊಸ ಸರ್ಕಾರ ಬಂದಾಗ ಇವೆಲ್ಲವನ್ನೂ ಹೇಳಬೇಕಾಗುತ್ತದೆ. ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿರುವುದನ್ನು ೫ ವರ್ಷದಲ್ಲಿ ಮಾಡುವುದಕ್ಕೆ ಸಾಧ್ಯವಾಗದಿರಬಹುದು,

ಆದರೆ ತಾವು ಮಾಡುವ ಕಾರ್ಯನೀತಿಗೆ, ಪ್ರಣಾಳಿಕೆಯಲ್ಲಿ ಹೇಳಿರುವ ಅನೇಕ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ವಿವರವಾಗಿ ತಮ್ಮ ಕಾರ್ಯನೀತಿಯನ್ನು ಹೇಳಬೇಕಾಗುತ್ತದೆ ಈ ರೀತಿಯಾಗಿ ಇದರಲ್ಲಿ ಹೇಳದಿರುವುದನ್ನು ನಾನು ಗಮನಿಸಿದ್ದೇನೆ ನನ್ನ ಅನೇಕ ಮಿತ್ರರು ಹೇಳುತ್ತಿದ್ದರು. ಏನೆಂದರೆ ನಮ್ಮ ಸರ್ಕಾರ ಅಧಿಕಾರ ವಿಕೇಂದ್ರೀಕರಣಕ್ಕೆ ಬದ್ಧವಾಗಿದೆ ಮತ್ತು ನಮ್ಮ ಸರ್ಕಾರಕ್ಕೆ ಭ್ರಷ್ಟಾಚಾರವನ್ನು ವಿಕೇಂದ್ರೀಕರಣ ಮಾಡುವುದಕ್ಕೆ ಆಸೆ ಇಲ್ಲ ಎಂದು. ಅಂದರೆ ಭ್ರಷ್ಟಾಚಾರವನ್ನು ಕೇಂದ್ರೀಕರಣ ಮಾಡುವುದಕ್ಕೆ ತಮ್ಮ ಸರ್ಕಾರ ನಿರತವಾಗಿದೆ ಎಂದು ಇದರ ಅರ್ಥ ಎಲ್ಲೆಲ್ಲಿ ದಕ್ಷತೆ ಇಲ್ಲ, ಅಲ್ಲೆಲ್ಲ ಜನಗಳಿಗೆ ಸರಿಯಾದ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಭ್ರಷ್ಟಾಚಾರ ಇರುತ್ತದೆ ಎಂಬುದನ್ನು ಒಪ್ಪಬೇಕಾಗುತ್ತದೆ. ಕೇವಲ ಅಧಿಕಾರ ವಿಕೇಂದ್ರೀಕರಣ ಮಾಡಿದರೆ ಭ್ರಷ್ಟಾಚಾರ ಹೋಗುತ್ತದೆ ಎಂಬ ಮಾತನ್ನು ಹೇಳಿದ್ದೀರಿ. ನಾನು ಹೇಳುವುದು ಇಷ್ಟೆ, ಅಧಿಕಾರ ವಿಕೇಂದ್ರೀಕರಣ ಮಾಡುವ ಮುಖಾಂತರ ಬೆಂಗಳೂರು ಮತ್ತು ಡೆಲ್ಲಿಯಲ್ಲಿ ಮಾತ್ರ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿ ಕೊಟ್ಟಂತಾಗುತ್ತದೆ. ಏಕೆಂದರೆ ಬೆಂಗಳೂರು ಮತ್ತು ಡೆಲ್ಲಿಯಲ್ಲಿ ಮಾಡುವಂಥ ಭ್ರಷ್ಟಾಚಾರ ಸಾಮಾನ್ಯವಾಗಿ ಹೋಗುವುದಿಲ್ಲ. ಅಲ್ಲಿಯ ಅಧಿಕಾರ ವಿಕೇಂದ್ರೀಕರಣ ಆದಾಗ ಭ್ರಷ್ಟಾಚಾರ ಹೋಗುತ್ತದೆ. ಜನತೆಯ ಪ್ರತಿನಿಧಿಗಳ ಕೆಲಸ ನೋಡಿದಾಗ ಭ್ರಷ್ಟಾಚಾರದ ಕಾವನ್ನು ಕಾಣಬಹುದು ಆದ್ದರಿಂದ ಭ್ರಷ್ಟಾಚಾರ ವಿಕೇಂದ್ರೀಕರಣದ ಮುಖಾಂತರ, ಕೇಂದ್ರೀಕರಣ ಆಗುತ್ತದೆ ಎಂಬ ಮಾತು ಸರಿಯಲ್ಲ. ಇವತ್ತಿನ ದಿವಸ ವಿಕೇಂದ್ರೀಕರಣದ ತಮ್ಮ ಕಲ್ಪನೆ ಏನಿದೆ, ಅದನ್ನು ಬದಲಾಯಿಸಬೇಕು. ಕೆಳಹಂತದ ಸಾಮಾನ್ಯ ಜನ ಏನಿದ್ದಾರೆ, ಅವರಿಗೆ ಸಕ್ರಿಯವಾದ, ಕಾನೂನನ್ನು ನಾವು ತಂದಿದ್ದೇವೆ. ಅಂತಹ ಕಾನೂನನ್ನು ಬಲಪಡಿಸುವುದಕ್ಕೆ ಆಗತ್ಯವಾದ ಕೆಲಸವನ್ನು ನೀವು ಮಾಡಬೇಕಾಗಿದೆ. ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದು ಕುಡಿಯುವ ನೀರನ್ನು ಒದಗಿಸುವ ವಿಚಾರ ಆಗಿರಬಹುದು ಅಥವಾ ಬೇರೆ ಬೇರೆ ಶಿಕ್ಷಣ ನೀತಿಯ ಬಗ್ಗೆ ಹೇಳುವಂಥ ವಿಚಾರ ಆಗಿರಬಹುದು. ಕೇವಲ ಈ ವಿಚಾರಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅದಕ್ಕಿಂತ ಹೆಚ್ಚಿಗೆ ಇವತ್ತಿನ ದಿವಸ ನಾವು ಕಳೆದ ಒಂದು ವರ್ಷದ ಅವಧಿಯಲ್ಲಿ ನಡೆದ ಕಾರ್ಯಗಳಿಗೆ ಈ ರಾಜ್ಯಪಾಲರ ಭಾಷಣದಲ್ಲಿ ಕೆಲವು ವಿಚಾರಗಳಿಗೆ ಒತ್ತು ಕೊಡಬಹುದಿತ್ತು. ರಾಜ್ಯಪಾಲರ ಭಾಷಣ ಮಾಡಬೇಕಾದರೆ, ಅದರಲ್ಲಿ ಅನೇಕ ವರ್ಷಗಳ ಸಾಧನೆಯನ್ನು ಹೇಳುವುದಿಲ್ಲ. ಹಿಂದಿನ ವರ್ಷದ ಸಾಧನೆ, ಏನು ಎಂಬುದನ್ನು ಹೇಳುತ್ತಾರೆ, ಪ್ರಗತಿಪರ ಕಾರ್ಯಕ್ರಮಗಳ ಬಗ್ಗೆ ಹೇಳುತ್ತಾರೆ, ಮುಂದಿನ ವರ್ಷದಲ್ಲಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂಬುದನ್ನು ಹೇಳುತ್ತಾರೆ.

೧೨–೩೦ ಪಿ.ಯಂ.

ಆದರೆ ಕಳೆದ ವರ್ಷದ ಕಾರ್ಯಕ್ರಮದ ಬಗ್ಗೆ ಪ್ರಗತಿಯ ಬಗ್ಗೆ ಯಾವುದೇ ಅಂಕಿ ಅಂಶಗಳನ್ನು ರಾಜ್ಯಪಾಲರ ಭಾಷಣದಲ್ಲಿ ನೀಡಿಲ್ಲ. ಇದಕ್ಕೆ ಕಾರಣ ಕೇಳಿದರೆ, ಇಲ್ಲಿ ಇಲ್ಲ. ನಮ್ಮ ಸರ್ಕಾರ ಬಂದಿದ್ದು ಇತ್ತೀಚೆಗೆ, ಅಲ್ಲಿಯವರೆಗೆ ರಾಷ್ಟ್ರಪತಿಗಳ ಆಡಳಿತ ಇತ್ತು ಎಂಬ ಮಾತನ್ನು ಹೇಳಿದರು. ಈ ಹಿಂದಿನ ವರ್ಷಗಳಲ್ಲಿ ಅವ್ಯವಹಾರಗಳು ನಡೆದಿವೆಎಂಬ ಮಾತನ್ನು ಹೇಳುತ್ತಾರೆ. ಕಳೆದ ವರ್ಷಗಳ ಆಡಳಿತ ಅವಧಿಯಲ್ಲಿ ಎಂದರೆ ಈ ವರ್ಷವೂ ಸೇರಿದೆ ಎಂಬ ಮಾತನ್ನು ಗಮನಿಸಬೇಕಾಗುತ್ತದೆ. ಈ ಅವ್ಯವಹಾರಗಳು ಏನಿದ್ದಾವೆ ಅವು ಮುಖ್ಯವಾಗಿ ರಾಜ್ಯಪಾಲರ ಆಡಳಿತದ ಅವಧಿಯಲ್ಲಿ ನಡೆದವು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಮತ್ತು ಈ ಅವಧಿಯಲ್ಲಿ ಏನು ನಡೆಯಿತು ಎಂಬುದರ ಬಗ್ಗೆ ನಾವು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರ ತಪ್ಪಾಗುವುದಿಲ್ಲ ಎಂದು ಭಾವಿಸಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ನಾವು ಅನೇಕ ವಿಚಾರಗಳಿಗೆ ಒತ್ತು ಕೊಡುತ್ತೇವೆ. ಅದರಲ್ಲಿ ಮುಖ್ಯವಾಗಿ ಅನೇಕ ಆರೋಪಗಳನ್ನು ನಮ್ಮ ಮೇಲೆ ಹಿಂದಿನ ಅಧಿವೇಶನದಲ್ಲಿ ಆ ಕಡೆ ಕುಳಿತಿರತಕ್ಕಂಥ ಸದಸ್ಯರು ಮಾಡಿದ್ದರು. ಗೃಹನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಮಾತನಾಡುತ್ತಾ ಅನೇಕ ಆರೋಪಗಳನ್ನು ಮಾಡಿದಾಗ ಅದಕ್ಕೆ ನಾವು ಉತ್ತರವನ್ನೂ ಕೊಟ್ಟಿದ್ದೇವೆ. ಆ ಬಗ್ಗೆ ವಿಚಾರಣೆ ಆಯಿತು. ವರದಿ ಬಂತು. ನಮ್ಮ ಸರಕಾರ ಅದರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಕ್ಕೆ ಹೇಳಿತ್ತು. ಈಗ ಯಾವ ಕ್ರಮವನ್ನು ತಾವು ತೆಗೆದುಕೊಂಡಿದ್ದೀರಿ ? ಇಲ್ಲಿಯವರೆಗೆ ಗೃಹನಿರ್ಮಾಣ ಸಹಕಾರ ಸಂಘಗಳ ಕಾರ್ಯವೈಖರಿ ಬಗ್ಗೆ ವಿಚಾರ ವರದಿ ಬಂದವೇಲೆ ನಮ್ಮ ಸರಕಾರ ಆದೇಶ ಮಾಡಿತು. ಇದಾದ ಮೇಲೆ ಏನು ನಡೆದಿದೆ ಎಂದರೆ ನೀವು ಯಾವ ಆರೋಪಗಳನ್ನು ನಮ್ಮ ಮೇಲೆ ಮಾಡುತ್ತಿದ್ದೀರೋ ಅದಕ್ಕಿಂತ ಗುರುತರವಾದ ಆರೋಪಗಳನ್ನು ನಿಮ್ಮ ಮೇಲೆ ಮಾಡುವಂತಹ ಕೆಲಸವನ್ನು ನೀವು ಮಾಡಿದ್ದೀರಿ. ಬಿ. ಡಿ. ಎ. ಯಿಂದ ಒಂದು ಸೈಟ್ ಕೊಟ್ಟರೆ ಇಲ್ಲವೇ ಒಂದು ಜಮೀನನ್ನು

ಸಹಕಾರ ಸಂಘಗಳಿಗೆ ಕೊಟ್ಟಿದ್ದರೆ, ಕೊಡುವಯತ್ನ ಮಾಡಿದ್ದೀರಿ ಎಂಬ ಆರೋಪಗಳನ್ನು ನೀವು ಏನು ನಮ್ಮ ಮೇಲೆ ಮಾಡುತ್ತೀರಿ, ಅದಕ್ಕಿಂತ ಗುರುತರವಾದ ಆರೋಪವನ್ನು ನೀವು ಮಾಡಿದ್ದೀರಿ. ಯಾವ ಒಂದು ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕೊಟ್ಟಿದ್ದರು, ಆ ಜಮೀನನ್ನು ಈಗಾಗಲೇ ಪ್ರಾಧಿಕಾರದವರ ಸ್ವಾಧೀನಕ್ಕೆ ಕೊಟ್ಟಿದರೂ ಸಹ, ಅಂತಹ ಜಮೀನನ್ನು ಪುನಃ ತಮಗೆ ಬೇಕಾದ ಸಹಕಾರ ಸಂಘಕ್ಕೆ ಕೊಡಬೇಕೆಂಬ ಆದೇಶವನ್ನು ರಾಷ್ಟ್ರಪತಿ ಆಡಳಿತದಲ್ಲಿದ್ದಂಥ ಜನ ಕೊಟ್ಟರು ಇಂತಹ ಅವ್ಯವಹಾರಗಳು ನಡೆದಿವೆ. ಇಂತಹ ಅವ್ಯವಹಾರಗಳ ಬಗ್ಗೆ ಸರಕಾರ ಗಮನ ಕೊಡುವುದೇ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಅವ್ಯವಹಾರಗಳು ಯಾವುದೇ ಒಂದು ಪಕ್ಷದ ಸರಕಾರ ಇದ್ದಾಗ ನಡೆಯಲಿಲ್ಲ. ಇಂಥಾದ್ದು ಎಲ್ಲಾ ಪಕ್ಷದ ಸರಕಾರಗಳೂ ಇದ್ದಾಗಲೂ ನಡೆದಿರುವ ಸಾಧ್ಯತೆ ಇದೆ. ತಮ್ಮ ಮೂಲಕ ಸರಕಾರವನ್ನು ಕೇಳಿಕೊಳ್ಳುತ್ತೇನೆ, ಈ ಕಾಲದಲ್ಲಿ ಅದಂಥ ಅವ್ಯವಹಾರಗಳು, ಭ್ರಷ್ಟಾಚಾರದ ಅಪಾದನೆಗಳು ಇದ್ದರೆ. ಯಾವುದೇ ವ್ಯಕ್ತಿಯ ಮೇಲೆ, ಯಾವುದೇ ಪಕ್ಷಕ್ಕೆ ಸೇರಿದ ವ್ಯಕ್ತಿಯ ಮೇಲೆ ಇದ್ದರೆ, ಅವನು ಯಾವುದೇ ಪಕ್ಷಕ್ಕೆ ಸೇರಿದ್ದರೂ ಸಹ ಅವನು ಇದ್ದಂಥ ಅಧಿಕಾರವಧಿಯಲ್ಲಿ ಏನು ನಡೆದಿದೆ ಅದರ ಬಗ್ಗೆ ತಾವು ವಿಚಾರಣೆ ಮಾಡಿ ಶಿಕ್ಷೆಯನ್ನು ಕೊಡುವ ವ್ಯವಸ್ಥೆ ಈ ದೇಶದಲ್ಲಿ ಜಾರಿಗೆ ಬರಬೇಕು. ನಾವು ತಪ್ಪನ್ನು ಮಾಡಿದ್ದರೆ, ಜನ ನಮ್ಮ ತಪ್ಪನ್ನು ಮನಗಂಡು ನಮ್ಮನ್ನು ಆ ಸ್ಥಾನದಿಂದ ಈ ಸ್ಥಾನಕ್ಕೆ ಕೂಡಿಸಿರಬಹುದು. ಆದರೆ ಇಷ್ಟೇ ಶಿಕ್ಷೆ ಸಾಕೆ ? ನಾವು ಅರಿಸಿಕೊಂಡಿರುವಂತಹ ಒಂದು ಪರಿಸ್ಥಿತಿಯಲ್ಲಿ ರಾಜಕಾರಣಿಗಳು ಮಾತ್ರ ತಪ್ಪನ್ನು ಮಾಡುತ್ತಿಲ್ಲ, ತಪ್ಪನ್ನು ಮಾಡುವಂತಹ ಪ್ರಸಂಗ ಮತ್ತು ಆ ತಪ್ಪಿನಲ್ಲಿ ಭಾಗಿಯಾಗುವ ಪ್ರಕರಣಗಳನ್ನು ನೋಡಿದಾಗ, ನಮಗನ್ನಿಸುತ್ತದೆ, ಈ ದೇಶದಲ್ಲಿ ಆಡಳಿತ ಮಾಡುವಂತಹ ಜನರಾರಿದ್ದಾರೆ ಅಂದರೆ ಅಧಿಕಾರಿಗಳು ಸಹ ಇದರಲ್ಲಿ ಶಾಮೀಲಾಗಿದ್ದಾರೆ. ಅಧಿಕಾರಿಗಳೂ ಇದರಲ್ಲಿ ಶಾಮೀಲಾಗಿರುತ್ತಾರೆ ಎಂಬುದನ್ನು ನಾವು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಎಲ್ಲಿಯುವರೆಗೆ ನಾವು ತಪ್ಪು ಮಾಡುವಂತಹ ರಾಜಕಾರಣಿಗಳ ಜೊತೆಗೆ ತಪ್ಪು ಮಾಡಿದಂಥ ಅಧಿಕಾರಿಗಳಿಗೂ ಶಿಕ್ಷೆ ಕೊಡುವಂತಹ ಕಾರ್ಯಕ್ರಮ ಜರುಗಿಸುವುದಿಲ್ಲವೋ ಅಲ್ಲಿಯುವರೆಗೆ ಭ್ರಷ್ಟಾಚಾರವನ್ನು ತೊಡೆದು ಹಾಕುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಸರಕಾರ ವಿಚಾರ ಮಾಡಬೇಕು. ನಾನು ಈ ವಿಚಾರ ಹೇಳುವಾಗ ಯಾವುದೇ ಪಕ್ಷದ ವ್ಯಕ್ತಿ ಅಥವಾ ಅಧಿಕಾರಿಗಳನ್ನು ಗಮನದಲ್ಲಿ ಇಟ್ಟುಕೊಂಡಿಲ್ಲ. ನಾವು ಅನುಸರಿಸುತ್ತಿರುವ ಆಡಳಿತ ಪದ್ಧತಿಯಲ್ಲಿ ಇದು ಸ್ವಾಭಾವಿಕವಾಗಿ ಕಾಣುತ್ತದೆ. ಇವತ್ತಿನದಿವಸ ನಿಮ್ಮ ಸರಕಾರ ಅಧಿಕಾರಕ್ಕೆ ಬಂದಿರಬಹುದು. ಆದರೆ ಅಧಿಕಾರಿಗಳು ಮಾತ್ರ ಬದಲಾವಣೆ ಆಗಿಲ್ಲ ಅಧಿಕಾರಿಗಳು ಬಂದು ನಿಮ್ಮನ್ನು ಕಾಣುತ್ತಾರೆ. ನಿಮ್ಮ ಮೆಚ್ಚಿಗೆಯನ್ನು ಗಳಿಸುವುದಕ್ಕೆ ಒಳ್ಳೆಯ ಮಾತುಗಳನ್ನು ಆಡಬಹುದು. ಇದರಿಂದ ತಾವು ತೃಪ್ತರಾಗದೇ, ಯಾವ ಅಧಿಕಾರಿ ತಪ್ಪು ಮಾಡಿದ್ದಾರೆ ಅದನ್ನು ಕಂಡು ಹಿಡಿದು, ಮುಂದೆ ಇದು ಪುನರಾವರ್ತನೆ ಆಗದಂತೆ ಇಂತಹವರಿಗೆ ಶಿಕ್ಷೆ ಆದಾಗ ಮಾತ್ರ ಇದೆಲ್ಲಾ ಸರಿ ಹೋಗುತ್ತದೆ. ಈ ಒಂದು ಅಕೌಂಟಬಿಲಿಟಿ ಅಥವಾ ಹೊಣೆಗಾರಿಕೆಯನ್ನು ಗೊತ್ತು ಮಾಡಿದ್ದರೆ, ಎಷ್ಟೇ ಸರಕಾರಗಳು ಬರಬಹುದು, ಹೋಗಬಹುದು, ಆದರಿಂದ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ನಮ್ಮಗೆ ಬೇಕಾದ ರೀತಿಯಲ್ಲಿ ಒಂದು ಸಾಮಾಜಿಕ ವ್ಯವಸ್ಥೆಯನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ. ಈ ದಿಸೆಯಲ್ಲಿ ಈ ವಿಚಾರವನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಷ್ಟ್ರೀಯ ಚಟುವಟಿಕೆಯು ಪ್ರತಿಯೊಂದು ಕ್ಷೇತ್ರದಲ್ಲೂ ಸರ್ವತೋಮುಖ ಅಭಿವೃದ್ಧಿ ಆಗಬೇಕಾದರೆ ನಾವು ಅನುಸರಿಸುವ ನೀತಿಯು ಕಲ್ಪನೆ ನಮಗಿರಬೇಕು. ಆದರೆ ಅಂತಹ ಒಂದು ನೀತಿಯು ಕಲ್ಪನೆಯನ್ನು ಅಥವಾ ರೂಪರೇಷೆಗಳನ್ನು ನಾವು ಇಂದು ನೋಡುವುದಕ್ಕೆ ಸಾಧ್ಯ ಆಗುತ್ತಿಲ್ಲ. ನಾವು ಭಾಷಣ ಮಾಡುತ್ತೇವೆ. ಕೇವಲ ವಿಧಾನ ಸಭೆಯಲ್ಲಿ ಮಾತ್ರವಲ್ಲ ಹೊರಗಡೆ ಸಹ ಅನೇಕ ಭಾಷಣಗಳನ್ನು ಮಾಡುತ್ತೇವೆ. ಆ ಭಾಷಣದಲ್ಲಿ ಬಡತನವನ್ನು ನಿರ್ಮೂಲನ ಮಾಡುತ್ತೇವೆ ಸಂಪದ್ಭರಿತವಾದ ರಾಷ್ಟ್ರವನ್ನು ನಿರ್ಮಾಣ ಮಾಡುತ್ತೇವೆ ಎಂದೆಲ್ಲಾ ಹೇಳುತ್ತೇವೆ. ಈ ಬಗ್ಗೆ ಯಾವ ಒಂದು ನೀತಿಯನ್ನು ಅನುಸರಿಸಬೇಕು ಎಂಬುದರ ಬಗ್ಗೆ ನಾವು ಯಾವುದೇ ಒಂದು ಕಲ್ಪನೆಯನ್ನು ಇಟ್ಟುಕೊಳ್ಳದಿದ್ದರೆ ಖಂಡಿತವಾಗಿ ಅದರಿಂದ ಏನೂ ಉಪಯೋಗವಾಗುವುದಿಲ್ಲ. ನಮ್ಮ ಜನತೆಗೆ ನ್ಯಾಯ ದೊರಕಬೇಕಾದರೆ, ನಮ್ಮ ರಾಷ್ಟ್ರದ ಹಾಗೂ ರಾಜ್ಯದ ಸಂಪತ್ತನ್ನು ಹೆಚ್ಚಿಸಬೇಕಾದರೆ ಹೊಸ ಸಾಮಾಜಿಕ ಮತ್ತು ಆರ್ಥಿಕ ನೀತಿಯನ್ನು ನಾವು ಅನುಸರಿಸಬೇಕಾಗುತ್ತದೆ. ಎಲ್ಲಿಯವರೆಗೆ ಈ ಒಂದು ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ ಆಗುವುದಿಲ್ಲ ಮತ್ತು ಅದು ಜತೆಯಲ್ಲಿ ಆಂದೋಳನದ ಮುಂಖಾಂತರ ಆಗುವುದಿಲ್ಲ ಅಲ್ಲಿಯವರೆಗೆ ನಾವು ವರ್ಗರಹಿತ ಸಮಾಜವನ್ನು ಕಟ್ಟಲು ಸಾಧ್ಯವಾಗುವುದಿಲ್ಲ. ಈ ದೇಶದಲ್ಲಿರತಕ್ಕ ಬಂಡವಾಳ ಶಾಹಿಗಳ ಜೊತೆಯಲ್ಲಿ ನಮ್ಮ ಸಂಬಂಧ ಕಡಿದು ಹೋಗದಿದ್ದರೆ, ನಾವು ಒಳ್ಳೆಯ ರಾಜ್ಯ ಕಟ್ಟಲು ಆಗುವುದಿಲ್ಲ. ಈಗ ಶಿಸ್ತು ಎಂಬುದು ಮಾಯವಾಗುತ್ತಿದೆ. ನಾವುಗಳು ಸುಮ್ಮನೆ ಭಾಷಣ ಮಾಡುವುದರಿಂದ ಏನು

ಪ್ರಯೋಜನವಿಲ್ಲ. ರಾಜ ಕಾರುಣಿಗಳಿಗೂ ಮತ್ತು ಬಂಡವಾಳ ಶಾಹಿಗಳಿಗೂ ಇರತಕ್ಕಂಥ ಸಂಬಂಧಗಳನ್ನು ಕಡಿದು ಹಾಕದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಈ ಕೆಲಸ ಮಾಡದಿದ್ದರೆ ನಾವು ಹೊಸ ಸಾಮಾಜಿಕ ವ್ಯವಸ್ಥೆಯನ್ನು ಜಾರಿಗೊಳಿಸಲು ಸಾಧ್ಯವಿಲ್ಲ. ನಮ್ಮ ಹಿರಿಯೂರಿನಲ್ಲಿ ಒಂದು ಡಿಸ್ಟಿಲರಿ ಇದೆ. ೧೯೯೦ನೇ ಇಸವಿಯವರೆಗೆ ನಾವು ಒಬ್ಬರಿಗೆ ಕರಾರನ್ನು ಕೊಟ್ಟಿದ್ದೇವೆ. ಯಾವ ಒಂದು ಆಧಾರದ ಮೇಲೆ ಇದು ಆಗಿದೆ ಎಂಬುದು ಗೊತ್ತಿಲ್ಲ. ಈ ಅವಧಿ ಮುಗಿಯದಿದ್ದರೂ ಕೂಡ ಇವರ ಅಗ್ರಿಮೆಂಟನ್ನು ಮುಂದುವರಿಸಿದ್ದಾರೆ. ಅಧಿಕಾರಿಗಳ ಅಥವಾ ಬೇರೆಯವರ ಪ್ರೇರೇಪಣೆಯಿಂದ ಈ ರೀತಿಯಾಗಿದೆ. ಯಾರಿಗೂ ಹೇಳದೆ ಈ ಕರಾರನ್ನು ಮುಂದುವರಿಸಿದ್ದಾರೆ. ನಮ್ಮ ಸರ್ಕಾರದ ಕೊನೆಯ ದಿವಸಗಳಲ್ಲಿ ಅವರು ಏನು ಕರಾರನ್ನು ಮುಂದುವರಿಸಿದ್ದಾರೆ, ಅದು ಸರಿಯಾದುದಲ್ಲ. ಇದರ ಹಿಂದೆಲ್ಲಾ ಪ್ರಭಾವೀ ಶಕ್ತಿಗಳು ಕೆಲಸ ಮಾಡುತ್ತಿರುತ್ತಾರೆ. ಈ ಪರಿಸ್ಥಿತಿಯಲ್ಲಿ ಬಂಡವಾಳ ಶಾಹಿಗಳು ಪ್ರಬಲರಾಗುತ್ತಿದ್ದಾರೆ. ಎಲ್ಲಾ ಪಕ್ಷಗಳ, ಸರಕಾರಗಳ ಮೇಲೂ ಅವರು ಪ್ರಭಾವ ಬೀರುತ್ತಾರೆ. ಅವರನ್ನು ನೀವು ಗುರುತಿಸಿ ಅವರ ಸಂಬಂಧವನ್ನು ಕಡಿದು ಹಾಕಬೇಕು. ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಇವರು ಅವರ ಹಿಂದೆ ಬರುತ್ತಾರೆ. ಇನ್ನು ಹೆಚ್ಚು ಹೆಚ್ಚು ಹಣವನ್ನು ಗ್ರಾಮೀಣ ಆರ್ಥಿಕ ವ್ಯವಸ್ಥೆಗೆ ಮೀಸಲಾಗಿಡಬೇಕು. ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏನೂ ಹೇಳಲಿಲ್ಲ. ಈ ಭಾಷಣ ಏನು ಇದೆ ಇದು ಒಂದು ಅತ್ಯಂತ ಅಸ್ಪಷ್ಟವಾದ ಮತ್ತು ವಿವರಗಳು ಇಲ್ಲದ ಕಾರ್ಯಕ್ರಮಗಳನ್ನು ಹೇಳಿರುವಂತಹ ಭಾಷಣವಾಗಿದೆ.

ಈ ಒಂದು ಭಾಷಣದಲ್ಲಿ ಕೃಷಿಕರಿಗೆ ತಾಂತ್ರಿಕ ಮಾರ್ಗದರ್ಶನ, ಉತ್ತಮ ಬೀಜ, ಗೊಬ್ಬರ ಮತ್ತು ಕ್ರಿಮಿನಾಶಕ ವಸ್ತುಗಳನ್ನು ಒದಗಿಸಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಇದು ಸಾಧ್ಯವೇ ? ಇದನ್ನು ಒದಗಿಸಿಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಕೃಷಿಕರಿಗೆ ಬೇಕಾದಂತಹ ಸಾಲವನ್ನು ಕೊಡಲು ನಿಮ್ಮ ಚಿಂತನೆ ಏನು ? ಸಹಕಾರ ಸಂಘಗಳ ಮೂಲಕ ಸಾಲವನ್ನು ಕೊಡತಕ್ಕಂಥ ಪ್ರಯತ್ನವನ್ನು ಮಾಡುತ್ತೀರಾ ಅಥವಾ ವಾಣಿಜ್ಯ ಬ್ಯಾಂಕ್‌ಗಳ ಮೂಲಕ ಸಾಲವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ ? ಸಾಲ ಕೊಡುವವರಿಗೆ ರಿಯಾಯಿತಿ ಸಾಲವನ್ನು ಏನಾದರೂ ಕೊಡುತ್ತೀರಾ ಎಂಬ ಬಗ್ಗೆ ಏನನ್ನೂ ಹೇಳಿಲ್ಲ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ನಮ್ಮ ಆರು ವರ್ಷಗಳ ಅಧಿಕಾರದ ಅವಧಿಯಲ್ಲಿ ಕೃಷಿಕರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಟ್ಟಿದ್ದೇವೆ. ಯಾರು ಸಕಾಲದಲ್ಲಿ ಸಾಲ ಹಿಂತಿರುಗಿಸಿದ್ದಾರೋ ಅವರಿಂದ ೭ ಪರ್ಸೆಂಟ್ ಬಡ್ಡಿಯಂತೆ ವಸೂಲಿ ಮಾಡಿದ್ದೇವೆ. ಯಾರಿಗೆ ಸಾಲದ ಹೊರೆ ಇತ್ತೋ ಅಂತಹವರಿಗೆ ಸುಸ್ತಿ ಬಡ್ಡಿಯಲ್ಲಿ ಕೂಡ ರಿಯಾಯಿತಿ ಕೊಟ್ಟಿದ್ದೇವೆ. ಇದಕ್ಕಾಗಿ ಸುಮಾರು ೧೫೦ ಕೋಟಿ ರೂಪಾಯಿಗಳ ಸಹಾಯವನ್ನು ಕಳೆದ ಆರು ವರ್ಷಗಳಲ್ಲಿ ಕೊಟ್ಟಿದ್ದೇವೆ. ಇಷ್ಟು ಕೆಲಸ ಮಾಡಿದರೆ ಸಾಕೇ ಎಂದು ನೀವು ಕೇಳಬಹುದು, ಆದರೆ ಅದು ಸಾಕಾಗುವುದಿಲ್ಲ. ಈ ದೇಶದಲ್ಲಿ ಸಾಲದ ಹೊರೆ ರೈತರ ಮೇಲೆ ಇದೆ.

ಈ ಸಾಲವನ್ನು ಮನ್ನಾ ಮಾಡುವುದರ ಜೊತೆಗೆ ಅತ್ಯಂತ ಕಡಿಮೆ ಪ್ರಮಾಣದ ಬಡ್ಡಿ ದರದಲ್ಲಿ ಸಾಲ ಸಿಗುವಂತಹ ವ್ಯವಸ್ಥೆಯನ್ನು ನೀವು ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದಂತಹ ಚಿಂತನೆಯನ್ನು ತಾವು ಮಾಡಬೇಕಾಗುತ್ತದೆ. ಇನ್ನು ನಮ್ಮ ರಾಜ್ಯದಲ್ಲಿ ಅನೇಕ ಕೈಗಾರಿಕೆಗಳು ಮುಚ್ಚಿ ಹೋಗಿವೆ. ನಮ್ಮ ಕಮ್ಯುನಿಸ್ಟ್ ಮಿತ್ರರು ಈಗ ಇಲ್ಲಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಅವರು ಇಲ್ಲ ಇವತ್ತು ನಮ್ಮ ಜಿಲ್ಲೆಯಲ್ಲಿ ಅನೇಕ ಗಿರಣಿಗಳು ಇವೆ. ಅವುಗಳು ಮುಚ್ಚಿ ಹೋಗಿವೆ. ಆ ಗಿರಣಿಗಳನ್ನು ಪ್ರಾರಂಭ ಮಾಡಿಸಲು ಪ್ರಾಮಾಣಿಕವಾದ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡಿತ್ತು. ಆ ಅವಧಿಯಲ್ಲಿ ಪ್ರಾಮಾಣಿಕವಾದ ಚರ್ಚೆ ಇಲ್ಲಿ ನಡೆದಿತ್ತು. ಅಷ್ಟರಲ್ಲಿ ನಮ್ಮ ಸರ್ಕಾರ ಬಿದ್ದು ಹೋಯಿತು. ನಮ್ಮ ಕಾಲದಲ್ಲಿ ನಡೆದ ಪ್ರಯತ್ನವನ್ನು ತಾವು ಮುಂದುವರೆಸಬೇಕೆಂದು ನಾನು ಹೇಳುತ್ತಾ ಮುಚ್ಚಿರುವ ಗಿರಣಿಗಳನ್ನು ತೆಗೆಸಿ ಕೆಲಸ ಪ್ರಾರಂಭ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಶಿಕ್ಷಣ ವಿಷಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ವೈದ್ಯಕೀಯ ಮತ್ತು ಇಂಜಿನೀಯರಿಂಗ್ ವಿಭಾಗಗಳಲ್ಲಿ ಅವ್ಯವಹಾರ ನಡೆದಿದೆ ಎಂದು ನನ್ನ ಸನ್ಮಾನ್ಯ ಮಿತ್ರರು ಹೇಳಿದರು. ಅದನ್ನು ರಾಜ್ಯಪಾಲರ ಭಾಷಣದಲ್ಲಿಯೂ ಹೇಳಿದ್ದಾರೆ. ಇವು ಹೊಸ ಅವ್ಯವಹಾರಗಳು ಅಲ್ಲ. ನಾನು ಈಗಾಗಲೇ ಹೇಳಿದಹಾಗೆ ಈ ದೇಶದಲ್ಲಿ ಬಂಡವಾಳಶಾಹಿಗಳು ಮತ್ತು ಪಟ್ಟಭದ್ರ ಹಿತಾಶಕ್ತಿಗಳು ಸೇರಿಕೊಂಡು ಮಾಧ್ಯವರ್ತಿಗಳ ರೀತಿಯಲ್ಲಿ ವ್ಯವಹಾರಗಳನ್ನು ಮಾಡುತ್ತಾ ಬಂದಿದ್ದಾರೆ. ಇದರ ಜೊತೆಗೆ ನಿಜವಾಗಿ ಹೊಸ ಕೈಗಾರಿಕಾ ನೀತಿಗೆ ಅನುಸಾರವಾಗಿ ಪ್ರಗತಿಗೆ ಅನುಸಾರವಾಗಿ ನೀತಿ ನಿರೂಪಣೆ ಮಾಡಿದರೆ ಅದಕ್ಕೆ ನಿಮಗೆ ನಮ್ಮ ಬೆಂಬಲ ಇದ್ದೇ ಇರುತ್ತದೆ. ಆ ಒಂದು ನೈತಿಕವಾದ ಶಕ್ತಿ ಎದೆಗಾರಿಕೆ ತಮಗೆ ಇದೆ ಎಂದು ನಿರ್ಧಿಷ್ಟವಾಗಿ ಹೇಳುವ ಶಕ್ತಿಯನ್ನು ಈ ಸರ್ಕಾರ ಪಡೆದಿದೆಯೇ ಎಂದು ನಾನು ಇವತ್ತು ತಮ್ಮನ್ನು ಕೇಳಬಯಸುತ್ತೇನೆ. ಅದಕ್ಕೆ ನನ್ನದೇ ಆದ ಒಂದು ಸಂಶಯ ಇದೆ. ಈ ದೇಶದಲ್ಲಿ ಅನೇಕ ವಿಧವಾದ

ಪ್ರಗತಿಯ ಕಾರ್ಯಕ್ರಮಗಳು ನಡೆಯಬೇಕಾದರೆ ಅದಕ್ಕೆ ಬೇಕಾದ ಹಣಕಾಸಿನ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳಬೇಕು. ಹಣಕಾಸಿನ ಸಂಪನ್ಮೂಲಗಳು ಸೋರಿ ಹೋಗುವುದನ್ನು ತಡೆಗಟ್ಟುವ ಮಾತನ್ನು ತಾವು ಹೇಳಿದ್ದೀರಿ. ಆದರೆ ಸೋರಿ ಹೋಗುವುದನ್ನು ತಡೆಗಟ್ಟಲು ಯಾವ ಪ್ರಯತ್ನವನ್ನು ನೀವು ಮಾಡಬೇಕೋ ಆ ಪ್ರಯತ್ನವನ್ನು ಮಾಡಬೇಕಾಗುತ್ತದೆ. ನೀವು ಮಾಡಿದ್ದೀರಾ ಎಂದು ನಮ್ಮ ಸ್ನೇಹಿತರು ಕೇಳಬಹುದು. ನೀವು ಮಾಡಿ. ನಾನಿದ್ದಾಗ ಖಂಡಿತವಾಗಿ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದರೂ ಸೋರುವಿಕೆಯನ್ನು ತಡೆಗಟ್ಟುವುದಕ್ಕೆ ಆಗಲಿಲ್ಲ. ಇವತ್ತು ತಾವು ಅಧಿಕಾರಕ್ಕೆ ಬಂದಿದ್ದೀರಿ. ಒಳ್ಳೆಯ ಕೆಲಸವನ್ನು ಮಾಡಿ. ಅದಕ್ಕೆ ನಮ್ಮ ಬೆಂಬಲ ನಿಮಗೆ ಇದ್ದೇ ಇರುತ್ತದೆ. ನಮ್ಮ ಸಂಪನ್ಮೂಲಗಳು ಎಲ್ಲಿವೆ ಎಂದರೆ ಮಾರಾಟ ತೆರಿಗೆ ಆಗಿರಬಹುದು ಅಥವಾ ಎಕ್ಸೈಜ್ ವಿಚಾರ ಆಗಿರಬಹುದು, ಇವುಗಳಲ್ಲಿ ತಾವು ಯಾವ ನೀತಿಯನ್ನು ಅನುಸರಿಸುತ್ತೀರಿ ಎನ್ನುವುದನ್ನು ಹೇಳಿ. ನಮ್ಮ ಸ್ನೇಹಿತರಾದ ಶ್ರೀಮಾನ್ ಬೈರೇಗೌಡರು ಹೇಳಿದ ರೀತಿಯಲ್ಲಿ ನಾನು ಹೇಳುವುದಿಲ್ಲ. ಬೇಜವಾಬ್ದಾರಿಯಿಂದ ಕೆಲಸ ಮಾಡಿದರು ಎಂದು ಅವರು ಹೇಳಿದರು. ಆ ರೀತಿ ನಾನು ಹೇಳುವುದಿಲ್ಲ. ಜವಾಬ್ದಾರಿ ಇಲ್ಲವೆನ್ನುವ ಮಾತನ್ನು ನಾನು ಹೇಳುವುದಿಲ್ಲ. ಜವಾಬ್ದಾರಿ ಇದೆ. ಇವತ್ತಿನ ದಿವಸ ನನಗೆ ಗೊತ್ತಿರುವ ಹಾಗೆ ಇದರಲ್ಲಿ ಹೆಚ್ಚಿನ ಜವಾಬ್ದಾರಿ ನಮ್ಮದು ಮತ್ತು ನಿಮ್ಮದು ಇದೆ. ಈ ಬಗ್ಗೆ ನಾವು ಅನೇಕ ರೀತಿಯಲ್ಲಿ ಸಮರ್ಥನೆ ಮಾಡಿಕೊಳ್ಳಬಹುದು. ಈ ವಿಷಯದಲ್ಲಿ ಈ ಸರ್ಕಾರ ಯಾವ ರೀತಿಯ ನೀತಿಯನ್ನು ಅನುಸರಿಸುತ್ತದೆ? ಎನ್ನುವ ಮಾತನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಿಮ್ಮ ನೀತಿ ಏನು? ಈಗಾಗಲೇ ತಮಗೆ ಅದರ ಬಿಸಿ ತಟ್ಟಿರಬೇಕು. ಏತಕ್ಕೆಂದರೆ ಈ ದೇಶ ಬಂಡವಾಳಶಾಹಿಗಳ, ಸಕ್ಕರೆ ಉತ್ಪಾದಕರ ಮತ್ತು ನೆಲ ಜಲದ ಲಾಬಿಗಳ ಕೈಯಲ್ಲಿ ಇದೆ. ಈ ಲಾಬಿಯವರು ಚುನಾವಣೆಗಳು ಬಂದಾಗ ಹಣ ಕೊಡುತ್ತಾರೆನ್ನುವ ಭಾವನೆಯಿಂದ ಅವರ ಹಿತವನ್ನು ರಕ್ಷಣೆ ಮಾಡುವುದಕ್ಕೆ ಹೋದರೆ ಯಾವುದೇ ಹೊಸ ಕಾರ್ಯಕ್ರಮ ರೂಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕೇಳುವುದಿಷ್ಟೇ, ನೆಲದ ಹಣವನ್ನಾಗಲೀ, ಜಲದ ಹಣವನ್ನಾಗಲೀ, ಹೆಂಡದ ಹಣವನ್ನಾಗಲೀ, ಅವರಿಂದ ಪಡೆಯದೆ ಅವರ ಸಂಬಂಧವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಎಲ್ಲಿಯವರೆಗೆ ಈಗಿನ ಚುನಾವಣಾ ಪದ್ಧತಿ ನಮ್ಮ ದೇಶದಲ್ಲಿಜಾರಿಯಲ್ಲಿ ಇರುತ್ತದೆಯೋ ಅಲ್ಲಿಯವರೆಗೆ ಶ್ರೀಮಂತರು ಮಾತ್ರ, ಶ್ರೀಮಂತ ವರ್ಗಕ್ಕೆ ಸೇರಿದವರು ಮಾತ್ರ ಗೆದ್ದು ಬರುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಎಲ್ಲಾ ಜನರು ತಿಳಿದುಕೊಂಡಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಚುನಾವಣಾ ಸುಧಾರಣೆಗೆ ಈ ಮನೆ ಪ್ರಯತ್ನ ಮಾಡದಿದ್ದರೆ ಬಡವರು ಆರಿಸಿ ಬರುವುದಕ್ಕೆ ಸಾಧ್ಯವಿಲ್ಲ. ಬಂಡವಾಳಗಾರರ ಕೈಯಿಂದ ಈ ಸರ್ಕಾರ ಪಾರಾಗಬೇಕು. ಈ ದಿವಸ ಸರ್ಕಾರದ ಕ್ಷೇತ್ರಗಳ. ತನ್ನದೇ ಆದಂಥ ಕಾರ್ಯಕ್ರಮಗಳ ನೀತಿಯನ್ನು ಅನುಸರಿಸುವ ಬಗ್ಗೆ ಜನಪರ ಕಾರ್ಯಕ್ರಮಗಳನ್ನು ಕೈಕೊಳ್ಳುವ ಬಗ್ಗೆ ತನ್ನದೇ ಆದಂಥ ನೀತಿಯನ್ನು ಅನುಸರಿಸುವ ಬಗ್ಗೆ ಇವತ್ತಿನ ದಿವಸ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಒಂದು ಕಾರ್ಯಕ್ರಮಗಳ ವಿವರ ಇಲ್ಲ. ಅಂಥಾ ವಿವರಗಳು ಇಲ್ಲದೆ ಇರುವುದರಿಂದ ಈ ಕಾರ್ಯ ನೀತಿಯ ಬಗ್ಗೆ ಅಸ್ಪಷ್ಟ ನಿಲುವು ತಾಳಿರುವುದರಿಂದ ಅದನ್ನು ನಾನು ವಿರೋಧ ಮಾಡುತ್ತೇನೆ. ಇವತ್ತಿನ ದಿವಸ ಇದರ ಮೇಲೆ ಒಂದೆರಡು ನಿಮಿಷಗಳ ಕಾಲ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಎ. ನಾಗರಾಜು (ಮಾಲೂರು).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಜಂಟಿ ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನೆಯನ್ನು ಅರ್ಪಿಸುವ ಪ್ರಸ್ತಾವವನ್ನು ಹಿರಿಯ ಸದಸ್ಯರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಸಭೆಯ ಮುಂದೆ ಏನು ಮಂಡಿಸಿದ್ದಾರೆ, ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ನನ್ನ ಕೆಲವಾರು ಅನಿಸಿಕೆಗಳನ್ನು ಈ ಸಭೆಯ ಮೂಲಕ ಮಂಡಿಸುವುದಕ್ಕೆ ನಾನು ಪ್ರಯತ್ನಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಭಾಷಣ ಮಾಡುತ್ತಾ ಬಹಳಷ್ಟು ಸದಸ್ಯರು ಈ ರಾಜ್ಯಪಾಲರ ಭಾಷಣದಲ್ಲಿ ಪರಿಣಾಮಕಾರಿಯಾದ ಕಾರ್ಯಕ್ರಮಗಳಿಲ್ಲ, ಇದು ನೀರಸವಾದ ಒಂದು ಭಾಷಣ, ಇದನ್ನು ನಮ್ಮ ಸರ್ಕಾರ ರಾಜ್ಯಪಾಲರ ಮುಖೇನ ಹೇಳಿಸಿದ್ದಾರೆಂದು ಹೇಳಿದ್ದಾರೆ. ಆದರೆ, ಈ ರಾಜ್ಯಪಾಲರ ಭಾಷಣದಲ್ಲಿ ಏನಿದೆ? ಈ ರಾಷ್ಟ್ರದ ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದ ದಿವಂಗತ ಶ್ರೀಮತಿ ಇಂದಿರಾ ಗಾಂಧಿಯವರು ಈ ದೇಶದ ಜನತೆಗೆ ೨೦ ಅಂಶಗಳ ಕಾರ್ಯಕ್ರಮಗಳನ್ನು ಕೊಟ್ಟರು. ಈ ೨೦ ಅಂಶಗಳ ಕಾರ್ಯಕ್ರಮದ ಮೂಲಭೂತವಾದಂಥ ಉದ್ದೇಶ ಏನೆಂದು ಹೇಳಿದರೆ, ಮನುಷ್ಯನ ಎಲ್ಲ ಹಂತದವರೆಗೆ ಅಂದರೆ ಶೂನ್ಯ ವರ್ಷಗಳಿಂದ ಹಿಡಿದು ಮುದುಕನವರೆಗೆ ಈ ಅಂಶಗಳ ಉಪಯೋಗ ಬರುತ್ತದೆ. ಅವನ ಕಲ್ಯಾಣವನ್ನು ಮಾಡಿ ಅವನ ಜೀವನವನ್ನು ಉನ್ನತ ಮಟ್ಟಕ್ಕೆ ಏರಿಸುವುದಕ್ಕೆ ಇವು ಒಳ್ಳೆಯ ಕಾರ್ಯಕ್ರಮಗಳು ಹಾಗೂ ಕ್ರಾಂತಿಕಾರಕವಾದ ಕಾರ್ಯಕ್ರಮಗಳಾಗಿವೆ. ಶೂನ್ಯ

ವರ್ಷಗಳಿಂದ ಅಂದರೆ, ಸನ್ಮಾನ್ಯ ಅಧ್ಯಕ್ಷರೇ, ಮಾನವ ಅಣು ರೂಪದಲ್ಲಿ ತಾಯಿಯ ಗರ್ಭಕ್ಕೆ ಸೇರುತ್ತಾನೆ. ಮುಂದೆ ಬಾಲವಾಡಿಯಿಂದ ಪೋಷಣೆ ಶುರುವಾಗುತ್ತದೆ. ಮುದುಕರಿಗೆ ಓಲ್ಡ್ ಏಜ್ ಪೆನ್‌ಷನ್ ಕೊಟ್ಟಿದ್ದಾರೆ. ಹೀಗೆ ನಾನಾ ಹಂತದಲ್ಲಿ ಸಹಾಯ ಸಿಗುತ್ತಿದೆ. ಜನತಾ ಮನೆಗಳ ನಿರ್ಮಾಣದಿಂದ ಸಹಾಯ ಆಗುತ್ತಿದೆ. ನಮ್ಮ ಹಿಂದಿನ ಸರ್ಕಾರ ಒಂದು ಒಳ್ಳೆಯ ಕೆಲಸ ಮಾಡಿತು, ಅದನ್ನು ಶ್ಲಾಘನೆ ಮಾಡಬೇಕಾಗಿದೆ. ವಿಧವಾ ವೇತನವನ್ನು ಅಳವಡಿಸಿದ್ದಾರೆ. ಈ ಹಂತದಲ್ಲಿ ೨೦ ಅಂಶಗಳ ಕಾರ್ಯಕ್ರಮದಿಂದ ಪರಿಪೂರ್ಣವಾಗಿ ಇಲ್ಲಿ ಬಡವರಿಗೆ ಸಹಾಯವಾಗುತ್ತಿದೆ. ಅದರ ರೂಪುರೇಷೆಗಳನ್ನು ಗಮನಿಸಿದರೆ ನಿಜವಾಗಲೂ ಎಲ್ಲಾ ಹಂತದಲ್ಲೂ ಮಾನವನಿಗೆ ಇದರಿಂದ ಒಂದು ಪ್ರಯೋಜನ ಆಗುತ್ತಿದೆ. ಆದ್ದರಿಂದ, ಈ ಭಾಷಣ ನೀರಸವಾದುದೆಂದು ಹಾಗೂ ಕಾರ್ಯಕ್ರಮ ರಹಿತವಾದುದು ಎಂದು ನನಗನ್ನಿಸುವುದಿಲ್ಲ. ಈ ರಾಜ್ಯದಲ್ಲಿ ಕಳೆದ ಆರು ವರ್ಷಗಳ ಕಾಲ ಆಡಳಿತ ನಡೆಸಿದ ಸರಕಾರವು ಸಾರ್ವಜನಿಕರ ಬೇಡಿಕೆಗಳಿಗೆ ಸ್ಪಂದಿಸದೆ ಸಾರ್ವಜನಿಕರ ಅನಿಸಿಕೆಗಳಿಗೆ ಮತ್ತು ಆ ಒಂದು ಮಟ್ಟಕ್ಕೆ ಆಡಳಿತವನ್ನು ತೆಗೆದುಕೊಂಡು ಹೋಗದಿದ್ದ ಕಾರಣ ಜನರು ಬೇಸತ್ತು ರಾಜ್ಯದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ್ನು ಪ್ರಚಂಡ ಬಹುಮತದಿಂದ ಅಧಿಕಾರಕ್ಕೆ ಪುನಃ ಜನರು ತಂದಿದ್ದಾರೆ. ಈ ರಾಜ್ಯದ ಆಡಳಿತ ಸೂತ್ರವನ್ನು ನಮ್ಮ ಸರಕಾರ ವಹಿಸಿಕೊಂಡು ಕೇವಲ ೧೫—೨೦ ದಿವಸಗಳು ಮಾತ್ರ ಆಗಿವೆ. ಈ ಒಂದು ಅಲ್ಪ ಸಮಯದಲ್ಲಿ ಯಾವ ಸಾಧನೆಗಳನ್ನು ಕೂಡ ಮಾಡುವುದಕ್ಕೆ ಆಗುವುದಿಲ್ಲ ಎಂಬ ವಿಚಾರವನ್ನು ಎಲ್ಲಾ ಮಾನ್ಯ ಸದಸ್ಯರುಗಳು ಒಪ್ಪುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಆದರೆ ಮುಂಬರುವ ದಿನಗಳಲ್ಲಿ ನಮ್ಮ ಪಕ್ಷವು ಯಾವ ರೀತಿಯಲ್ಲಿ ಆಡಳಿತವನ್ನು ನಡೆಸಬೇಕು, ಯಾವ ಯಾವ ಸಾಧನೆಗಳನ್ನು ಮಾಡಬೇಕೆಂಬುದನ್ನು ಮೂಲಭೂತವಾಗಿ ಯೋಚಿಸಬೇಕಾದ ವಿಷಯವಾಗಿದ್ದು ಅದು ನಮ್ಮ ಮುಂದಿದೆ.

ನಾನು ಮುಖ್ಯವಾಗಿ ನನ್ನ ಕ್ಷೇತ್ರದ ಬಹಳಷ್ಟು ಹಳ್ಳಿಗಳಿಗೆ ಚುನಾವಣೆಯು ಮುಗಿದ ಮೇಲೆ ಸಂದರ್ಶಿಸಿದ್ದೇನೆ. ಅದರಲ್ಲಿ ನನಗೆ ಮುಖ್ಯವಾಗಿ ಜನರಿಂದ ವ್ಯಕ್ತವಾದ ಬೇಡಿಕೆಯು ಕುಡಿಯುವ ನೀರಿನ ವಿಚಾರದಲ್ಲಿ ಇತ್ತು. ಕುಡಿಯುವ ನೀರಿನ ವಿಚಾರದಲ್ಲಿ ಹಿಂದಿನ ಸರಕಾರವೂ ಕೂಡ ಒಂದು ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಆದರೂ ಅದು ಇನ್ನೂ ಸಮರ್ಪಕವಾಗಿ ಜನರ ಬೇಡಿಕೆಗಳನ್ನು ಪೂರೈಸಿಲ್ಲ. ಹಾಗೆಯೇ ಇನ್ನೊಂದು ವಿಚಾರ ಮನೆಗಳಿಗೆ ಸಂಬಂಧಪಟ್ಟದ್ದು. ಜನತಾ ಮನೆಗಳ ಬಗ್ಗೆ ಬಹಳಷ್ಟು ಬೇಡಿಕೆಗಳು ಜನರಿಂದ ಬರುತ್ತಿದೆ. ಹಳ್ಳಿಗಾಡಿನಲ್ಲಿ ಬಹಳಷ್ಟು ಮನೆಗಳು ಹುಲ್ಲಿನ ಮನೆಗಳಾಗಿವೆ. ಅದರಲ್ಲಿಯೇ ಜನರು ತಮ್ಮ ಜೀವನವನ್ನು ಮಾಡಿಕೊಂಡು ಕಷ್ಟದಲ್ಲಿದ್ದಾರೆ. ಆದುದರಿಂದ ೨೦ ಅಂಶಗಳ ಕಾರ್ಯಕ್ರಮದಲ್ಲಿ ಮನೆಗಳನ್ನು ಒದಗಿಸುವ ಕಾರ್ಯಕ್ರಮವೂ ಒಂದಾಗಿರುವುದರಿಂದ ಅದನ್ನು ತೀವ್ರಗತಿಯಲ್ಲಿ ಜಾರಿಗೊಳಿಸಬೇಕಾಗುತ್ತದೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕಾಣಸಿಗುವ ಇನ್ನೊಂದು ನೋಟ ಅಂದರೆ, ಕೆಟ್ಟು ಹೋಗಿರುವ ರಸ್ತೆಗಳು, ಅಥವಾ ರಸ್ತೆಯ ವ್ಯವಸ್ಥೆಯೇ ಇಲ್ಲದಿರುವುದು. ಥಾರ್ ರಸ್ತೆಗಳು ಅಲ್ಪಸ್ವಲ್ಪ ಕೆಟ್ಟಿದ್ದರೆ ಪ್ರಯಾಣ ಮಾಡಬಹುದು. ಆದರೆ ಹಳ್ಳಿಗಾಡಿನಲ್ಲಿರುವ ರಸ್ತೆಗಳನ್ನು ನೋಡಿದರೆ ಅಲ್ಲಿ ಪ್ರಯಾಣಿಸುವುದೇ ಕಷ್ಟಸಾಧ್ಯವಾಗಿದೆ. ಅಲ್ಲಿರುವ ರಸ್ತೆಗಳಿಗೆ ಅಡಿಪಾಯವೇ ಹೋಗಿ, ಬೋರ್ಡರ್ಸ್ ಇಲ್ಲದೇ ವಾಹನ ಸಂಚಾರಕ್ಕೆ ಕಷ್ಟವಾಗಿದೆ. ಅಂಥ ಕಡೆಗಳಲ್ಲಿ ಜಲ್ಲಿ—ಮಣ್ಣು ಹಾಕಿ ಸರಿಪಡಿಸುವುದಕ್ಕೆ ಹಿಂದಿನ ಸರಕಾರ ಯೋಚನೆ ಮಾಡಲಿಲ್ಲ,

ಅದಕ್ಕೆ ಅವರ ಆರ್ಥಿಕ ಪರಿಸ್ಥಿತಿಯು ಕಾರಣವಾಗಿತ್ತು. ಈ ಬಗ್ಗೆ ಒಂದು ಶ್ವೇತಪತ್ರವನ್ನು ನಮ್ಮ ಮುಖ್ಯಮಂತ್ರಿಯವರು ಈ ಸಭೆಯ ಮುಂದಿಡಲಿದ್ದಾರೆ. ಅವರು ಮಾಡಿದ ಅನಗತ್ಯ ವೆಚ್ಚಗಳು ಹೆಚ್ಚಿಗೆಯಾದುದರಿಂದ ಮತ್ತು ಅದರ ಪ್ರತಿಫಲವಾಗಿ ಇವೊತ್ತು ಹಳ್ಳಿಗಾಡಿನ ರಸ್ತೆಗಳು ಕೂಡ ದುಸ್ಥಿತಿಯಲ್ಲಿರುವಂತಾಗಿದೆ. ಹಾಗೆಯೇ ಈ ಶ್ವೇತಪತ್ರದ ಜೊತೆಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಕೂಡ ಇನ್ನೊಂದು ಶ್ವೇತಪತ್ರವನ್ನು ತರಬೇಕು. ಹಿಂದಿನ ಸರಕಾರದಲ್ಲಿ ಈ ಇಲಾಖೆಯಲ್ಲಿ ಅಧಿಕಾರಿಗಳ ನೇಮಕಾತಿಯು ಜಾಸ್ತಿಯಾಗಿ ಅಲ್ಲಿ ಕೆಲಸ ಎಷ್ಟು ಆಗಬೇಕಾಗಿತ್ತೋ ಅಷ್ಟು ಆಗದೆ ಹೆಚ್ಚಿಗೆ ಅಧಿಕಾರಿಗಳನ್ನು ನೇಮಿಸಿದ ಪರಿಣಾಮವಾಗಿ ಅಧಿಕ ವೆಚ್ಚವನ್ನು ಸರ್ಕಾರ ಹೊರಬೇಕಾಯಿತು ಎಂಬ ಬಗ್ಗೆ ನಮ್ಮ ಮಾನ್ಯ ಸ್ನೇಹಿತರನೇಕರು ಹೇಳಿದ್ದಾರೆ. ಈ ಬಗ್ಗೆ ಒಂದು ಶ್ವೇತಪತ್ರವನ್ನು ಸಭೆಯ ಮುಂದೆ ಇಟ್ಟರೆ ಆಡಳಿತದಲ್ಲಿರಬಹುದಾದ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಮುಂದೆ ಯಾದರೂ ಒಳ್ಳೆಯ ಆಡಳಿತವನ್ನು ಹೇಗೆ ನಡೆಸಬಹುದೆಂಬ ಬಗ್ಗೆ ನಾವು ಮನದಟ್ಟು ಮಾಡಿಕೊಳ್ಳಬಹುದು.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಬಹಳಷ್ಟು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಆ ಕುರಿತು ಮಾನ್ಯ ವಿರೋಧಿ ಪಕ್ಷದ ನಾಯಕರು ಭಾಷಣ ಮಾಡುತ್ತಾ ಒಂದು ವಿಚಾರವನ್ನು ಹೇಳಿದರು. ನಲವತ್ತಕ್ಕೆ ಒಂದರ ಪ್ರಮಾಣದಲ್ಲಿ ಶಿಕ್ಷಕರುಗಳ ನೇಮಕವನ್ನು ಮಾಡಬೇಕೆಂದು ಅವರು ಸೂಚಿಸಿದರು. ಅದಕ್ಕೆ ಒಂದು ತಿದ್ದುಪಡಿಯನ್ನು ನಾನು ತರುತ್ತೇನೆ. ಆ ರೀತಿಯೋ ಪ್ರಕಾರ ಒಂದು ತರಗತಿಗೆ ಒಬ್ಬರು ಉಪಾಧ್ಯಾಯರು ಇರಬೇಕು. ಹಳ್ಳಿಗಾಡಿನಲ್ಲಿ ಸುಮಾರು ಏಳು ಕ್ಲಾಸ್‌ಗಳು ಇದ್ದರೆ, ಅಲ್ಲಿ ಸುಮಾರು ೧೦೦ ರಿಂದ ೧೨೦ ವಿದ್ಯಾರ್ಥಿಗಳು ಇರುತ್ತಾರೆ. ಆ ಸಮಯದಲ್ಲಿ ಅಲ್ಲಿ ಕೇವಲ ೨ ಅಥವಾ ೩ ಜನ ಉಪಾಧ್ಯಾಯರು ಇರುವುದಕ್ಕೆ ಅವಕಾಶ ಇರುತ್ತದೆ. ಅಲ್ಲಿ ಏಳು ಕ್ಲಾಸ್‌ಗಳು ಇರುವುದರಿಂದ ಅಲ್ಲಿ ಮೂರು–ನಾಲ್ಕು ಜನ ಉಪಾಧ್ಯಾಯರುಗಳು ಕೆಲಸ ಮಾಡುವುದು ತೊಂದರೆಯಾಗುತ್ತದೆ. ಆದುದರಿಂದ ೪೦ ಹುಡುಗರಿಗೆ ಅಥವಾ ತರಗತಿಗೆ ಒಬ್ಬರಂತೆ ಉಪಾಧ್ಯಾಯರನ್ನು ನೇಮಕ ಮಾಡಬೇಕೆಂದು ನಾನು ಸರಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಹಿಂದಿನ ಸರಕಾರದವರು ಮಂಡಳ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ. ಆ ಪದ್ಧತಿಯ ಬಗ್ಗೆ ಬಹಳಷ್ಟು ಮಾನ್ಯ ಸದಸ್ಯರುಗಳು ಇಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ನಾನು ಕೂಡ ಅದರ ಪೂರ್ಣಪ್ರಮಾಣದ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ಅಧಿಕಾರ ವಿಕೇಂದ್ರಿಕರಣದ ಹೆಸರಿನಲ್ಲಿ ದುರಾಡಳಿತ ಯಾವ ರೀತಿಯ ವಿಕೇಂದ್ರೀಕೃತವಾಗಿದೆ ಎನ್ನುವುದನ್ನು ನಮ್ಮ ಕೋಲಾರ ಜಿಲ್ಲಾ ಪರಿಷತ್‌ನಲ್ಲಿ ನಡೆದ ಅವ್ಯವಹಾರಗಳನ್ನು ಉದಹರಿಸುತ್ತೇನೆ. ಅದನ್ನು ಯಾವ ರೀತಿಯಲ್ಲಿ ಸರಕಾರದವರು ಸರಿಪಡಿಸಬೇಕು ಅಥವಾ ಆ ಬಗ್ಗೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ವಿಚಾರ ಮಾಡಬೇಕಾಗಿದೆ. ಅಲ್ಲಿ ಏನಾಗಿದೆ ಅಂದರೆ, ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ನಲ್ಲಿ ಹರಿಜನರಿಗೆ ಬೋರ್‌ವೆಲ್ ವ್ಯವಸ್ಥೆಯನ್ನು ಒದಗಿಸಿ, ಸಾಮೂಹಿಕ ಬೇಸಾಯ ಮಾಡತಕ್ಕಂಥ ಒಂದು ವ್ಯವಸ್ಥೆ [illegible]ನಲ್ಲಿ ಕೆ[illegible] ಜಿಲ್ಲಾ ಪರಿಷತ್ ಅಧ್ಯಕ್ಷ[illegible] ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಹಾಗೆಯೇ ಇನ್ನೊಂದು ಬಾಬಿನಲ್ಲಿ ೫೦ ಲಕ್ಷ ರೂಪಾಯಿಗಳನ್ನು ಮಂಜೂರಾತಿ ಇಲ್ಲದೆ ಖರ್ಚು ಮಾಡಿದ್ದಾರೆ..

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಮಾನ್ಯ ಎಂ.ವಿ. ವೆಂಕಟಪ್ಪನವರು ಗಮನ ಸೆಳೆಯುವ ಸೂಚನೆ ಮೂಲಕ ಕೋಲಾರ ಜಿಲ್ಲಾಪರಿಷತ್ತಿನ ಬಗ್ಗೆ ಹಲವಾರು ಆಪಾದನೆಗಳನ್ನು ಮಾಡಿದರು. ಆ ವಿಚಾರವು ಈಗ ಕೋರ್ಟ್‌ನಲ್ಲಿ ಇರುವುದರಿಂದಾಗಿ, ಆ ಬಗ್ಗೆ ಕೋರ್ಟ್‌ಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ತೋರಿಸಿದ ಮೇಲೆ ಪುನ ಇಲ್ಲಿ ಆ ಬಗ್ಗೆ ಪ್ರಸ್ತಾಪ ಮಾಡತಕ್ಕಂಥಾದ್ದು ಸರಿಯಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಎ. ನಾಗರಾಜು.— ನಿನ್ನೆಯ ದಿವಸ ಮಾನ್ಯ ಅಧ್ಯಕ್ಷರು ಏನು ಹೇಳಿದ್ದಾರೆ ಎಂದರೆ, ಈ ಬಗ್ಗೆ ಇರುವ ಕಾನೂನಿನ ಸಾಧಕ—ಬಾಧಕಗಳನ್ನು ಪರಿಶೀಲನೆ ಮಾಡಿ, ಮುಂದೆ ಈ ಸಭೆಗೆ ತಮ್ಮ ತೀರ್ಮಾನ ಕೊಡುತ್ತೇನೆ ಎಂದು ಹೇಳಿದ್ದರು.

ಛೇರ್‌ಮನ್.— ಮಾನ್ಯ ಸದಸ್ಯರು ಕೋರ್ಟ್‌ಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ಕೊಡಿ ಎಂದು ಹೇಳಿದ್ದಾರೆ.

೧.೦೦ ಪಿ.ಎಂ.

ಇದರಲ್ಲಿ ಒಂದೇ ಒಂದು ಪಾಯಿಂಟ್ ಇದೆ, ಅದನ್ನು ಹೇಳುತ್ತೇನೆ. ಕಳೆದ ವರ್ಷದ ಆಯವ್ಯಯ ಪತ್ರ, ಏನು ಇದೆ ಅದನ್ನು ಜಿಲ್ಲಾಪರಿಷತ್ತಿನ ಮುಂದೆ ಇಡದೆ ಹಾಗೇ ಸರಕಾರಕ್ಕೆ ಕಳಿಸಿದ್ದಾರೆ. ಆಡಳಿತಕ್ಕೆ ಧಕ್ಕೆ ತರುವಂತಹ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದಾರೆ. ಮತ್ತು ಪ್ರಜಾಪ್ರಭುತ್ವಕ್ಕೆ ಬೆಲೆ ಕೊಡದ ರೀತಿಯಲ್ಲಿ ಕೋಲಾರದ ಜಿಲ್ಲಾಪರಿಷತ್ತಿನ ಅಧ್ಯಕ್ಷರು ಆಡಳಿತ ನಡೆಸುತ್ತಿದ್ದಾರೆ. ಇದರ ಬಗ್ಗೆ ಹಿರಿಯ ಸದಸ್ಯರಾದಂತಹ ಶ್ರೀ ಎಂ. ವಿ ವೆಂಕಟಪ್ಪನವರು ಗಮನ ಸೆಳೆಯುವ ಸೂಚನೆಯನ್ನು ತಂದರು. ಅದು ವಿವಾದಾತ್ಮಕವಾಗಿ ಉಳಿದಿರುವುದರಿಂದ ಅದನ್ನು ಅಲ್ಲಿಗೇ ಬಿಡುತ್ತೇನೆ. ನಿನ್ನೆಯ ದಿವಸ ಈ ದೇಶದ ಪ್ರಧಾನಿಗಳಾದ ಶ್ರೀ ವಿ.ಪಿ. ಸಿಂಗ್‌ರವರು ಲೋಕಸಭೆಯಲ್ಲಿ ವಿಶ್ವಾಸ ಮತವನ್ನು ಗಳಿಸಿದ್ದಾರೆ. ಅದು ಸಂತೋಷದ ವಿಚಾರ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷ ಬಹುದೊಡ್ಡ ಪಕ್ಷವಾಗಿ ೧೯೩ ಸ್ಥಾನಗಳನ್ನು ಹೊಂದಿದ್ದು ಜನತಾ

ದಳದ ಸಂಖ್ಯೆ ೧೪೩ ಆಗಿದೆ. ನಾವು ೧೯೩ ಸ್ಥಾನಗಳನ್ನು ಹೊಂದಿದ್ದರೂ ಕೂಡ ಸರಕಾರವನ್ನು ರಚನೆ ಮಾಡಲಿಲ್ಲ. ಮಾನ್ಯ ರಾಜೀವ ಗಾಂಧಿಯವರು ಇದರ ಅಡಿಯಲ್ಲಿ ಒಂದು ಒಳ್ಳೆಯ ಮಾರ್ಗವನ್ನು ಸೂಚಿಸಿದ್ದಾರೆ. ಈ ಹೊಸ ಸರಕಾರ ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ಮೇಲೆ ಈ ರಾಷ್ಟ್ರದ ಮತ್ತು ಪ್ರಪಂಚದ ಗಮನ ಸೆಳೆಯುವಂತಹ ಘಟನೆ ಡಿಸೆಂಬರ್ ೮ರಂದು ನಡೆಯಿತು. ಅಂದು ಮಧ್ಯಾಹ್ನ ೩ ಗಂಟೆಗೆ ಜಮ್ಮು ಕಾಶ್ಮೀರದಲ್ಲಿನ ಶ್ರೀನಗರಕ್ಕೆ ಕೇಂದ್ರ ಗೃಹ ಸಚಿವರಾದ ಮುಫ್ತಿ ಸಯ್ಯದ್ ಮಹಮದ್ ಅವರ ಮಗಳಾದ ಡಾ. ರುಬಿಯಾರನ್ನು...

ಶ್ರೀ ಪಿ. ಜಿ. ಆರ್. ಸಿಂಧ್ಯ.— ಇದು ನಮ್ಮ ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟಿದೆಯೇ ? ಈ ದೇಶದ ಭದ್ರತೆ ಬಗ್ಗೆ ನಾವಿಲ್ಲಿ ಚರ್ಚೆ ಮಾಡುತ್ತಿದ್ದೇವೆಯೇ ? ರಾಜ್ಯಪಾಲರ ಭಾಷಣಕ್ಕೆ ಇದು ಕಿಂಚಿತ್ತಾದರೂ ಸಂಬಂಧವಿದ್ದರೆ ತಾವು ಅವರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಎ. ನಾಗರಾಜು.— ಇದು ಬಹಳ ಮುಖ್ಯವಾದಂತಹ ವಿಚಾರ. ಇಡೀ ಇಂಡಿಯಾದಲ್ಲಿ ಮಾತ್ರವಲ್ಲ ಇಡೀ ಪ್ರಪಂಚದ ಗಮನ ಸೆಳೆದಿದೆ ಇದು. ಡಾ; ರುಬಿಯಾರವರನ್ನು ಜಮ್ಮು ಕಾಶ್ಮೀರದ ಉಗ್ರಗಾಮಿಗಳು...

(ಗೊಂದಲ)

ಶ್ರೀ ಎಸ್. ಎಚ್. ಕೌಜಲಗಿ.— ರುಬಿಯಾ ಪ್ರಕರಣದ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಮಾತನಾಡುತ್ತಾರೆ, ಇಲ್ಲಿ ಏತಕ್ಕೆ ಮಾತನಾಡುತ್ತೀರಿ ?

(ಗೊಂದಲ)

ಛೇರ್ಮನ್.— ನಿಮಗೆ ಸಮಯ ಬಹಳ ಕಡಿಮೆ ಇದೆ, ಜಾಗ್ರತೆ ಮುಗಿಸಿರಿ.

ಶ್ರೀ ಎ. ನಾಗರಾಜು.—ಆ ಹೆಣ್ಣುಮಗಳನ್ನು ಅವರು ಕಿಡ್‌ನ್ಯಾಪ್ ಮಾಡಿದಾಗ ಕೇಂದ್ರಸರ್ಕಾರ ಒಂದು ಸಬ್ ಕಮಿಟಿಯನ್ನು ಫಾರಂ ಮಾಡುತ್ತದೆ. ಅದರಲ್ಲಿ ಅಲಹಾಬಾದಿನ ನ್ಯಾಯಾಧೀಶರೊಬ್ಬರಿದ್ದರು. ಅವರ ಮಧ್ಯಸ್ಥಿಕೆಯಿಂದ ಆ ಹೆಣ್ಣು ಮಗಳನ್ನು ರಿಲೀಸ್ ಮಾಡುತ್ತಾರೆ. ಆ ರೀತಿ ರಿಲೀಸ್ ಮಾಡುವಾಗ ಒಂದು ಷರತ್ತು ಇರುತ್ತದೆ. ಆ ಷರತ್ತು ಏನೆಂದು ಹೇಳಿದರೆ ಐದು ಜನ ಉಗ್ರಗಾಮಿಗಳನ್ನು ಬೇಷರತ್ತಾಗಿ ಬಿಟ್ಟುಕೊಟ್ಟರೆ ಮಾತ್ರ ರುಬಿಯಾರನ್ನು ಬಿಡುತ್ತೇವೆ ಎಂಬ ಷರತ್ತಿನ ಮೇಲೆ ಆ ಹೆಣ್ಣು ಮಗಳನ್ನು ಬಿಡುತ್ತಾರೆ. ಆ ಹೆಣ್ಣುಮಗಳು ಈ ತೊಂದರೆಗೆ ಈಡಾದಾಗ ಈ ತರಹ ಏನು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅದನ್ನು ಸ್ವಾಗತಿಸುತ್ತೇನೆ. ಆದರೆ ಇದರ ಹಿಂದೆ ಏನಿದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಈ ಉಗ್ರಗಾಮಿಗಳಲ್ಲಿ ಒಬ್ಬ ಶೇರ್‌ಖಾನ್ ಎಂಬುವನು ಒಬ್ಬನಿದ್ದಾನೆ. ಅವನು...

ಶ್ರೀ ಎಸ್. ಹೆಚ್. ಕೌಜಲಗಿ.— ಇದೇನು ಇವರು ಪಾರ್ಲಿಮೆಂಟ್‌ನಲ್ಲಿ ಮಾತನಾಡಲಿಕ್ಕೆ ಹತ್ತಿದ್ದಾರೋ ಅಥವಾ ಅಸೆಂಬ್ಲಿಯಲ್ಲಿ ಮಾತನಾಡಲಿಕ್ಕೆ ಹತ್ತಿದ್ದಾರೋ ?

(ಗೊಂದಲ)

ಶ್ರೀ ಜಿ. ರಾಮಕೃಷ್ಣ.— ನಿಮಗೆ ಅವರು ಮಾತನಾಡುತ್ತಿರುವುದರಿಂದ ಏನು ತೊಂದರೆ ಇದೆ? ನೀವು ಇಲ್ಲಿದ್ದಾಗ ಕೇಂದ್ರದ ಬಗ್ಗೆ ಮಾತನಾಡುತ್ತಿರಲಿಲ್ಲವೇ ?

(ಗೊಂದಲ)

ಛೇರ್ಮನ್.— ದಯವಿಟ್ಟು ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ಎ ನಾಗರಾಜು — ಇದರ ಹಿಂದೆ ಆ್ಯಂಟಿ ನ್ಯಾಷನಲ್ ಗ್ಯಾಂಗ್ ಇದೆ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡಬೇಕು. ಈ ರಾಷ್ಟ್ರದ ಭದ್ರತೆಗೋಸ್ಕರ, ಈ ರಾಷ್ಟ್ರದ ಏಕತೆಗೋಸ್ಕರ ಹಿಂದಿನ ಪ್ರಧಾನಿಗಳು ಗೋಲ್ಡನ್ ಟೆಂಪಲ್‌ನಲ್ಲಿ ಅಪರೇಷನ್ ಬ್ಲೂ ಸ್ಟಾರ್ ಮಾಡಿದರು. ಭದ್ರತಾ ಪಡೆಯ ಉನ್ನತ ಅಧಿಕಾರಿಗಳು ಹಿಂದಿನ ಪ್ರಧಾನಿಗಳಿಗೆ ಒಂದು ನೋಟ್ ಕಳುಹಿಸುತ್ತಾರೆ. ಅದು ಏನೆಂದರೆ, ಸಿಕ್ ಜನಾಂಗದವರು ಭದ್ರತಾ ಪಡೆಯುವರು ಸೇರಿಕೊಂಡಿದ್ದಾರೆ, ಇದರಿಂದ ನಿಮ್ಮ ಪ್ರಾಣಕ್ಕೇ ಅಪಾಯ ಇದೆ ಎಂದು ಹೇಳಿ ನೋಟ್‌ನ್ನು ಹಿಂದಿನ ಪ್ರಧಾನ ಮಂತ್ರಿಗಳಿಗೆ ಕಳುಹಿಸುತ್ತಾರೆ. ಆದಕ್ಕೆ ಇಂದಿರಾಗಾಂಧಿಯವರು ಏನು ಹೇಳುತ್ತಾರೆಂದರೆ, ಜಾತೀಯ ಆಧಾರದಮೇಲೆ ನಿರ್ಣಯವನ್ನು ತೆಗೆದುಕೊಂಡು ಈ ಉಗ್ರಗಾಮಿಗಳನ್ನು ಮನೆಯಿಂದ ಕಳುಹಿಸುವುದಕ್ಕೆ ಅಥವಾ ಬೇರೆ ಕಡೆಗೆ ವರ್ಗ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ ಎಂದು ಹೇಳಿ ಫೈನಲ್ ನೋಟ್‌ನ್ನು ಕಳುಹಿಸುತ್ತಾರೆ.

ಜಾತ್ಯಾತೀತ ರಾಷ್ಟ್ರದಲ್ಲಿ ನಾನು ಈ ಕೆಲಸವನ್ನು ಮಾಡುವುದಿಲ್ಲ ಎಂದು ಫೈನಲ್ ನೋಟ್ ಹೋಗುತ್ತದೆ.

(ಗೊಂದಲ)

ಛೇರ್ಮನ್.— ತಾವು ದಯವಿಟ್ಟು ಕನ್‌ಕ್ಲೂಡ್ ಮಾಡಿ.

(ಗೊಂದಲ)

ಶ್ರೀ ಎ. ನಾಗರಾಜು.— ಹಿಂದಿನ ಪ್ರಧಾನಿಗಳು ತಮ್ಮ ಪ್ರಾಣವನ್ನು ತೆತ್ತು ಈ ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಿದ್ದಾರೆ. ಆದರೆ ಒಬ್ಬ ಹೆಣ್ಣು ಮಗಳಿಗೋಸ್ಕರ ಇವರು ನ್ಯಾಷನಲ್ ಸೆಕ್ಯುರಿಟೀಸ್ ಆ್ಯಕ್ಟ್‌ನಲ್ಲಿ ಬಂಧಿಸಲಾಗಿದ್ದ ಉಗ್ರಗಾಮಿಗಳನ್ನು ರಿಲೀಸ್ ಮಾಡಿದ್ದಾರೆ. ಇದನ್ನು ಜನತೆಗೆ ಬಿಡೋಣ.

ಛೇರ್ಮನ್.— ನೀವು ಈ ರೀತಿ ಮಾತನಾಡದೇ ಕನ್‌ಕ್ಲೂಡ್ ಮಾಡಿ.

ಒಬ್ಬ ಮಾನ್ಯ ಸದಸ್ಯರು.—ಇದು ಕೇಂದ್ರದ ಮತ್ತು ರಾಜ್ಯದ ಸಂಬಂಧ.

(ಗೊಂದಲ)

ಶ್ರೀ ಜಿ. ರಾಮಕೃಷ್ಣ — ನಿಮಗೆ ಈಗ ನೆನಪಾಗುತ್ತಿದೆ. ನೀವು ಇಲ್ಲಿದ್ದಂಥ ಸಂದರ್ಭದಲ್ಲಿ ಆಗ ಪಾರ್ಲಿಮೆಂಟ್ ವಿಷಯ ಇಲ್ಲಿ ಮಾತನಾಡಬಾರದೆಂ ಎಂದು ನಿಮಗೆ ಗೊತ್ತಿರಲಿಲ್ಲವೇ ?

(ಗೊಂದಲ)

ಛೇರ್ಮನ್. — ಈಗ ನಿಮಗೆ ಸಾಕಷ್ಟು ಕೊಟ್ಟಿದ್ದೇನೆ. ಈಗ ಮತ್ತೆ ಟೈಮ್ ಕೊಡುವುದಿಲ್ಲ.

ಶ್ರೀ ಎ. ನಾಗರಾಜು.— ಕೇಂದ್ರ ಮತ್ತು ರಾಜ್ಯದ ಸಂಬಂಧದ ಬಗ್ಗೆ ಇವೊತ್ತು ನಮ್ಮ ಸಂವಿಧಾನದಲ್ಲಿ ಏನು ಇದೆ ಎಂಬ ಬಗ್ಗೆ ಮತ್ತು ಫೆಡರಲ್ ಸಿಸ್ಟಂ ಬಗ್ಗೆ ಈ ಸಭೆಯ ನಾಯಕರು ಹಾಗೂ ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲರು ಅಧಿಕಾರ ವಹಿಸಿಕೊಂಡ ತಕ್ಷಣ ಹೇಳಿದರು. ಕೇಂದ್ರದಲ್ಲಿ ರಾಷ್ಟ್ರೀಯ ರಂಗದ ಸರ್ಕಾರ ರಚನೆಯಾಗಿ ಇಲ್ಲಿ ಕಾಂಗ್ರೆಸ್ ಸರ್ಕಾರ ಇದ್ದರೂ ಸಹ ನಾವು ಹೊಂದಾಣಿಕೆ ಮಾಡಿಕೊಂಡು ಹೋಗುತ್ತೇವೆ ಎಂದು ಅವರು ಹೇಳಿದ್ದಾರೆ. ಈ ಹಿಂದೆ ಏನು ಆಗಿತ್ತು ಅದನ್ನು ಗಮನಿಸಬೇಕು. ಈ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಈ ಮನೆಯ ಸದಸ್ಯರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅಧಿಕಾರವನ್ನು ವಹಿಸಿಕೊಂಡ ಮೇಲೆ ರಾಜ್ಯದ ಮುಖ್ಯಮಂತ್ರಿಗಳು ಮತ್ತು ದೇಶದ ಪ್ರಧಾನಿಗಳ ಬಾಂಧವ್ಯ ಮತ್ತು ಕೇಂದ್ರ ಸರ್ಕಾರ ಮತ್ತು ರಾಜ್ ಸರ್ಕಾರದ ಬಾಂಧವ್ಯ ಯಾವ ತರಹ ಇರಬೇಕು ಎನ್ನುವುದನ್ನು ಮರೆತು ನ್ಯಾಷನಲ್ ಡೆವಲಪ್‌ಮೆಂಟ್ಸ್ ಕೌನ್ಸಿಲ್ ಬಗ್ಗೆ ಏನು ಹೇಳಿದರೆಂದರೆ......

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ನಾಗರಾಜ್ ಅವರು ನಮ್ಮ ಜೊತೆಯಲ್ಲಿ ೧೯೮೩ ರಿಂದ ೧೯೮೫ರವರೆಗೆ ಇದ್ದರು. ೧೯೮೫ರಲ್ಲಿ ರಾಮಕೃಷ್ಣ ಹೆಗಡೆಯವರು ಚುನಾವಣೆಗಳು ಮುಗಿದು ಅಧಿಕಾರಕ್ಕೆ ಬಂದಮೇಲೆ ನಾವು ಕೇಂದ್ರದ ಜೊತೆ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ ಎಂದು ಹೇಳಿದ್ದನ್ನು ಮಾನ್ಯ ಸದಸ್ಯರಿಗೆ ಜ್ಞಾಪಕ ಮಾಡಿಕೊಡಲಿಕ್ಕೆ ಬಯಸುತ್ತೇನೆ.

(ಗೊಂದಲ)

ಶ್ರೀ ಎ. ನಾಗರಾಜು.—ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಸಭೆ ನಡೆದಾಗ ಇವರು ಅದಕ್ಕೆ ಬಹಿಷ್ಕಾರ ಹಾಕಿರುತ್ತಾರೆ. ತಾವು ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ನೀಡಿದ್ದೀರಿ. ನಾನು ಬಹಳಷ್ಟು ವಿಚಾರಗಳನ್ನು ಹೇಳಬೇಕೆಂದು ಅಂದುಕೊಂಡಿದ್ದರೂ ಸಹ ತಾವು ಬೆಲ್ ಹೊಡೆದಿದ್ದುದರಿಂದ ತಮಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿವಸಗಳಿಂದ ರಾಜ್ಯಪಾಲರ ಭಾಷಣದ ಮೇಲೆ ವಿಶೇಷವಾದ ಚರ್ಚೆ ನಡೆಯುತ್ತಿದ್ದು ಈ ಭಾಷಣದಲ್ಲಿ ಪ್ರಾಮುಖ್ಯವಾಗಿ ಅವರು ಏನು ಹೇಳಿದ್ದಾರೆಂದರೆ

India is a land of villages with the majority of the population dependent upon Agriculture. The situation is

so in Karnataka too. If our State is to prosper and progress, prosperity and progress must start at the village level.'' ಎಂದು.

ಈ ಒಂದು ವಾಕ್ಯದ ಮೇಲೆ ನಾವು ಹೆಚ್ಚು ಸ್ಟ್ರೆಸ್ ಕೊಡಬೇಕಾಗಿದೆ. ವಿರೋಧಿ ಪಕ್ಷದ ಸದಸ್ಯರು ವ್ಯವಸಾಯಗಾರರ ಮೇಲೆ, ಒಕ್ಕಲುತನವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಯಾವ ರೀತಿ ಸರ್ಕಾರದ ಕಾರ್ಯಕ್ರಮವನ್ನು ಅಪೇಕ್ಷೆ ಮಾಡುತ್ತಾರೆ ಎಂದು ವಿಶೇಷವಾಗಿ ಹೇಳಿದ್ದಾರೆ. ಅದೇ ರೀತಿ ಈ ಕಡೆಯ ಸದಸ್ಯರೂ ಸಹ ತಮ್ಮ ಸ್ಪಷ್ಟವಾದ ನಿಲುವನ್ನು ವ್ಯಕ್ತ ಮಾಡಿ ವ್ಯವಸಾಯಗಾರರ ಅಭಿವೃದ್ಧಿಗೆ ಸಹಾಯ ಮಾಡಬೇಕು ಎಂದು ಹೇಳಿದ್ದಾರೆ. ನಮಗೆ ಮ್ಯಾಸೀವ್ ಮ್ಯಾಂಡೇಟ್ ವ್ಯವಸಾಯಗಾರರಿಂದ ಇದೆ, ವ್ಯವಸಾಯಗಾರರು ಬಹಳಷ್ಟು ನಮ್ಮಿಂದ ನಿರೀಕ್ಷೆ ಮಾಡಿದ್ದಾರೆ. ಸರ್ಕಾರದ ಮೇಲೆ ಅವರು ಗುರುತರವಾದ ಹೊಣೆಯನ್ನು ಹೊರಸಿದ್ದಾರೆ. ಇವೊತ್ತು ವ್ಯವಸಾಯ ಗಾರರಿಗೆ ಒಳ್ಳೆಯದು ಮಾಡುವುದರಿಂದ ಜನರ ಅಪೇಕ್ಷೆ, ಜನರ ಆದರ್ಶಗಳಿಗೆ ಸರ್ಕಾರ ಪಾತ್ರಆಗುತ್ತದೆ ಎಂದು ಸರ್ಕಾರದವರು ವಿಚಾರ ಮಾಡಬೇಕಾಗುತ್ತದೆ. ಸರ್ಕಾರದಿಂದ ನಾನಾದರೂ ಅಪೇಕ್ಷೆ ಮಾಡುವುದು ಹಾಗೂ ಎದುರುಗಡೆ ಪಕ್ಷದವರು ಸಹ ಅಪೇಕ್ಷೆ ಮಾಡುವುದೇನೆಂದರೆ ರಾಜ್ಯದಲ್ಲಿ ಬರಗಾಲದ ಬವಣೆ ಸಾಕಷ್ಟು ಇರುವುದರಿಂದ ಆ ಕಡೆಗೆ ಹೆಚ್ಚಿನ ಗಮನವನ್ನು ಸರ್ಕಾರ ಕೊಡಬೇಕು ಎಂದು ಬರಗಾಲದ ಬವಣೆ ನನ್ನ ತಾಲ್ಲೂಕಿನಲ್ಲಿ ಶುರು ಆಗಿದೆ. ಇದರ ಬಗ್ಗೆ ಯಾರಾದರೂ ಉಲ್ಲೇಖ ಮಾಡಬಹುದು ಎಂದು ನಾನು ನಿರೀಕ್ಷೆ ಮಾಡಿದ್ದೆ ಆದರೆ ಯಾರೂ ಉಲ್ಲೇಖ ಮಾಡಿಲ್ಲ. ಹೊಸದಾಗಿ ಸದಸ್ಯರು ಬಂದಿರುವುದರಿಂದ ಅವರಿಗೆ ಮಾತನಾಡಲು ಹೆಚ್ಚು ಅವಕಾಶ ಕೊಡಬೇಕು ಎನ್ನುವ ದೃಷ್ಟಿ ಯಿಂದ ನಾವು ಹಿಂದುಳಿದೆವು. ಇದರ ಹುರುಪಿನಲ್ಲಿ ಟೀಕೆ ಉಪ ಟೀಕೆಗಳನ್ನು ಮಾಡುವಾಗ ನಿಜವನ್ನು ಮರೆಯುವುದು ಅನಿವಾರ್ಯ. ಆದ್ದರಿಂದ ನಾನು ತಮ್ಮ ಸಹಾಯವನ್ನು ಪಡೆದು ಭಾಷಣ ಮಾಡಬೇಕಾದ ಪ್ರಸಂಗ ಬಂದಿದೆ. ಕಳೆದ ೩-೪ ವರ್ಷಗಳಿಂದ ಸತತವಾಗಿ ಬರಗಾಲ ಬರುತ್ತಿದ್ದ, ಬರಗಾಲದ ಬಗ್ಗೆ ಅನೇಕ ವಿಚಾರಗಳನ್ನು ನಾವೆಲ್ಲಾ ಸದನದ ಮುಖಾಂತರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಅಂದಿನ ಸರ್ಕಾರ ನಮ್ಮನ್ನು ಪೂರ್ಣವಾಗಿ ತೃಪ್ತಿ ಪಡಿಸದೇ ಹೋದರೂ ಕೆಲವು ಕೆಲಸಗಳನ್ನು ಮಾಡಿದ್ದಾರೆ ಎಂದು ಹೇಳದೇ ಗತ್ಯಂತರವಿಲ್ಲ ಆದರೆ ಇದು ಸಾಕೇ ಎಂಬ ಮಾತು ನಮ್ಮೆದುರಿಗೆ ಬರುತ್ತದೆ, ನಾವು ಇವತ್ತಿನ ದಿವಸ ಅಧಿಕಾರದಲ್ಲಿ ಬರಬೇಕಾದರೆ ಜನತೆ ನಮ್ಮ ನಿರೀಕ್ಷೆಯ ಮಟ್ಟಕ್ಕಿಂತಲೂ ಹೆಚ್ಚಾಗಿ ಶ್ರೀ ರಾಜೀವ ಗಾಂಧಿಯವರ ಮುಖಂಡತ್ವದ ಮೇಲೆ ವಿಶ್ವಾಸವಿಟ್ಟು ೧೭೭ ಜನರನ್ನು ಆರಿಸಿ ಕಳಿಸಿದ್ದಾರೆ, ಇದನ್ನು ಮರೆಯುವ ಹಾಗಿಲ್ಲ. ೧೭೭ ಜನರನ್ನು ಆಯ್ಕೆ ಮಾಡಿ ಜನತೆ ನಮ್ಮನ್ನು ಕಳಿಸಿದ್ದರಿಂದ ನಮ್ಮ ಮೇಲೆ ಹೊಣೆ ಹೆಚ್ಚಿದೆ. ನಾವು ವಿಶೇಷವಾಗಿ ಇಡೀ ಕರ್ನಾಟಕದ ಜನತೆಯ ವಿಶ್ವಾಸವನ್ನು, ಅವರು ಕೊಟ್ಟಂಥ ಸದಭಿಪ್ರಾಯದ ಮಾತುಗಳನ್ನು ಚಾಚುತಪ್ಪದೆ ಸದುಪಯೋಗ ಮಾಡಿಕೊಳ್ಳುವಂಥ ಕಾಲ ಈಗ ಬಂದಿದೆ. ನಮ್ಮ ಆರ್ಥಿಕ ಮಂತ್ರಿಗಳು ಹಿಂದಿನ ಹಾಗೂ ಇಂದಿನ ಆರ್ಥಿಕ ಸ್ಥಿತಿಯ ಅಂಕಿಅಂಶಗಳನ್ನು ವ್ಯಕ್ತಮಾಡಿದ್ದಾರೆ. ರಾಜ್ಯದ ಆರ್ಥಿಕ ಸ್ಥಿತಿಯನ್ನು ನೋಡಿದಾಗ ನಮಗೆ ಭಯ ಆಗುವುದು ನಿಜ. ಆದರೂ ಒಂದು ಆಶಾದಾಯಕ ಸಂಗತಿ ಏನೆಂದರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ರಾಮಕೃಷ್ಣ ಹೆಗಡೆಯವರ ಮೇಲೆ ವಿಶ್ವಾಸವಿಟ್ಟು, ಅವರ ವಿಶ್ವಾಸ ನಮಗೆ ಇರುವುದರಿಂದ ಅವರಿಂದ ನಮಗೆ ಪೂರ್ಣ ಸಹಾಯ ನಮಗೆ ಸಿಗುತ್ತದೆ ಎನ್ನುವ ಮಾತನ್ನು ಸದನಕ್ಕೆ ಹೇಳಿದ್ದಾರೆ. ಇದರಿಂದ ನಮ್ಮ ಸರ್ಕಾರಕ್ಕೆ ಯಾವುದೇ ತೊಂದರೆಯಾಗಲಿಕ್ಕಿಲ್ಲ, ಜನತೆಯ ಆಗುಹೋಗುಗಳನ್ನು ನಿವಾರಣೆ ಮಾಡುವಂಥ ಸಾಮರ್ಥ್ಯ ಈ ಸರ್ಕಾರಕ್ಕೆ ಬಂದೀತು ಎನ್ನುವ ಭಾವನೆಯಿಂದ ನಾನು ಕೆಲವಾರು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಬರಗಾಲವನ್ನು ತಡೆಯಲು ನಮ್ಮ ರಾಜ್ಯದಲ್ಲಿ ನಿರಂತರವಾದ ಪರಿಹಾರ ಯೋಜನೆಗಳ ಬಗ್ಗೆ ನಾವು ಗಮನವನ್ನೇ ಹರಿಸಿಲ್ಲ. ಶ್ರೀಮಾನ್ ದೇವರಾಜ ಅರಸ್‌ರವರ ಮಂತ್ರಿ ಮಂಡಲದಲ್ಲಿ ನಾನು ಮಂತ್ರಿಯಾಗಿದ್ದಾಗ ಒಂದು ಯೋಜನೆ ತಯಾರು ಮಾಡಿದ್ದೆವು. ಈಗ ಎಲ್ಲೆಲ್ಲಿ ಬರ ಬೀಳುತ್ತದೆ ಅಲ್ಲಿ ಫಾಡರ್‌ನ ಅವಶ್ಯಕತೆ ಬೀಳುತ್ತದೆ. ಆದ್ದರಿಂದ ಹುಲ್ಲಿನ ಬಂಡೆಯನ್ನು ತಯಾರು ಮಾಡತಕ್ಕಂಥ ಕಾರ್ಖಾನೆಯನ್ನು ಮಾಡಿ ಅಲ್ಲಿ ಅದನ್ನು ಕೂಡಿಡ ಬೇಕು. ನಂತರ ಎಲ್ಲೆಲ್ಲಿ ದನಗಳಿಗೆ ಆಹಾರ ಬೇಕೋ ಅಲ್ಲಿಗೆ ಅದನ್ನು ಕಳಿಸಲಿಕ್ಕೆ ಅನುಕೂಲವಾಗುತ್ತದೆ ಎಂದು ಒಂದು ಯೋಜನೆ ತಯಾರು ಮಾಡಿದ್ದೆವು. ಆ ಯೋಜನೆಯಂತೆ ಪ್ರಾರಂಭವಾದ ಕಾರ್ಖಾನೆಗಳು ಇವತ್ತು ಮುಚ್ಚುವ ಯೋಜನೆಯಾಗಿ ಪರಿಣಮಿಸಿದೆ. ಕಾರಣ, ಹಿಂದಿನ ಸರ್ಕಾರದವರು ಅದರ ಕಡೆ ಲಕ್ಷ್ಯ ಕೊಡಲಿಲ್ಲ. ಇವತ್ತಿನ ಸರ್ಕಾರ ಅದರ ಬಗ್ಗೆ ಉಲ್ಲೇಖ ಮಾಡಿಲ್ಲ, ಅದರ ಉಲ್ಲೇಖದ ಅವಶ್ಯಕತೆ ಇದೆ. ಕದಾಚಿತ್, ನಾವು ಇಲ್ಲಿ ಅಧಿಕಾರಕ್ಕೆ ಬಂದಿರುವುದರಿಂದ ಇದರ ಬಗ್ಗೆ ಪೂರ್ಣವಾಗಿ ಅಭ್ಯಾಸಮಾಡಿ ಸದನಕ್ಕೆ ವಿವರ ಒಪ್ಪಿಸಲಿಕ್ಕೆ ಆಗಿರಲಿಕ್ಕಿಲ್ಲ, ಮುಂದಿನ

ಅಧಿವೇಶನದಲ್ಲಿ ಆದರೂ ಒಪ್ಪಿಸಬಹುದು. ಇದು ಅತ್ಯಂತ ಅವಶ್ಯಕತೆ ಇದೆ, ಸರ್ಕಾರದವರು ಇದರ ಅವಶ್ಯಕತೆ ತಿಳಿದು ಕೂಡಲೇ ಕಾರ್ಯಪ್ರವೃತ್ತರಾಗಬೇಕಾಗಿದೆ. ಇವತ್ತು ಜಗತ್ತಿನಲ್ಲಿ ಯಾವುದೇ ವಸ್ತುವನ್ನು ನೀವು ತೆಗೆದುಕೊಂಡರೂ ಕೂಡ ಅದನ್ನು ಹುಟ್ಟುವಳಿ ಮಾಡುವಂಥ ಮನುಷ್ಯ ಅದರ ಧಾರಣೆಯನ್ನು ನಿಗದಿ ಮಾಡುತ್ತಾನೆಯೋ ವಿನಃ ತೆಗೆದುಕೊಳ್ಳುವಂಥಾವನು ಬೆಲೆ ನಿಗದಿ ಮಾಡುವುದಿಲ್ಲ. ಟೇಬಲ್, ಕುರ್ಚಿ, ಬೀಗ ಹೀಗೆ ಯಾವುದನ್ನು ತೆಗೆದುಕೊಂಡರೂ ಅದನ್ನು ತಯಾರಿಸುವವನು ಬೆಲೆ ನಿಗದಿ ಮಾಡುತ್ತಾನೆ. ಆದರೆ ವ್ಯವಸಾಯಗಾರರ ಪರಿಸ್ಥಿತಿ ಇದಕ್ಕೆ ವ್ಯತಿರಿಕ್ತವಾಗಿದೆ. ವ್ಯವಸಾಯಗಾರರು ಬೆಳೆಯನ್ನು ಬೆಳೆದು ಮಾರುಕಟ್ಟೆಗೆ ತಂದು ಮಾರುವಾಗ ಮಾರಾಟಕ್ಕೆ ತೆಗೆದುಕೊಳ್ಳುವಂಥ ಜನರು ನಿರ್ಧರಿಸುವ ಧಾರಣೆಗೆ ಅವನು ಕೊಡಬೇಕಾಗುತ್ತದೆ. ಇದು ನಿಜವಾಗಿಯೂ ಹೀನಾವಮಾನವಾದ ಸ್ಥಿತಿ. ವ್ಯವಸಾಯೋತ್ಪನ್ನಗಳಿಗೆ ಧಾರಣೆಯನ್ನು ಗೊತ್ತು ಮಾಡಬೇಕು. ಈಗ ಅಗ್ರಿಕಲ್ಚರ್ ಪ್ರೈಸ್ ಕಮೀಷನ್‌ನವರು ಬೆಲೆ ನಿಗದಿ ಮಾಡುತ್ತಾರೆ. ಆದರೆ ಈ ಪ್ರೈಸ್ ಕಮೀಷನ್‌ನವರು ಹೆಚ್ಚಾಗಿ ಲಕ್ಷ್ಯ ವಿಡುವುದು ಕನ್‌ಸ್ಯೂಮರ್ ಮೇಲೆ. ಕನ್‌ಸ್ಯೂಮರ್ಸ್ ಕಷ್ಟ ಯಾವ ರೀತಿ ಇದೆ ಎಂದು ನೋಡಿ ಅವರು ಧಾರಣೆ ಗೊತ್ತು ಮಾಡುತ್ತಾರೆ. ರೈತರಿಗೆ ಎಷ್ಟು ಖರ್ಚಾಗಿದೆ ಎಂದು ನೋಡಿ ಧಾರಣೆ ಗೊತ್ತುಮಾಡುವುದಿಲ್ಲ. ತಾನು ತನ್ನ ಹೆಂಡ್ತಿ ಮಕ್ಕಳು ಹಾಗೂ ತನ್ನ ಎತ್ತುಗಳನ್ನು ಸೇರಿಸಿಕೊಂಡು ಎಷ್ಟು ವರ್ಷ ದುಡಿದರೂ ಸಹ ಮೇಲಕ್ಕೇರದಂತಹ ಸ್ಥಿತಿಯಲ್ಲಿ ಇವತ್ತು ರೈತ ಇದ್ದಾನೆ. ದೇವರು ಸೊಂಪಾಗಿ ಬೆಳೆಕೊಟ್ಟರೂ ಪೇಟೆಯಲ್ಲಿ ಧಾರಣೆ ಕಡಿಮೆ ಆಗುವುದರಿಂದ ರೈತ ಬಡತನದಿಂದ ಸೊರಗಿ ಹೋಗಿದ್ದಾನೆ. ಸಾಲ ಸೋಲ ಬಿಡಿ ಎಂದು ಏತಕ್ಕೆ ರೈತ ಕೇಳುತ್ತಿದ್ದಾನೆಂದರೆ, ಯಾವರೀತಿಯಲ್ಲೂ ಅವನು ಸಾಲ ತೀರಿಸುವುದಕ್ಕೆ ಸಾಧ್ಯವಿಲ್ಲದಂತಹ ಸ್ಥಿತಿಯಲ್ಲಿದ್ದಾನೆ. ಸಹಕಾರ ಸಂಘಗಳು ಹುಟ್ಟಿ ೮೦ ವರ್ಷಗಳಾದರೂ ಅವುಗಳ ಠೇವಣಿ ಬೆಳೆದಿಲ್ಲ. ಇದರ ಅರ್ಥ ಏನು ತೋರಿಸುತ್ತೆ ? ಇವತ್ತು ವ್ಯವಸಾಯಗಾರರನ ಆರ್ಥಿಕ ಸಂಪತ್ತನ್ನು ಸುಧಾರಿಸುವುದಕ್ಕೆ ಯಾವರೀತಿಯಲ್ಲಿ ಕೆಲಸ ಮಾಡುತ್ತೇವೆನ್ನುವ ವಿಷಯವನ್ನು ಸ್ಪಷ್ಟವಾಗಿ ಇದರಲ್ಲಿ ತಿಳಿಸಬೇಕಾಗಿತ್ತು. ನಾನು ಇವತ್ತು ವ್ಯವಸಾಯಗಾರರ ವಿಷಯದಲ್ಲಿ ಒಂದು ಸಲಹೆ ಕೊಡುವುದಾದರೆ, ಇವತ್ತು ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಬೆಳೆಗಳನ್ನು ರೈತರು ಬೆಳೆಯುತ್ತಾರೆ, ಆಯಾಯಾ ತಾಲ್ಲೂಕಿನಲ್ಲಿ ಅದರ ಸಂಪೂರ್ಣ ಲಾಭವನ್ನು ಪಡೆಯುವಂಥ ಪ್ರೊಸೆಸಿಂಗ್ ಯೂನಿಟ್‌ಗಳನ್ನು ಸ್ಥಾಪನೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ಹತ್ತಿ ಬೆಳೆಯುತಕ್ಕ ಪ್ರದೇಶಗಳಲ್ಲಿ ಹತ್ತಿ ಮಿಲ್‌ಗಳನ್ನು ತೆರೆಯಲಿ ಕಡಲೇಬೀಜ ಬೆಳೆಯುತಕ್ಕ ಪ್ರದೇಶಗಳಲ್ಲಿ ಎಣ್ಣೆ ಗಿರಣಿಗಳನ್ನು ತೆರೆಯಲಿ, ಗೋಧಿ ಬೆಳೆಯುತಕ್ಕ ಪ್ರದೇಶಗಳಲ್ಲಿ ಮೈದಾ ಹಿಟ್ಟು ತಯಾರು ಮಾಡತಕ್ಕ ಮಿಲ್‌ಗಳನ್ನು ತೆರೆಯುವಂಥ ಕಾಲ ಇವತ್ತು ಬಂದಿದೆ. ಇವತ್ತು ಮಾನ್ಯ ವೀರೇಂದ್ರಪಾಟೀಲರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ೧೭೫ ತಾಲ್ಲೂಕುಗಳಲ್ಲಿ ೧೭೫ ಇಂಡಸ್ಟ್ರೀಸ್‌ಗಳನ್ನು ಪ್ರಾರಂಭ ಮಾಡಲೇಬೇಕು. ಇದರಿಂದ ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಇವತ್ತು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಗೊಬ್ಬರ ಮತ್ತು ಸಿಮೆಂಟ್ ಮಾರುವ ಬದಲು ರೈತರ ಹಿತದೃಷ್ಟಿಯಿಂದ ತಮ್ಮ ಕಾರ್ಯವನ್ನು ಮಾಡಬೇಕಾಗಿದೆ. ಐ. ಎ. ಎಸ್. ಐ ಪಿ. ಎಸ್. ಅಧಿಕಾರಿಗಳಿಗೆ ದುಡ್ಡು ಹೊಡೆಯುವುದಕ್ಕೆ ಅನುಕೂಲವಾಗುವಂಥ ಬೋರ್ಡ್‌ಗಳನ್ನು ಸ್ಥಾಪನೆ ಮಾಡುವುದು ಬೇಕಾಗಿಲ್ಲ. ಈ ರೀತಿ ಮಿಲ್‌ಗಳಲ್ಲಿ ತಯಾರು ಮಾಡಿದಂಥ ವಸ್ತುಗಳನ್ನು ಕನ್ಸ್ಯೂಮರ್ಸ್ ಸೊಸೈಟಿಗಳ ಮೂಲಕ ಮಾರಾಟ ಮಾಡುವಂಥ ವ್ಯವಸ್ಥೆಯಾಗಬೇಕು. ಕೆಲವಾರು ವರ್ಷಗಳ ಹಿಂದೆ ನಮ್ಮಲ್ಲಿ ಬೆಳೆಯುತಕ್ಕ ಹತ್ತಿಗೆ, ಮದ್ರಾಸ್ ಮತ್ತು ಬಾಂಬೆಯಿಂದ ಜನರನ್ನು ನಿರೀಕ್ಷೆ ಮಾಡಬೇಕಾಗಿತ್ತು, ಇವತ್ತು ಅದು ಬದಲಾಗಿದೆ. ಸಹಕಾರಿ ಕ್ಷೇತ್ರಗಳಲ್ಲಿರತಕ್ಕ ಗಿರಣಿಗಳವರಿಗೆ ನಮ್ಮ ರಾಜ್ಯದಲ್ಲಿ ಬೆಳೆಯುತಕ್ಕ ಹತ್ತಿಗೆ ಯೋಗ್ಯ ಬೆಲೆ ಕೊಡತಕ್ಕ ಶಕ್ತಿ ಇಲ್ಲದಂತಾಗಿದೆ. ಇವತ್ತು ರಾಜ್ಯದಲ್ಲಿ ಅನೇಕ ಮಿಲ್‌ಗಳು ಬಂದಾಗಿವೆ. ಸಹಕಾರ ಸಂಘಗಳಿಗೆ ಸರ್ಕಾರ ಕೊಡಬೇಕಾದ ಹಣವನ್ನು ಕೊಡದೇ ಇದ್ದುದರಿಂದ ಇವತ್ತು ಅವುಗಳು ಚಿಂತಾಜನಕ ಸ್ಥಿತಿಯಲ್ಲಿವೆ. ಈಗ ತಡವಾದರೂ ಚಿಂತೆಯಿಲ್ಲ, ೩–೪ ಮಂದಿ ಇರತಕ್ಕ ಒಂದು ಸೆಲ್ ಮಾಡಿ, ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿ, ಯಾವ ಯಾವ ತಾಲ್ಲೂಕುಗಳಿಗೆ ಯಾವ ಯಾವ ಪ್ರಾಜೆಕ್ಟ್ ಹಾಕಬೇಕೆಂಬ ಬಗ್ಗೆ ಒಂದು ವರದಿಯನ್ನು ಕೊಡಲಿ. ಯಾವುದೇ ಪಾರ್ಟಿಯ ಸದಸ್ಯನಾಗಿರಲಿ, ಮಾನವೀಯತೆ ಇರತಕ್ಕ ಶಾಸಕರನ್ನು ಆಯಾಯಾ ತಾಲ್ಲೂಕಿನ ಸೊಸೈಟಿಯ ಛೇರ್ಮನ್ ಆಗುವುದಕ್ಕೆ ಅವಕಾಶ ಮಾಡಿ ಕೊಡುವುದರಿಂದ ರೈತರ ಬಗ್ಗೆ ಇರತಕ್ಕ ದ್ವೇಷ ಭಾವನೆಯೂ ಕೂಡ ಹೋಗುತ್ತೆ. ಇದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗಿ ಸರ್ಕಾರದ ಸೇವೆಯನ್ನು ನೆನೆಸುತ್ತಾರೆ.

ಕರ್ನಾಟಕ ನೈಸರ್ಗಿಕವಾಗಿ ಬಹಳ ಬೆಲೆಯುಳ್ಳದ್ದು. ಇಲ್ಲಿರತಕ್ಕಂಥ ಅರಣ್ಯದ ವಸ್ತುಗಳು ಸಹ ಬೆಲೆಯುಳ್ಳದ್ದು. ಪ್ರತಿಯೊಂದು ಅರಣ್ಯಕ್ಕೆ ಹೋದರೂ ಸಹ ಒಂದೊಂದು ಭಾಗದಲ್ಲಿ ಒಂದೊಂದು ಇಂಡಸ್ಟ್ರಿ ಮಾಡಲಿಕ್ಕೆ ಬರುತ್ತದೆ. ನಾನ್ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ

ಇದ್ದಾಗ ೧೦–೧೨ ಇಂಡಸ್ಟ್ರಿಗಳನ್ನು ಕಾರವಾರ ಜಿಲ್ಲೆಯಲ್ಲಿ ಪ್ರಾರಂಭ ಮಾಡಬೇಕೆಂದು ಒಂದು ಪ್ರಾಜೆಕ್ಟ್ ರಿಪೋರ್ಟ್ ತಯಾರಿಸಿದ್ದೆ, ದುರ್ದೈವ, ಒಂದೂ ಸಹ ಸರಿಯಾಗಿ ನಡೆಯಲಿಲ್ಲ. ಆದರೆ ಒಂದು ಇಂಡಸ್ಟ್ರಿ ಮಾತ್ರ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಲಾಭ ಮಾಡಿಕೊಡುತ್ತಿದೆ. ಉಳಿದ ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡಲಿಕ್ಕೆ ಆಗಲಿಲ್ಲ. ನಮ್ಮ ಅನೇಕ ಜನ ಸೋಷಿಯಲಿಸ್ಟ್ ಫ್ರೆಂಡ್ಸ್ ಬಡವರಿಗೆ ಒಂದೊಂದು ಎಕರೆ ಹೊಲ ಕೊಡಿಸಲಿಕ್ಕೆ ಪ್ರಯತ್ನ ಮಾಡಿಸಿದರೆ ಅದರಿಂದ ಏನು ಪ್ರಯೋಜನ ಆಗುತ್ತದೆ ? ಎಕಾನಮಿಕಲ್ ಆಗಿ ಅವರಿಗೆ ಲಾಭ ಆಗುವುದಿಲ್ಲ, ಅದು ಆಗದೇ ಇರುವುದರಿಂದ. ಮತ್ತೆ ಸಾಲ ಮಾಡುತ್ತಾರೆ. ಇದರ ಬದಲು ಅರಣ್ಯ ಪ್ರದೇಶದಲ್ಲಿರತಕ್ಕ ವಸ್ತುಗಳನ್ನು ಕನ್‌ವರ್ಟ್ ಮಾಡಿ ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡಿದರೆ ಆ ಇಂಡಸ್ಟ್ರಿಗಳಿಂದ ಬರತಕ್ಕ ಲಾಭದಲ್ಲಿ ೫ ರೂಪಾಯಿ ಕೂಲಿ ಕೊಡುವಂಥಾದ್ದರಲ್ಲಿ ೧೫ ರೂಪಾಯಿ ಕೂಲಿ ಕೊಟ್ಟರೆ ಅವನ ಮನೆಯ ರಕ್ಷಣೆಯಾಗುತ್ತದೆ. ಅಂಥಾದ್ದು ಬೆಳೆಯಬೇಕೆಂದು ಹೇಳುತ್ತೇನೆ. ಇವೊತ್ತು ಮಾತನಾಡುವಾಗ ರೈತರ ಹೆಸರನ್ನು ಹೇಳುತ್ತೇವೆ ನಿಜವಾಗಿ ಸರ್ಕಾರ ಯಾರ ಸಲುವಾಗಿ ಇದೆ ಅಂದರೆ ನೌಕರರ ಸಲುವಾಗಿ ಇದೆ ಎಂದು ಹೇಳುತ್ತೇನೆ, ಅಧ್ಯಕ್ಷರೆ, ಇವೊತ್ತು ಪಗಾರಗಳನ್ನು ಹೆಚ್ಚು ಮಾಡುವಂಥ ರೀತಿ ನೀತಿಗಳನ್ನು ನೋಡಿದರೆ ಆರು ತಿಂಗಳಿಗೊಂದು ಸಾರಿ ಸೆಂಟ್ರಲ್ ಗವರ್ನಮೆಂಟಿನವರು ಸಂಬಳ ಹೆಚ್ಚಿಸುತ್ತಾರೆ, ಅದನ್ನು ನೋಡಿಕೊಂಡು ಸ್ಟೇಟ್ ಗವರ್ನಮೆಂಟ್‌ನವರು ಸಂಬಳ ಹೆಚ್ಚಿಸುತ್ತಾರೆ, ಇವರಿಬ್ಬರು ಹೆಚ್ಚಿಸಿದ್ದನ್ನು ನೋಡಿಕೊಂಡು ಕೋ ಆಪರೇಟೀವ್‌ನವರು ಹೆಚ್ಚಿಸುತ್ತಾರೆ. ಎಲ್ಲಿಗೆ ಹೋದರೂ ಇದೇ ಪರಿಸ್ಥಿತಿ ಆಗಿದೆ ಇದೇ ರೀತಿಯಾಗಿ ಬ್ಯಾಂಕುಗಳಲ್ಲಿ ಎರಡೆರಡು ಸಾವಿರ ರೂಪಾಯಿ ಪಗಾರ ಕೊಡುವ ಪರಿಸ್ಥಿತಿ ಬಂದಿದೆ. ಇದನ್ನು ನೋಡಿದರೆ ರೈತರು ಎಷ್ಟನೇ ವರ್ಗಕ್ಕೆ ಬರುತ್ತಾರೆ ಅಂದರೆ ಅವರು ಅನ್ಯೋನ್ಯಗತಿಕನಾಗಿ ತಿಳಿದುಕೊಳ್ಳುವನಿಗಿಂತಲೂ ಕೆಳಮಟ್ಟದಲ್ಲಿ ಇದ್ದಾರೆ ಎನ್ನುವ ಮಾತನ್ನು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಇದು ಬದಲಾವಣೆಯಾಗಬೇಕಾದರೆ, ಒಂದು ಕ್ರಾಂತ್ರಿಕಾರಕವಾದ ಶಕ್ತಿ, ಪ್ರಚೋದನಾ ಶಕ್ತಿ ಆಗಲಿಕ್ಕೆ ಈ ಒಂದು ಸದನ ಹೆಚ್ಚು ಉಪಯುಕ್ತವಾಗಲಿ ಎಂದು ಹಾರೈಸುತ್ತೇನೆ. ಇವೊತ್ತು ರೈತಾಪಿ ಜನರಿಗೆ ಯಾವುದೇ ರೀತಿಯಿಂದ ಸಬ್ಸಿಡಿ ಕೊಡುವುದು ಬೇಡ. ರೈತರು ಬೆಳೆದಂಥ ಮಾಲಿಗೆ ಯೋಗ್ಯ ಬೆಲೆ ಕೊಡುವಂಥ ವ್ಯವಸ್ಥೆ ಮಾಡಿದರೆ ಸಾಕು. ಅಗ್ರಿಕಲ್ಚರಲ್ ಮಾರ್ಕೆಟ್ ಕಮಿಟಿ ಎಂದು ಹೇಳುತ್ತೀರಿ ಅದರಲ್ಲಿ ರೈತ ಬೆಳೆದಂಥ ಮಾಲನ್ನು ಇಟ್ಟು ಅದರ ಮೇಲೆ ಹಣ ಕೊಡುವಂಥ ವ್ಯವಸ್ಥೆ ಇಲ್ಲ. ಅಪೆಕ್ಸ್ ಬ್ಯಾಂಕಿನವರು ಲಕ್ಷಗಟ್ಟಲೆ ಫಾಯಿದೆ ಆಗುತ್ತದೆಂದು ತೋರಿಸುತ್ತಾರೆ ಆದರೆ ಬೋನಸ್ ಎಂದು ಹೇಳಿ ಆ ನೌಕರುದಾರರು ತೆಗೆದುಕೊಳ್ಳುತ್ತಾರೆಯೇ ಹೊರತು ನಿಜವಾಗಿಯೂ ಕೂಡ ರೈತನ ಇಂಟರೆಸ್ಟ್ ಕಡಿಮೆ ಮಾಡುವ ಕಡೆಯಲ್ಲಿ ಅವರು ಲಕ್ಷ್ಯವನ್ನು ಕೊಡುವುದಿಲ್ಲ. ಸರ್ಕಾರವೂ ಕೂಡ ಲಕ್ಷ್ಯ ಕೊಡುವುದಿಲ್ಲ. ಬ್ಯಾಂಕ್ ನೌಕರದಾರರಿಗೆ ಏತಕ್ಕೆ ಅಷ್ಟೊಂದು ಲಾಭ ಕೊಡಬೇಕು. ನಿಜವಾಗಿಯೂ ಅವರ ಖರ್ಚುಗಳಿಗೆ ಬೇಕಾದಷ್ಟು ಹಣವನ್ನು ಇಟ್ಟುಕೊಂಡು ಉಳಿದಂಥ ಹಣವನ್ನು ನೇರವಾಗಿ ಹಳ್ಳಿಯ ರೈತನಿಗೆ ಬಡ್ಡಿ ಸವಲತ್ತಿಗಾಗಿ ಕೊಟ್ಟರೆ ಸಾಲುವುದಿಲ್ಲವೇನು ? ಇನ್ನು ಸೆಂಟ್ರಲ್ ಬ್ಯಾಂಕುಗಳು ೫೦–೬೦ ಬ್ರ್ಯಾಂಚ್ ಪ್ರಾರಂಭ ಮಾಡುತ್ತಾರಲ್ಲಾ, ಏತಕ್ಕೆ ಬೇಕು. ಕ್ರೆಡಿಟ್ ಸೊಸೈಟಿಗಳು ಊರಿಗೊಂದೊಂದು ಇವೆ. ಇವೊತ್ತು ನೌಕರದಾರರಿಗೆ ಕೊಡುವ ಪಗಾರ ಕೊಡಲಿಕ್ಕೆ ಸಾಧ್ಯವಾಗದೆ ಅವರು ಸತ್ಯಾಗ್ರಹ ಮಾಡುತ್ತಿರುವಾಗ ಅಧಿಕಾರ ವರ್ಗದವರು ಅಲ್ಲೊಂದು, ಇಲ್ಲೊಂದು ಗೆಸ್ಟ್ ಹೌಸ್ ಮಾಡಿಕೊಂಡು ಅಲ್ಲಿ ಮಲಗಿಕೊಳ್ಳುವಂಥಾದ್ದು ನಡೆಯುತ್ತಿದೆ. ಇವೊತ್ತು ವ್ಯವಸಾಯ ಇಲಾಖೆಯ ಹಿತವನ್ನು ರಕ್ಷಣೆ ಮಾಡದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಸರ್ಕಾರ ಅವರ ಬಗ್ಗೆ ವಿಶೇಷವಾದ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೆ, ಇನ್ನು ನಮಗೆ ಕೊಡತಕ್ಕ ಬಡ್ಡಿ ಎಷ್ಟು ಇದೆ ಅಂದರೆ ಅಪೆಕ್ಸ್ ಬ್ಯಾಂಕಿನದ್ದು ನೂರಕ್ಕೆ ಎಪ್ಪತ್ತೈದು ನಯಾ ಪೈಸೆಯಿದ್ದರೆ ಕೆಲವು ಬ್ಯಾಂಕುಗಳಲ್ಲಿ ೩½ ಪರ್ಸೆಂಟ್‌ನಿಂದ ೫½ ಪರಸೆಂಟ್‌ನವರೆಗೆ ಬಡ್ಡಿ ಇದೆ ನಮ್ಮ ಸೆಂಟ್ರಲ್ ಬ್ಯಾಂಕಿನಿಂದ ರೈತನಿಗೆ ಕೊಡಬೇಕಾದರೆ ಹತ್ತು ರೂಪಾಯಿ ಬಡ್ಡಿ ಆಗುತ್ತದೆ. ಇವೊತ್ತು ಯಾರಾದರೂ ಮನಿ ಲೆಂಡರ್ ಒಂದು ರೂಪಾಯಿ ಬಡ್ಡಿ ತೆಗೆದುಕೊಂಡರೆ ಅವನು ಒಂದು ರೂಪಾಯಿ ಬಡ್ಡಿ ತೆಗೆದುಕೊಳ್ಳುತ್ತಿದ್ದಾನೆಂದು ಟೀಕೆ ಮಾಡುತ್ತೇವೆ. ನಾವು ಹಗಲ ದರೋಡೆ ಮಾಡತಕ್ಕ ಜನರು ಏನಿದ್ದೇವೆ, ನಾವು ಇಷ್ಟು ತರಹ ಬಡ್ಡಿ ತೆಗೆದುಕೊಂಡರೂ ಏತಕ್ಕೆ ತೆಗೆದುಕೊಳ್ಳುತ್ತೀರಾ ಎಂದು ಕೇಳುವವರು ಯಾರು ಇದ್ದಾರೆ ? ಯಾವುದೇ ಸಹಕಾರ ಸಂಘ ತಮ್ಮದೇ ಆದಂಥ ಹಣದಿಂದ ಬಡ್ಡಿ ಸೂಟಿ ಬಿಡುತ್ತೇವೆ ಅಂದರೆ ಅದಕ್ಕೆ ನಮ್ಮ ಅಧಿಕಾರಿಗಳು ಪರವಾನಿಗೆಯನ್ನು ಕೊಡುವುದಿಲ್ಲ. ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರು ಸಾಲ ಸೂಟಿ ಬಿಡುತ್ತೇವೆಂದು ಹೇಳುತ್ತಾರೆ,

೧-೩೦ ಪಿ. ಎಂ.

ಎಲ್ಲಿಯವರೆಗೆ. ಯಾರಿಗೆ ನೀವು ಸೂಟಿ ಕೊಡುತ್ತೀರಿ ಎಂದರೆ ಯಾರು ಮಾನ ಮರ್ಯಾದೆ ಬಿಟ್ಟು ನಿಂತುಕೊಳ್ಳುತ್ತಾರೆ ಅವರಿಗೆ ನೀವು ಸೂಟಿ ಕೊಡುತ್ತೀರಿ. ಸಕಾಲದಲ್ಲಿ ಯಾರು ತೆಗೆದುಕೊಂಡ ಸಾಲವನ್ನು ವಾಪಸ್ಸು ಕಟ್ಟುವುದಿಲ್ಲ ಅವರಿಗೆ ನೀವು ಸೂಟಿಯನ್ನು ಕೊಡುತ್ತೀರಿ. ಯಾರು ಮಾನ, ಮರ್ಯಾದೆಯ ಮೇಲೆ ನಿಗಾ ಇಟ್ಟುಕೊಂಡಿರುತ್ತಾರೆ, ಯಾರು ಸಕಾಲದಲ್ಲಿ ತೆಗೆದುಕೊಂಡ ಸಾಲವನ್ನು ವಾಪಸು ಕಟ್ಟುತ್ತಾರೆ ಅಂಥವರಿಗೆ ನೀವು ಸೂಟಿ ಕೊಡುವುದಿಲ್ಲ. ಇದು ತಮ್ಮ ಗಮನಕ್ಕೆ ಬಂದಿಲ್ಲವೇ ? ಬಂದಿದ್ದರೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ? ಸಹಕಾರಿ ಕಾನೂನಿನಲ್ಲಿ ಯಾರು ಹೆಚ್ಚಿಗೆ ಸಾಲವನ್ನು ವಾಪಸು ಕೊಡುತ್ತಾರೆ ಅವರಿಗೆ ಬಡ್ಡಿ ದರ ೭ ಪರ್ಸೆಂಟ್ ಹಾಕಬೇಕೆಂದು ನಿಯಮ ಇದೆ. ನನ್ನ ಅಧ್ಯಕ್ಷತೆಯಲ್ಲಿ ರಚಿತವಾದಂಥ ಸಮಿತಿಯಲ್ಲಿ ಜನತಾ ದಳದವರೂ ಇದ್ದರು, ಮಂತ್ರಿಗಳೂ ಇದ್ದರು, ಅದೇ ರೀತಿ ಬೇರೆ ಪಕ್ಷದವರೂ ಇದ್ದರು. ಆ ಮೇಲೆ ಅವರೆಲ್ಲರೂ ಹೋದರು. ೫ ವರ್ಷ ಕಳೆದರೂ ಇನ್ನೂ ಏನೂ ಆಗಲಿಲ್ಲ. ಜನತಾದಳ ಅಧಿಕಾರಕ್ಕೆ ಬಂದಮೇಲೆ ಈ ಕೀರ್ತಿ ಕೆ. ಹೆಚ್. ಪಾಟೀಲರಿಗೆ ಹೋಗುತ್ತದೆಂದು ಜಯರಾಜ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರು. ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಕ್ಕೆ ನನ್ನ ಮನಸ್ಸಿಗೇನೂ ಬೇಸರ ಇಲ್ಲ. ಏಕೆಂದರೆ ಮಾನ್ಯ ಜಯರಾಜ್‌ರವರೂ ಕೂಡ ಒಳ್ಳೆಯ ಬುದ್ಧಿವಂತರು ದಕ್ಷರು. ನಮ್ಮ ಸಮಿತಿಯಲ್ಲಿ ಏನು ತೀರ್ಮಾನ ಕೈಗೊಂಡಿದ್ದೆವು ಅದಕ್ಕೆ ಅಲ್ಲಿ ಇಲ್ಲಿ ಅಲ್ಪಸ್ವಲ್ಪ ತಿದ್ದುಪಡಿ ಮಾಡಿದರು, ಹೋಗಲಿ, ಜಯರಾಜ್‌ರವರು ಕೊಟ್ಟಂಥ ವರದಿಯನ್ನಾದರೂ ಜಾರಿಗೆ ತಂದಿದ್ದರೆ ಎಷ್ಟೋ ಒಳ್ಳೆಯದಾಗುತ್ತಿತ್ತು. ಅದನ್ನೂ ಕೂಡ ಹಿಂದಿನ ಸರ್ಕಾರದವರು ಮಾಡಲಿಲ್ಲ. ನಾವು ಕೊಟ್ಟಂಥ ವರದಿಯನ್ನು ನಿಮ್ಮ ಟೇಬಲ್‌ನಲ್ಲಿ ಏತಕ್ಕೆ ಇಟ್ಟುಕೊಂಡಿರಿ, ಎಂದು ಕೇಳಬಯಸುತ್ತೇನೆ ?

ಇನ್ನೊಂದು ವಿಚಾರ ಹೇಳಬೇಕೆಂದರೆ, ನಾವು ಇವತ್ತಿನ ದಿವಸ ಒಳ್ಳೆಯ ಇಂಡಸ್ಟ್ರೀಸ್‌ನ್ನು ನಡೆಸಬೇಕೆಂದರೆ ಅದು ಸಾಧ್ಯವಾಗುತ್ತಿಲ್ಲ. ಏಕೆಂದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ೨೦ ಪರ್ಸೆಂಟ್ ಕಟ್ ಎಂದು ಪವರ್‌ನ್ನು ಕಟ್ ಮಾಡುತ್ತಾರೆ. ಇತ್ತೀಚೆಗೆ ಇದು ಸರ್ವೇ ಸಾಧಾರಣವಾಗಿದೆ. ಕೆ. ಇ. ಬಿ. ನಲ್ಲಿರತಕ್ಕ ನೌಕರರಿಗೆ, ಅಧಿಕಾರ ವರ್ಗದವರಿಗೆ ಹೆಚ್ಚಿನ ಪಗಾರವನ್ನು ಕೊಡುತ್ತಿದ್ದೇವೆ. ಅಂದಮೇಲೆ ಅವರು ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡಬೇಕು. ಹಾಗೆ ಅವರು ಕೆಲಸ ಮಾಡುವುದಾದರೆ ಈ ರೀತಿಯ ಪವರ್ ಏತಕ್ಕೆ ಕಟ್ ಆಗುತ್ತದೆ ? ನಾವು ಲಕ್ಷಾಂತರ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿ ಇಂಡಸ್ಟ್ರೀಯನ್ನು ತೆರೆದರೆ ಅದಕ್ಕೆ ಆಗಾಗ್ಗೆ ಪವರ್ ಕಟ್ ಆಗುತ್ತದೆಂದರೆ ಕೆ. ಇ. ಬಿ. ಯವರಿಗೆ ಹೆಚ್ಚು ಪಗಾರವನ್ನು ಏತಕ್ಕೆ ಕೊಡಬೇಕು ? ನಾವು ಸಾಲವನ್ನು ತಂದಿರತಕ್ಕದ್ದನ್ನು ಯಾವ ರೀತಿ ವಾಪಸು ಕೊಡಬೇಕು ? ಇದನ್ನು ನಾವು ಯೋಚನೆ ಮಾಡಬೇಕು. ಈ ಶಾಸನಸಭೆಯಲ್ಲಿ ೧೭೬ ಮಂದಿ ಆಡಳಿತ ಪಕ್ಷದಲ್ಲಿ ಕೂತು ಸರಿಯಾಗಿ ಕೆಲಸ ಮಾಡದಿದ್ದರೆ ನಮ್ಮ ಮತದಾರರು ನಮ್ಮನ್ನು ಎಂದೂ ಕ್ಷಮಿಸುವುದಿಲ್ಲ ಎಂದು ಹೇಳಲಿಕ್ಕೆ ಬಯಸುತ್ತೇನೆ. ಸೆಂಟ್ರಲ್ ಸಬ್ಸಿಡಿ ಏನು ಬರುತ್ತದೆ ಅದು ನಮ್ಮ ಜನರಿಗೆ ಮುಟ್ಟುತ್ತಿಲ್ಲ. ಸರ್ಕಾರದವರುಮೇಲಿನಿಂದ ಮಂಜೂರಾತಿಯನ್ನು ಮಾಡಿಸಿಕೊಂಡಂಥ ಹಣವನ್ನು ಕೂಡಲೇ ಸಂಬಂಧಪಟ್ಟ ಉದ್ದಿಮೆದಾರರಿಗೆ ಬಿಡುಗಡೆ ಮಾಡುವಂತೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಬಿ.ಡಿ. ಒ. ಆಫೀಸ್‌ನವರು ಈ ಹಣವನ್ನೆಲ್ಲಾ ಹಾಗೆಯೇ ಇಟ್ಟುಕೊಂಡು ಜನರಿಗೆ ಮೋಸ ಮಾಡತಕ್ಕದ್ದನ್ನು ನೀವು ಕೂಡಲೇಬಂದ್ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಶಿಕ್ಷಣದ ಬಗ್ಗೆ ನಮ್ಮಲ್ಲಿ ಬಹಳ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ ಕ್ಯಾಪಿಟೇಷನ್ ಫೀಸ್‌ನ್ನು ತೆಗೆದುಕೊಳ್ಳಕೂಡದೆಂದು ಕಾನೂನಿದೆ. ಆದರೂ ಕ್ಯಾಪಿಟೇಷನ್ ಫೀಸ್‌ನು ಇನ್ನೂ ತೆಗೆದುಕೊಳ್ಳುತ್ತಲೇ ಇದ್ದಾರೆ ಅದೇ ರೀತಿ ಲಂಚವನ್ನು ತೆಗೆದುಕೊಳ್ಳಕೂಡದೆಂದು ಕಾನೂನು ಇದೆ. ಆದರೂ ಕೂಡ ಲಂಚವನ್ನು ತೆಗೆದುಕೊಳ್ಳುತ್ತಲೇ ಇದ್ದಾರೆ. ಈ ರೀತಿ ಲಂಚವನು ತೆಗೆದುಕೊಳ್ಳುವವರನ್ನು ಹಿಡಿದು ಶಿಕ್ಷೆ ಮಾಡುವುದಕ್ಕೋಸ್ಕರ ಲೋಕಾಯುಕ್ತ ಎಂದು ಮಾಡಿದ್ದೀರಿ ಅಲ್ಲಿಯೂ ಕೂಡ ಇದು ನಡೆಯುತ್ತಿದೆ. ದಿನ ಬೆಳಗಾದರೆ ಹೆಚ್ಚು ಹೆಚ್ಚು ಲಂಚವನ್ನು ತೆಗೆದುಕೊಳ್ಳುವವರನ್ನು ನೀವು ಬಿಟ್ಟುಬಿಡುತ್ತೀರಿ. ಅವರು ತಪ್ಪಿಸಿಕೊಂಡು ಬಿಡುತ್ತಾರೆ, ಆದರೆ ನಿರಪರಾಧಿಗಳಿಗೆ ನೀವು ಹಿಡಿದು ಸಸ್ಪೆಂಡ್ ಮಾಡುತ್ತೀರಿ. ಅವರ ಪ್ರೊಮೋಷನ್ ಕಟ್ ಆಗುತ್ತದೆ. ಇಂಥ ಒಂದು ದುರವಸ್ಥೆ ನಮ್ಮ ರಾಜ್ಯದಲ್ಲಿದೆ. ನಿಜವಾಗಿ ಯಾರು ಅನ್ಯಾಯಕ್ಕೊಳಗಾಗಿರುತ್ತಾರೆ ಅವರಿಗೆ ನ್ಯಾಯವನ್ನು ದೊರಕಿಸಿಕೊಡತಕ್ಕ ಕೆಲಸವನ್ನು ಮಾಡಿದರೆ ನೀವು ಜನರ ಮೆಚ್ಚುಗೆಯನ್ನು ಸಂಪಾದನೆ ಮಾಡುತ್ತೀರಿ. ಇಲ್ಲದಿದ್ದರೆ ನಿಮಗೆ ಮತವನ್ನು ಕೊಟ್ಟಂಥ ಜನರು ನಿಮಗೆ ಕ್ಷಮಿಸುವುದಿಲ್ಲವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇವತ್ತು ನಾವು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತೇವೆ. ಎಲ್ಲಿದೆ ಡೆಮಾಕ್ರಸಿ? ಈ ಜನತಾದಳವರು ಡೆಮಾಕ್ರಸಿಯ ಬಗ್ಗೆ ಮಾತನಾಡುತ್ತಾರೆ. ಜನತಾದಳದವರು ೫ ವರ್ಷ ಅಧಿಕಾರದಲ್ಲಿದ್ದರು, ನಾನು ಯಾವುದೇ ರೀತಿಯಿಂದ ವ್ಯಕ್ತಿಶಃ ಅವರನ್ನು ಟೀಕೆ ಮಾಡುವುದಿಲ್ಲ. ಆದರೆ ದುರ್ದೈವದಿಂದ ಅವರ ಹಣೆಬರಹ ಏನಾಯಿತೆಂದರೆ ನಮ್ಮಂತಹವರೆಲ್ಲರೂ ಕೂಡಿ ಅವರನ್ನು ಅಡ್ಡದಾರಿ ಹಿಡಿಯುವಂತಹ ಕೆಲಸ ಮಾಡಿದ್ದಕ್ಕಾಗಿ ಸಹಕಾರಿ ಸಂಘಗಳಲ್ಲಿ ಯಾವುದೇ ಎಲೆಕ್ಷನ್‌ಗಳು ನಡೆಯಲಿಲ್ಲ. ಅಂದರೆ ಯಾವುದರಲ್ಲಿ ಡೆಮಾಕ್ರಸಿ ಇದೆ, ಎಲೆಕ್ಷನ್ ಕಮೀಷನ್ ಅವರು ನಿಮ್ಮ ಕಡೆ ಕೈ ತೋರಿಸಿದರೆ ಚುನಾವಣೆ ಮಾಡುತ್ತೇವೆಂದು ಹೇಳುತ್ತೀರಿ. ಇಲ್ಲವಿದ್ದರೆ ಮುಂದೆ ಹಾಕುತ್ತೀರಿ. ಈಗಲಾದರೂ ತಡವಾದರೂ ಅಡ್ಡಿ ಇಲ್ಲ ಈ ಬಗ್ಗೆ ಸರ್ಕಾರದವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆಂದು ಚುನಾವಣೆಯನ್ನು ತೀವ್ರವಾಗಿ ಮಾಡುತ್ತಾರೆಂದು ಕೇಳಿದ್ದೇನೆ ಅದರಲ್ಲೂ ಸಹಕಾರ ಸಂಘಗಳ ವತಿಯಿಂದ ಬಂದಿರುವ ನಾನು ಸಹಕಾರಿ ಸಂಘಗಳ ಚುನಾವಣೆಯಾಗದಿದ್ದರೆ ಅವರಿಗೆ ಕೊಡತಕ್ಕಂಥ ಸಹಾಯಧನವನ್ನು ಕೊಡಬಾರದು ಎನ್ನುವ ನಿರ್ಣಯವನ್ನು ಅಖಿಲಭಾರತ ಮಟ್ಟದಲ್ಲಿ ನಡೆದ ಕಾನ್‌ಫರೆನ್ಸ್‌ನಲ್ಲಿ ತೆಗೆದುಕೊಂಡಿದ್ದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಆಂಧ್ರ ಮತ್ತು ಉಳಿದ ಕಡೆ ಚುನಾವಣೆಯಾಗದಿದ್ದಾಗ ಸಹಕಾರಿ ಸಂಸ್ಥೆಗಳು ಹೋಗಿ ಸರ್ಕಾರಿ ಸಂಸ್ಥೆಗಳಾದವು. ನಮ್ಮಲ್ಲಿ ಕೆಲವು ಕಡೆ ಚುನಾವಣೆಯಾದರೂ ಸಹಿತ ಒಮ್ಮೊಮ್ಮೆ ಮೆಜಾರಿಟಿ ಮಾಡಿಕೊಳ್ಳುವ ಸಲುವಾಗಿ ಮೆಜಾರಿಟಿ ಇದ್ದವರಿಗೆ ಮೈನಾರಿಟಿ ಮಾಡುವುದು, ಮೈನಾರಿಟಿ ಇದ್ದವರನ್ನು ಮೆಜಾರಿಟಿ ಮಾಡಲು ಪ್ರಯತ್ನಗಳು ನಡೆಯಿತು, ಹಿಂದೆ ಈ ರೀತಿ ನಡೆಯಿತು. ಇವತ್ತು ಇವರು ಅಧಿಕಾರಕ್ಕೆ ಬಂದು ಹೀಗೆ ಮಾಡಿದರೆ ತಮ್ಮ ಹಣೆಬರಹ ಏನಾಗುತ್ತದೆ? ಶ್ರೀಮಾನ್ ಏಕಾಂತಯ್ಯನವರು ಇಲ್ಲಿದ್ದಾರೆ ಅವರು ಆ ಅಭಿಪ್ರಾಯದವರಲ್ಲ. ಅವರು ಸದಭಿಪ್ರಾಯದವರು. ಆದರೆ ಅದೇರೀತಿಯಾಗಿ ಇವತ್ತು ಚುನಾವಣೆ ನಡೆದಾಗ ತೀವ್ರವಾಗಿ ಸಹಕಾರ ಸಂಘಗಳ ಚುನಾವಣೆಯನ್ನು ಮಾಡಿ ಅದರ ಜೊತೆಗೆ ಉಳಿದ ಸಂಸ್ಥೆಗಳಿಗೆ ಕಾರ್ಪೋರೇಷನ್‌ಗಳಿಗೆ ಹಾಗೂ ಮುನಿಸಿಪಾಲಿಟಿಗಳಿಗೆ ಚುನಾವಣೆ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ ಸಹಕಾರಿ ಸಂಘಗಳ ಚುನಾವಣೆ ಮಾಡಬೇಕೆಂದರೆ ಸೆಂಟ್ರಲ್ ಬ್ಯಾಂಕ್ ಅಪೆಕ್ಸ್ ಬ್ಯಾಂಕ್‌ಗಳಿಗೂ ಸಹ ಒಂದೇ ಹಿಡಿತದಲ್ಲಿ ಸಿಕ್ಕಿಸಿಬಿಟ್ಟಿದ್ದಾರೆ. ಅವರು ಚುನಾವಣೆ ಮಾಡಲಿಕ್ಕೆ ಹೋದರು ಎಂದರೆ ಯಾವ ಯಾವ ಸೊಸೈಟಿಗಳು ತಮಗೆ ಅನುಕೂಲವಾಗಿದೆಯೋ ಆ ಸೊಸೈಟಿಗಳಿಗೆ ದುಡ್ಡನ್ನು ಕೊಡುತ್ತಾರೆ. ಯಾವ ಸೊಸೈಟಿಗಳು ಅನುಕೂಲವಿಲ್ಲವೋ ಅಲ್ಲಿ ಸ್ವಲ್ಪ ತಡಮಾಡುತ್ತಾರೆ ಸಾಲ ಕೊಡಲಿಕ್ಕೆ ಕೆಲವು ಕಡೆ ಅಡ್ಜಸ್ಟ್ ಮಾಡುತ್ತಾರೆ. ರೊಕ್ಕ ಕೊಡದಿದ್ದರು ಅಡ್ಜಸ್ಟ್ ಮಾಡಿ ಅವರನ್ನು ಮುಂದಕ್ಕೆ ತರುತ್ತಾರೆ. ಇದು ಸರಿ ಹೋಗಬೇಕಾದರೆ ಮೊದಲು ಸಹಕಾರಿ ಸಂಘಗಳ ಚುನಾವಣೆಯಾಗಬೇಕು. ಹಳ್ಳಿಗಳಲ್ಲಿರುವ ಸೊಸೈಟಿಗಳ ಚುನಾವಣೆಯಾಗಿ ಅನಂತರ ಜಿಲ್ಲಾ ಬ್ಯಾಂಕ್‌ಗಳ ಚುನಾವಣೆಯನ್ನು ಮಾಡಿಸಬೇಕು. ಆ ಜಿಲ್ಲಾ ಬ್ಯಾಂಕ್‌ಗಳ ಚುನಾವಣೆ ಮಾಡಿ ಅನಂತರ ಅಪೆಕ್ಸ್ ಬ್ಯಾಂಕಿಗೆ ಬರಬೇಕು. ಅದು ಆಗುವತನಕ ಅವಶ್ಯವಿದ್ದರೆ ಅಡ್ಮಿನಿಸ್ಟ್ರೇಟರನ್ನು ನೇಮಿಸಿ ಮುಖ್ಯವಾಗಿ ಚುನಾವಣೆಯನ್ನು ಅತಿ ಶೀಘ್ರವಾಗಿ ಮಾಡಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ ನನಗೆ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡುವುದರಲ್ಲಿ ಇಂಟರೆಸ್ಟ್ ಇಲ್ಲ. ಆದರೆ ನಿಷ್ಪಕ್ಷಪಾತವಾಗಿ ಚುನಾವಣೆ ನಡೆಯಬೇಕೆಂಬ ದೃಷ್ಟಿಯಿಂದ ಈ ತರಹದ ಬದಲಾವಣೆ ಅತ್ಯಂತ ಅವಶ್ಯವಿದೆ. ಇದನ್ನು ಕೂಡಲೇ ಮಾಡಬೇಕೆಂದು ನಮ್ಮ ಮುಖ್ಯಮಂತ್ರಿಗಳನ್ನು ಕೇಳಿ ಕೊಳ್ಳುತ್ತೇನೆ. ನನಗೆ ಅಧ್ಯಕ್ಷರು ಕೊಟ್ಟ ೫ ನಿಮಿಷ ಅವಕಾಶ ಮುಗಿದುದರಿಂದ ಈಗ ಬಂದ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

† ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯ ವಿಧಾಮಂಡಲದ ಜಂಟಿ ಅಧಿವೇಶನದಲ್ಲಿ ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸುತ್ತಾ ಕೆಲವು ಅಂಶಗಳನ್ನು ಮುಂದೆ ತರಲು ಅಪೇಕ್ಷೆ ಪಡುತ್ತೇನೆ. ಈ ಒಂದು ರಾಜ್ಯಪಾಲರ ಭಾಷಣದಲ್ಲಿ ರಾಜ್ಯದ ವಿದ್ಯಾರ್ಥಿಗಳ ಬಗ್ಗೆ ಯಾಗಲಿ, ಯುವಕರ ಬಗ್ಗೆಯಾಗಲಿ, ವಿಶೇಷವಾಗಿ ರೈತರ ಬಗ್ಗೆಯಾಗಲಿ, ಕೈಗಾರಿಕೋದ್ಯಮಗಳ ಬಗ್ಗೆಯಾಗಲಿ ಸರ್ಕಾರದ ಸ್ಪಷ್ಟ ನಿಲುವು ಇಲ್ಲ. ರಾಜ್ಯಪಾಲರ ಮೊದಲ ಪುಟದ ಬಗ್ಗೆ ಎರಡನೇ ಪ್ಯಾರಾದಲ್ಲಿ ಕರ್ನಾಟಕದ ಚುನಾವಣೆಗಳು ಶಾಂತ ಹಾಗೂ ಸುವ್ಯವಸ್ಥೆಯ ರೀತಿಯಲ್ಲಿ ನಡೆದುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವೆಂದು ತಿಳಿಸಿದ್ದಾರೆ. ಚುನಾವಣೆಯ ಫಲಿತಾಂಶದ ದಿನ ರಾತ್ರಿ ರೇಡಿಯೋದಲ್ಲಿ ಏನು ಬರುತ್ತದೆಂದು ರಾಜ್ಯದ ಜನ ನೋಡುತ್ತಿರುವ ಸಂದರ್ಭದಲ್ಲಿ ಶಿಕಾರಿಪುರದಿಂದ ನಮ್ಮ ಪಕ್ಷದ ನಾಯಕ ಶ್ರೀಯುತ ಬಿ. ಎಸ್. ಯಡಿಯೂರಪ್ಪನವರ ಚುನಾವಣೆಯ ಫಲಿತಾಂಶ

ವನ್ನು ಹೊರಪಡಿಸಿದ್ದಕ್ಕೆ ಆಗ ಅಲ್ಲಿರುವ ಕೆಲವು ಗೂಂಡಗಳು ಬಿ. ಜೆ. ಪಿ. ಕಾರ್ಯಕರ್ತರ ಮೇಲೆ ಹಲ್ಲೆನಡೆಸಿ ಸುಮಾರು ೮–೧೦ ಜನರ ತಲೆ ಒಡೆದಿದ್ದಾರೆ. ಈ ಒಂದು ಕಾರಣದಿಂದ ಈ ಚುನಾವಣೆ ಎಷ್ಟರಮಟ್ಟಿಗೆ ಶಾಂತಿಯಿಂದ ನಡೆದಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಇದಾದ ನಂತರ ಸುವ್ಯವಸ್ಥಿತ ರೀತಿಯಲ್ಲಿ ರಾಜ್ಯದ ಚುನಾವಣೆ ನಡೆದಿದೆ ಎಂದು ಹೇಳಿದ್ದಾರೆ. ಆದರೆ ಮತಪತ್ರಗಳು ಬೂತ್‌ನಲ್ಲಿ ಸಿಕ್ಕಿವೆ, ಸಿಕ್ಕಿದ ಮತಪತ್ರಗಳು ನಕಲಿ ಎಂದು ತಿಳಿದುಬಂದಿದೆ. ಈ ವ್ಯವಸ್ಥೆಯ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬಂದಿದೆ, ಇದರ ಬಗ್ಗೆ ನನಗೆ ಏನು ಹೇಳಬೇಕೆಂದು ಹೊಳೆಯುತ್ತಿಲ್ಲ ಎರಡನೆಯ ಪುಟದ ಕೊನೆಯ ಕಂಡಿಕೆಯಲ್ಲಿ ಯಾವುದೇ ರಾಜ್ಯದ ಆಡಳಿತದಲ್ಲಿ ನಡೆಯಬಾರದ ಸಂಗತಿಗಳು ದುರ್ದೈವವಶಾತ್ ನಡೆಯುತ್ತವೆಂದು ಹೇಳಿದ್ದಾರೆ ನಾನು ತಿಳಿದಿರುವ ಘಟನೆ ಬಗ್ಗೆ ರಾಜ್ಯಪಾಲರಿಗೆ ಸಂಪೂರ್ಣ ವಿವರವನ್ನು ಕೊಡುತ್ತೇನೆ. ಮೂರು ತಿಂಗಳ ಹಿಂದೆ ನಡೆದ ಘಟನೆ ಬಗ್ಗೆ ಹೇಳುವುದಾದರೆ. ರಾಜ್ಯದಲ್ಲಿ ಪಠ್ಯಪುಸ್ತಕಗಳ ಅಭಾವ ಇತ್ತು, ಶಿವಮೊಗ್ಗದಲ್ಲಿ ಕೂಡ ಅದರ ಅಭಾವ ಇತ್ತು. ಆ ಸಂದರ್ಭದಲ್ಲಿ ಮಧ್ಯಂತರ ಪರೀಕ್ಷೆಗಳು ಬಂದರೂ ಮಕ್ಕಳಿಗೆ ಪಠ್ಯಪುಸ್ತಕಗಳು ಸಿಕ್ಕಿರಲಿಲ್ಲ. ಅಧ್ಯಾಪಕರು ಹೇಗೆ ಪಾಠ ಮಾಡಬೇಕೆಂದು ಯೋಚಿಸುತ್ತಿರಬೇಕಾದರೆ ವಿದ್ಯಾರ್ಥಿಗಳ ಪೋಷಕರು ಸಹ ಮಕ್ಕಳ ವಿದ್ಯಾಭ್ಯಾಸ ಹೇಗೆ ಎಂದು ಯೋಚಿಸುತ್ತಿದ್ದರು. ಆ ವೇಳೆಗೆ ಸರಿಯಾಗಿ ಶಿವಮೊಗ್ಗಕ್ಕೆ ಮಾನ್ಯ ರಾಜ್ಯಪಾಲರು ಬಂದಾಗ ನಮ್ಮ ವಿಧಾನ ಪರಿಷತ್ತಿನ ಸದಸ್ಯರಾದ ಶಂಕರಮೂರ್ತಿಯವರ ನೇತೃತ್ವದಲ್ಲಿ ಈ ಬಗ್ಗೆ ಮನವಿ ಯನ್ನು ಕೊಟ್ಟೆವು, ಆ ಮನವಿಗೆ ಉತ್ತರ ಬರಲೇ ಇಲ್ಲ. ಆಮೇಲೆ ಕೆಲವು ಮಾನ್ಯ ಸದಸ್ಯರು ಮತ್ತು ಪೋಷಕರು ಕೂಡಿ ಹೋಗಿ ಡಿಡಿಪಿಐ. ಅವರಿಗೆ ಪಠ್ಯಪುಸ್ತಕಗಳನ್ನು ಒದಗಿಸಿಕೊಡಿ ಎಂದು ಒತ್ತಾಯಿಸಿದ್ದು ಉಂಟು. ಈ ರೀತಿ ಪಠ್ಯಪುಸ್ತಕ ದೊರೆಯದಿರಲು ಕಾರಣವೇನು ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದಾದ ನಂತರ ಚುನಾವಣೆ ಬಂತು ಇಲ್ಲಿ ಕುಳಿತಿರುವ ನಾನು ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದೆ. ಸಾಮಾನ್ಯವಾಗಿ ಎಲ್ಲರಿಗೂ ಚುನಾವಣೆಯ ಶುಭಾಶಯ ಪತ್ರಗಳು ಬಂದಿವೆ. ಅದೇ ರೀತಿ ನನಗೂ ಬಂತು. ಅದರ ಮಧ್ಯೆ ನನಗೆ ಪೋಲೀಸ್ ಇಲಾಖೆಯಿಂದ ಒಂದು ಕೇಸ್ ನೋಟೀಸ್ ಬಂದಿದೆ, ಇದು ಏತಕ್ಕೆ ಬಂತು ಎಂದು ತಮ್ಮ ಗಮನಕ್ಕೆ ತರಬಯಸು ತ್ತೇನೆ. ನನ್ನನ್ನು ಮತ್ತು ನನ್ನ ಮಿತ್ರರನ್ನು ಹಾಗೂ ನನ್ನ ಸಹೋದರರನ್ನು ಕೋರ್ಟಿಗೆ ಎಳೆಯು ವುದಕ್ಕೆ ನಾನೇನು ಕೊಲೆ ಮಾಡಿಲ್ಲ, ದರೋಡೆ ಮಾಡಿಲ್ಲ, ಕಳ್ಳತನ ಮಾಡಿಲ್ಲ. ಯಾರು ಇವತ್ತಿನ ದಿವಸ ಪಠ್ಯಪುಸ್ತಕಗಳ ಪೂರೈಕೆಯಲ್ಲಿ ವಿಫಲರಾದ ಅಧಿಕಾರಿಗಳಿದ್ದಾರೆ ಅವರ ಕರ್ತವ್ಯ ಲೋಪದ ಬಗ್ಗೆ, ಮಕ್ಕಳ ಭವಿಷ್ಯದ ಬಗ್ಗೆ ಏನು ಚೆಲ್ಲಾಟವಾಡುತ್ತಿದ್ದರು ಅವರಿಗೆ ಶಿಕ್ಷೆ ಕೊಡಬೇಕಾಗಿತ್ತು. ಅದರ ಬಗ್ಗೆ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಯಾರು ಈ ರೀತಿ ಮಕ್ಕಳ ಭವಿಷ್ಯದ ಬಗ್ಗೆ ಕರ್ತವ್ಯ ಲೋಪ ಮಾಡಿದ್ದ ಅಧಿಕಾರಿಗಳಿದ್ದಾರೆ ಅವರ ಮೇಲೆ ತನಿಖೆ ನಡೆಸಬೇಕೆಂದು ಕೇಳಿಕೊಂಡು ನನಗೆ ಪೋಲೀಸರಿಂದ ರಕ್ಷಣೆ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದೇ ಪ್ರಕಾರ ಶಿವಮೊಗ್ಗದಲ್ಲಿ ಮುಳುಗಡೆಯಾದ ಆಸ್ತಿ ಬಗ್ಗೆ ಹತ್ತು ಲಕ್ಷ ರೂಪಾಯಿಗಳ ನಕಲಿ ಬಿಲ್ ಬಂದಿದೆ ಎಂದು ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿಗಳಿಗೆ ನೋಟೀಸ್ ಕೊಟ್ಟಿದ್ದೀರಿ. ಇದು ಸುಮಾರು ೫೦ ಲಕ್ಷ ರೂಪಾಯಿಗಳವರೆಗೆ ನಕಲಿ ಬಿಲ್ ಆಗಿದೆ ಇಲ್ಲಿಯವರೆಗೆ ೨೨ ಕೋಟಿ ರೂಪಾಯಿಗಳನ್ನು ಪರಿಹಾರಾರ್ಥ ವಾಗಿ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿಗಳ ಕಾರ್ಯದ ಬಗ್ಗೆ ಸಿ.ಒ.ಡಿ ತನಿಖೆ ಆಗಬೇಕು ಮತ್ತು ಆ ಅಧಿಕಾರಿಗಳಿಗೆ ಜೈಲು ಶಿಕ್ಷೆ ಆಗಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಯಾವ ಇಲಾಖೆಯಲ್ಲಿ ಎಂದು ಹೇಳಲಿಲ್ಲ.

ಶ್ರೀ ಕೆ. ಜಿ. ಈಶ್ವರಪ್ಪ.—ಭೂಕಂದಾಯ ಇಲಾಖೆ ಬಗ್ಗೆ ಹೇಳುತ್ತಿದ್ದೇನೆ ಅಸಿಸ್ಟೆಂಟ್ ಕಮಿಷನರ್ ಕಛೇರಿಯಲ್ಲಿ ಒಬ್ಬರು ಟ್ರಜರರ್ ಮತ್ತು ಇಬ್ಬರು ನೌಕರರು ಇದರಲ್ಲಿ ಸೇರಿದ್ದಾರೆ. ಇನ್ನು ವಿದ್ಯಾರ್ಥಿಗಳ ಸಮಸ್ಯೆ ಬಗ್ಗೆ ಬಂದರೆ ಮೊನ್ನೆ ನಡೆದ ಚುನಾವಣೆಯಲ್ಲಿ ಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ೧೮ ರಿಂದ ೨೧ ವರ್ಷ ವಯಸ್ಸಿನ ಎಲ್ಲಾ ಯುವಕರು ಮತದಾನ ಮಾಡಿದ್ದು ತುಂಬಾ ಅಭಿನಂದನಾರ್ಹವಾದ ಸಂಗತಿ. ಕರ್ನಾಟಕದಲ್ಲಿ ಜನತಾ ಸರ್ಕಾರವನ್ನು ಕಿತ್ತೊಗೆದು ನಿಮ್ಮ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ಅದೇ ರೀತಿ ರಾಷ್ಟ್ರದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆದು— ವಂಶ ಪಾರಂಪರ್ಯವಾಗಿ ಬಂದಿದ್ದ ಸರ್ಕಾರಕ್ಕೆ ಮಂಗಳ ಹಾಕಿದ್ದಾರೆ. ಅದರಲ್ಲಿ ೧೮ ರಿಂದ ೨೧ ವರ್ಷ ವಯಸ್ಸಿನ ಯುವಕರು ಮತ್ತು ಹಳ್ಳಿಯ ಮುಗ್ಧರು ಇರಬಹುದು.

(ಗೊಂದಲ)

ಈ ಯುವ ಜನಾಂಗ ರಾಜ್ಯದ ಹಾಗೂ ರಾಷ್ಟ್ರದ ಚಿತ್ರವನ್ನು ಬದಲಾಯಿಸುತ್ತಿರುವ ಸಂದರ್ಭದಲ್ಲಿ ಕರ್ನಾಟಕದ ಕಾಲೇಜು ವಿದ್ಯಾರ್ಥಿಗಳಿಗೆ ಮತದಾನ ಮಾಡುವ ಹಕ್ಕು ಏಕೆ ಇಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಬಯಸುವುದಕ್ಕೆ ಇಷ್ಟಪಡುತ್ತೇನೆ.

ದಯವಿಟ್ಟು ಕರ್ನಾಟಕದ ಎಲ್ಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳನ್ನು ಕಟ್ಟಲು ಸರ್ಕಾರ ಅನುಮತಿ ಕೊಡಬೇಕು. ಇಡೀ ದೇಶದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳಿದ್ದರೂ ಕರ್ನಾಟಕದಲ್ಲಿ ಇಲ್ಲ. ಇಲ್ಲೂ ಕೂಡ ವಿದ್ಯಾರ್ಥಿಸಂಘಗಳಿಗೆ ಚುನಾವಣೆ ಮಾಡಲು ಸರ್ಕಾರ ಆದೇಶ ಹೊರಡಿಸಬೇಕು. ಮತ್ತು ಕೋಡ್ ಆಫ್ ಕಾಂಡಕ್ಟ್ ಜಾರಿಗೆ ತರಬೇಕು. ೧೯೭೬ರಲ್ಲಿ ಹೊರಡಿಸಿದ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯಿದೆಯಲ್ಲಿ ಸೆನೆಟ್‌ನಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ಇರಬೇಕು ಎಂದು ಮಾಡಿದ್ದಾರೆ ಆದರೆ ಇವತ್ತು ರಾಜ್ಯದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ. ಸರ್ಕಾರ ಇದರ ಬಗ್ಗೆ ತಕ್ಷಣ ಗಮನ ಹರಿಸಬೇಕೆಂದು ಹೇಳುತ್ತೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ಕೃಷಿಗೆ ಪ್ರಾಮುಖ್ಯವಾದ ಜಿಲ್ಲೆ. ಅಲ್ಲಿ ಕೃಷಿ ಕಾಲೇಜಾಗಬೇಕೆಂದು ಜನರಿಂದ ಒತ್ತಾಯ ಇದೆ. ಅದನ್ನು ಮಾಡಬೇಕು ಶಿವಮೊಗ್ಗ ಜಿಲ್ಲೆಯಲ್ಲಿ ಇಂಜಿನಿಯರಿಂಗ್ ಕಾಲೇಜಿದೆ. ಆದರೆ ಅಲ್ಲಿ ಹೋಗಿ ಬರುವುದಕ್ಕೆ ಬಸ್ ವ್ಯವಸ್ಥೆ ಇಲ್ಲ. ಕುಡಿಯುವ ನೀರಿನ ವ್ಯವಸ್ಥೆಯನ್ನು ಕೂಡ ಅಲ್ಲಿಗೆ ಮಾಡಿಕೊಡಬೇಕೆಂದು ಕೇಳಿಕೊಂಡು ನನಗೆ ಭಾಷಣ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಶಿವಮೂರ್ತಿ (ಭದ್ರಾವತಿ)(ಭರಮಸಾಗರ).—ಮಾನ್ಯ ಅಧ್ಯಕ್ಷರೆ, ೧೭೭ ಜನ ಶಾಸಕರ ಬೆಂಬಲ ಪಡೆದ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ.

ಅಧ್ಯಕ್ಷರು.—ನಿಮ್ಮ ಭಾಷಣವನ್ನು ಐದು ನಿಮಿಷಕ್ಕೆ ಅಳವಡಿಸಿಕೊಳ್ಳಬೇಕು.

ಶ್ರೀ ಕೆ. ಶಿವಮೂರ್ತಿ.—ಸ್ವಲ್ಪ ಹೆಚ್ಚು ಅವಕಾಶ ಕೊಡಬೇಕು.

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ಕೆ. ಶಿವಮೂರ್ತಿ.—ಮುಗಿಸುವುದಕ್ಕೆ ಪ್ರಯತ್ನ ಪಡುತ್ತೇನೆ. ನಮ್ಮ ಸರ್ಕಾರದ ಸ್ಪಷ್ಟವಾದ ನಿಲುವನ್ನು ರಾಜ್ಯಪಾಲರ ಭಾಷಣದ ಮೂಲಕ ನಮ್ಮ ಸರ್ಕಾರ ದೇಶದ ಹಾಗೂ ರಾಜ್ಯದ ಜನತೆಯ ಮುಂದೆ ಇಟ್ಟಿದ್ದೇವೆ. ಇದನ್ನು ಬೆಂಬಲಿಸಿ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ಇವತ್ತು ಹಿಂದಿನ ಸರ್ಕಾರಕ್ಕೂ ಈಗಿನ ಸರ್ಕಾರಕ್ಕೂ ನಾನು ಹೋಲಿಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಏನೆಂದರೆ, ನಮ್ಮ ಪ್ರಭುಗಳಾದ ಮತದಾರರು ಜವಾಬ್ದಾರಿ ಸ್ಥಾನವನ್ನು ನಮಗೆ ಯಾವರೀತಿ ಕೊಟ್ಟಿದ್ದಾರೋ ಅದನ್ನು ನಾವು ಮರೆತು ಹೋಗುವುದಿಲ್ಲ. ನಮಗೆ ಜವಾಬ್ದಾರಿ ಸ್ಥಾನಕೊಟ್ಟಿದ್ದಕ್ಕೆ ಈ ಸದನದ ಮೂಲಕ ರಾಜ್ಯದ ಜನತೆಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ಸ್ನೇಹಿತರು ವಿರೋಧಪಕ್ಷದಲ್ಲಿ ಕುಳಿತುಕೊಂಡು ಬಹಳಷ್ಟು ಟೀಕೆಗಳನ್ನು ರಾಜಕೀಯ ಮಾಡಿ ಮಾತನಾಡಿದ್ದಾರೆ. ಕೆಲವು ರಚನಾತ್ಮಕ ಸಲಹೆಗಳನ್ನೂ ಕೊಟ್ಟಿದ್ದಾರೆ. ನಾವು ಯುವಕರು, ಅನುಭವ ಕಡಿಮೆ ಇರುವವರು. ಆದರೆ ಹಿರಿಯರು ಏನು ಮಾತನಾಡಿದ್ದಾರೆ ಎಂಬುದನ್ನು ಕೇಳಿದ್ದೇವೆ. ಪತ್ರಿಕೆಯಲ್ಲೂ ಓದಿದ್ದೇವೆ. ಒಂದು ಸರ್ಕಾರ ಅಧಿಕಾರಕ್ಕೆ ಬಂದಾಗ ಆ ಜನರ ಬಗ್ಗೆ, ಪಕ್ಷದ ನೀತಿ ಬಗ್ಗೆ ಹೇಳುವುದು ಸಹಜ. ಆದರೆ ಮೂಲಭೂತ ಸಮಸ್ಯೆಗಳ ಬಗ್ಗೆ ರಾಜಕೀಯವನ್ನು ದೂರ ಇಟ್ಟು ವಿಚಾರ ಮಾಡಿದರೆ ಪರಿಹಾರ ಸಿಗುತ್ತದೆ. ಹಲವಾರು ಮೂಲಭೂತ ಸಮಸ್ಯೆಗಳಿವೆ. ಇವತ್ತು ದೇಶದಲ್ಲಿ ರಾಜಕೀಯಕ್ಕೋಸ್ಕರ, ಸ್ವಾರ್ಥಕ್ಕೋಸ್ಕರ ಇದನ್ನು ಬಳಸಿದರೆ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಈ ಸಮಸ್ಯೆಗಳು ಯಾವುವು ? ರೈತರ ಬಗ್ಗೆ, ಬೆಲೆ ಏರಿಕೆ ಬಗ್ಗೆ ಮಾತನಾಡಿದ್ದಾರೆ. ಹಾಗೆಯೇ ಕೆಲವಾರು ವಿಚಾರಗಳನ್ನು ಕೈ ಬಿಟ್ಟಿದ್ದಾರೆ. ಪ್ರಕೃತಿ ಬಗ್ಗೆ ಹೇಳಬೇಕಾಗಿತ್ತು. ಇವತ್ತು ಜನಸಂಖ್ಯೆ ಬೆಳೆಯುತ್ತಿದೆ. ಇದನ್ನು ಸ್ಪಂದಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ೨೦ ಅಂಶಗಳ ಕಾರ್ಯಕ್ರಮ ಇದೆ. ಈ ೨೦ ಅಂಶಗಳ ಕಾರ್ಯಕ್ರಮದಲ್ಲಿ ಎಲ್ಲ ಅಂಶಗಳೂ ಬರುತ್ತವೆ. ಮಾನ್ಯ ಯಡಿಯೂರಪ್ಪನವರು ಅದನ್ನು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಕಾಂಗ್ರೆಸ್ ಪಕ್ಷ ಅಂದರೆ ಅವರಿಗೆ ಸಿಟ್ಟು. ಈ ನಮ್ಮ ಪಕ್ಷದ ಕಾರ್ಯಕ್ರಮವನ್ನು ತಿಳಿದುಕೊಂಡಿದ್ದರೆ ಜನತಾ ದಳದ ಸರ್ಕಾರಕ್ಕೆ ಅವರು ಬೆಂಬಲ ಕೊಡುತ್ತಿರಲಿಲ್ಲ. ಸೈಟಿಲ್ಲದವರಿಗೆ ಸೈಟು, ನೀರಿಲ್ಲದವರಿಗೆ ನೀರು ಬೆಲೆ ಏರಿಕೆಯನ್ನು ತಡೆಗಟ್ಟುವುದು, ದುರ್ಬಲ ವರ್ಗದವರಿಗೆ ರಕ್ಷಣೆ ಕೊಡುವುದು ನೀರಾವರಿ ವಿಚಾರ ಎಲ್ಲವೂ ಈ ೨೦ ಅಂಶಗಳ ಕಾರ್ಯಕ್ರಮದಲ್ಲಿದೆ. ಶ್ರೀಮತಿ ಇಂದಿರಾಗಾಂಧಿಯವರು ಮತ್ತು ದೇವರಾಜ ಅರಸು ಅವರು ಇದ್ದ ಕಾಲದಲ್ಲಿ ಇದಕ್ಕೆ ಒತ್ತು ಕೊಟ್ಟು ಈ ಕಾರ್ಯಕ್ರಮಗಳನ್ನು ಜಾರಿ ಮಾಡಲಾಯಿತು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬರೀ ಅದನ್ನು ಓದಿ ತೃಪ್ತಿ ಪಡಬೇಕೋ ಅಥವಾ ಆ ಕಾರ್ಯಕ್ರಮಗಳು ಜಾರಿಗೆ ಬರುವುದರ ಬಗ್ಗೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರೋ?

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಯಡಿಯೂರಪ್ಪನವರೂ ಕೂಡಾ ಕೆಲವು ಸಮಸ್ಯೆಗಳ ಬಗ್ಗೆ ಹೇಳಿದ್ದಾರೆ. ಪ್ರತಿ ಹಳ್ಳಿಗಳಲ್ಲೂ ಜನಸಂಖ್ಯೆ ಬೆಳೆಯುತ್ತಿದ್ದು ಅಲ್ಲಿನ ಯುವಕ ಯುವತಿಯರು ಮದುವೆಯಾದಮೇಲೆ ಸಂಸಾರಿಗಳಾಗಿ ತಮ್ಮ ಜೀವನ ನಡೆಸಲು ಒಂದು ಸೂರು ಬೇಡವೇ ? ನಾನು ಈಗ ಅಂಕಿಸಂಖ್ಯೆಗಳನ್ನು ಇಟ್ಟು ಮಾತ ಾಡುವುದಕ್ಕೆ ಹೋಗುವುದಿಲ್ಲ. ಪ್ರತಿ ಜಿಲ್ಲಾ ಪರಿಷತ್ತು, ಮಂಡಲಗಳಲ್ಲಿ ಸೈಟುಗಳನ್ನು ಕೊಡುವುದರ ಬಗ್ಗೆ ಹಿಂದಿನ ಸರ್ಕಾರ ಪೂರ್ತಿ ಗಮನ ಕೊಟ್ಟಿಲ್ಲ. ಇವತ್ತು ನಾವು ಮನುಷ್ಯರಾಗಿ ಬಾಳುವುದಕ್ಕೆ ನಮಗೆ ಏನೂ ಬೇಡ, ಕೇವಲ ಕುಡಿಯುವುದಕ್ಕೆ ನೀರು ಹಾಗೂ ವಾಸ ಮಾಡಲು ಸೈಟು ಕೊಟ್ಟು ಮನೆ ಕಟ್ಟಿಕೊಳ್ಳಲು ಸಹಾಯ ಮಾಡಿ ಎಂದು ಕೇಳುತ್ತಿದ್ದಾರೆ. ೨೦ ಅಂಶಗಳ ಕಾರ್ಯಕ್ರಮಗಳ ಅಡಿಯಲ್ಲಿ ನಾವು ನಮ್ಮ ನೀತಿಯನ್ನು ನಿರೂಪಿಸಿದ್ದೇವೆ. ಕುಡಿಯುವ ನೀರು, ಭೂಮಿ ಮತ್ತು ಮನೆ ಕೊಡುವುದು ನಮ್ಮ ಸರ್ಕಾರದ ನೀತಿ ಆಗಿದೆ. ಮಾನ್ಯ ಅಧ್ಯಕ್ಷರೇ, ಜಿಲ್ಲಾಪರಿಷತ್ತು ಮತ್ತು ಪಂಚಾಯಿತಿ ವ್ಯವಸ್ಥೆಯನ್ನು ಜಾರಿಗೆ ತರುವ ಸಮಯದಲ್ಲಿ ನಜೀರ್ ಸಾಬ್ ಅವರು ಸ್ಪಷ್ಟವಾಗಿ ಹೇಳುತ್ತಿದ್ದರು. ಏನೆಂದರೆ ಇದನ್ನು ನಾವು ಟ್ರಯಲ್ ಅಂಡ್ ಎರರ್ ಮೆಥಡ್‌ನಲ್ಲಿ ಜಾರಿಗೆ ತರುತ್ತಿದ್ದೇವೆ ಎಂದು, ಇದರಲ್ಲಿ ಕೆಲವು ತಪ್ಪುಒಪ್ಪುಗಳು ಇರಬಹುದು. ಅದನ್ನು ಮುಂದೆ ಸರಿಮಾಡಿಕೊಳ್ಳಬೇಕಾಗುತ್ತದೆಂದು ಹೇಳುತ್ತಿದ್ದರು. ಇವತ್ತು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ಹಣಕಾಸಿನ ಸ್ಥಿತಿ ಹೇಗಿದೆ? ಅಲ್ಲಿನ ಕಾರ್ಯವೈಖರಿ ಹೇಗಿದೆ? ಇವತ್ತು ಅಲ್ಲಿ ಎಲ್ಲ ಹಣ ಕ್ರಿಮಿನಲ್ ವೇಸ್ಟ್ ಆಗುತ್ತಿದೆ, ಹಣವೆಲ್ಲಾ ಪೋಸ್ಟೇಜ್, ಕರಸ್ಪಾಂಡೆನ್ಸ್‌ಗೇ ಹಾಗುತ್ತಿದೆಯೇ ಹೊರತು ಅಭಿವೃದ್ಧಿ ಕಾರ್ಯಗಳು ಮಾತ್ರ ಆಗುತ್ತಿಲ್ಲ. ಇದನ್ನೆಲ್ಲಾ ಲೆಕ್ಕ ಹಾಕಿ, ಜಿಲ್ಲಾಪರಿಷತ್ತುಗಳ ಅವ್ಯವಹಾರದ ಬಗ್ಗೆ ಒಂದು ಸರಿಯಾದ ಕ್ರಮ ತೆಗೆದುಕೊಳ್ಳದೇ ಇದ್ದರೆ ರಾಜ್ಯದ ಬೊಕ್ಕಸಕ್ಕೆ ಜಾಸ್ತಿ ಖರ್ಚುಬರುತ್ತದೆಂದು ಹೇಳುತ್ತೇನೆ. ಇವತ್ತು ತಾವು ಅಧಿಕಾರ ವಿಕೇಂದ್ರೀಕರಣ ಎಂದು ಹೇಳಿ ಯಾರಿಗೆ ಅಧಿಕಾರ ಕೊಟ್ಟಿದ್ದೀರಿ ? ಎಂತಹ ಜನರಿಗೆ ಕೊಡಬೇಕು ? ಇವತ್ತಿನ ಚುನಾವಣಾ ಪದ್ಧತಿಯಲ್ಲಿ ದುರ್ಬಲರು, ಮತ್ತು ಬಡವರು ಆರಿಸಿಬರುವುದಕ್ಕೆ ಸಾಧ್ಯವಿಲ್ಲ ಅದು ಬಹಳ ಕಷ್ಟ ಇದೆ. ಬರೀ ಶಕ್ತಿವಂತರೇ ಗೆದ್ದುಬರುವುದು ಇವತ್ತಿನ ದಿವಸ ಜಿಲ್ಲಾಪರಿಷತ್ ಹಾಗೂ ಮಂಡಲ ಪಂಚಾಯಿತಿ ವ್ಯವಸ್ಥೆ ಸರಿಯಾಗಿಲ್ಲ. ಇಲ್ಲಿಯ ಅನಾವಶ್ಯಕ ಖರ್ಚನ್ನು ನಿಲ್ಲಿಸಬೇಕು. ಇವತ್ತು ಕಡಿಮೆ ಖರ್ಚಿನಲ್ಲಿ ಹೆಚ್ಚು ಕೆಲಸ ಆಗುವ ಕಡೆಗೆ ಹೆಚ್ಚಿನ ಗಮನಕೊಡಬೇಕೆಂದು ಹೇಳುತ್ತೇನೆ. ಇವತ್ತು ರೈತರ ಸಾಲವನ್ನು ಮನ್ನಾ ಮಾಡಬೇಕೆನ್ನುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಈ ಸಭೆಗೆ ರೈತ ಪ್ರತಿನಿಧಿಗಳು ಆರಿಸಿ ಬಂದಿದ್ದಾರೆ. ಇವತ್ತು ರೈತರ ಹೆಸರಿನಲ್ಲಿ ಒಂದು ಪ್ರಚಾರ ನಡೆಯುತ್ತಿದೆ. ಇವತ್ತು ಟವಲ್ ಹಾಕಿರುವವರು ರೈತ ಪ್ರತಿನಿಧಿಗಳು ಎಂದರೆ ನಾವೇನೂ ರೈತರಲ್ಲವೇ ? ಪ್ಯಾಂಟ್, ಶರ್ಟ್ ಹಾಕಿದ್ದರೂ ನಾವೂ ರೈತರೇ. ಎಲ್ಲ ಶಾಸಕರೂ, ಎಲ್ಲ ಪ್ರತಿನಿಧಿಗಳೂ ರೈತ ಕುಟುಂಬದಿಂದಲೇ ಬಂದಿರುವುದು. ರೈತರ ಸಮಸ್ಯೆಗಳ ಬಗ್ಗೆ ಎಲ್ಲರಿಗೂ ಅರಿವು ಇದೆ. ಇವರ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ಒಂದು ಸೂತ್ರ ಕಂಡುಹಿಡಿಯಲು ಅಷ್ಟು ಕಷ್ಟವೇನೂ ಇಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರ, ನಬಾರ್ಡ್‌ನವರು ಹಾಗೂ ಬ್ಯಾಂಕ್‌ನವರು ಕೂಡಿ ಚರ್ಚೆ ಮಾಡಿದರೆ ರೈತರ ಸಮಸ್ಯೆಯನ್ನು ಬಗೆಹರಿಸುವಲ್ಲಿ ಯಾವುದೇ ಕಷ್ಟ ಬರಲಾರದೆಂದು ನಾನು ಹೇಳುತ್ತೇನೆ. ಇನ್ನು ಕೊನೆಯದಾಗಿ, ನಾನೂ ಯುವಕನಾದ್ದರಿಂದ ಯುವ ಜನಾಂಗದ ಬಗ್ಗೆ ಒಂದೆರಡು ಮಾತು ಗಳನ್ನಾಡುತ್ತೇನೆ. ಇವತ್ತು ಸಮಾಜದಲ್ಲಿನ ಯುವ ಪೀಳಿಗೆಯಲ್ಲಿ ಅಸಮಾಧಾನ ಹೆಚ್ಚು ಆಗುತ್ತಿದೆ. ಇವತ್ತು ಬಹಳ ಸಮಸ್ಯೆಗಳು ಉದ್ಭವ ಆಗಿವೆ. ಇವತ್ತು ಒಬ್ಬ ಯುವಕ ಎಂದರೆ ಆತ ೧೮ ವರ್ಷದವ ನಾಗಿರಬಹುದು, ೨೫ ವರ್ಷದವನಾಗಿರಬಹುದು, ಗ್ರಾಜ್ಯುಯೇಟ್ ಆಗಿರಬಹುದು, ಎಸ್‌ಎಸ್‌ಎಲ್‌ಸಿ ಮಾಡಿದವನಾಗಿರಬಹುದು, ಅಥವಾ ದನ ಕಾಯುವವನು ಇರಬಹುದು. ಇವತ್ತು ಆತನಿಗೆ ಜೀವನ ನಡೆಸಲು ಉದ್ಯೋಗ ಬೇಡವೇ ? ಆತನು ಹೇಗೆ ಜೀವನ ಸಾಗಿಸಬೇಕು ? ಇವತ್ತು ಆತನ ಜೀವನದ ಬಗ್ಗೆ ಆತನಿಗೇ ಗ್ಯಾರಂಟಿ ಇಲ್ಲ. ಆತನಿಗೆ ಸಮಾಜ ರಕ್ಷಣೆ ಕೊಡುತ್ತದೆಯೇ ? ಸರ್ಕಾರ ರಕ್ಷಣೆ ಕೊಡುತ್ತದೆಯೇ ? ಇವತ್ತು ಈತನ ಸಮಸ್ಯೆಗಳು ಬಹಳ ಬೃಹದಾಕಾರವಾಗಿ ಬೆಳೆಯುತ್ತಿವೆ.

ಇವತ್ತು ಶಿಕ್ಷಣದ ಬಗ್ಗೆ ಅನೇಕರು ಮಾತನಾಡಿದ್ದಾರೆ. ಅದರ ಬಗ್ಗೆ ಮಾತನಾಡುತ್ತಾ ಹೋದರೆ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ದೊಡ್ಡ ದೊಡ್ಡವರ ಮಕ್ಕಳು ಓದುತ್ತಿದ್ದಾರೆ. ಬಡವರ ಮಕ್ಕಳು ದನ ಕಾಯುತ್ತಿದ್ದಾರೆ, ಕೂಲಿ ಮಾಡುತ್ತಿದ್ದಾರೆ. ಅವರು ಹೋಗಿ ದೊಡ್ಡವರ ಮಕ್ಕಳುಗಳ ಹತ್ತಿರ ಸೂಜಿ ಚುಚ್ಚಿಸಿಕೊಳ್ಳಬೇಕಾಗಿದೆ. ಇಂತಹ ಮೂಲಭೂತ ವಾಗಿರತಕ್ಕ ಸಮಸ್ಯೆಗಳು ಏನಿವೆ, ಅದನ್ನು ಹೋಗಲಾಡಿಸಬೇಕು. ಬಡವರ ಮಕ್ಕಳಲ್ಲಿ ಈರ್ಷೆ

ಬೆಳೆಯುತ್ತಿದೆ. ನಮಗೆ ಯಾವುದೇ ರೀತಿಯ ಸವಲತ್ತುಗಳು ಸಿಗದಿದ್ದರೆ ನಾವು ಕ್ರಾಂತಿ ಮಾಡಬೇಕು. ಸಮಾಜದ ಕಟ್ಟುಪಾಡುಗಳನ್ನು ಬಿಟ್ಟು ಹೋಗಬೇಕೆನ್ನುವ ಯೋಚನೆ ಅವನಲ್ಲಿ ಬೆಳೆದಿದೆ. ಅದನ್ನು ಸರಿಪಡಿಸಬೇಕು. ಆ ಬಗ್ಗೆ ಕೆಲಸ ಮಾಡದಿದ್ದರೆ ಈ ಸಮಾಜವನ್ನು ಕಟ್ಟುವುದು ಬಹಳ ಕಷ್ಟ. ಇವತ್ತು ಜನ ಜಾಗೃತರಾಗಿದ್ದಾರೆ. ಕೇಂದ್ರದಲ್ಲಿ ಜನತಾದಳದ ಸರ್ಕಾರ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಬಹುಮತದಿಂದ ೧೭೭ ಜನ ಕಾಂಗ್ರೆಸ್ ಶಾಸಕರನ್ನು ಜನತೆ ಆರಿಸಿ ಕಳುಹಿಸಿದ್ದಾರೆ. ಜನಗಳು ಜಾಗೃತರಾಗಿರುವುದನ್ನು ತೋರಿಸಿದ್ದಾರೆ. ಯಾವ ರೀತಿ ಸ್ಪಂದಿಸಬೇಕೆನ್ನುವುದು ಜನರಿಗೆ ಗೊತ್ತಾಗಿದೆ. ನಾನು ಯಾರ ಬಗ್ಗೆಯೂ ಹೇಳುವುದಿಲ್ಲ. What is difference? I want to make on submission to the Chair, ಹಿಂದಿನ ಜನ ಏನೇನು ದುರ್ವ್ಯವಹಾರ ಮಾಡಿದ್ದಾರೆ ಏನೇನು ಅನ್ಯಾಯಗಳು ನಡೆದಿವೆ ಅವುಗಳ ಬಗ್ಗೆ ವಿಚಾರ ಮಾಡಿ ಅದರ ವರದಿಯನ್ನು ಸಭೆಯ ಮುಂದಿಡಬೇಕು. I demand an inquiry should be conducted and placed before the countiry. ಯಾವುದೇ ಹಗರಣಗಳು ಇರಲಿ, ಅವುಗಳ ಬಗ್ಗೆ ವಿಚಾರಣೆ ಮಾಡಿಸಿ ಸದನದ ಮುಂದೆ ವರದಿ ಇಡಬೇಕು. ತಮ್ಮ ಮೂಲಕ ನಮ್ಮ ನಾಯಕರನ್ನು ಒತ್ತಾಯ ಮಾಡುತ್ತಿದ್ದೇನೆ. ಹಿಂದೆ ಯಾರು ತಪ್ಪು ಮಾಡಿದ್ದಾರೆ, ಅವರು ಯಾರೇ ಆಗಿರಲಿ ಅವರ ಬಗ್ಗೆ ಮುಲಾಜಿಲ್ಲದೆ ವಿಚಾರ ಮಾಡಿಸಿ, ಅದು ಜನರಿಗೆ ಗೊತ್ತಾಗಲಿ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಮಹದೇವ್‌ರವರೇ, ತಾವು ಆನೆಗಳ ಬಗ್ಗೆ ಮಾತ್ರ ಮಾತನಾಡುತ್ತೇನೆಂದು ಹೇಳಿದ್ದೀರಿ, ಎರಡು ನಿಮಿಷ ಆನೆಗಳ ಬಗ್ಗೆ ಮಾತನಾಡಿ.

† ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಸಾಮಾನ್ಯ ರೈತರ ಬಗ್ಗೆ ಮತ್ತು ಬಡವರ ಬಗ್ಗೆ ಸಾಕಷ್ಟು ಕಾಳಜಿಯನ್ನು ವಹಿಸಿದ್ದಾರೆ. ನಿಜವಾದ ಬಡವರು ಕಾಡುಗಳಲ್ಲಿ ಕಾಡುಗಳ ಪಕ್ಕದಲ್ಲಿ ವಾಸವಾಗಿದ್ದಾರೆ. ರೈತರ ಸಮಸ್ಯೆಗಳು ಬಹಳ ಇವೆ. ಅದರಲ್ಲೂ ಮಳೆಯ ಆಶ್ರಯದಲ್ಲಿ ಬಡ ರೈತ ಅವನು ಪಸಲು ಬೆಳೆದುಕೊಂಡು ಜೀವನ ಮಾಡಬೇಕಾಗಿದೆ, ಬೆಳೆದಂತಹ ಪಸಲಿನ ಆದಾಯದಿಂದ ತನಗೆ ಬೇಕಾದ ಬಟ್ಟೆಬರೆ ಇನ್ನಿತರ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳಬೇಕಾಗಿದೆ. ಅದರಲ್ಲಿಯೇ ಎಲ್ಲಾ ವ್ಯವಹಾರಗಳನ್ನು ಅವರು ಮಾಡಿಕೊಳ್ಳಬೇಕಾಗುತ್ತದೆ. ಬೆಳೆ ಇಲ್ಲದೇ ಹೋಗಬಹುದು. ನೀರಾವರಿ ಪ್ರದೇಶಗಳಲ್ಲಿರತಕ್ಕ ರೈತರು ನೆಮ್ಮದಿಯಾಗಿ ಏನಾದರೂ ಮಾಡಿಕೊಂಡು ವ್ಯವಸಾಯ ಮಾಡುತ್ತಾರೆ. ಕಾಡಿನ ಪಕ್ಕದಲ್ಲಿರತಕ್ಕ ಜನ ಮಳೆಯ ಆಶ್ರಯದಲ್ಲಿ ಬದುಕಬೇಕಾಗಿದೆ. ಕಾಡಾನೆಗಳು ಬಂದು ಆತನ ಬೆಳೆಯನ್ನು ನಾಶಮಾಡುತ್ತವೆ. ನಾನು ಅದರ ಬಗ್ಗೆ ಉಪವಾಸ ಸತ್ಯಾಗ್ರಹ ಮಾಡಿದಾಗ ಆಗಿನ ಅರಣ್ಯ ಸಚಿವರು ಮತ್ತು ಮುಖ್ಯ ಮಂತ್ರಿಗಳು ಆನೆಗಳು ಬರದಹಾಗೆ ಟ್ರೆಂಚ್ ಹೊಡೆಸುತ್ತೇವೆಂದು ಹೇಳಿ ಎಷ್ಟೋ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಸ್ವಲ್ಪ ಕೆಲಸಗಳನ್ನು ಮಾಡಿದರು. ಫಾರೆಸ್ಟ್ ಇಲಾಖೆಯವರು ಆಗ ಸಾಕಷ್ಟು ನಿಗಾ ವಹಿಸಿದರು. ಆದರೂ ಅವರು ಕಾಡಾನೆಗಳ ಹಾವಳಿಯನ್ನು ತಪ್ಪಿಸಿ ಆ ರೈತರಿಗೆ ರಕ್ಷಣೆ ಕೊಡುವ ಕಾರ್ಯಕ್ರಮಗಳನ್ನು ಕೈಗೊಳ್ಳುವಲ್ಲಿ ಸಫಲರಾಗಲಿಲ್ಲ, ವಿಫಲರಾದರು. ನಾನು ನನ್ನ ಕ್ಷೇತ್ರದಲ್ಲಿ ಚುನಾವಣೆಯ ಪ್ರಚಾರ ಮತ್ತು ಗೆದ್ದನಂತರ ಅಲ್ಲಿಗೆ ಹೋದಾಗ ಕಾಡುಗಳಲ್ಲಿರತಕ್ಕ ಜನ ರಾತ್ರಿ ಸಮಯ ಆನೆಗಳು ಬರುತ್ತವೆಂದು ಹೇಳಿದರು. ಒಂದು ಸಾರಿ ಆನೆಗಳು ಬಂದವು ಅಂದರೆ ಇಡೀ ಸಂಸಾರವೇ ಗಡ ಗಡ ಅಂತ ನಡುಗಬೇಕಾಗುತ್ತದೆಂದು ಅವರು ನನಗೆ ಹೇಳಿದರು. ಜೊತೆಗೆ ಹೊಲಗಳಲ್ಲಿ ಇರತಕ್ಕ ಪಸಲನ್ನು ಹಾಳು ಮಾಡುತ್ತವೆ. ಹಾಳಾದ ಪಸಲಿಗೆ ಸರಿಯಾದ ಪರಿಹಾರ ಸಿಗುತ್ತಿಲ್ಲ, ನಾವು ಜೀವನ ಮಾಡುವುದೇ ಕಷ್ಟವೆಂದು ಹೇಳಿದರು. ಭೂ ಒಡೆಯರು ಯಾರೂ ಹೊಲಗಳನ್ನು ಕಾಯುವುದಕ್ಕೆ ಹೋಗುವುದಿಲ್ಲ. ಹೊಲಗಳನ್ನು ಕಾಯಲಿಕ್ಕೆ ಹೋಗತಕ್ಕವರು ಬಡವರು ಮತ್ತು ಹರಿಜನರು. ರಾತ್ರಿ ಸಮಯದಲ್ಲಿ ಹೊಲಗಳನ್ನು ಕಾಯಲು ಹೋದಾಗ ಎಷ್ಟೋ ಜನ ಸಾವಿಗೆ ಈಡಾಗುತ್ತಿದ್ದಾರೆ. ಈ ಬಗ್ಗೆ ರೈತ ಸಂಘದವರ ಹತ್ತಿರ ಸರ್ಕಾರದವರು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಇದನ್ನು ಲಘುವಾಗಿ ತೆಗೆದುಕೊಳ್ಳಬೇಕಾದ್ದಿಲ್ಲ. ಏಕೆಂದರೆ ಆ ರೈತರಿಗೆ ಜೀವ ಭಯವಿದೆ. ಅವರಿಗೆ ಇಟ್ಟಂತಹ ಪಸಲು ಸಿಗುವುದಿಲ್ಲ. ಈ ಸಮಸ್ಯೆ ನನ್ನ ತಾಲ್ಲೂಕಿನಲ್ಲಿಯೇ ಅಲ್ಲ, ಬೇರೆ ತಾಲ್ಲೂಕುಗಳಲ್ಲಿಯೂ ಇದೆ.

೨–೦೦ ಪಿ.ಎಂ.

ಅಂತಹ ಕಡೆ ತಿರುಗಾಡುವುದಕ್ಕೆ ಭಯವಾಗುತ್ತದೆ. ಒಮ್ಮೆ ನಾವು ಚುನಾವಣಾ ಪ್ರಚಾರಕ್ಕೆ ಹೋದಾಗ ಒಂದು ಕಡೆ ಒಂದು ಆನೆ ಹಿಂಡು ಬಂತು. ಹೋಗಬೇಕಾಗಿದ್ದ ಕಡೆಗೆ ನಾಳೆ ಹೋಗೋಣ ಎಂದು ಹೇಳಿದೆ. ಆಗ ಒಬ್ಬ ಮುದುಕರು ಬಂದು ನೀವು ಚುನಾವಣೆ ಪ್ರಚಾರಕ್ಕೆ ಬಂದಿದ್ದೀರಿ. ಎರಡು–ಮೂರು ಕಾರುಗಳಿವೆ, ಸುಮಾರು ಜನ ಇದ್ದೀರಿ. ಆನೆ ಹಿಂಡು ಬಂದಿದ್ದಕ್ಕೆ ಇವತ್ತು ಬೇಡ ನಾಳೆ ಹೋಗೋಣ ಎಂದು ಹೇಳುತ್ತೀರಿ. ಆದರೆ ನಾವು ವರ್ಷವೆಲ್ಲ ಈ ಆನೆಗಳಿರುವ ಕಾಡಿನಲ್ಲಿ ಗುಡಿಸಿಲುಗಳಲ್ಲಿ ಮಕ್ಕಳನ್ನು ಕಟ್ಟಿಕೊಂಡು ಇದ್ದೇವೆ. ನಮಗೆ ಎಷ್ಟರ ಮಟ್ಟಿಗೆ ಭಯ ಇರಬೇಕು ? ಎಂದು ಅವರು ಕೇಳಿದರು. ಅದಕ್ಕೆ ಉತ್ತರ ಕೊಡಲು ನನಗೆ ಆಗಲಿಲ್ಲ. ಪಾಪ, ಅವರ ಫಸಲು ನಷ್ಟವಾಗುತ್ತದೆ. ಅಂತಹ ಸಂದರ್ಭದಲ್ಲಿ ಸರ್ಕಾರ ಕೂಡಲೇ ಪರಿಹಾರ ಕೊಡಬೇಕು. ಇದಕ್ಕೆ ೨೮ ಕಾನೂನುಗಳಿವೆ. ಫಾರೆಸ್ಟ್ ಆಫೀಸಿಗೆ ಹೋಗಬೇಕು, ರೆವಿನ್ಯೂ ಆಫೀಸಿಗೆ ಹೋಗಬೇಕು. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ಆನೆಕಾಟವನ್ನು ತಪ್ಪಿಸುವುದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇದು ಬಡವರ ದೊಡ್ಡ ಸಮಸ್ಯೆ ಆಗಿದೆ. ರೈತರ ಫಸಲು, ಬೆಳೆ ಎಲ್ಲಾ ಹಾಳಾಗುತ್ತಿದೆ. ಈಗ ಟ್ರೆಂಚ್ ಹೊಡೆದುಬಿಡುತ್ತಾರೆ. ಇದರಿಂದ ಅಷ್ಟು ಉಪಯೋಗ ಆಗುತ್ತಿಲ್ಲ. ಅದನ್ನು ತುಳಿದು ತುಳಿದು ಅವು ದಾರಿಮಾಡಿಕೊಂಡಿವೆ. ಅಲ್ಲಿ ಎಲೆಕ್ಟ್ರಿಕ್ ತಂತಿ ಹಾಕಿದರೆ ಕಂಟ್ರೋಲ್ ಆಗುತ್ತದೆ. ಇದನ್ನು ಮಾಡಲು ತಕ್ಷಣ ಕ್ರಮ ತೆಗೆದು ಕೊಳ್ಳಬೇಕು. ಮತ್ತೆ ಈ ಪಿಡಬ್ಲ್ಯೂಡಿ ಇಲಾಖೆಯಲ್ಲಿ ೧೫–೨೦ ಮಂದಿ ಚೀಫ್ ಇಂಜಿನಿಯರುಗಳು ಇದ್ದಾರೆ. ಏತಕ್ಕೆ ಇಷ್ಟು ಹುದ್ದೆಗಳನ್ನು ಮಾಡಿದ್ದಾರೋ ಗೊತ್ತಿಲ್ಲ. ಶ್ರೀ ವೀರೇಂದ್ರ ಪಾಟೀಲರು ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಒಬ್ಬರೋ ಇಬ್ಬರೋ ಚೀಫ್ ಇಂಜಿನಿಯರುಗಳು ಇದ್ದರು. ಆಗಲೂ ನಮ್ಮ ರಾಜ್ಯದ ನೀರಾವರಿ ಇಲಾಖೆ ಚೆನ್ನಾಗಿಯೇ ಕೆಲಸ ಮಾಡುತ್ತಿತ್ತು. ೧೫–೨೦ ಮಂದಿ ಚೀಫ್ ಇಂಜಿನಿಯರುಗಳು ಏತಕ್ಕೆ ಬೇಕು ? ಏನು ಕೆಲಸ ಬೇಕಾದರೂ ಆ ಇಂಜಿನಿಯರ್‌ಗಳ ಹತ್ತಿರ ಹೋಗ ಬೇಕು, ಈ ಇಂಜಿನಿಯರ್‌ಗಳ ಹತ್ತಿರ ಹೋಗಬೇಕು ಎಂದು ಹೇಳುತ್ತಾರೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ಹೊರೆಯೇ ಆಗಿದೆ. ಇದನ್ನು ತಪ್ಪಿಸಬೇಕು. ೪೬ ಮಂದಿ ಚೀಫ್ ಇಂಜಿನಿಯರ್‌ಗಳು ಇದ್ದಾರೆ ಎಂದು ನನ್ನ ಗೆಳೆಯರು ಹೇಳಿದರು. ಅವರುಗಳನ್ನು ಆನೆಗಳನ್ನು ಸಾಕಿದ ಹಾಗೆ ಆಗುತ್ತಿದೆ. ಅವರ ಸಂಖ್ಯೆಯನ್ನು ಕಡಿಮೆ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಪರಿಣಿತರಿದ್ದಾರೆ, ಮೇಧಾವಿಗಳಿದ್ದಾರೆ, ಆಡಳಿತದಲ್ಲಿ ಅವರಿಗೆ ದಕ್ಷತೆ ಇದೆ. ಅವರ ಸಂಖ್ಯೆಯನ್ನು ಕಡಿಮೆ ಮಾಡಿ ಆ ಹಣದಿಂದ ಎಲ್ಲ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಇನ್ನು ಕಬಿನಿ ೨ನೇ ಹಂತದ ಯೋಜನೆಯನ್ನು ಕೈಗೊಳ್ಳಬೇಕು......

ಶ್ರೀ ಎಂ. ಪಿ. ವೆಂಕಟೇಶ್.—ಅಲ್ಲಿ ೩೩ ಹಳ್ಳಿಗಳು ಮುಳುಗಡೆಯಾಗುತ್ತಿವೆ. ಮುಳುಗಡೆ ಯಾಗುವಂಥ ಪ್ರದೇಶದ ರೈತರಿಗೆ ಮೊದಲು ಜಮೀನು ಕೊಡಲಿ. ಆಮೇಲೆ ಕಬಿನಿ ೨ನೇ ಹಂತದ ಯೋಜನೆಯನ್ನು ಕೈಗೊಳ್ಳಲಿ.

ಶ್ರೀ ಎಂ. ಮಹದೇವ್.—ಮಾನ್ಯ ಮುಖ್ಯ ಮಂತ್ರಿಗಳಿಗೆ ಎಲ್ಲಾ ಗೊತ್ತಿದೆ. ಅವರು ಮಾಡು ತ್ತಾರೆ.

ಅಧ್ಯಕ್ಷರು.—ನೀವು ಬೇಗ ಮುಗಿಸಿ.

ಶ್ರೀ ಎಂ. ಮಹದೇವ್.—ಅಧ್ಯಕ್ಷರೇ, ನಾನು ರೆಲವೆಂಟ್ ಆಗಿಯೇ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು.—ಯಾರೂ ಇರ್ರೆಲವೆಂಟ್ ಆಗಿ ಹೋಗಿಲ್ಲ. ಬೇಗ ಮುಗಿಸಿ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ಕಬಿನಿ ಎರಡನೇ ಹಂತದ ಯೋಜನೆ ಬಗ್ಗೆ ಮುಖ್ಯಮಂತ್ರಿಯವರಿಗೆ ಚೆನ್ನಾಗಿ ಗೊತ್ತಿದೆ, ಮೊದಲನೆ ಹಂತದ ಯೋಜನೆಯಿಂದ ಲಕ್ಷಾಂತರ ಜನ ಉಪಯೋಗವನ್ನು ಪಡೆಯುತ್ತಿದ್ದಾರೆ. ಅವರು ನೆಮ್ಮದಿಯಿಂದ ಇವತ್ತು ಇದ್ದಾರೆ. ಎರಡನೇ ಹಂತದ ಯೋಜನೆಯಲ್ಲಿ ಐದಾರು ತಾಲ್ಲೂಕುಗಳು ಬರುತ್ತವೆ. ಅಲ್ಲಿಯ ಜನ ಬಹಳ ಬಡವರು, ಹಿಂದುಳಿದವರು ಇದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರಿಗೆ ಇದರಲ್ಲಿ ಬಹಳ ಆಸಕ್ತಿ ಇದೆ. ಅವರ ಕಾಲದಲ್ಲೇ ಮೊದಲನೇ ಹಂತದ ಯೋಜನೆ ಆಗಿದೆ......

ಶ್ರೀ ಎಂ.ಪಿ. ವೆಂಕಟೇಶ್.—೩೩ ಹಳ್ಳಿಗಳು ಮುಳುಗಡೆಯಾಗುತ್ತಿವೆ. ಅವರಿಗೆ ಜಮೀನು ಕೊಟ್ಟು ಆಮೇಲೆ ಮಾಡಿ.

(ಗೊಂದಲ)

ಶ್ರೀ ಎಂ. ಮಹದೇವ್.—ಆಮೇಲೆ ಅಧ್ಯಕ್ಷರೇ, ಡಿ.ಐ.ಜಿ. ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿದ್ದಾರೆ......

ಅಧ್ಯಕ್ಷರು.—ನೀವು ಕಬಿನಿಗೆ ನಿಲ್ಲಿಸುತ್ತೀರಿ ಎಂದು ತಿಳಿದುಕೊಂಡಿದ್ದೆ. ಈಗ ಪೋಲೀಸಿಗೆ ಹೋಗಿದ್ದೀರಿ.

ಶ್ರೀ ಎಂ. ಮಹದೇವ್.—ಇನ್ನು ಕುಡಿಯುವ ನೀರಿನ ಬಗ್ಗೆ ಹೇಳಬೇಕಾಗಿದೆ.

ಅಧ್ಯಕ್ಷರು.—ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ನೀವು ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿ.

ಪ್ರಕಟಣೆ

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

> "ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ ೧೧೪ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ೧೯೮೯ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ, ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ದಿನಾಂಕ ೨೨ನೇ ಡಿಸೆಂಬರ್ ೧೯೮೯ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ"

SRI D.B. CHANDREGOWDA,–There are no committees in existence so far as the Legislature is concerned. I have also requested the Chief Minister if that were to be considered a motion has to be moved before the House. We do not know when the next Sessions will be convened. Therefore, I would appeal to the leader of the House to convene these Committees. Are you constituting these Committees right now ?

ಅಧ್ಯಕ್ಷರು.—ಅದಕ್ಕೆ ಪ್ರೊಸೀಜರ್ ಇದೆ, ದಿನಾಂಕಗಳನ್ನು ಗೊತ್ತುಮಾಡಬೇಕು, ನಾಮಿನೇಷನ್ ಫೈಲ್ ಮಾಡಬೇಕು, ಅನಂತರ ಚುನಾವಣೆಗಳು ನಡೆಯಬೇಕು, ಆದ್ದರಿಂದ ಈಗ ಮುಖ್ಯಮಂತ್ರಿಗಳು ಉತ್ತರ ಮುಗಿಸಲಿ, ಅನಂತರ ಈ ಬಗ್ಗೆ ಆಲೋಚನೆ ಮಾಡೋಣ.

SRI R.V. DESHPANDE.—Laste year no committee was constituted in the entire year. In the meanwhile there was Governor's rule.

ಶ್ರೀ ವೀರೇಂದ್ರಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ವಂದನಾರ್ಪಣಾ ನಿರ್ಣಯದ ಮೇಲೆ ಕಳೆದ ಮೂರು ದಿವಸಗಳಿಂದ ಈ ಮಾನ್ಯ ಸಭೆಯಲ್ಲಿ ಚರ್ಚೆ ನಡೆಯುತ್ತಿದೆ. ಈ ಮಧ್ಯದಲ್ಲಿ ಮಾನ್ಯಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರು ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಒಂದು ವಿಶೇಷವಾದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಆ ರಿಕೆಮಾಡಿಕೊಂಡ ಪ್ರಕಾರ ತಾವು ವಿಶೇಷವಾದ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ನಿನ್ನೆ ಈ ಸಮಸ್ಯೆ ಬಗ್ಗೆ ವಿಶೇಷವಾಗಿ ಚರ್ಚೆಯಾಗಿದೆ. ಮತ್ತು ಅನೇಕ ಮಾನ್ಯ ಸದಸ್ಯರುಗಳು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಮೊದಲನೆಯದಾಗಿ, ನನ್ನ ಉತ್ತರ ರೈತರ ಸಾಲ ಮನ್ನಾ ಮಾಡುವ ಸಮಸ್ಯೆಗೆ ಸೀಮಿತವಾಗಿರುತ್ತದೆ. ಏಕೆಂದರೆ ಮಾನ್ಯ ಸದಸ್ಯರುಗಳೂ ಕೂಡ ಮೊದಲು ನನ್ನಿಂದ ಇದನ್ನೇ ಅಪೇಕ್ಷೆ ಮಾಡುತ್ತಿದ್ದಾರೆ. ಇದಾದ ಮೇಲೆ ವಂದನಾ ನಿರ್ಣಯದ ಮೇಲೆ ಏನು ಸಾಮಾನ್ಯ ಚರ್ಚೆಯಾಗಿದೆ, ಅದಕ್ಕೆ ಉತ್ತರ ಕೊಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಮ್ಮೆಲ್ಲರಿಗೂ ಗೊತ್ತಿದ್ದ ಹಾಗೆ...

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ರೈತರ ಸಾಲ ಮನ್ನಾ ಮಾಡುವ ಬಗ್ಗೆ ಉತ್ತರ ಕೊಟ್ಟಮೇಲೆ ಅದರ ಮೇಲೆ ಒಂದೆರಡು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದೇಹೋದರೆ, ಮೂರು ಗಂಟೆಗಳ ಕಾಲ ಸಾಲ ಮನ್ನಾ ವಿಷಯದಲ್ಲಿ ಚರ್ಚೆ ಮಾಡಿದರೂ ಪ್ರಯೋಜನವಿಲ್ಲದಂತಾಗುತ್ತದೆ. ತಾವು ಉತ್ತರ ಕೊಟ್ಟಮೇಲೆ ನಮಗೆ ಬರತಕ್ಕ ಅನುಮಾನಗಳ

ಬಗ್ಗೆ ಕ್ಲಾರಿಫಿಕೇಷನ್ ಕೇಳಿದಮೇಲೆ, ತಾವು ವಂದನಾನಿರ್ಣಯದ ಮೇಲೆ ಉತ್ತರ ಕೊಡುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದ್ದರಿಂದ ಈ ಹಿಂದೆ ಸದನದಲ್ಲಿ ಹೇಳಿದಂತೆ, ನಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವೀರೇಂದ್ರಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ಯಡಿಯೂರಪ್ಪನವರು ಏನು ಅಪೇಕ್ಷೆ ಮಾಡುತ್ತಿದ್ದಾರೆ, ಅದರಂತೆ ನಡೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈ ಸಮಸ್ಯೆಗೆ ಸಂಬಂಧಪಟ್ಟಂತೆ ನನ್ನ ಉತ್ತರವನ್ನು ಮುಕ್ತಾಯ ಮಾಡಿದಮೇಲೆ ಕ್ಲಾರಿಫಿಕೇಷನ್ ಕೇಳುವುದು ಬಿಡುವುದು ಅವರಿಗೆ ಬಿಟ್ಟದ್ದು. ಮತ್ತು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿ ಕೊಡುವಂತಹದ್ದು ಸಭಾಧ್ಯಕ್ಷರಿಗೆ ಬಿಟ್ಟದ್ದೇ ಹೊರತಾಗಿ ಇದರಲ್ಲಿ ನನಗೆ ಕೇಳಬೇಕಾದ ಅವಶ್ಯಕತೆ ಇಲ್ಲ. ಈ ಮಾನ್ಯ ಸಭೆಯಲ್ಲಿ ಏನು ಕಾರ್ಯಕಲಾಪಗಳು ನಡೆಯುತ್ತವೋ ಅವೆಲ್ಲವೂ ಸಭಾಧ್ಯಕ್ಷರ ಒಪ್ಪಿಗೆಯಿಂದ ಮಾತ್ರ ನಡೆಯುತ್ತವೆ. ಅವರು ನಿಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅನುಮತಿ ನೀಡಿದಾಗ ಆ ಕ್ಲಾರಿಫಿಕೇಷನ್‌ಗೆ ಉತ್ತರ ನೀಡುವುದಕ್ಕೆ ನಾನು ತಯಾರಿದ್ದೇನೆ. ಈ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕೇ ಇಲ್ಲವೇ, ಇದಕ್ಕೆ ಅವಕಾಶ ಮಾಡಿಕೊಡಬೇಕೇ ಇಲ್ಲವೇ ಎಂಬ ಪ್ರಶ್ನೆಯನ್ನು ಮಾನ್ಯ ಸಭಾಧ್ಯಕ್ಷರು ನಿರ್ಣಯ ಮಾಡಬೇಕೇ ಹೊರತಾಗಿ ಈ ನಿರ್ಣಯ ನನ್ನ ಕಡೆಗೆ ಏನೂ ಇಲ್ಲ. ಮೊದಲು ತಾವು ಅಪೇಕ್ಷೆ ಮಾಡಿದ್ದು, ಮಾನ್ಯ ಸದಸ್ಯರು ಅಪೇಕ್ಷೆ ಮಾಡಿದ್ದು ಎಂದರೆ ಈ ಸಾಮಾನ್ಯ ಚರ್ಚೆಗೆ ಉತ್ತರ ಕೊಡುವ ಮೊದಲು ಇದಕ್ಕೂ ಉತ್ತರ ಕೊಡಬೇಕು ಎಂಬುದು. ನಾನು ಅದಕ್ಕೂ ಇದಕ್ಕೂ ಒಟ್ಟಿಗೆ ಉತ್ತರ ಕೊಡುತ್ತೇನೆಂದು ಹೇಳಿದೆ, ಆದರೆ ಅದಕ್ಕೆ ನೀವು ಒಪ್ಪಲಿಲ್ಲ. ಇದು ರೈತರ ಸಮಸ್ಯೆ ಗಹನವಾದ ಸಮಸ್ಯೆ ಮತ್ತು ಮಹತ್ವವಾದ ಸಮಸ್ಯೆ, ಇಡೀ ರಾಜ್ಯದ ರೈತರು ಈ ಬಗ್ಗೆ ಸರಕಾರದ ನಿಲುವು ಏನಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಬಹಳ ಕಾತರತೆಯಿಂದ ನೋಡುತ್ತಿರುವುದರಿಂದ ಇದಕ್ಕೆ ಪ್ರತ್ಯೇಕವಾಗಿಯೇ ಉತ್ತರ ಕೊಡಬೇಕೆಂದು ಅವರು ಆಗ್ರಹ ಪಡಿಸಿದ್ದಕ್ಕಾಗಿ ನಾನು ಪ್ರತ್ಯೇಕವಾಗಿಯೇ ಉತ್ತರ ಕೊಡುತ್ತಿದ್ದೇನೆ. ಇಲ್ಲದೇ ಹೋಗಿದ್ದರೆ ಈ ಎಲ್ಲ ಪ್ರಶ್ನೆಗಳು ಸಾಮಾನ್ಯ ಚರ್ಚೆಯ ಜೊತೆಯಲ್ಲೇ ಪ್ರಸ್ತಾಪಕ್ಕೆ ಬಂದಿದ್ದರೆ, ಅದರ ಜೊತೆಯಲ್ಲೇ ಇದಕ್ಕೂ ಉತ್ತರ ಕೊಡುತ್ತಿದ್ದೆ. ಆದರೆ ಮಾನ್ಯ ಸದಸ್ಯರಾದ ಯಡಿಯೂರಪ್ಪನವರಿಗೆ ಸಮಾಧಾನ ಮಾಡುವುದಕ್ಕೆ ಪ್ರತ್ಯೇಕವಾಗಿ ಇದಕ್ಕೆ ಉತ್ತರ ಕೊಡುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದರಲ್ಲಿ ನನಗೇನೂ ಇಲ್ಲ, ಇದು ಇಡೀ ರಾಜ್ಯದ ರೈತರಿಗೆ ಸಂಬಂಧಪಟ್ಟದ್ದು. ಅವರ ಸಮಾಧಾನಕ್ಕೆ ಉತ್ತರ ಕೊಡಬೇಕು.

ಶ್ರೀ ವೀರೇಂದ್ರಪಾಟೀಲ್.—ಮಾನ್ಯ ಅಧ್ಯಕ್ಷರೇ, ಎಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ರಾಷ್ಟ್ರ ಕೃಷಿ ಪ್ರಧಾನವಾದ ರಾಷ್ಟ್ರ. ಏತಕ್ಕೆಂದರೆ ನೂರಕ್ಕೆ ಎಂಬತ್ತು ಎಂಬತ್ತೈದರಷ್ಟು ಜನ ಹಳ್ಳಿಗಳಲ್ಲಿ ಇದ್ದಾರೆ, ಅವರಿಗೆ ವ್ಯವಸಾಯವನ್ನು ಬಿಟ್ಟರೆ ಮತ್ತೊಂದು ಉದ್ಯೋಗ ಇಲ್ಲ. ಅದನ್ನೇ ನಂಬಿಕೊಂಡು ಅವರು ಜೀವನ ಮಾಡುತ್ತಿದ್ದಾರೆ. ಅದಕ್ಕಾಗಿ ನಮ್ಮ ಹಿರಿಯರು ನಮ್ಮ ನಾಯಕರುಗಳು ಅನೇಕ ವರ್ಷಗಳಿಂದ ರೈತರು ನಮ್ಮ ದೇಶದ ಬೆನ್ನೆಲುಬು, ನಮ್ಮ ದೇಶದ ಬುನಾದಿ ಹಾಗೂ ನಮ್ಮ ದೇಶದ ರೈತ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಮತ್ತು ರೈತನನ್ನು ನೇಗಿಲಯೋಗಿ, ಕರ್ಮಯೋಗಿ ಅನ್ನದಾತ, ಎಂದು ಹೊಗಳಿದ್ದಾರೆ. ಇವತ್ತೂ ಹೊಗಳುತ್ತಿದ್ದಾರೆ. ಏತಕ್ಕೆಂದರೆ ಈ ದೇಶದ ಎಪ್ಪತ್ತು ಕೋಟಿಗೂ ಮೇಲ್ಪಟ್ಟಿರುವುವಂತಹ ಜನರ ಹೊಟ್ಟೆಯನ್ನು ತುಂಬಿಸುವ ಜವಾಬ್ದಾರಿಯನ್ನು ನಮ್ಮ ರೈತ ಹೊತ್ತಿದ್ದಾನೆ. ಅವನು ಬೆಳೆದರೆ ಹೊಟ್ಟೆ ತುಂಬಬೇಕು ಇಲ್ಲದೇ ಹೋದರೆ ಪರರಾಷ್ಟ್ರಕ್ಕೆ ಹೋಗಿ ಬೇಡಿ ತರಬೇಕಾದಂಥ ಪರಿಸ್ಥಿತಿ ಬರುತ್ತದೆ. ಅದಕ್ಕಾಗಿ ಇವತ್ತು ನಮ್ಮ ರಾಷ್ಟ್ರದಲ್ಲಿ ರೈತನ ಮಹತ್ವ ಕಡಿಮೆ ಇದೆ ಎಂದು ಯಾರೂ ತಿಳಿದುಕೊಂಡಿಲ್ಲ ನಾನಂತೂ ತಿಳಿದುಕೊಂಡಿಲ್ಲ. ನಾನೂ ರೈತ. ರೈತರ ಮಗ, ನಾನೂ ವ್ಯವಸಾಯ ಮಾಡುತ್ತಿದ್ದೇನೆ ಮತ್ತು ವ್ಯವಸಾಯವನ್ನೇ ಹೆಚ್ಚು ನಂಬಿಕೊಂಡಿದ್ದೇನೆ. ರೈತರ ಮನೆಯಲ್ಲಿ ನಾನು ಹುಟ್ಟಿ ಬೆಳೆದವ. ಅದಕ್ಕಾಗಿ ನಾನು ಹೇಳುವುದು ಏನೆಂದರೆ ರೈತ ನನ್ನ ಲೆಕ್ಕಕ್ಕೆ ಕರ್ಮಯೋಗಿ. ನೇಗಿಲಯೋಗಿ ಅನ್ನದಾತ ಆಗಿರಬೇಕೇ ಹೊರತಾಗಿ ನಾವು ಅವನನ್ನು ಭಿಕ್ಷುಕನನ್ನಾಗಿ ಮಾಡಬಾರದು.

ಏತಕ್ಕೆಂದರೆ, ನಮ್ಮಲ್ಲಿ ಒಂದು ಗಾದೆ ಮಾತು ಇದೆ. ಅದು ನಿಮ್ಮ ಭಾಗದಲ್ಲಿ ಏನೋ ಇದೆಯೋ ಗೊತ್ತಿಲ್ಲ. ನಮ್ಮ ಭಾಗದಲ್ಲಿರುವ ಗಾದೆ ಮಾತಿನಂತೆ ''ಮನೆಯ ಲಕ್ಷಣ ಅಂಗಳದಿಂದ ನೋಡು'' ಎಂಬಂತೆ ಅಂಗಳ ಬಹಳ ಚೆನ್ನಾಗಿದ್ದರೆ, ಮನೆಯು ಒಳಗೆ ಚೆನ್ನಾಗಿರುತ್ತದೆ. ಮನೆಯು ಜನರು ಸಂಪದ್ಭರಿತರಾಗಿದ್ದರೆ ಅದು ಸಂಪದ್ಭರಿತ ಕುಟುಂಬವೆಂದು ನಾವು ತಿಳಿದುಕೊಳ್ಳುತ್ತೇವೆ. ಅದು ಅಂಗಳದಿಂದಲೇ ಕಂಡುಬರುತ್ತದೆ. ಅದೇರೀತಿ, ನಮ್ಮ ದೇಶದ ಲಕ್ಷಣ ನಮ್ಮ ದೇಶದ ಭವಿಷ್ಯ ಮತ್ತು ನಮ್ಮ ದೇಶದ

ಸಮೃದ್ಧಿ ನಮ್ಮ ರೈತರಮೇಲಿದೆ. ರೈತರು ಬೆಳೆದರೆ ದೇಶದ ಜನರ ಹೊಟ್ಟೆ ತುಂಬುತ್ತದೆ. ಆತನು ಬೆಳೆದಾದರೆ ಮೇಲೆ ಅನೇಕ ಕೈಗಾರಿಕೆಗಳು, ಕಾರ್ಖಾನೆಗಳು ಕೂಡ ಬೆಳೆಯುತ್ತವೆ. ಉಳಿಯುತ್ತವೆ. ಆದ್ದರಿಂದ ರೈತನ ಜವಾಬ್ದಾರಿ ಮತ್ತು ರೈತನ ಕಾಣಿಕೆ ನಮ್ಮ ದೇಶದಲ್ಲಿ ಬಹಳ ಹಿರಿದಾದುದು. ನಾನು ಒಬ್ಬ ರೈತನ ಮಗನಾಗಿ ಬಹಳ ಅಭಿಮಾನದಿಂದ, ಸಂತೋಷದಿಂದ ಈ ವಿಚಾರವನ್ನು ಹೇಳುತ್ತಿದ್ದೇನೆ. ಇನ್ನು ಒಂದು ಮಾತು ನಮ್ಮ ಭಾಗಕ್ಕೆ ಇದೆ, ಅದನ್ನು ಹೇಳಿದರೆ ಬಹುಶಃ ತಾವು ಯಾರು ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಭಾಗದ ಕೆಲವು ಸದಸ್ಯರು ಆ ಕಡೆಯಲ್ಲೂ ಇದ್ದಾರೆ. ನಮ್ಮ ಭಾಗದಲ್ಲಿ ಒಬ್ಬ ತಂದೆ ಸಾಯುವ ಕಾಲದಲ್ಲಿ ಏನಾದರೂ ಋಣ ತೆಗೆದು ಕೊಂಡಿದ್ದರೆ, ಅದನ್ನು ತನ್ನ ಕಾಲದಲ್ಲೇ ತೀರಿಸಬೇಕು ಹಾಗೂ ಋಣಮುಕ್ತನಾಗಿರಬೇಕು ಎಂಬ ಪ್ರಯತ್ನ ಮಾಡುತ್ತಾನೆ. ಇವೊತ್ತು ಅದು ನಡೆದುಕೊಂಡು ಬಂದಿದೆ. ಒಂದು ವೇಳೆ ಅದು ಸಾಧ್ಯ ವಾಗದೆ ಹೋದರೆ ಸಾಯುವ ಮುನ್ನ ಮಗನನ್ನು ಕರೆದು ''ಮಗನೇ ನಾನು ಋಣ ಮಾಡಿದ್ದೇನೆ, ಸಾಲ ಮಾಡಿದ್ದೇನೆ ಆದರೆ, ಆ ಸಾಲದಿಂದ ನಾನು ಮುಕ್ತನಾಗಲಿಲ್ಲ, ಆ ಋಣದಿಂದ ನಾನು ಮುಕ್ತನಾಗಲಿಲ್ಲ ಆದ್ದರಿಂದ ನಾನು ಹೋದಮೇಲೆ ಕನಿಷ್ಟ ನೀವು ನನ್ನ ಮಕ್ಕಳಾಗಿ ನನ್ನನ್ನು ಋಣಮುಕ್ತನನ್ನಾಗಿ ಮಾ ಬೇಕು ಇಲ್ಲದಿದ್ದರೆ ನನಗೆ ಮೋಕ್ಷ ಇಲ್ಲ'' ಎಂದು ಹೇಳುತ್ತಾನೆ. ಒಬ್ಬ ರೈತನ ಜೀವನ ಅಷ್ಟು ಪವಿತ್ರವಾದ ಜೀವನವಾಗಿದೆ. ಯಾವುದಾದರೂ ಸಾಲ ತೆಗೆದುಕೊಂಡಿದ್ದರೆ ಆ ಸಾಲವನ್ನು ತೀರಿಸದೆಹೋದರೆ ತಾನು ಋಣಮುಕ್ತನಾಗುವುದಿಲ್ಲವೆಂದು ರೈತನು ತಿಳಿದುಕೊಂಡಿದ್ದಾನೆ. ಸಾಲವನ್ನು ತೀರಿಸಿ ಋಣಮುಕ್ತ ನಾಗಬೇಕೆಂಬ ಒಂದು ಉದಾತ್ತವಾದ ವಿಚಾರವನ್ನು ರೈತ ಇಟ್ಟುಕೊಂಡಿದ್ದಾನೆ. ಈ ಮಾತನ್ನು ನಾನು ಅಭಿಮಾನದಿಂದ ಹೇಳುತ್ತಿದ್ದೇನೆ. ರೈತನಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈಗಿರುವ ಸಮಸ್ಯೆಯಿಂದ, ಯಾವುದಾದರೂ ಒಂದು ಕುಂಠನೆಪ ಹೂಡಬೇಕು ಎಂಬ ಉದ್ದೇಶದಿಂದ ಈ ವಿಚಾರ ವನ್ನು ನಾನು ಹೇಳುತ್ತಿಲ್ಲ. ಒಂದು ವಿಚಾರವನ್ನು ಬಹಳ ಕಳಕಳಿಯಿಂದ ತಮ್ಮಲ್ಲಿ ಹೇಳುತ್ತೇನೆ. ರೈತನ ಸಮಸ್ಯೆ ರಾಷ್ಟ್ರದ ಸಮಸ್ಯೆ ಇದು ಯಾವುದೇ ಒಂದು ಪಕ್ಷದ ಸಮಸ್ಯೆ ಅಲ್ಲ ದಯಮಾಡಿ ಎಲ್ಲರೂ ಅದನ್ನು ತಿಳಿದುಕೊಳ್ಳಬೇಕು. ಇದು ರಾಷ್ಟ್ರದ ಸಮಸ್ಯೆ. ಈ ರಾಷ್ಟ್ರದಲ್ಲಿರುವವರೆಲ್ಲರೂ ಸಹ ರೈತರು ನಮ್ಮ ದೇಶದ ಬೆನ್ನೆಲುಬು, ನಮ್ಮ ದೇಶದ ಬುನಾದಿ ರೈತರಮೇಲಿದೆ. ನಮ್ಮ ದೇಶದ ಭವಿಷ್ಯ ನಿರ್ಮಾಣಮಾಡುವವನು ರೈತನು, ಅವನ ಸಮಸ್ಯೆ, ರಾಷ್ಟ್ರದ ಸಮಸ್ಯೆ. ಸಮಾಜದ ಸಮಸ್ಯೆ, ರಾಜ್ಯದ ಸಮಸೆ ಎಂದು ಪರಿಗಣಿಸಬೇಕಾಗಿದೆ. ಆತನ ಸಮಸ್ಯೆಗಳಿಗೆ ರಾಜಕೀಯ ಬಣ್ಣ ಬೆರೆಸಲು ಪ್ರಯತ್ನ ಮಾಡಿದರೆ ಬಹುಶಃ ಆ ರೈತನಿಗೆ ನಾವು ಯಾವುದೇ ರೀತಿಯ ಸರ್ವಿಸ್ ಮಾಡಿದಂತಾಗುವುದಿಲ್ಲ. ಅದು ಡಿಸ್‌ಸರ್ವೀಸ್ ಆಗುತ್ತದೆ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಏತಕ್ಕೆಂದರೆ ನಾನು ನೋಡಿದ್ದೇನೆ. ಇದರಲ್ಲಿ ಸ್ವಲ್ಪ ಮಟ್ಟಿಗೆ ರಾಜಕೀಯ ಬೆರೆತಂತೆ ಕಾಣುತ್ತಿದೆ. ಅವರ ಯೋಗ್ಯವಾದ ಬೇಡಿಕೆಗಳಿಗೆ ಯಾವುದೇ ರಾಜಕೀಯ ಪಕ್ಷಗಳ ಬೆಂಬಲ ಬೇಕಾಗಿಲ್ಲ. ಅವುಗಳನ್ನು ನಿವಾರಿಸುವುದು ಪ್ರತಿಯೊಬ್ಬರ ಕರ್ತವ್ಯ. ಅವರ ಬೇಡಿಕೆಗಳ ಬಗ್ಗೆ, ನಾವೆಲ್ಲರೂ ಬಹಳ ಸಹಾನುಭೂತಿಯಿಂದ ವಿಚಾರ ಮಾಡತಕ್ಕದ್ದು, ಹಾಗೂ ಅದಕ್ಕೆ ಪರಿಹಾರ ಕಂಡುಹಿಡಿಯುತಕ್ಕದ್ದು ನಮ್ಮ ಕರ್ತವ್ಯ. ರೈತರ ಸಮಸ್ಯೆಗಳಿಗೆ ರಾಜಕೀಯ ಬಣ್ಣ ಕಟ್ಟುವುದು ಬೇಡವೆಂದು ಕಳಕಳಿಯಿಂದ ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ಈ ಸಮಸ್ಯೆಯ ಬಗ್ಗೆ ಚರ್ಚೆ ಮಾಡುವಾಗ ಅನೇಕ ಮಾನ್ಯ ಸದಸ್ಯರುಗಳು ಒಂದು ವಿಚಾರವನ್ನು ಪದೇ ಪದೇ ಏನು ಹೇಳಿದರೆಂದರೆ ಆಳುವ ಪಕ್ಷ ಕಾಂಗ್ರೆಸ್ ಪಕ್ಷ, ಅದು ಚುನಾವಣೆಗೆ ಮುನ್ನ ರೈತನಿಗೆ ಭರವಸೆ ನೀಡಿದೆ, ಚುನಾವಣೆ ಪ್ರಣಾಳಿಕೆಯ ಮೂಲಕ ಸಾಲ ಮನ್ನಾ ಮಾಡುತ್ತೇವೆ ಎನ್ನತಕ್ಕ ಭರವಸೆ ನೀಡಿದೆ ಎಂದು, ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಭರವಸೆ ನೀಡಿದ್ದರೆ ಅದರ ಬಗ್ಗೆ ಸರ್ಕಾರದ ನೀತಿಯನ್ನು ಘೋಷಣೆ ಮಾಡ ಬೇಕೆಂದು ಹಾಗೂ ಮೊದಲನೆಯ ದಿವಸವೇ ಘೋಷಣೆ ಮಾಡಬೇಕೆಂದು ಹಠ ಹಿಡಿದವರು ಶ್ರೀಮಾನ್ ಯಡಿಯೂರಪ್ಪನವರು. ಅದಕ್ಕೆ ನಾನು ಹೇಳಿದೆ. ಇದನ್ನು ಗಹನವಾಗಿ ವಿಚಾರ ಮಾಡಬೇಕಾಗುತ್ತದೆ, ತಕ್ಷಣ ಸರ್ಕಾರದ ನೀತಿಯನ್ನು ಹೇಳುವುದಕ್ಕಾಗುವುದಿಲ್ಲ ಕ್ಷಮಿಸಬೇಕು ಎಂದು ಹೇಳಿದ ಮೇಲೆ ಈ ವಿಷಯದ ಮೇಲೆ ಚರ್ಚೆ ನಡೆಯಿತು. ಆ ಮಾತು ಬೇರೆ. ಇಲ್ಲಿರುವ ಪ್ರಶ್ನೆ ಇಷ್ಟೇ, ಈ ಒಂದು ವಿಚಾರವನ್ನು ನಾನು ಪಕ್ಷದ ನಾಯಕನಾಗಿ ಮುಖ್ಯಮಂತ್ರಿಯಾಗಿ ಎಷ್ಟೇ ಕಷ್ಟ ಬಂದರೂ. ನಾನು ಕೊಟ್ಟ ವಚನಕ್ಕೆ ವಚನಭ್ರಷ್ಟನಾಗುವುದಕ್ಕೆ ತಯಾರು ಇಲ್ಲ. ಈ ಮಾತನ್ನು ಸ್ಪಷ್ಟವಾಗಿ ತಮ್ಮ ಮುಂದೆ ಹೇಳುತ್ತೇನೆ. ಈಗ ನಾವು ಒಂದು ವಿಚಾರವನ್ನು ಮಾಡಬೇಕು. ಏನೆಂದರೆ ಚುನಾವಣೆ ಸಮಯದಲ್ಲಿ ಜನತೆಗೆ ಅದರಲ್ಲೂ ವಿಶೇಷವಾಗಿ ರೈತರಿಗೆ ನಾವು ಕೊಟ್ಟಂತಹ ಆಶ್ವಾಸನೆ ಏನು ? ಚುನಾವಣಾ ಪ್ರಣಾಳಿಕೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳವರು ಚುನಾವಣೆ ಸಮಯದಲ್ಲಿ ಆಶ್ವಾಸನೆ ಕೊಡುತ್ತಾರೆ. ಅದೇ ರೀತಿಯಲ್ಲಿ ನಾವೂ ನಮ್ಮ ಪಕ್ಷದ ವತಿಯಿಂದ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಆಶ್ವಾಸನೆ ಕೊಟ್ಟಿದ್ದೇವೆ, ಅದನ್ನು ನಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು ಮತ್ತು ಈ

ಚುನಾವಣೆ ಪ್ರಣಾಳಿಕೆ ಎಂಬುದು ರಾಜಕೀಯ ಪಕ್ಷಗಳಿಗೆ ಅದೇ ಒಂದು ಗೀತಾ, ಅದೇ ಒಂದು ಬೈಬಲ್, ಅದೇ ಒಂದು ಕುರಾನ್ ಇದ್ದಂತೆ. ಅದನ್ನು ಎಲ್ಲಾ ಪಕ್ಷಗಳವರು ಒಪ್ಪಿಕೊಳ್ಳಬೇಕು. ಅದು ನಮ್ಮ ಧರ್ಮ ಅದು ನಮ್ಮ ಕರ್ತವ್ಯ. ಮಾನ್ಯ ಸದಸ್ಯರೊಬ್ಬರು ಏನು ಹೇಳಿದರೆಂದರೆ, ಮಾನ್ಯ ಪಾಟೀಲರು ಚುನಾವಣೆ ಪ್ರಣಾಳಿಕೆಯಲ್ಲಿ ರೈತರ ಸಾಲ ಮನ್ನಾ ಮಾಡುವಂತಹ ಭರವಸೆಯನ್ನು ಸ್ಪಷ್ಟವಾಗಿ ಕೊಟ್ಟಿದ್ದಾರೆ. ಆದ್ದರಿಂದ ಇವತ್ತು ಅವರು ಹೇಳಿದಂತಹ ಆಶ್ವಾಸನೆಯನ್ನು ಕಾರ್ಯರೂಪಕ್ಕೆ ತರಲು ಒತ್ತಾಯ ಮಾಡುತ್ತಿದ್ದೇವೆ ಎಂದು. ನಾನೇನು ಭರವಸೆ ಕೊಟ್ಟಿದ್ದೇನೆ ಎನ್ನುವುದನ್ನು ಸದನದ ಮುಂದೆ ಇಡಬೇಕಾದ್ದು ನನ್ನ ಕರ್ತವ್ಯ. ಚುನಾವಣೆ ಪ್ರಣಾಳಿಕೆ ಸಿಕ್ರೇಟ್ ಡಾಕ್ಯುಮೆಂಟ್ ಏನೂ ಅಲ್ಲ. ಇದು ಎಲ್ಲಾ ರಾಜಕೀಯ ಪಕ್ಷಗಳ ಕೈಗೆ ಸಿಗಬಹುದಾದಂತಹ ಡಾಕ್ಯುಮೆಂಟ್. ಇದನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರು ಮತ್ತು ಬಾಬಗೌಡರು ಹಾಗೂ ಇನ್ನಿತರೇ ಮಾನ್ಯ ಸದಸ್ಯರು ಒಪ್ಪಬಹುದು. ಚುನಾವಣೆ ಪ್ರಣಾಳಿಕೆಯಲ್ಲಿ ನಾನು ಹೇಳುವಂಥಾದ್ದು ಪೇಜ್ ೯ರಲ್ಲಿ ಇದೆ. ಅದರ ಅಪರೇಷನ್ ಪೋರ್ಷನ್ ಅನ್ನು ಮಾತ್ರ ನಾನು ಇಲ್ಲಿ ಓದುತ್ತೇನೆ. ಬಡ್ಡಿ, ಚಕ್ರಬಡ್ಡಿ ಮತ್ತು ಕಗ್ಗಂಟು ಇರುವ ೧೦ ಸಾವಿರ ರೂಪಾಯಿಗಳ ಕೃಷಿ ಸಾಲವನ್ನು ಮನ್ನಾ ಮಾಡುವಂತೆ ಪ್ರಧಾನ ಮಂತ್ರಿಗಳನ್ನು ಕರ್ನಾಟಕ ರಾಜ್ಯ ಪ್ರದೇಶ ಕಾಂಗ್ರೆಸ್ ಸಮಿತಿ ಒತ್ತಾಯಿಸುತ್ತದೆ ಎಂದು ಹೇಳಿದ್ದೇವೆ. ಇದನ್ನು ನಾನು ಪುನಃ ಇನ್ನೊಂದು ಸಲ ಓದಲೇನು ?

ಶ್ರೀ ಬಿ.ಎಸ್. ಯಡಿಯೂರಪ್ಪ.—ಹೇಳಿ ಸ್ವಾಮಿ, ಈ ಮಾತು ರೈತರು ಕೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ನಾನು ಈ ಭರವಸೆಯನ್ನು ಕೊಟ್ಟಿದ್ದೇನೆ. ಅದರಂತೆ ನಡೆದುಕೊಳ್ಳುತ್ತೇನೆ. ನಾನು ಹೇಳಿದ್ದೇನೆ. ಪ್ರಧಾನ ಮಂತ್ರಿಗಳನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಒತ್ತಾಯಿಸುತ್ತದೆ ಎಂದು. ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಪ್ರಧಾನ ಮಂತ್ರಿಗಳು ಅಂದರೆ ಯಾರು ? ಸೆಂಟ್ರಲ್ ಗೌರ್ನಮೆಂಟ್. ಅಲ್ಲ ಒಂದು ವೇಳೆ ರಾಜೀವ್‌ಗಾಂಧಿ ಯಾರು ಅಂತ ನೀವು ತಿಳಿದುಕೊಂಡರೆ ಸಂತೋಷ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಕಾಗೋಡು ತಿಮ್ಮಪ್ಪನವರು ನಿನ್ನೆ ಇದನ್ನೆಲ್ಲಾ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ.—ಇದೇ ಉತ್ತರ ಬರುತ್ತದೆಂದು ನಾವು ನಿರೀಕ್ಷೆ ಮಾಡಿದ್ದೆವು.

ಶ್ರೀ ವೀರೇಂದ್ರ ಪಾಟೀಲ್.—ನಿಮಗೆ ಒಂದು ಪಕ್ಷದ ನಾಯಕನ, ಮುಖ್ಯಮಂತ್ರಿಯ ಉತ್ತರ ಬೇಕೋ ಅಥವಾ ಸದಸ್ಯರು ಹೇಳಿದುದು ಬೇಕೋ ? ನಾನು ಭರವಸೆಯನ್ನು ಕೊಟ್ಟಿದ್ದೇನೆ. ನಮ್ಮ ಪಕ್ಷದ ಅಭಿಪ್ರಾಯವನ್ನು ತಮ್ಮ ಮುಂದೆ ಹೇಳಿದ್ದೇನೆ. ಇದನ್ನು ತಾವು ಗಮನದಲ್ಲಿಡಬೇಕು. ನಾನು ನಿಮ್ಮ ಪಕ್ಷದ ಚುನಾವಣೆ ಪ್ರಣಾಳಿಕೆಯನ್ನು ಸಹ ತಂದಿದ್ದೇನೆ. ಆಮೇಲೆ ಅದನ್ನು ಹೇಳುತ್ತೇನೆ. ನಾವು ಸ್ಪಷ್ಟವಾಗಿ ಹೇಳಿದ್ದೇವೆ ಕೇಂದ್ರ ಸರ್ಕಾರವನ್ನು ಈ ಸಾಲ ಮನ್ನಾ ಮಾಡುವಂತೆ ಒತ್ತಾಯಿಸಿಸುತ್ತೇವೆಂದು ಇದರಲ್ಲಿ ನಾವು ಹೇಳಿದ್ದೇವೆಯೇ ಹೊರತು ನಾವು ಅಧಿಕಾರಕ್ಕೆ ಬಂದರೆ ರೈತರುಗಳ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಆ ತರಹ ಮಾಡುವ ಕರ್ತವ್ಯ ನಿಮ್ಮದಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇವೆದು ಹೇಳಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ —ಅದನ್ನು ಮಾಡುವ ಅವಶ್ಯಕತೆ ಇಲ್ಲ. ಅದರ ಬಗ್ಗೆ ಕೇಂದ್ರ ಸರ್ಕಾರವೇ ನಿರ್ಣಯ ತೆಗೆದುಕೊಂಡಿದೆ. ಇದರಿಂದ ನಿಮಗೆ ಹಗುರವಾಗಿದೆ.

ಶ್ರೀ ವೀರೇಂದ್ರಪಾಟೀಲ್.—ಅದರ ಅವಶ್ಯಕತೆ ಇರಲಿಲ್ಲವೆಂದ ಮೇಲೆ, ಈ ಚರ್ಚೆಯ ಅವಶ್ಯಕತೆಯೂ ಇರಲಿಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ.—ನಿಮ್ಮ ನಿಲುವು ಇದರಲ್ಲಿ ಏನು ಎಂಬುದು ನಮಗೆ ಗೊತ್ತಾಗಬೇಕಾಗಿತ್ತು.

ಶ್ರೀ ವೀರೇಂದ್ರಪಾಟೀಲ್.—ಚುನಾವಣೆಯಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಅದರಲ್ಲಿ ಯಾವುದೇ ರೀತಿ ಬದಲಾಗದಂತೆ ನಾವು ನಡೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.— ಬಹಳ ಗಂಭೀರವಾಗಿ, ಸುತ್ತು ಬಳಸಿ ಮತ್ತೆ ಅಲ್ಲೇ ಹೋಗುತ್ತಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್.—ನಾನು ಒಂದು ವಿಚಾರವನ್ನು ತಮ್ಮ ಮುಂದೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದು ಏನೆಂದರೆ. ೧೦ ಸಾವಿರ ರೂಪಾಯಿಯೊಳಗಿರುವಂಥ ಸಾಲದ ಪ್ರಮಾಣ ಕರ್ನಾಟಕದಲ್ಲಿ ಎಷ್ಟಿದೆ ಎಂಬುದನ್ನು ನಾನು ಸ್ವಲ್ಪ ಮಟ್ಟಿಗೆ ಅಧ್ಯಯನ ಮಾಡಿದ್ದೇನೆ. ಈ ವಿಷಯವನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಸಿದ್ಧ ಮಾಡಿ ಜನರ ಮುಂದೆ ಇಡುವುದಕ್ಕಿಂತ ಮೊದಲು ನಮಗೆ ಕರ್ನಾಟಕ ಸರ್ಕಾರದ ಆರ್ಥಿಕ ಪರಿಸ್ಥಿತಿಯ ಸಂಪೂರ್ಣ ಅರಿವು ಇತ್ತು. ಆದಕ್ಕೇ ಈ ಹೊರೆಯನ್ನು ನಾವು ತೆಗೆದುಕೊಳ್ಳುವುದಕ್ಕೆ ಬದಲು ಚುನಾವಣಾ ಪ್ರಣಾಳಿಕೆಯಲ್ಲಿ ಕೇಂದ್ರಕ್ಕೆ ಒತ್ತಾಯಿಸುತ್ತೇವೆಂದು ಹೇಳಿದ್ದೇವೆ, ಒಂದು ಪ್ರಶ್ನೆ. ಇದು ಎಷ್ಟಾಗಬಹುದು ? ಇವತ್ತು ೧೦ ಸಾವಿರ ರೂಪಾಯಿಯೊಳಗೆ ಇರುವ ಸಾಲವನ್ನು ಮನ್ನಾ ಮಾಡಬೇಕಾದರೆ, ಎಷ್ಟು ರೈಟ್ ಆಫ್ ಮಾಡಬೇಕಾಗುತ್ತದೆ ? ನಿಮಗೆ ಗೊತ್ತು ಸಾಲ ಎಂದರೆ, ಮೂರು ತರಹ ಇದೆ. ಲಾಂಗ್ ಟರ್ಮ್, ಮೀಡಿಯಮ್ ಟರ್ಮ್, ಶಾರ್ಟ್ ಟರ್ಮ್ ಎಂದು. ಈ ಮೂರು ಕ್ಯಾಟಗರಿಗಳಲ್ಲಿ ರೈತರು ೧೦ ಸಾವಿರ ರೂಪಾಯಿಯೊಳಗೆ ಎಷ್ಟು ಸಾಲ ತೆಗೆದುಕೊಂಡಿದ್ದಾರೆ ? ಇದನ್ನು ಮನ್ನಾ ಮಾಡಬೇಕಾದರೆ ೩೬೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ನಾನು ನಿನ್ನೆ ಎಲ್ಲಾ ಲೆಕ್ಕವನ್ನು ತೆಗೆಸಿದೆ, ಅದರಂತೆ ೩೬೦ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದವರೂ ಸಹ ಎಲ್ಲಾ ಗಣಿತದಲ್ಲೂ ವರ್ಕ್ ಔಟ್ ಮಾಡುತ್ತಿದ್ದಾರೆ. ೧೦ ಸಾವಿರ ಕೋಟಿ ರೂಪಾಯಿಗಳಿಂದ ೧೫ ಸಾವಿರ ಕೋಟಿ ರೂಪಾಯಿಗಳವರೆಗೆ ಅವರು ಸಾಲ ಮನ್ನಾ ಮಾಡಬೇಕಾಗುತ್ತದೆ. ಅವರಿಗೂ ಇನ್ನೂ ಅಂತ್ಯವಾಗಿ ಎಷ್ಟು ಆಗುತ್ತದೆಂಬ ಫಿಗರ್‌ಗೆ ಬಂದಿಲ್ಲ. ಇವತ್ತು ನಾವು ೩೬೦ ಕೋಟಿ ರೂಪಾಯಿ ಸಾಲವನ್ನು ಮನ್ನಾ ಮಾಡಬೇಕಾಗುತ್ತದೆ. ಸುದೈವದಿಂದ ಇವತ್ತು ನಿಮ್ಮ ಪಕ್ಷವಾದ ನ್ಯಾಷನಲ್ ಫ್ರಂಟ್ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ. ಅವರು ಎಲೆಕ್ಷನ್ ಮ್ಯಾನಿಫೆಸ್ಟೋ ಮೂಲಕ ಜನ ಸಾಮಾನ್ಯರಿಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೋ ಅದು ಪವಿತ್ರವಾದ ಆಶ್ವಾಸನೆ. ಮುಂದಿನ ೫ ವರ್ಷಗಳವರೆಗೂ ಈ ಮ್ಯಾನಿಫೆಸ್ಟೋ ಅವರಿಗೆ ಬೈಬಲ್, ಕುರಾನ್, ಗೀತಾ ಆಗಬೇಕು. ನ್ಯಾಷನಲ್ ಫ್ರಂಟ್ ಎಲೆಕ್ಷನ್ ಮ್ಯಾನಿಫೆಸ್ಟೋದಲ್ಲಿ ಏನು ಹೇಳಿದೆ ಎಂದರೆ,

2–30 P. M.

On page 18 of the Janata Dal Election Manifesto, it is said,
"Loans upto Rs. 10000 of small farmers, marginal farmers, and landless cultivators and artisans as on October 2nd. 1989 will be written off."

ಅವರು ಈ ಬಗ್ಗೆ ವಿಚಾರ ಮಾಡುತ್ತೇವೆ ಎಂದು ಹೇಳಲಿಲ್ಲ. ಒಂದು ದೃಷ್ಟಿಯಲ್ಲಿ ನ್ಯಾಷನಲ್ ಫ್ರಂಟ ಸರಕಾರವು ಅಧಿಕಾರಕ್ಕೆ ಬಂದ ಮೇಲೆ ಬಹುಶಃ ಒಂದು ಹೆಜ್ಜೆ ಮುಂದಕ್ಕೆ ಹೋಗಿ ನಾನು ಹೇಳಬೇಕೆಂದರೆ, Those arrear those loans within Rs. 10000 will get automatically written off ಆಗಬೇಕೇ ಹೊರತಾಗಿ ಪ್ರತ್ಯೇಕವಾದಂಥ ಎಕ್ಸರ್‌ಸೈಜ್ ಇದಕ್ಕೆ ಬೇಕಾಗಿಲ್ಲ. ಈ ಒಂದು ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆಗಳ ಮುಖಾಂತರ NABARD will provide loans to farmers at concessional rates through Co-operative Banks ಎಂದಿದ್ದಾರೆ. ಆ ಬಗ್ಗೆ ನಾನು ಮುಂದೆ ಹೇಳುತ್ತೇನೆ. ಆದರೆ ನ್ಯಾಶನಲ್ ಫ್ರಂಟ್ ಸ್ಪಷ್ಟವಾಗಿ ಹೇಳಿದೆ ನಾವು ಅಧಿಕಾರಕ್ಕೆ ಬಂದರೆ ೧೦ ಸಾವಿರ ಮತ್ತು ೧೦ ಸಾವಿರ ರೂಪಾಯಿಗಳ ಒಳಗೆ ಇರತಕ್ಕಂಥ ಎಲ್ಲಾ ಸಾಲವನ್ನು ಅಂದರೆ ಅದು ಕೇವಲ ರೈತರ ಸಾಲವಲ್ಲ, ಅದನ್ನು ಲ್ಯಾಂಡ್‌ಲೆಸ್‌ನವರಿಗೂ, ಆರ್ಟಿಸಾನ್ಸ್‌ರವರಿಗೂ ಕೊಟ್ಟ ಸಾಲ ಎಂದು ಹೇಳಿದ್ದಾರೆ ಹಾಗೂ ಆ ಸಾಲಗಳನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಈ ಫರ್ಮ್ ಕಮಿಟ್‌ಮೆಂಟ್‌ಗೆ ಕೇಂದ್ರ ಸರಕಾರ ಬದ್ಧ. ಈ ರೀತಿಯಾದ ಕಮಿಟ್‌ಮೆಂಟ್‌ಗೆ ಕೇಂದ್ರ ಸರಕಾರದವರು ನಡೆದುಕೊಳ್ಳಲಾರದೆ ಹೋದರೆ, ಅವರು ವಚನ ಭ್ರಷ್ಟರಾಗುತ್ತಾರೆ ಎಂಬ ಮಾತನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಮಾನ್ಯ ಯಡಿಯೂರಪ್ಪನವರಿಗೂ ಇದರ ಬಗ್ಗೆ ಸಾಕಷ್ಟು ಅರಿವು ಆಗಿದೆ ಎಂದು ನಾನು ತಿಳಿಯುತ್ತೇನೆ. ಇನ್ನು ನಾನು ಮಾನ್ಯ ರಾಷ್ಟ್ರಪತಿಯವರ ಭಾಷಣವನ್ನು ಓದಿ ಹೇಳುತ್ತೇನೆ. ಚುನಾವಣಾ ಪ್ರಣಾಳಿಕೆಯು ಏನು ಹೇಳುತ್ತದೆ ಮತ್ತು ರಾಷ್ಟ್ರಪತಿಯವರ ಭಾಷಣವು ಏನು ಹೇಳುತ್ತದೆ ಅಂದರ

"The Government will take appreperiate steps to provide debt relief for marginal farmers, landless agricultural labourers, artisans and weavers on loans below Rs. 10,000/-

ಎಂದು ಇದನ್ನು ನೋಡಿದಾಗ ಇವರ ಚುನಾವಣಾ ಪ್ರಣಾಳಿಕೆಯನ್ನು ನೋಡಿಕೊಂಡು ಪ್ರೆಸಿಡೆನ್-ಶಿಯಲ್ ಎಡ್ರೆಸ್ ತಯಾರು ಮಾಡಿದ್ದಾರೋ ಏನೋ ಎಂಬ ಸಂಶಯ ನನಗೆ ಬರುತ್ತದೆ. ಅದಕ್ಕಾಗಿ ನಾನು ಅವರ ಇಂಟೆನ್‌ಶನ್ ಮೇಲೆ, ಅವರ ನಿಯತ್ತಿನ ಮೇಲೆ, ಅವರ ಕರ್ತವ್ಯದ ಮೇಲೆ ಸಂಶಯ ಪಡುವುದಕ್ಕೆ ಹೋಗುವುದಿಲ್ಲ. ಆದರೆ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದಾರೆ ಅಂದರೆ, 'ವಿಲ್‌ಬಿ ರಿಟನ್ ಆಫ್' ಎಂದು ಅಂದರೆ ರಿಲೀಫ್ ಕೊಡುತ್ತೇವೆ ಎಂದು ಹೇಳಿದ್ದಾರೆ. ರಿಲೀಫ್ ಅಂದರೆ ೧೦೦–೫೦೦ ಹೀಗೆ ಕೂಡ ಆಗಬಹುದು. The debt relief is something from writing off the debt. ಇದನ್ನು ನಾವು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಮುಖ್ಯಮಂತ್ರಿಯವರು ವಕೀಲರಾಗಿ ಬಹಳ ಚೆನ್ನಾಗಿ ವಾದ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ ಅದು ಸರಿಯಲ್ಲ. ಇದೊಂದು ಕ್ಲಿಯರ್‌ಕಟ್ ಕಮಿಟ್‌ಮೆಂಟ್ ಇದೆ. ಆದ್ದರಿಂದ ಆ ಕಮಿಟ್‌ಮೆಂಟ್‌ನ್ನು ಅವರು ಕೀಪ್‌ಅಪ್ ಮಾಡುತ್ತಾರೆ. ಆದರೆ ಅಲ್ಲಿಯೂ ಕೂಡ ಹಣಕಾಸಿನ ಪರಿಸ್ಥಿತಿಯು ಕೆಟ್ಟದ್ದಾಗಿಯೇ ಇದೆ. ಸಾಲಗಾರರು ಸಣ್ಣ ರೈತರಾಗಿರಲಿ, ವೀವರ್ಸ್ ಆಗಿರಲಿ, ಆರ್ಟಿಜಾನ್ಸ್ ಆಗಿರಲಿ, ಯಾರೇ ಇದ್ದರೂ ಸಹ ಅವರನ್ನು ಸಾಲದಿಂದ ಮುಕ್ತರನ್ನಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ರಾಜ್ಯದ ಪರಿಸ್ಥಿತಿಯ ಕುರಿತು ತಾವೂ ಕೂಡ ಹೇಳುತ್ತಾ ಇದ್ದೀರಿ, ನಾವು ಅಧಿಕಾರಕ್ಕೆ ಬಂದು ೧೫ ದಿನಗಳಾದವು ನಮ್ಮಿಂದ ಏನೇನು ಅಪೇಕ್ಷೆ ಮಾಡುತ್ತೀರಿ ಎಂದು ತಾವು ಹೇಳುತ್ತಿದ್ದೀರಿ ಅವರು ಕ್ಲೀಯರ್‌ಕಟ್ ಕಮಿಟ್‌ಮೆಂಟ್ ಮಾಡಿದ್ದರೂ ಕೂಡ ಆ ಬಗ್ಗೆ ವರ್ಕ್‌ಔಟ್ ಮಾಡಬೇಕಾಗುತ್ತದೆ. ಅದಕ್ಕೆ ಸಮಯಾವಕಾಶವೂ ಅಗತ್ಯವಾಗಿರುತ್ತದೆ.

ಶ್ರೀ ವೀರೇಂದ್ರಪಾಟೀಲ್ — ಮಾನ್ಯ ದೇಶಪಾಂಡೆಯವರು ಹೇಳಿದ ಮಾತನ್ನೆ ನಾನು ಹೇಳುತ್ತಾ ಇದ್ದೇನೆ. ನನಗೆ ಅವರು ಹೇಳಿದ ಮಾತುಗಳನ್ನು ಮಾನ್ಯ ಯಡಿಯೂರಪ್ಪನವರಿಗೆ ಹೇಳಬೇಕಾಗಿತ್ತು. ಅವೊತ್ತು ಯಡಿಯೂರಪ್ಪನವರು ಧರಣಿ ಕುಳಿತರು, ಮುಖ್ಯಮಂತ್ರಿಯವರು ಇವೊತ್ತೇ ಉತ್ತರ ಕೊಡಬೇಕೆಂದು ಪಟ್ಟು ಹಿಡಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಇದು ಸರಿಯಲ್ಲ ಎಂದು ಹೇಳಿದರೂ ಕೂಡ ಅವರು ಕೇಳಲಿಲ್ಲ. ನಾನು ಅವರಿಗೆ ಕೊಟ್ಟ ವಾಗ್ದಾನಕ್ಕೆ ತಿರುಗಿ ಹೋಗಿದ್ದೇನೆ ಎಂದು ಹೇಳಲಿಲ್ಲ ವಚನ ಭ್ರಷ್ಟನಾಗಿದ್ದೇನೆ ಎಂದು ಹೇಳಲಿಲ್ಲ, ನಾನು ಹೇಳಿದ್ದು ಏನೆಂದರೆ, ನಾನು ಏನು ಆಶ್ವಾಸನೆ ಕೊಟ್ಟಿದ್ದೇವೆ, ಆ ಬಗ್ಗೆ ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡುತ್ತೇನೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಸರಕಾರದವರು ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದ್ದು. ಅದಕ್ಕೆ ಅವರು ಬದ್ಧವಾಗಿದ್ದಾರೆ ಎಂಬ ಭರವಸೆಯು ನನಗೆ ಇದೆ ಎಂದು ಹೇಳಿದ್ದೇನೆ. ಅದರ ಹೊರತಾಗಿ ನನಗೆ ಕೇಂದ್ರ ಸರಕಾರದ ಮೇಲೆ ಭರವಸೆಯಿಲ್ಲ ಎಂದು ತಿಳಿದು ಕೊಳ್ಳಬೇಡಿ ಏನೋ ಇಲ್ಲಿ ಒಂದು ಅವಕಾಶ ಸಿಕ್ಕಿದ್ದನ್ನು ಉಪಯೋಗಿಸಿಕೊಂಡು ಕೇಂದ್ರದ ಮೇಲೆ ಗೂಬೆ ಕೂರಿಸುವ ಪ್ರಯತ್ನವನ್ನು ನಾನು ಮಾಡುತ್ತಿಲ್ಲ. ಅವರಿಗೂ ಕೂಡ ಎಷ್ಟೊ ಕಷ್ಟಗಳು ಇವೆ. ಇವೊತ್ತಿನ ಇಕಾನಮಿಕ್ಸ್ ಟೈಮ್ಸ್‌ನ್ನು ಓದಿ ನೋಡಿದರೆ ತಮಗೇ ತಿಳಿಯುತ್ತದೆ. ರಿಸರ್ವ್ ಬ್ಯಾಂಕ್‌ನವರು, ನಬಾರ್ಡ್‌ನವರು ಇದನ್ನು ನಾವು ಒಪ್ಪುವುದಿಲ್ಲ ಎಂದು ಬರೆದುಬಿಟ್ಟಿದ್ದಾರೆ. ನಾನು ಅದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಆದರೂ ಕೂಡ ನನಗೆ ಇವೊತ್ತು ಕೇಂದ್ರ ಸರಕಾರದ ಮೇಲೆ ಮತ್ತು ಅದರ ನಾಯಕತ್ವದ ಮೇಲೆ ಪೂರ್ಣ ವಿಶ್ವಾಸ ಇದೆ. ಅವರು ಕೊಟ್ಟ ವಚನವನ್ನು ಪರಿಪಾಲನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಅದೇ ರೀತಿ My Government will take appropriate steps. ನೀವು ಹೇಳಿದ ಹಾಗೆ ನಾನು ಈ ವಿಚಾರದಲ್ಲಿ ಹಠ ಮಾಡುವುದಿಲ್ಲ. ಪ್ರಧಾನ ಮಂತ್ರಿಗಳಾದ ಶ್ರೀ ವಿ. ಪಿ. ಸಿಂಗ್‌ರವರಲ್ಲಿ ಇವೊತ್ತೇ ಈ ವಿಚಾರದಲ್ಲಿ ಹೇಳಿಬಿಡಿ ಎಂದು ಹಠವನ್ನು ನಾನು ಮಾಡುವುದಕ್ಕೆ ಖಂಡಿತಾ ಹೋಗುವುದಿಲ್ಲ. ನಮ್ಮ ಪಕ್ಷವು ಕೂಡ ಅಲ್ಲಿ ಹಠ ಮಾಡುವುದಿಲ್ಲ. ನಮಗೆ ಇಂತಹ ಪರಿಸ್ಥಿತಿಯ ಅರಿವು ಇದೆ ಅಲ್ಲಿ ನಮ್ಮದೇ ದೊಡ್ಡ ಪಕ್ಷವಾಗಿದೆ ಎಂದು ತಮಗೂ ಗೊತ್ತಿದೆ. In Parliament the single biggest Opposition Party is the Congress Party. ಆದರೂ ನಾವು ಹಠ ಮಾಡಿಲ್ಲ. ಏಕೆಂದರೆ ಇಂಥ ಪ್ರಶ್ನೆಗಳನ್ನು ನಾವು ಬಟನ್ ಒತ್ತಿ ಕಂಪ್ಯೂಟರ್‌ನ ಮೇಲೆ ಆರ್ಡರ್ ತೆಗೆಯುವ ಹಾಗೆ ಇಲ್ಲ. ಇವೊತ್ತು ಅವರು ಏನು ಹೇಳಿದ್ದಾರೆ ಅಂದರೆ

"The Government will take appropriate steps to provide debt relief for marginal farmers."

ಎಂದು ಈ ಬಗ್ಗೆ ಅಪ್ರೋಪ್ರಿಯೇಟ್ ಸ್ಟೆಪ್ಸ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ನಾನು ಮುಖ್ಯಮಂತ್ರಿಯಾಗಿ ಸ್ಪಷ್ಟವಾಗಿ ಹೇಳುತ್ತೇನೆ. ಇವೊತ್ತು ನಾವು ಏನು ಚುನಾವಣಾ ಪ್ರಣಾಳಿಕೆಯನ್ನು ತಯಾರು ಮಾಡಿದ್ದೇವೆ ಅದರಲ್ಲಿ ಪ್ರತಿಯೊಂದು ಶಬ್ದವನ್ನು ಕೂಡ ತೂಕ ಮಾಡಿ ತಯಾರು ಮಾಡಿದ್ದೇವೆ. ಅದನ್ನು ಬಿಟ್ಟು ನಿರ್ಲಕ್ಷವಾಗಿ ಇದನ್ನು ಕಾಣುವ ಪ್ರಮೇಯ ನನಗೆ ಬಂದಿಲ್ಲ. ಇಂದು ಸ್ಪಷ್ಟವಾಗಿ ನಾನು ತಮ್ಮ ಮುಂದೆ ಹೇಳುತ್ತಾ ಇದ್ದೇನೆ, ಇವೊತ್ತು ಕರ್ನಾಟಕ ರಾಜ್ಯದ ನಾಲ್ಕು ಕೋಟಿ ಜನರ ಪ್ರತಿನಿಧಿಯಾಗಿ ಕರ್ನಾಟಕ ರಾಜ್ಯದ ರೈತರ ಪ್ರತಿನಿಧಿಯಾಗಿ, ಈ ಪ್ರಣಾಳಿಕೆಯ ಬಗ್ಗೆ ಹೇಳುತ್ತಿದ್ದೇನೆ. ಅಲ್ಲಿ ಕುಳಿತಿರುವ ನೀವುಗಳು ಮಾತ್ರ ರೈತರಪ್ರತಿನಿಧಿಗಳು ಅಲ್ಲ. ನಾವು ಶೇಕಡಾ ೯೦ರಷ್ಟು ಮಂದಿ ರೈತರ ಪ್ರತಿನಿಧಿಗಳಾಗಿದ್ದೇವೆ. ಕೇಂದ್ರ ಸರಕಾರದವರು ಏನು ಸ್ಟೆಪ್ಸ್ ತೆಗೆದುಕೊಳ್ಳುತ್ತಾರೆ. ಯಾವಾಗ ತೆಗೆದುಕೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕು. ಅದಕ್ಕೆ ತನ್ನದೇ ಆದ ಏರಿಯಾ ಇರುವುದಿಲ್ಲ, ಮತ್ತು ಸ್ಟೇಟ್ ಇರುವುದಿಲ್ಲ. ಯೂನಿಯನ್ ಟೆರಿಟೆರಿ, ಲಕ್ಷ ದ್ವೀಪ ಮುಂತಾಗಿ ಇಂಥಹವುಗಳು ಇರುತ್ತವೆ. ಇವುಗಳ ಹೊರತಾಗಿ ಈ ಎಲ್ಲಾ ಸಾಲಗಳು ಇರುವುದು ರಾಜ್ಯಗಳಲ್ಲಿ. ಈ ಸಾಲವನ್ನು ರೈತರಿಗೆ ನಬಾರ್ಡ್ ಮುಖಾಂತರ ನಮ್ಮ ಫೈನಾನ್‌ಶಿಯಲ್ ಇನ್ಸಿಟ್ಯೂಶನ್ಸ್ ಮೂಲಕ ಕೊಟ್ಟಿದ್ದಾರೆ. ದೇಶಪಾಂಡೆಯವರಿಗೆ ಇದರ ಬಗ್ಗೆ ಅರಿವು ಇದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ತಮಗೆ ಗೊತ್ತಿರುವ ಹಾಗೆ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವಂಥ ಅನೇಕ ರಾಜ್ಯಗಳಲ್ಲಿ ಈಗಾಗಲೇ ಬಹಳ ಸ್ಪಷ್ಟವಾಗಿ ಪತ್ರಿಕೆಗಳಲ್ಲಿ ಬಂದಿರುವ ಪ್ರಕಾರ ಸಾಲ ಮನ್ನಾದ ಬಗ್ಗೆ ಹೇಳಿದ್ದಾರೆ. ಅದು ಈ ರೀತಿ [illegible] ಇವೆ, ಹಿಮಾಚಲ ಪ್ರದೇಶ ೧೨,೦೦೦ದವರೆಗೆ, ಬಿಹಾರ್–೧೫,೦೦೦ದವರೆಗೆ. ಒರಿಸ್ಸಾ–೧೨,೦೦೦ದವರೆಗೆ. ಮಧ್ಯಪ್ರದೇಶ–೧೨,೦೦೦ದವರೆಗೆ ಸಾಲದ ಮನ್ನಾ ಮಾಡಿದ್ದಾರೆ. ಆ ಬಗ್ಗೆ ಘೋಷಣೆ ಮಾಡಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಮ್ಮ ರಾಜ್ಯದ ಬಡ ಜನರ ಜೀವನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಅವರ ಸಂಕಷ್ಟಗಳನ್ನು ಅರ್ಥ ಮಾಡಿಕೊಂಡು ಅವರನ್ನು ಋಣಮುಕ್ತರನ್ನಾಗಿ ಮಾಡಬೇಕೆಂದು ಕೇಳಿಕೊಂಡು, ಆ ಭಾವನೆ ತಮಗೆ ಇದ್ದರೆ ಅದನ್ನು ಮಾಡಿ. ಆಗ ತಮಗೆ ನಾನು ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ರಾಜ್ಯದ ರೈತನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಚುನಾವಣಾ ಪ್ರಣಾಳಿಕೆಯಲ್ಲಿ ತಾವು ಯಾವ ಶಬ್ದಗಳನ್ನು ಮತ್ತು ಕೇಂದ್ರ ಸರಕಾರ ಯಾವ ಶಬ್ದಗಳನ್ನು ಉಪಯೋಗಿಸಿದೆಯೋ ಅದಕ್ಕಿಂತ ಮುಖ್ಯವಾದದ್ದು ಎಂದರೆ ರೈತನಿಗೆ ಅನುಕೂಲಗಳನ್ನು ಮಾಡಿಕೊಡುವುದು ನಮ್ಮ ರಾಜ್ಯದ ರೈತರಿಗೆ ಏನೂ ಸಹಾಯ ಮಾಡದಿದ್ದರೂ ಪರವಾಗಿಲ್ಲ, ಒಂದು ಸಾರಿ ರೈತರನ್ನು ಋಣ ಮುಕ್ತರನ್ನಾಗಿ ಮಾಡಿದ್ದೇವೆಂದು ಧಾರಾಳತನದ ನೀತಿಯನ್ನು ನೀವು ತೆಗೆದುಕೊಂಡರೆ ತಮ್ಮ ಸರಕಾರ ೫ ವರ್ಷ ಅಧಿಕಾರದಲ್ಲಿ ಮುಂದುವರಿಯುತ್ತದೆ. ನನ್ನ ಪ್ರತಿಷ್ಠೆಗೋಸ್ಕರ ಇದನ್ನು ಹೇಳುತ್ತಿಲ್ಲ. ರಾಜ್ಯದ ರೈತನ ಪರಿಸ್ಥಿತಿಯನ್ನು ನೋಡಿಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಆತನ ಸ್ಥಿತಿ ನೋಡಿ ಉತ್ತರ ಕೊಡಿ. ಬೇರೆ ಕಡೆಗಳಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷದ ಸರಕಾರಗಳು ರೈತನ ಸಾಲವನ್ನು ಮನ್ನಾ ಮಾಡಿರುವುದು ನಿಮಗೆ ಗೊತ್ತಿಲ್ಲವೇ? ತಾವು ಅದನ್ನು ತರಿಸಿಕೊಂಡು ನೋಡಬಹುದಿತ್ತು. ಈ ಬಗ್ಗೆ ಸದನ ಸಮಿತಿಯನ್ನು ಮಾಡಿ ಎಂದು ನಾನು ಹೇಳಿದ್ದೆ.

ಶ್ರೀ ವೀರೇಂದ್ರ ಪಾಟೀಲ್.— ಮಾನ್ಯ ಯಡಿಯೂರಪ್ಪನವರಲ್ಲಿ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಉತ್ತರವನ್ನು ಪೂರ್ತಿ ಮುಗಿಸಿದ ಮೇಲೆ ತಾವು ಇದನ್ನು ಕೇಳಿದ್ದಿದ್ದರೆ ಉತ್ತಮವಾಗುತ್ತಿತ್ತು. ಆ ಪಾಯಿಂಟಿಗೆ ನಾನು ಬರುತ್ತಿದ್ದೆ. ರೈತರ ಹತ್ತು ಸಾವಿರ ರೂಪಾಯಿ ಸಾಲವನ್ನು ಮನ್ನಾ ಮಾಡುತ್ತೇವೆಂದು ಕೇಂದ್ರ ಸರಕಾರದವರು ಹೇಳಿದ್ದಾರೆ. ಅದು ನಮ್ಮೆಲ್ಲರಿಗೂ ಗೊತ್ತಿದೆ. ಆದರೆ ನೇರವಾಗಿ ಯಾರೂ ಸಾಲವನ್ನು ಕೊಡುವ ಹಾಗೆ ಇಲ್ಲ. ಸಾಲವನ್ನು ನಬಾರ್ಡ್ ಮೂಲಕ ಇಲ್ಲವೇ ರಿಸರ್ವ್ ಬ್ಯಾಂಕ್ ಮೂಲಕ ಇಲ್ಲವೇ ಕೋ ಆಪರೇಟೀವ್ ಬ್ಯಾಂಕ್ ಮೂಲಕ ಇಲ್ಲವೇ ಲ್ಯಾಂಡ್ ಬ್ಯಾಂಕ್ ಮೂಲಕ ಕೊಡಬೇಕಾಗುತ್ತದೆ. ರಾಜ್ಯದ ರೈತನ ಸಾಲವನ್ನು ಮನ್ನಾ ಮಾಡುತ್ತೇವೆಂದು ಈ ಚುನಾವಣೆಗೆ ಮುನ್ನ ಏನು ಹೇಳಿದ್ದೇವೆ ಆ ಜವಾಬ್ದಾರಿಯನ್ನು ನಾವು ತೆಗೆದುಕೊಂಡಿದ್ದೇವೆ. ಮಧ್ಯಪ್ರದೇಶ, ಒರಿಸ್ಸಾದಲ್ಲಿ ಮನ್ನಾ ಮಾಡಿದ್ದಾರೆ, ಅಲ್ಲಿ ಹೇಗೆ ಮಾಡಿದ್ದಾರೆಂದು ತಿಳಿದುಕೊಳ್ಳಿ ಎಂದು ಹೇಳುತ್ತಿದ್ದೀರಿ ಅದು ಸರಿಯಲ್ಲ. ಅವರಲ್ಲಿ ಚುನಾವಣೆಗಳು ನಡೆಯುವುದಿದೆ. ಚುನಾವಣೆಗೆ ಮುನ್ನ ಒಂದು ಆಶ್ವಾಸನೆಯನ್ನು ಕೊಡುವಂತಹ ಪ್ರಯತ್ನವನ್ನು

ಮಾಡಿದ್ದಾರೆ. ಮತದಾರರ ಮುಂದೆ ಹೋಗುವುದಕ್ಕಿಂತ ಮೊದಲು ಇದನ್ನು ಮಾಡುತ್ತೇವೆ ಎಂದು ಹೇಳುವುದು ಏನಿದೆ, ಇದು ಪ್ರತಿಯೊಬ್ಬರೂ ನಡೆದುಕೊಳ್ಳುವಂತಹ ಒಂದು ಪದ್ಧತಿ. ಚುನಾವಣೆಗೆ ಹೋಗುವ ಮೊದಲು ಮತದಾರರೇ ನೀವು ನಮಗೆ ಮತವನ್ನು ಕೊಟ್ಟರೆ ನಿಮ್ಮ ಸಲುವಾಗಿ ಈ ಕೆಲಸಗಳನ್ನು ೫ ವರ್ಷದಲ್ಲಿ ಮಾಡುತ್ತೇವೆಂದು ಚುನಾವಣಾ ಪ್ರಣಾಳಿಕೆ ಮುಖಾಂತರ ಹೇಳ ಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರೇ, ಇನ್ನು ಒಂದೂವರೆ ತಿಂಗಳಿನಲ್ಲಿ ಆ ರಾಜ್ಯಗಳಲ್ಲಿ ಚುನಾವಣೆಗೆ ಹೋಗುವವರು ರೈತರಿಗೆ ಈ ಭರವಸೆಯನ್ನು ಕೊಟ್ಟಿದ್ದಾರೆ. ಅದು ತಪ್ಪೇನೂ ಅಲ್ಲ. ಆದರೆ ಒಂದು ಡಿಫರೆನ್ಸ್ ಏನು ಅಂದರೆ, ಹತ್ತು ಸಾವಿರ ರೂಪಾಯಿ ಸಾಲ ಮನ್ನಾ ಮಾಡುತ್ತೇವೆಂದು ಒಬ್ಬರು ಮತ್ತು ಇನ್ನೊಬ್ಬರು ೧೨ ಸಾವಿರ ರೂಪಾಯಿ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ೨ ಸಾವಿರ ಡಿಫರೆನ್ಸ್ ಬರುತ್ತದೆ ಅಷ್ಟೆ. ಅಧಿಕಾರಕ್ಕೆ ಬಂದವರು ಆ ಜವಾಬ್ದಾರಿಯನ್ನು ಹೊತ್ತುಕೊಳ್ಳಬಹುದು. ಅವರ ಪರವಾಗಿ ಹೇಳುವಂತಹ ಪರಿಸ್ಥಿತಿಯಲ್ಲಿ ನಾನು ಇಲ್ಲಿ ಇಲ್ಲ ಕೇಂದ್ರ ಸರಕಾರವು ರಾಜ್ಯ ಸರಕಾರದ ಮೂಲಕ ರೈತರಿಗೆ ಸಾಲವನ್ನು ನೀಡಿರುತ್ತದೆ. ಅವರು ಅದನ್ನು ಮನ್ನಾ ಮಾಡುತ್ತೇವೆಂಬ ಜವಾಬ್ದಾರಿಯನ್ನು ತೆಗೆದುಕೊಂಡಾಗ ರಾಜ್ಯ ಸರಕಾರದ ಮೂಲಕ ನೀಡಿರುವಂತಸಾಲ ಏನು ಇದೆ ಅದನ್ನು ರಾಜ್ಯ ಸರಕಾರದವರು ನೀಡಿದ ಅದರ ಮೇಲೆ ಪ್ರತಿಯೊಂದು ಪೈಸೆಯನ್ನು ರೀ ಇಂಬರ್ಸ್ ಮಾಡುವಂತಹ ಜವಾಬ್ದಾರಿ ಕೇಂದ್ರ ಸರಕಾರದ್ದು ೩೬೦ ಕೋಟಿ ರೂಪಾಯಿಗಳನ್ನು ಮನ್ನಾ ಮಾಡಬೇಕೆಂದು ತಾವುಏನು ಹೇಳುತ್ತಿದ್ದೀರಿ. ಕೇಂದ್ರ ಸರಕಾರದವರು ಆದುಡ್ಡು ಅವರು ಕೊಡುವುದಕ್ಕೆ ಭರವಸೆಯನು ಕೊಟ್ಟಿದ್ದಾರೆ. ರೈಟಿಂಗ್‌ನಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಿದ್ದಾರೆ. ದುಡ್ಡು ಕೊಡುತ್ತಾರೆಂಬ ಭರವಸೆ ನಮಗೇಇದೆ ಹಾಗೂ ಮನ್ನಾ ಮಾಡಬೇಕೆಂಬ ವಿಚಾರ ನನ್ನದೂ ಇದೆ ಅವರು ಚುನಾವಣಾ ಪ್ರಣಾಳಿಕೆಯಲ್ಲಿ ಎಷ್ಟು ಸ್ಪಷ್ಟವಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು ಅಂದರೆ My Government will take appropriate steps to provide Debt relief upto Rs. 10,000 ಎನ್ನುವಂತಹ ಮಾತನ್ನು ಹೇಳಿದ್ದಾರೆಯೇ ಹೊರತಾಗಿ We are going to write off the loans and we are going to pass orders to that effect ಅನ್ನುವಂತಹ ಮಾತನ್ನು ಇದರಲ್ಲಿ ಹೇಳಲಿಲ್ಲ. ಮುಖ್ಯಮಂತ್ರಿಯಾದ ನಾನು ಅವರಿಂದ ತಿಳಿದುಕೊಳ್ಳಬೇಕಾಗಿದೆ. ಏನೆಂದರೆ ಯಾವಾಗ ಮಾಡುತ್ತೀರಿ ಏನು ಸ್ಟೆಪ್ಸ್ ಅನ್ನು ಇದರ ಬಗ್ಗೆ ತೆಗೆದುಕೊಳ್ಳುತ್ತೀರಿ ಹಾಗೂ ಯಾವ ಸ್ಟೇಜ್‌ನಲ್ಲಿ ಮಾಡುತ್ತೀರಿ ಎಂದು. ೩೬೦ ಕೋಟಿ ರೂಪಾಯಿಗಳನ್ನು ಬಿಟ್ಟು ಬಿಡಬೇಕಾದರೆ ಕೇಂದ್ರ ಸರಕಾರದವರು ಯಾವ ರೀತಿ ನನಗೆ ನೆರವು ಕೊಡುತ್ತಾರೆ, ಅದನ್ನು ಎಷ್ಟು ಕಂತಿನಲ್ಲಿ ಕೊಡುತ್ತಾರೆಂಬುದನ್ನು ತಿಳಿದುಕೊಳ್ಳಬೇಕಾದುದು ನನ್ನ ಧರ್ಮ. ಅದಕ್ಕಾಗಿ ನಾನು ಇದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮತ್ತು ಇವತ್ತು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದ್ದರೆ, ಬಹುಶಃ ಇದು ಪತ್ರ ವ್ಯವಹಾರದ ಮುಖಾಂತರ ತೀರ್ಮಾನ ಆಗುವ ಹಾಗೆ ಕಾಣುವುದಿಲ್ಲ. ಏಕೆಂದರೆ ಈ ಸಮಸ್ಯೆ ಬಹಳ ಗಹನವಾದಂಥದ್ದು ಇದೆ. ದುಡ್ಡಿನ ಮೊತ್ತ ಬಹಳ ದೊಡ್ಡದು ಇದೆ. ಈ ೩೬೦ ಕೋಟಿ ರೂಪಾಯಿಗಳನ್ನು ಒಂದು ಕಲಂನಿಂದ ಪಾಸ್ ಮಾಡಿ I will write off ಎಂದು ಹೇಳಲಿಕ್ಕೆ ಆಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ದುರ್ದೈವದ ಸ್ಥಿತಿಯಲ್ಲಿ ಕರ್ನಾಟಕ ಇದೆ. ಇಲ್ಲದಿದ್ದರೆ ಮಾಡಿಬಿಡಬಹುದಾಗಿತ್ತು. ನನಗೇನೂ ರೈತರಿಗೆ ಅನುಕೂಲ ಮಾಡುವುದರಲ್ಲಿ ಸಂಕುಚಿತ ಮನೋಭಾವನೆ ಇಲ್ಲ. ನಾನೇನು ಕಂಜೂಸ್‌ಗಿರಿ ಮಾಡುತ್ತೇನೆ ಎಂದು ತಾವು ತಿಳಿದುಕೊಳ್ಳಬೇಕಾಗಿಲ್ಲ. ಆದರೆ ನಮ್ಮ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಜನರಲ್ ಡಿಬೇಟ್‌ನಲ್ಲಿ ಇದರ ಅಂಕಿ ಸಂಖ್ಯೆಯನ್ನು ನಿಮ್ಮ ಮುಂದಿಡುತ್ತೇನೆ. ಅದಕ್ಕಾಗಿ ಇವತ್ತು ಯಾವ ರೀತಿ ಕೇಂದ್ರ ಸರ್ಕಾರದವರು ಇದನ್ನು ಮನ್ನಾ ಮಾಡುತ್ತಾರೆ. ನಾನು ತಿಳಿದುಕೊಳ್ಳಬೇಕಾಗಿದೆ. ನಾವು ಮನ್ನಾ ಮಾಡತಕ್ಕಂಥ ದುಡ್ಡನ್ನು ಯಾವ ರೀತಿಯಲ್ಲಿ ಅವರು ರೀ-ಇಂಬರ್ಸ್ ಮಾಡುತ್ತಾರೆ. ಎಷ್ಟು ದಿವಸದಲ್ಲಿ ಮಾಡುತ್ತಾರೆ, ಒಂದು ವರ್ಷದಲ್ಲಿ ಮಾಡುತ್ತಾರೋ. ಇದೇ ವರ್ಷದಲ್ಲಿ ಮಾಡುತ್ತಾರೋ ಅಥವಾ ಮುಂದಿನ ಬಜೆಟ್‌ನಲ್ಲಿ ಮಾಡುತ್ತಾರೋ ಯಾವ ರೀತಿಯಿಂದ ಮಾಡುತ್ತಾರೋ ಎಂದು ನಾನು ತಿಳಿದುಕೊಳ್ಳಬೇಕಾಗಿದೆ. ಇದರ ಸಲುವಾಗಿ ನಾನು ೨೫ನೇ ತಾರೀಖಿಗೆ ದೆಹಲಿಗೆ ಹೋಗುವವನಿದ್ದು, ನಿನ್ನೆಯೇ ಈ ಬಗ್ಗೆ ಮೆಸೇಜನ್ನು ಕಳುಹಿಸಿಬಿಟ್ಟಿದ್ದೇನೆ. ೨೫ನೇ ತಾರೀಖಿಗೆ ದೆಹಲಿಗೆ ಹೋದಾಗ ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಇದನ್ನು ಚರ್ಚೆ ಮಾಡುತ್ತೇನೆ. ಮತ್ತು ನನ್ನ ಸ್ನೇಹಿತರಾದಂಥ ಮತ್ತು ಅರ್ಥ ಮಂತ್ರಿಗಳಾದಂಥ ಶ್ರೀಮಾನ್ ಮಧುದಂಡವತೆ ಮತ್ತು ಉಳಿದ ಮಂತ್ರಿಗಳ ಜೊತೆಯಲ್ಲಿ ಪ್ರಸ್ತಾಪ ಮಾಡಿ ಚರ್ಚೆ ಮಾಡಿ ಸಂಪೂರ್ಣವಾಗಿ ಇದರ ಬಗ್ಗೆ ತಿಳಿದುಕೊಂಡು ಬರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಬಗ್ಗೆ ನನ್ನ ನಿಲುವು ಏನು ಎಂದರೆ ಕೇಂದ್ರ ಸರ್ಕಾರದವರು ಇದನ್ನು ಒಪ್ಪಿದ್ದಾರೆ. ೩೬೦ ಕೋಟಿ ರೂಪಾಯಿಗಳ ಸಾಲವನ್ನು ನಾನು ಮನ್ನಾ ಮಾಡಿದ ಮೇಲೆ ಈ ೩೬೦

ಕೋಟಿ ರೂಪಾಯಿಗಳು ಪೂರ್ತಿಯಾಗಿ ಕೇಂದ್ರ ಸರ್ಕಾರದಿಂದ ನನಗೆ ಬರುತ್ತದೆ ಎನ್ನತಕ್ಕಂಥ ಭರವಸೆಯನ್ನು ಈಗಲೂ ಕೂಡಾ ಹೊಂದಿದ್ದೇನೆ. ಆದರೆ ಇದನ್ನು ಧೀರ್ಘವಾಗಿ ಅವರಿಂದ ತಿಳಿದುಕೊಳ್ಳಬೇಕಾಗಿದೆ. ಅದರ ಅವಶ್ಯಕತೆ ಇದೆ. ಅದಕ್ಕಾಗಿ ನಾನು ಇನ್ನೆರಡು ದಿವಸದಲ್ಲಿ ಅಂದರೆ ೨೫ನೇ ತಾರೀಖಿಗೆ ದೆಹಲಿಗೆ ಹೋಗಿ...

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್.—ಈ ರೀತಿ ಮಾಡಬೇಡಿ ಎಂದು ಹೇಳುತ್ತೀರಾ?

ಶ್ರೀ ಆರ್. ವಿ. ದೇಶಪಾಂಡೆ.—ಬಹಳ ಚೆನ್ನಾಗಿದೆ. ನಿಮ್ಮ ವಾದವನ್ನು ಒಪ್ಪಿಕೊಳ್ಳುತ್ತೇವೆ. ಕೇಂದ್ರ ಸರ್ಕಾರ ಈಗ ಹತ್ತು ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದಾಗ ಇಲ್ಲಿ ಡೂಪ್ಲಿಕೇಷನ್ ಆಗುವ ಪ್ರಶ್ನೆ ಇಲ್ಲ. ನನ್ನ ಪ್ರಶ್ನೆ ಏನೆಂದರೆ ಹತ್ತು ಸಾವಿರ ರೂಪಾಯಿಗಳ ತನಕ ಕೇಂದ್ರ ಸರ್ಕಾರ ರೈತರ ಸಾಲ ಮನ್ನಾ ಮಾಡುತ್ತದೆ ಎಂದು ಹೇಳಿದೆ ತಮ್ಮ ಲೆಕ್ಕದ ಪ್ರಕಾರ ೩೬೦ ಕೋಟಿ ರೂಪಾಯಿ ಆಗುತ್ತದೆ ಇವತ್ತು ರೈತರ ಸಾಲ ಹತ್ತು ಸಾವಿರ ರೂಪಾಯಿ ಮಾತ್ರ ಇಲ್ಲ ಅದು ೫೦ ಸಾವಿರ ರೂಪಾಯಿ ಇರಬಹುದು, ಹದಿನೈದು ಸಾವಿರ ಸಾಲ ಇದ್ದರೂ ಇರಬಹುದು. ಈ ಹತ್ತು ಸಾವಿರ ರೂಪಾಯಿ ಮೇಲೆ ಸಾಲ ಏನಿದೆ, ಅದರ ಬಗ್ಗೆ ತಮ್ಮ ಅಭಿಪ್ರಾಯವೇನು? ಸರ್ಕಾರ ಇದರ ಬಗ್ಗೆ ಸ್ಪಷ್ಟಪಡಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ಇವತ್ತು ಸ್ಪಷ್ಟವಾಗಿ ಹೇಳಬೇಕಾಗಿದ್ದರೆ ಕೇಂದ್ರ ಸರ್ಕಾರದ ಕಮಿಟ್‌ಮೆಂಟ್ ಏನು ಇದೆಯೋ ಹಾಗೂ ನಾನು ಏನು ಭರವಸೆಯನ್ನು ಕೊಟ್ಟಿದ್ದೇನೆಯೋ ಅದರಲ್ಲಿ ಯಾವ ತರಹದ ವ್ಯತ್ಯಾಸವೂ ಇಲ್ಲ, ಅವರು ಹತ್ತು ಸಾವಿರ ರೂಪಾಯಿ ಎಂದು ಹೇಳಿದ್ದಾರೆ. ನಾನು ಇನ್ನೊಮ್ಮೆ ಓದಿ ಹೇಳುತ್ತೇನೆ. ನನ್ನ ಪ್ರಣಾಳಿಕೆಯಲ್ಲಿ ಏನೇನು ಹೇಳಿದ್ದೇನೆ ಎಂದರೆ ಬಡ್ಡಿ ಚಕ್ರಬಡ್ಡಿಗಳಿಂದ ಕಗ್ಗಂಟಾಗಿರುವ ಹತ್ತು ಸಾವಿರ ರೂಪಾಯಿಗಳವರೆಗಿನ ಕೃಷಿಕರ ಸಾಲವನ್ನು ಮನ್ನಾ ಮಾಡುವಂತೆ ಪ್ರಧಾನಿಯವರನ್ನು ನಾವು ಒತ್ತಾಯಿಸುತ್ತೇವೆ ಎನ್ನತಕ್ಕಂಥದ್ದು ತಿಳಿಸಿದ್ದೇನೆ. ಬಹುಶಃ ಶ್ರೀಮಾನ್ ದೇಶಪಾಂಡೆಯವರು ಕೇಳುತ್ತಾರೆ. ಅವರಂತೂ ಹತ್ತು ಸಾವಿರ ರೂಪಾಯಿಗಳ ಬಗ್ಗೆ ಒಪ್ಪಿದ್ದಾರೆ, ಇದರ ಮೇಲೆ ಮಾಡಿರುವ ಸಾಲದ ಗತಿಯೇನು ಎಂದು ಕೇಳುತ್ತಾರೆ, ಅದರ ಬಗ್ಗೆ ನನ್ನ ಕಮಿಟ್‌ಮೆಂಟ್ ಇಲ್ಲ. ಅದನ್ನು ಕೇಳುವುದರಲ್ಲಿಯೂ ಅರ್ಥ ಇಲ್ಲ, ನಾನು ಹೇಳುವುದರಲ್ಲಿಯೂ ಅರ್ಥವಿಲ್ಲ ಎಲ್ಲರೂ ಚರ್ಚೆ ಮಾಡುತ್ತಿರುವುದು ಹತ್ತು ಸಾವಿರ ರೂಪಾಯಿಗಳ ಸಾಲದ ಬಗ್ಗೆ.

ಶ್ರೀ ಆರ್. ವಿ. ದೇಶಪಾಂಡೆ.—ಅಂದರೆ ವೀರೇಂದ್ರ ಪಾಟೀಲರ ಸರ್ಕಾರ ಈ ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುವುದಿಲ್ಲ ಎಂದು ಸ್ಪಷ್ಟವಾದಂತಾಯಿತು.

ಶ್ರೀ ವೀರೇಂದ್ರ ಪಾಟೀಲ್.—ಈ ರೀತಿಯಿಂದ ಇದಕ್ಕೆ ವ್ಯಾಖ್ಯಾನ ಮಾಡತಕ್ಕಂಥದ್ದು ತಪ್ಪು. ರೈತರಿಗೆ ಸಾಲವನ್ನು ರಾಜ್ಯಸರ್ಕಾರ ತನ್ನ ಜೇಬಿನಿಂದ ಕೊಡುವುದಿಲ್ಲ. ರಿಸರ್ವ್ ಬ್ಯಾಂಕ್, ನಬಾರ್ಡ್‌ನವರು ಕೊಡುತ್ತಾರೆ, ಮತ್ತು ಫೈನಾನ್ಸಿಯಲ್ ಇನ್ಸ್‌ಟಿಟ್ಯೂಷನ್‌ನವರು ಕೊಡುತ್ತಾರೆ. ಈ ಸಾಲವನ್ನು ಮನ್ನಾ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೇಂದ್ರಸರ್ಕಾರದವರು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಈ ೩೬೦ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಬೇಕಾದರೆ, Upto the last pai, I expect the Government of India to reimburse this amount, I want to make this Point very clear so far as the Government of India is concerned.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಸನ್ಮಾನ್ಯ ಅಧ್ಯಕ್ಷರೇ, ನನಗೆ ಆಶ್ಚರ್ಯ ಆಗುತ್ತಿದೆ, ಚುನಾವಣಾ ಪ್ರಣಾಳಿಕೆಯನ್ನು ಬಹಳ ಬುದ್ಧಿವಂತಿಕೆಯಿಂದ ತಾವು ಬರೆದಿದ್ದೀರಿ. ಈ ಸಂದರ್ಭದಲ್ಲಿ ಕೇಂದ್ರದಲ್ಲಿ ನಮ್ಮ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬರುತ್ತದೆ ಎಂದು ನಿಮಗೆ ಹೇಗೆ ಗೊತ್ತಿತ್ತು ಎನ್ನುವುದು ನನಗೆ ಆಶ್ಚರ್ಯವಾಗುತ್ತಿದೆ. ಎರಡನೆಯದು ತಾವು ಈ ತಿಂಗಳ ೨೫ನೇ ತಾರೀಖು ದೆಹಲಿಗೆ ಹೋಗುತ್ತೀರಿ. ತಾವು ಪ್ರಧಾನಿಗಳಾದ ಶ್ರೀ ಸಿಂಗ್‌ರವರನ್ನೋ ಅಥವಾ ಮಧುದಂಡವತೆಯವರನ್ನೋ ಭೇಟಿ ಮಾಡಿ ೨೮ನೇ ತಾರೀಖು ಅಥವಾ ೨೭ನೇ ತಾರೀಖು ಬರುತ್ತೀರಿ, ಬಂದ ತಕ್ಷಣ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದಂತೆ ರೈತರ ಬಗ್ಗೆ ಇರತಕ್ಕ ಆಶ್ವಾಸನೆಯನ್ನು ಸಂಪೂರ್ಣವಾಗಿ ಈಡೇರಿಸಿದ್ದೇವೆ ಎಂದು ಒಂದು ಪತ್ರಿಕಾ ಹೇಳಿಕೆಯನ್ನು ಕೊಡುತ್ತೀರಿ ಎಂದು ನಾವು ನಿರೀಕ್ಷೆ ಮಾಡಬಹುದೆ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಿಂಧ್ಯಾರವರು ಹೇಳಿದುದರ ಬಗ್ಗೆ ಒಂದು ಕ್ಲಾರಿಫಿಕೇಶನ್ ಅವರು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಚುನಾವಣೆ ಆಗುವಾಗ ಮುಂದೆ ನನಗೆ ಭವಿಷ್ಯ

ಗೊತ್ತಿದೆ, ಅದು ಕೇಂದ್ರ ಸರ್ಕಾರ ಕಾಂಗ್ರೆಸ್ ಕೈಬಿಡುತ್ತದೆ. ಕೇಂದ್ರ ಸರ್ಕಾರದಲ್ಲಿ ವಿ. ಪಿ. ಸಿಂಗ್ ಅವರು ಪ್ರಧಾನ ಮಂತ್ರಿಗಳಾಗುತ್ತಾರೆ. ಅವರ ಕೊರಳಿಗೆ ಇದನ್ನು ಕಟ್ಟುತ್ತೇನೆಂದು ಅವರು ತಿಳಿದು ಕೊಂಡಿದ್ದಾರೆ

ಶ್ರೀ ಸಿ. ಬೈರೇಗೌಡ.—ದೇಶದ ನಾನಾ ಪತ್ರಿಕೆಗಳು ಇದನ್ನು ಬರೆದಿವೆ. ಅದನ್ನು ನೋಡಿ ಕೊಂಡು ತಾವು ಪ್ರಣಾಳಿಕೆಯನ್ನು ಹೊರಡಿಸಿದ್ದೀರಿ,

ಶ್ರೀ ವೀರೇಂದ್ರ ಪಾಟೀಲ್.—ಒಂದು ಮಾತನ್ನು ನಾನು ಹೇಳುತ್ತಿದ್ದೇನೆ. ಅವರು ಹೇಳಿದಂತಹ ಮಾತನ್ನು ಸೀರಿಯಸ್ ಆಗಿ ನಾನು ತೆಗೆದುಕೊಂಡಿಲ್ಲ. ನಾನು ಯಾಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ ಕೇಂದ್ರ ಸರ್ಕಾರದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬರುತ್ತದೆಂದು ಇದನ್ನು ಬರೆದಿಲ್ಲ. ಅದಕ್ಕಾಗಿ ನಾನು ಪ್ರಧಾನಿಯವರನ್ನು ಒತ್ತಾಯ ಮಾಡುತ್ತೇನೆ. ನಾನು ಹಾಗೂ ಮಾಜಿ ಪ್ರಧಾನಿ ಯವರು ಒಂದು ಸಮಸ್ಯೆಯ ಬಗ್ಗೆ ಏನು ಚರ್ಚೆ ಮಾಡಿದ್ದೇವೆ, ಅದು ನಮ್ಮಿಬ್ಬರಿಗೆ ಮಾತ್ರ ಗೊತ್ತಿದೆ. ಮತ್ತೆ ಬೇರೆ ಯಾರಿಗೂ ಗೊತ್ತಿಲ್ಲ. ನಮ್ಮ ಮಾಜಿ ಪ್ರಧಾನಿಯವರಾದ ಶ್ರೀ ರಾಜೀವ್ ಗಾಂಧಿಯವರು ಮತ್ತೆ ಅಧಿಕಾರಕ್ಕೆ ಬಂದು ಈ ಭರವಸೆಯನ್ನು ಈಡೇರಿಸುತ್ತಾರೆ ಎಂಬ ಆಶ್ವಾಸನೆ ಮೇಲೆ ಬರೆದಿದ್ದೇನೆ. ವಿ. ಪಿ. ಸಿಂಗ್‌ರವರು ಪ್ರಧಾನ ಮಂತ್ರಿಗಳಾಗುತ್ತಾರೆ. ಅವರ ಕೊರಳಿಗೆ ಇದನ್ನು ಕಟ್ಟಬೇಕು ಎಂಬ ದೃಷ್ಟಿಯಲ್ಲಿ ಇದನ್ನು ಬರೆದಿಲ್ಲ. ಕೊನೆಯಲ್ಲಿ ಒಂದೇ ಒಂದು ಪ್ರಶ್ನೆ. ಮಾನ್ಯ ಯಡಿಯೂರಪ್ಪನವರು ರೆಕವರಿ ಬಗ್ಗೆ ಕೇಳಬಹುದು. ನಾನು ೨೫ನೇ ತಾರೀಖು ದೆಹಲಿಗೆ ಹೋಗುತ್ತೇನೆ. ೨೭ ಅಥವಾ ೨೮ಕ್ಕೆ ಬರುತ್ತೇನೆ. ಅದರೊಳಗೆ ಇದು ಇತ್ಯರ್ಥವಾಗಬೇಕು. ಈ ಬಗ್ಗೆ ನಾನು ಭಗೀರಥ ಪ್ರಯತ್ನ ಮಾಡು ತ್ತೇನೆಂದು ಈ ಸದನಕ್ಕೆ ಹೇಳುತ್ತಿದ್ದೇನೆ. ನೀವು ಆ ಕಡೆ ಕುಳಿತಿದ್ದೀರಿ. ನೀವು ಈ ಕಡೆ ಕುಳಿತಿದ್ದರೆ ಆಗ ಈ ಪ್ರಶ್ನೆ ನಿಮ್ಮ ಮುಂದೆ ಬರುತ್ತಿತ್ತು. ೩೬೦ ಕೋಟಿ ರೂಪಾಯಿಗಳನ್ನು ಎಲ್ಲಿಂದ ತರಬೇಕು ಎಂಬ ಪ್ರಶ್ನೆ ಇಲ್ಲಿದೆ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್.—ಮತ್ತೊಂದು ಪ್ರಶ್ನೆ ಉಳಿದಿರುವುದು ಪ್ರಧಾನ ಮಂತ್ರಿ ಮತ್ತು ಹಣಕಾಸಿನ ಸಚಿವರ ಜೊತೆ ಮಾತನಾಡಿ ಅಲ್ಲಿಂದ ಕ್ಲಾರಿಫಿಕೇಶನ್ ತೆಗೆದುಕೊಂಡು ಬಂದು ಮತ್ತೆ ಒಂದು ನಿರ್ಣಯಕ್ಕೆ ಬರುವುದು. ಮೊದಲು ಬರುವುದು ರೆಕವರಿ ಪ್ರಶ್ನೆ. ಈ ಬಗ್ಗೆಯೇ ಯಡಿಯೂರಪ್ಪ ನವರ, ಹಾಗೂ ಬಾಬಾ ಪಾಟೀಲ್‌ರವರ ಚಿಂತೆ ಆಗಿರುವುದು. ಇವೊತ್ತು ಸ್ಪಷ್ಟವಾಗಿ ನಮ್ಮ ಅಧಿಕಾ ರಿಗಳಿಗೆ ಹೇಳುತ್ತೇನೆ, ಅವರು ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೆ ಆದೇಶವನ್ನು ಕಳಿಸಿಕೊಡುವರು. ಇದರ ಬಗ್ಗೆ ಒಂದು ನಿರ್ಣಯ ಆಗುವವರೆಗೆ ರೆಕವರಿಯನ್ನು ಸ್ಟೇ ಮಾಡಲಾಗುವುದು. ಈ ಪ್ರಶ್ನೆ ಯನ್ನು ಇವೊತ್ತು ಇತ್ಯರ್ಥ ಮಾಡುವುದರಲ್ಲಿ ನಿಮಗೆ ಎಷ್ಟು ಚಿಂತನೆ ಇದೆಯೋ ನಮಗೂ ಅಷ್ಟೇ ಚಿಂತನೆ ಇದೆ. ನಿಮಗೆ ರೈತರ ಬಗ್ಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚು ಕಳಕಳಿ ನಮಗೆ ಇದೆ.

ಶ್ರೀ ಗುರುಪಾದಪ್ಪ ನಾಗರಪಲ್ಲಿ.—ಹಾಗಾದರೆ ನಿಮ್ಮ ಕೈಯಿಂದ ಕೊಡಿ.

ಶ್ರೀ ವೀರೇಂದ್ರ ಪಾಟೀಲ್.—ನಾನು ಇವೊತ್ತು ತಮಗೆ ಭರವಸೆಯಿಂದ ಹೇಳುತ್ತೇನೆ. ಕೇಂದ್ರ ಸರ್ಕಾರದವರು ಕೊಟ್ಟ ರತಕ್ಕ ಭರವಸೆ ಬಗ್ಗೆ ನಂಬಿಕೆ ನನಗಿದೆ. ಅವರು ಏನು ಹೇಳಿದ್ದಾರೆ, ಅದರಂತೆ ನಡೆಯುತ್ತಾರೆ. ಅದನ್ನು ಕಾರ್ಯಗತ ಮಾಡುತ್ತಾರೆಂಬ ಭರವಸೆ ನನಗಿದೆ. ಈ ಭರವಸೆಯಲ್ಲಿಯೇ ಇನ್ನು ಮುಂದೆ ರೆಕವರಿ ಬಗ್ಗೆ ನಾವುಹೇಳುವವರೆಗೆ ನಿಲ್ಲಿಸಿ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಇವೊತ್ತು ನಾನು ಆಸೆ ಮಾಡುತ್ತೇನೆ. ಕೇಂದ್ರ ಸರ್ಕಾರದವರ ಜೊತೆಯಲ್ಲಿ ಪ್ರಯತ್ನ ಮಾಡುತ್ತೇನೆ ಮತ್ತು ಕೇಂದ್ರ ಹಣಕಾಸಿನ ಸಚಿವರ ಜೊತೆ ಚರ್ಚೆ ಮಾಡಿ ಅವರು ಯಾವ ಭರವಸೆಯನ್ನು ಜನಸಾಮಾನ್ಯರಿಗೆ ಕೊಟ್ಟಿದ್ದಾರೆ ಅದನ್ನು ಸಂಪೂರ್ಣವಾಗಿ ಈಡೇರಿಸುತ್ತಾರೆ ಎಂಬ ಆಸೆಯಿಂದ ನಾನು ದೆಹಲಿಗೆ ಹೋಗುತ್ತಿದ್ದೇನೆ.

ಈ ೩೬೦ ಕೋಟಿ ರೂಪಾಯಿಗಳನ್ನು ಮನ್ನಾ ಮಾಡುವಂಥ ಪರಿಸ್ಥಿತಿಗೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಆಶೀರ್ವಾದ ಬರುತ್ತದೆ, ಈ ಬಗ್ಗೆ ಒಂದು ನಿಲುಮೆಯನ್ನು ನಾಲ್ಕೈದು ದಿವಸಗಳಲ್ಲಿ ತೆಗೆದುಕೊಳ್ಳುವಂಥ ಅವಕಾಶ ಕರ್ನಾಟಕದಲ್ಲಿ ನಿರ್ಮಾಣವಾಗುವಂತಾಗಲಿ ಎಂದು ಹೇಳಿ ತಮ್ಮ ಅಪ್ಪಣೆ ಪಡೆದು ಕೂರುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಒಂದೇ ಒಂದು ವಿಚಾರವನ್ನು ತಮ್ಮ ಮೂಲಕ ಅವರ ಗಮನಕ್ಕೆ ತರುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮ್ಮ ಜನರಿಗೆ ಸ್ವಲ್ಪ ಹೇಳಿ ಸ್ವಾಮಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮ್ಮ ವರ್ತನೆಗೆ ನಾಚಿಗೆಯಾಗಬೇಕು. ರಾಜ್ಯದ ರೈತರ ಬಗ್ಗೆ ಪ್ರಶ್ನೆ ಕೇಳುವುದಕ್ಕೆ ಎದ್ದು ನಿಂತರೆ ತಾವುಗಳು ಕೂಗುತ್ತೀರಾ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಇಷ್ಟು ಹೊತ್ತು ಮಾತನಾಡಿರಬೇಕಾದರೆ ನಾನು ತಮ್ಮ ಅನುಮತಿಯನ್ನು ತೆಗೆದುಕೊಂಡು ಒಂದು ಸಾರಿ ಮಧ್ಯೆ ಪ್ರವೇಶ ಮಾಡಿದೆ. ಈಗ ಕ್ಲಾರಿಫಿಕೇಷನ್ ಕೇಳುವುದಕ್ಕೆ ಎದ್ದು ನಿಂತಾಗ ಆ ಕಡೆಯ ಸದಸ್ಯರು ಇಷ್ಟೊಂದು ಹಗುರವಾಗಿ ಮಾತನಾಡುವಂಥ ಅಗತ್ಯವಿತ್ತೇ ? ನಾನು ರಾಜ್ಯದ ರೈತರ ಬಗ್ಗೆ ಮಾತನಾಡುವಾಗ ಅವರು ಇಷ್ಟು ಹಗುರವಾಗಿ ವರ್ತನೆ ಮಾಡುವುದು ಸರಿಯೇ ? ಸನ್ಮಾನ್ಯ ಸಭಾನಾಯಕರು ಮಂತ್ರಿಗಳಿಗೆ ಕೊಟ್ಟಿರುವುದಕ್ಕಿಂತ ಹೆಚ್ಚು ಅಧಿಕಾರವನ್ನು ಸದಸ್ಯರಿಗೆ ಕೊಟ್ಟಿದ್ದಾರೆಯೇ, ಅವರಿಂದ ನಾನು ಉತ್ತರ ತೆಗೆದುಕೊಳ್ಳಬೇಕು ಎನ್ನುವ ಅಪೇಕ್ಷೆ ಇದೆಯೇ, ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಇವತ್ತಿನ ಹಣಕಾಸಿನ ಪರಿಸ್ಥಿತಿಯನ್ನು ತಿಳಿಸಿದ್ದಾರೆ. ಅದರ ಅರಿವು ನಮಗೆ ಇದೆ. ಈ ರಾಜ್ಯದ ರೈತರ ಸಾಲ ಮನ್ನಾ ಆಗಬೇಕು ಎಂದು ತಮ್ಮನ್ನು ಒತ್ತಾಯ ಮಾಡುವಂಥ ಸಂದರ್ಭಗಲ್ಲಿ ಇವತ್ತು ರಾಜ್ಯದ ಹಣಕಾಸಿನ ಸ್ಥಿತಿಯನ್ನು ಅರ್ಥ ಮಾಡಿಕೊಂಡು ನಾವು ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ೧೦ ಸಾವಿರ ರೂಪಾಯಿಗಳ ಒಳಗಿನ ರೈತನ ಸಾಲವನ್ನು ತಾವು ಮನ್ನಾ ಮಾಡಿದರೆ ೩೬೦ ಕೋಟಿ ರೂಪಾಯಿಗಳಾಗುತ್ತದೆ ಎನ್ನುವಂಥ ಮಾತನ್ನು ಹೇಳಿದಿರಿ. ತಮಗೆ ಗೊತ್ತಿರುವ ಹಾಗೆ, ಲೋಕಸಭೆಯಲ್ಲಿ ಮತ್ತು ಇಲ್ಲಿ ಚರ್ಚೆಗಳಾದಂಥ ಸಂದರ್ಭದಲ್ಲಿ ಇದೆಲ್ಲಾ ಪ್ರಸ್ತಾಪವಾಗಿದೆ. ಎಕ್ಸೈಜ್ ಇಲಾಖೆಯಲ್ಲಿ ಸೆಕೆಂಡ್ಸ್ ಮಾರಾಟದ ಮೂಲಕ ೩೬೫ ಕೋಟಿ ರೂಪಾಯಿಗಳು ಸೋರಿಹೋಗುತ್ತಾ ಇದೆ, ೧೦ ಸಾವಿರದೊಳಗಿನ ರೈತರ ಸಾಲ ಮನ್ನಾ ಮಾಡುವುದಕ್ಕೆ ೩೬೦ ಕೋಟಿ ಆಗುತ್ತದೆ ಎಂದು ನೀವು ಹೇಳಿದಿರಿ, ಅಷ್ಟೆ ಹಣ ಸೆಕೆಂಡ್ಸ್ ಮೂಲಕ ಎಕ್ಸೈಜ್ ಇಲಾಖೆಯಲ್ಲಿ ಸೋರಿ ಹೋಗುತ್ತಿದೆ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಕಳೆದ ಒಂದೂವರೆ ಎರಡು ವರ್ಷಗಳಿಂದ ರಾಜ್ಯದ ರೈತನಿಗಾಗಲಿ ಶ್ರೀಸಾಮಾನ್ಯನಿಗಾಗಲಿ ರಾಜಕೀಯ ಗೊಂದಲದ ವಾತಾವರಣದಿಂದ ತೊಂದರೆಯಾಗಿದೆ. ಸರ್ಕಾರ ತನ್ನ ನೌಕರರಿಗೆ ಸಂಬಳ ಕೊಡುವುದಕ್ಕೆ ಸಾಧ್ಯವಾಗಿದೆಯೇ ಹೊರತು ರಾಜ್ಯದ ಡೆವಲಪ್‌ಮೆಂಟಲ್ ವರ್ಕ್ಸ್ ಆಗಿಲ್ಲ. ಆದ್ದರಿಂದ ನಾನು ರೈತರ ಪರವಾಗಿ ಹೇಳುತ್ತಿದ್ದೇನೆ. ಇನ್ನೂ ಒಂದು ವರ್ಷ ಹಳ್ಳಿಗಾಡಿನ ಡೆವಲಪ್‌ಮೆಂಟ್ ವರ್ಕ್ಸ್ ಮಾಡದೇ ಹೋದರೂ ಚಿಂತೆಯಿಲ್ಲ, ಒಂದು ಸಾರಿ......

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಇಡೀ ಕರ್ನಾಟಕದ ರೈತರ ವಾರಸುದಾರರು ಇವರೊಬ್ಬರೇನೆ ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಆದುದರಿಂದ ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ಹಣಕಾಸಿನ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸೋರಿಹೋಗುವುದನ್ನು ತಡೆಗಟ್ಟಲು ಏನೆಲ್ಲಾ ಮಾಡಬಹುದೋ ಅದನ್ನು ನೀವು ಮಾಡಿ, ನಾವು ಸರ್ಕಾರಕ್ಕೆ ರಚನಾತ್ಮಕವಾದ ಸಲಹೆ ಕೊಡುವುದಕ್ಕೆ, ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ.

೩-೦೦ ಪಿ.ಎಂ,

ರಾಜ್ಯದ ಹಿತದೃಷ್ಟಿಯಿಂದ ನನಗೆ ವಿಶ್ವಾಸ ಇದೆ, ಕೇಂದ್ರ ಸರ್ಕಾರ ಯಾವ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿದಂತೆ ೧೦,೦೦೦ ಒಳಗಡೆ ಇರತಕ್ಕ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿರುವುದರಿಂದ, ಆ ನಂಬಿಕೆ ಮೇಲೆ ಇಲ್ಲೂ ಕೂಡ ನಮ್ಮ ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುತ್ತೇವೆನ್ನು ನಂಬಿಕೆ ಇದೆಯೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅಕಸ್ಮಾತ್ ಆ ರೀತಿಯ ಪರಿಹಾರವನ್ನು ಒದಗಿಸುವುದರಲ್ಲಿ ಏರುಪೇರಾಗಿ ೩೬೦ ಕೋಟಿ ರೂಪಾಯಿಗಳು ಕೇಂದ್ರದಿಂದ ಬರುವ ಸಂದರ್ಭದಲ್ಲಿ ಕೆಲವು ಷರತ್ತುಗಳ ಮೇಲೆ ಕಡಿಮೆಯಾಗಲೂಬಹುದು,

ಆಗ ರಾಜ್ಯಸರ್ಕಾರವೇ ಅದನ್ನು ಭರಿಸುವುದಕ್ಕೆ ಸಿದ್ಧವಾಗಿ ಕರ್ನಾಟಕ ರಾಜ್ಯದ ರೈತನ ಸಾಲವನ್ನು ಮನ್ನಾ ಮಾಡುವಂಥ ಘೋಷಣೆಯನ್ನು ತಾವು ಮಾಡಬೇಕು.

ಅಧ್ಯಕ್ಷರು.—ಚರ್ಚೆಗೆ ಅವಕಾಶ ಕೊಡುವುದಿಲ್ಲ. ತಾವು ಸ್ಪಷ್ಟೀಕರಣ ಕೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಭತ್ತದಲ್ಲಿ ತೌಡು ಬಂದಂತೆ ೧೭೭ ಜನ ಆರಿಸಿ ಬಂದಿದ್ದೀರಿ. ಏತಕ್ಕೆ ಹೀಗೆ ಮಾಡುತ್ತೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ನಾನು ಈಲ್ಡಾಗಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಯಡಿಯೂರಪ್ಪನವರ ಪಕ್ಷಕ್ಕೂ ರೈತರಿಗೂ ಏನು ಸಂಬಂಧ ಇದೆ ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಸ್ಪಷ್ಟನೆ ಕೊಡಬೇಕಾಗುತ್ತದೆ. ಈ ಸದನ ೧೯೮೮ನೇ ಅಕ್ಟೋಬರ್ ೧೪ನೇ ತಾರೀಖು ರಾಜ್ಯದ ಬಗರ್‌ಹುಕುಂ ಸಾಗುವಳಿ ಮಾಡಿದ ರಾಜ್ಯದ ಮೂರುವರೆ ಲಕ್ಷ ಬಡವರನ್ನು ಹೊರಹಾಕುವಂತಹ ಕರಾಳ ಶಾಸನವನ್ನು ಅರಣ್ಯ ಇಲಾಖೆಯವರು ತಂದಾಗ ಆಗ ಈ ಕಡೆ ಕೂತಿದ್ದಂತಹ ಕಾಂಗ್ರೆಸ್ ಸದಸ್ಯರು ಅದರ ಬಗ್ಗೆ ಒಂದು ಚಕಾರ ಶಬ್ದ ಕೂಡ ಎತ್ತಲಿಲ್ಲ,

(ಗೊಂದಲ)

ಏನೋ ಪುಣ್ಯದ ಫಲ, ಮತ್ತೆ ಅಧಿಕಾರಕ್ಕೆ ಬಂದಿದ್ದೀರಿ, ಈಗ ಅಧಿಕಾರದ ಮದದಿಂದ ಮಾತನಾಡುವುದಕ್ಕೆ ಹೋಗಬೇಡಿ. ನಿಮಗೆ ನಾಚಿಕೆಯಾಗಬೇಕು. ಒಂದು ಲಕ್ಷ ಜನ ರೈತರನ್ನು ಬೀದಿ ಪಾಲು ಮಾಡಿದಾಗ ನಾವು ಅವರ ಪರ ಹೋರಾಟ ಮಾಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ನಮಗೆ ಗೊತ್ತಿದೆ,

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮಗೆ ಏನು ಗೊತ್ತಿದೆ ? ನಿಮಗೆ ಜನಗಳಿಗೆ ಹೆಂಡ ಕುಡಿಸಿ ಓಟು ತೆಗೆದುಕೊಳ್ಳುವುದು ಗೊತ್ತಿದೆ.

ಅಧ್ಯಕ್ಷರು.—ಎಲ್ಲ ಸದಸ್ಯರು ಸಂಯಮದಿಂದ ವರ್ತನೆ ಮಾಡಬೇಕೆಂದು ನನ್ನ ಪ್ರಾರ್ಥನೆ. ಮಾನ್ಯ ಯಡಿಯೂರಪ್ಪನವರು ಇಷ್ಟು ಉದ್ರೇಕಗೊಳ್ಳಬೇಕಾಗಿಲ್ಲ, ಕೋಪ ಯಾವಾಗ ಬರುತ್ತೆ, ಆರ್ಗ್ಯುಮೆಂಟ್ಸ್ ಮುಗಿದ ಮೇಲೆ. ಎಲ್ಲರೂ ಚುನಾಯಿತರಾಗಿ ಇಲ್ಲಿಗೆ ಬಂದಿದ್ದಾರೆ. ಯಾರೂ ಇನ್ನೂ ಅಕೌಂಟ್ಸ್ ಕೊಟ್ಟಿಲ್ಲ. ಕೆಲವರು ಕೊಟ್ಟಿದ್ದಾರೆ. ಒಬ್ಬರ ಮೇಲೆ ಒಬ್ಬರು ನಿಂದನೆ ಮಾಡುವುದು ಸರಿಯಲ್ಲ. ನಾಚಿಕೆಗೇಡು ಎನ್ನುವ ಪದಗಳನ್ನು ಆದಷ್ಟೂ ಉಪಯೋಗಿಸದೇ ಇರುವುದಕ್ಕೆ ಪ್ರಯತ್ನ ಮಾಡಬೇಕು. ಈಗ ನಡೆದ ಚರ್ಚೆಗೆ ಸ್ಪಷ್ಟೀಕರಣ ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ, ಸ್ಪಷ್ಟೀಕರಣದ ಚೌಕಟ್ಟಿಗೆ ಅದನ್ನು ಸೀಮಿತ ಮಾಡಿಕೊಂಡರೆ ಈ ಗಡಿಬಿಡಿ ತಪ್ಪಿಸಬಹುದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಒಂದು ಮನವಿ. ಮಾನ್ಯ ಯಡಿಯೂರಪ್ಪನವರು ಸುಮಾರಾಗಿ ಮೂರನೆಯ ಸಲ ಈ ಮನೆಯ ಸದಸ್ಯರಾಗಿ ಬರುತ್ತಿದ್ದಾರೆ, ಅವರು ವಿಷಯಗಳನ್ನು ಪ್ರಸ್ತಾಪ ಮಾಡುವಾಗ ಯಾವ ಸಮಸ್ಯೆಗಳಿವೆ ಅವುಗಳ ಬಗ್ಗೆ ಸರಿಯಾದ ರೀತಿಯಿಂದ, ತಾಳ್ಮೆಯಿಂದ ಪ್ರಸ್ತಾಪ ಮಾಡಿದರೆ ನಾವು ಕೇಳುತ್ತೇವೆ. ಆದರೆ ಅವರು ಪದೇ ಪದೇ ಎದ್ದಾಗ ನಿಮಗೆ ನಾಚಿಕೆ ಬರಬೇಕು ಎಂದು ಹೇಳಿದರೆ ಹೇಗೆ ? ಅವರು ಮೊದಲನೆಯ ಸಲ ಆ ರೀತಿ ಹೇಳಿದಾಗ ನಾನು ನನ್ನ ಫಿಂಗರ್ಸ್ ರೈಸ್ ಮಾಡಿದರೆ ತಾವು ಗಮನಿಸಲಿಲ್ಲ. ಎರಡನೆಯ ಸಲ ಫಾರೆಸ್ಟ್ ಲ್ಯಾಂಡ್ ವಿಷಯವನ್ನು ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿಯೂ ಸಹ ನಾಚಿಕೆಯಾಗಬೇಕು ಎಂದು ಹೇಳಿದರು. ಅವರು ಧರಣಿ ಮಾಡುವಾಗ ನಾವು ಅವರಿಗೆ ಸಪೋರ್ಟ್ ಮಾಡಲಿಲ್ಲ ಎಂದು ಚುಚ್ಚಿ ಮಾತನಾಡತಕ್ಕದ್ದು ಈ ಸದನಕ್ಕೆ ಗೌರವ ತರತಕ್ಕದ್ದು ಅಲ್ಲ. ಮಾನ್ಯ ಸದಸ್ಯರು ಎಷ್ಟು ಜೋರಾಗಿ ಮಾತನಾಡುತ್ತಿದ್ದೀರೋ ಅದಕ್ಕಿಂತಲೂ ಹೆಚ್ಚು ಜೋರ ಮಾತನಾಡತಕ್ಕ ಶಕ್ತಿ ಈ ಕಡೆಯವರಿಗೂ ಇದೆ ಎಂದು ತಿಳಿದುಕೊಳ್ಳಬೇಕು. ಮಾನ್ಯ ಸದಸ್ಯರು ಏನಾದರೂ ಮಾತನಾಡಿದರೆ ನೇರವಾಗಿ ಮಾತನಾಡ, ಒತ್ತಿ ಮಾತನಾಡಲಿ, ಅವರ ಪ್ರತಿಭೆಯನ್ನು ಬೀರಿ ತಮ್ಮ ಮನವೊಲಿಸತಕ್ಕ ಕೆಲಸ

ಮಾಡಲಿ. ಆದರೆ ಈ ರೀತಿಯಲ್ಲಿ ಬಯ್ಯುವ ಕೆಲಸವನ್ನು ಮಾಡಬಾರದು. ಇದರ ಬಗ್ಗೆ ಅವರಿಗೆ ವಾರ್ನಿಂಗ್ ಕೊಡಬೇಕೆಂದು ಮಾನ್ಯ ಸಭಾಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಆ ಶಬ್ದವನ್ನು ಉಪಯೋಗಿಸಿದ್ದು ನಿಜ ಆದರೆ ಅದು ಅನ್‌ಪಾರ್ಲಿಮೆಂಟರಿ ಅಲ್ಲ. ಸನ್ಮಾನ್ಯ ಸದಸ್ಯರು ಈ ಕಡೆ ಕುಳಿತಿದ್ದಂತಹ ಸಂದರ್ಭದಲ್ಲಿ ರೈತನ ಸಮಸ್ಯೆ ಬಂದಾಗ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಸಂದರ್ಭ ಹೇಳಿ...

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ತರಹ ಬೆದರಿಸುವುದು ನಡೆಯುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಹೇಳುವುದು ಎಲ್ಲರಿಗೂ ಗೊತ್ತಿದೆ; ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಏನು ಗೊತ್ತಿದೆ ಎನ್ನುವುದನ್ನು ಹೇಳಿ.

(ಭಾರಿ ಗೊಂದಲ)

ಅಧ್ಯಕ್ಷರು.—ಮೊದಲನೆಯ ಚರ್ಚೆಗೆ ನಡೆದ ಉತ್ತರಕ್ಕೆ ಒಂದು ಗಂಟೆ ಐದು ನಿಮಿಷ ಆಯಿತು. ಇನ್ನು ನಾವು ಈ ಕಾಲವನ್ನು ಈ ಸ್ಪಷ್ಟೀಕರಣ ಎನ್ನತಕ್ಕಂಥ ಅಂಕಣದಲ್ಲಿ ಹೆಚ್ಚು ಉಪಯೋಗಿಸುವುದಕ್ಕೆ ಆಗುವುದಿಲ್ಲ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೆ, ಸಂಪೂರ್ಣವಾಗಿ ಯಡಿಯೂರಪ್ಪನವರೇ ಚರ್ಚೆ ಮಾಡಿರುವ ಹಾಗೆ ಆದರೆ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೆ,...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ನನ್ನ ಪ್ರಶ್ನೆ ಇಷ್ಟೆ, ಬಹಳ ಜನ ಸದಸ್ಯರುಗಳಿಗೆ ವಯಸ್ಸಾಗಿದೆ. ವಯಸ್ಸಾದವರೆಲ್ಲರೂ ಕೂಗಿಕೊಳ್ಳುತ್ತಿದ್ದಾರೆ. ಏನಾದರೂ ಹೆಚ್ಚು ಕಡಿಮೆಯಾದರೆ ಕಷ್ಟ ಆಗುತ್ತದೆ. ಬೈ ಎಲೆಕ್ಷನ್ ಆಗಬಾರದು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅನೇಕ ಜನ ಶಾಸಕರು ರಕ್ತದ ಒತ್ತಡವಲ್ಲಿದ್ದಾರೆ. ಈಗತಾನೆ ಚುನಾವಣೆಯಿಂದ ಗೆದ್ದು ಬಂದಿದ್ದಾರೆ. ನಾನು ಇದನ್ನು ಸದುದ್ದೇಶದಿಂದ ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಡಾಕ್ಟರ್ ರೆಡಿ ಇದ್ದಾರೆ, ಅದರ ಬಗ್ಗೆ ಕಾಳಜಿ ಬೇಡ.

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪ ನವರು ನನ್ನನ್ನು ಒಂದು ಪ್ರಶ್ನೆ ಕೇಳಿ ಅದಕ್ಕೆ ಸ್ಪಷ್ಟೀಕರಣವನ್ನು ಬೇಡಿದ್ದಾರೆ. ಅವರಿಗೆ ನಾನು ಆಭಾರಿ ಯಾಗಿದ್ದೇನೆ. ಅದಕ್ಕೆ ಸ್ಪಷ್ಟೀಕರಣವನ್ನು ಕೊಡತಕ್ಕದ್ದು ಅವಶ್ಯಕವೆಂದು ನಾನು ನಿಂತಿದ್ದೇನೆ. ಇದು ಬಹಳ ದಿಗ್ಭ್ರಮೆಗೊಳಿಸತಕ್ಕ ಪ್ರಶ್ನೆ ಎಂದು ನನಗನಿಸುತ್ತದೆ. ಅವರು ಏನು ಕೇಳಿದ್ದಾರೆಂದರೆ, ಒಂದು ವೇಳೆ ಕೇಂದ್ರ ಸರ್ಕಾರದವರು ನೀವು ಕೊಡತಕ್ಕ ೩೬೦ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡುವುದನ್ನು ಅಂದರೆ ಇಷ್ಟು ಹಣವನ್ನು ಅವರು ಪೂರ್ತಿಯಾಗಿ ಕೊಡದೇ ಹೋದರೆ, ಇದರಲ್ಲಿ ಸ್ವಲ್ಪ ಭಾಗವನ್ನು ಕೊಟ್ಟು ಉಳಿದುದನ್ನು ನಾವು ಕೊಡುವುದಿಲ್ಲವೆಂದು ಹೇಳಿದರೆ ಆಗ ನೀವು

ಏನು ಮಾಡುತ್ತೀರಿ ಎಂದು ನನ್ನನ್ನು ಕೇಳಿದ್ದಾರೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರಿಗೆ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಯಾವುದೇ ಒಂದು ಪಕ್ಷ ಅಧಿಕಾರಕ್ಕೆ ಬರುವುದಕ್ಕೆ ಮುನ್ನ ಜನತೆಗೆ ಏನೊಂದು ಭರವಸೆಯನ್ನು ಕೊಡುತ್ತದೆ, ಆಶ್ವಾಸನೆಯನ್ನು ಕೊಡುತ್ತದೆ ಆ ಆಶ್ವಾಸನೆಯನ್ನು ಮುರಿದು ವಚನಭ್ರಷ್ಟವಾದರೆ ಆ ಪಕ್ಷ ಆ ಸ್ಥಾನದಲ್ಲಿ ಒಂದು ಗಂಟೆ ಕೂಡ ಇರುವುದಕ್ಕೆ ಲಾಯಕ್ಕಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತು ೩೬೦ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡುವ ವಿಚಾರವನ್ನು ನಾನು ಹೇಳಿದ್ದೇನೆ. ನನ್ನ ಹತ್ತಿರ ಎರಡು ಮಾತಿಲ್ಲ ರೀ ಥಿಂಕಿಂಗ್ ಇಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾಗಿ ಯಡಿಯೂರಪ್ಪನವರು ರೈತನ ಸಾಲವನ್ನು ಮನ್ನಾ ಮಾಡಬೇಕೆಂದು ೨ ಹೆಜ್ಜೆ ಮುಂದಿಟ್ಟರೆ, ಮುಖ್ಯಮಂತ್ರಿಯಾಗಿ ನಾನು ೪ ಹೆಜ್ಜೆ ಮುಂದಿರುವುದಕ್ಕೆ ತಯಾರಿದ್ದೇನೆ. ನಾನು ಯಡಿಯೂರಪ್ಪನವರನ್ನು ಕೇಳುತ್ತೇನೆ. ನಿಮ್ಮ ಪಕ್ಷದ ಬೆಂಬಲ ಇಲ್ಲದೇ ಇದ್ದಿದ್ದರೆ ಇವತ್ತು ವಿ.ಪಿ. ಸಿಂಗ್‌ರವರು ಪ್ರಧಾನ ಮಂತ್ರಿಯಾಗಿ ಅಲ್ಲಿ ಕೂಡುತ್ತಿರಲಿಲ್ಲ. ಒಂದು ವೇಳೆ ಪ್ರಧಾನಮಂತ್ರಿಯಾಗಿರತಕ್ಕ ವಿ.ಪಿ. ಸಿಂಗ್‌ರವರು ಈ ಆಶ್ವಾಸನೆಯನ್ನು ಏನು ಕೊಟ್ಟಿದ್ದಾರೆ ಅದನ್ನು ಈಗ ಈಡೇರಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ನಾನು ಇದಕ್ಕೆ ಸಲಹೆ ಮಾಡುತ್ತೇನೆ, ಕೇಂದ್ರದಲ್ಲಿ ನಿಮ್ಮ ನಾಯಕರಿಗೆ ಹೇಳಿ ಅವರಿಗೆ ಷೋಕಾಸ್ ನೋಟೀಸ್‌ನ್ನು ಕೊಡುವಂತೆ ತಿಳಿಸಿ. You say if you do not implement this we are going to withdraw our support ಎಂದು ಹೇಳಿದರೆ within 24 hours. ಆ ಸರ್ಕಾರ ತಕ್ಷಣ ದಢಂ ಎಂದು ಬೀಳುತ್ತದೆ. ಆನಂತರ ಮುಂದಿನ ಸರ್ಕಾರದಿಂದ ೩೬೦ ಕೋಟಿ ರೂಪಾಯಿಗಳನ್ನು ತರತಕ್ಕ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ. The whole Government at the Centre is at your mercy. ನಿಮ್ಮ ಉಪಕಾರದಿಂದ, ನಿಮ್ಮ ಸಹಾಯದಿಂದ, ಅವರು ಇವತ್ತು ಅಲ್ಲಿ ಅಧಿಕಾರದಲ್ಲಿ ಕುಳಿತಿದ್ದಾರೆ. ಅವರ ಬಗ್ಗೆ ನಿಮಗೇ ಸಂಶಯವಿದ್ದರೆ ಇನ್ನು ನನಗೆಷ್ಟು ಇರಬಹುದೆಂದು ನೀವೇ ಹೇಳಿ. ಆದರೆ ನಾನು ಸಂಶಯವನ್ನು ವ್ಯಕ್ತ ಮಾಡಲಿಲ್ಲ, ನಾನು ಹೇಳಿದೆ, ಅವರ ಬಗ್ಗೆ ನನಗೆ ನಂಬಿಕೆ ಇದೆ, ಅವರು ನಂಬಿಕೆಯನ್ನು ಉಳಿಸಿಕೊಳ್ಳುತ್ತಾರೆ, ಅವರು ವಚನಭ್ರಷ್ಟರಾಗುವುದಿಲ್ಲ. ಕೊಟ್ಟ ವಚನವನ್ನು ಉಳಿಸಿಕೊಳ್ಳುತ್ತಾರೆ ಎಂದು. ಈಗಲೂ ಅದನ್ನೇ ಹೇಳುತ್ತಿದ್ದೇನೆ, ಆ ಪಕ್ಷವನ್ನು ನೀವು ಅಧಿಕಾರದಲ್ಲಿ ಕೂಡಿಸಿ ಇವತ್ತು ಅವರು ನಾಯಕರಾಗಿ ಅಲ್ಲಿ ಕೂಡುತ್ತಾರೋ ಇಲ್ಲವೋ ಅಂತ ತಾವು ಏನು ಅಂದುಕೊಂಡಿದ್ದೀರಿ. ಆ ಬಗ್ಗೆ ನನಗನಿಸುತ್ತದೆ, ಇದು ನಿಮಗೆ ಶೋಭೆಯನ್ನು ತರುವಂಥಾದ್ದಲ್ಲ, ನಿಮ್ಮ ಪಕ್ಷಕ್ಕೆ ಶೋಭೆಯನ್ನು ತರುವಂಥಾದ್ದಲ್ಲ ಎಂದು ನೀವು ಇವತ್ತು ಅಲ್ಲಿ ನಿಂತು ಹೇಳಬೇಕು. ಈ ಆಶ್ವಾಸನೆಯನ್ನು ನ್ಯಾಷನಲ್ ಫ್ರಂಟ್‌ನವರು ಕೊಟ್ಟಿದ್ದಾರೆ. ಅದನ್ನು ನಡೆಸಿಕೊಡದೇ ಹೋದರೆ ಕೇವಲ ೨೪ ಗಂಟೆಯೊಳಗೆ ನಮ್ಮ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಆಗ ನಾನೇ ನಿಮ್ಮ ಬೆನ್ನನ್ನು ಚಪ್ಪರಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ನಾವೂ ಕೂಡ ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದೇವೆ.

(ಗೊಂದಲ)

ಸ್ವಾಮಿ ಈ ಸರ್ಕಾರದವರು ರೈತರ ಸಾಲವನ್ನು ಮನ್ನಾ ಮಾಡುವಂಥ ಧೈರ್ಯವನ್ನು ಮಾಡದೇ ಇರತಕ್ಕ ನೀತಿಯನ್ನು ನಾನು ಪ್ರತಿಭಟನೆ ಮಾಡುತ್ತೇನೆ. ಇವರು ಕೇವಲ ಕೇಂದ್ರ ಸರ್ಕಾರವನ್ನು ಆಶ್ರಯ ಮಾಡಿಕೊಂಡು ಕೂತಿದ್ದಾರೆ. ರೈತರ ಸಾಲವನ್ನು ಮನ್ನಾ ಮಾಡುತ್ತೇನೆಂದು ಚುನಾವಣಾ ಸಂದರ್ಭದಲ್ಲಿ ಹೇಳಿ ಅಧಿಕಾರಕ್ಕೆ ಬಂದು ಈಗ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಆದ್ದರಿಂದ ಇವರ ನೀತಿಯನ್ನು ಪ್ರತಿಭಟನೆ ಮಾಡಿ ನಮ್ಮ ಪಕ್ಷದವರು ವಾಕೌಟ್ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ.ಯ ಮಾನ್ಯ ಯಡಿಯೂರಪ್ಪನವರೂ ಹಾಗೂ, ಆ ಪಕ್ಷದ ಇತರ ಸದಸ್ಯರು ಸಭಾತ್ಯಾಗ ಮಾಡಿದರು.)

SRI QUMARUL ISLAM.—I want a small clarification from the Hon'ble Chief Minister. Very beautifully the Hon'ble Chief Minister said that the National front has promised to waive off the loan of not only the farmers. But also the artisans and weavers. And then in your manifesto it is there. Hon. Chief Minister has said that about Rs. 350 crores will be waived off for the farmers and he will take immediate steps and he is going to Delhi. I wanted to request you also to plead the case of the artisans and others in

addition to that of the farmers, because that was promised by the National Front Government, with same interest as you are taking the intirest of the farmers. You take the interest of the artisans and others in addition to that of the farmers to waive off that. I wanted that clarification.

Sri Veerendra Patil.—Mr. Speaker, I am in entire agreement with the contention of the Hon. Member. When I am going to plead the case of the marginal farmers I will plead the case of the artisons also' and landless labourers as they have promised in their election manifesto.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ......

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತನ್ನು ಮಾನ್ಯ ವಿರೋಧಪಕ್ಷದ ನಾಯಕರು ವಿರೋಧಿಸಿ ವಾದ ಮಾಡುವುದಕ್ಕೆ ಮೊದಲೂ ಕೆಲವು ಸಲಹೆಗಳನ್ನು ಕೊಡುತ್ತೇನೆ,

ಅಧ್ಯಕ್ಷರು.—ಅವರು ಮೊದಲು ಮಾತನಾಡಲಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂಥ ಸಾಲದ ವಿವರ ೩೬೦ ಕೋಟಿ ರೂಪಾಯಿಗಳು. ಇದರಲ್ಲಿ ಹತ್ತು ಸಾವಿರ ರೂಪಾಯಿಗಳ ಒಳಗೆ ಇರುವುದು ಬರೀ ಸಾಲವೇ ಅಥವಾ ಅದರೊಳಗೆ ಬಡ್ಡಿ. ಚಕ್ರಬಡ್ಡಿ ಮತ್ತು ಸುಸ್ತಿ ಬಡ್ಡಿ ಸೇರಿದಿಯೋ ಎನ್ನುವುದನ್ನು ತಿಳಿಸಬೇಕು, ಎರಡನೆಯದಾಗಿ, ಹತ್ತು ಸಾವಿರ ರೂಪಾಯಿಗಳ ಒಳಗೆ ಇರತಕ್ಕಂಥ ಸಾಲ ಯಾವ ಯಾವ ಕ್ಯಾಟಗರೀಸ್‌ಗೆ ಸೇರಿದ್ದು ಎನ್ನುವ ಬಗ್ಗೆ ವಿವರಣೆ ಇದೆಯೇ ? ಏತಕ್ಕೆಂದರೆ ಒಂದು ಲಕ್ಷ ರೂಪಾಯಿ ಆದಾಯವಿರುವಂಥವರು ಸಾಲವನ್ನು ತೆಗೆದುಕೊಂಡಿರುತ್ತಾರೆ, ಹತ್ತು ಲಕ್ಷ ರೂಪಾಯಿ ಆದಾಯ ಇರುವವರೂ ಸಾಲವನ್ನು ತೆಗೆದುಕೊಂಡಿರುತ್ತಾರೆ. ಸಾಲ ಮಾಡಿರುವವರು ಇಂತಿಂಥ ಕ್ಯಾಟಗರೀಸ್‌ನಲ್ಲಿ ಬರುತ್ತಾರೆಂದು ಪಟ್ಟಿ ತಯಾರು ಮಾಡಿದ್ದೀರಾ ? ಮತ್ತೆ ಬಹಳ ಮುಖ್ಯವಾಗಿ ರಾಜ್ಯದ ರೈತರು ಸಾಲವನ್ನು ತೀರಿಸುವ ಬಗ್ಗೆ ಮತ್ತು ಸಾಲವನ್ನು ವಜಾ ಮಾಡುವ ಬಗ್ಗೆ ನಿಮ್ಮ ಸರ್ಕಾರದಿಂದ, ಮತ್ತು ನಿಮ್ಮ ಪಕ್ಷದಿಂದ ಯಾವ ರೀತಿಯ ಕಮಿಟ್‌ಮೆಂಟ್ ಸಹ ಇಲ್ಲವೆಂದು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ. ಮಾನ್ಯ ವಿರೋಧಪಕ್ಷದ ನಾಯಕರು ಕೇಳಿದ ಬಗ್ಗೆ ನಮ್ಮಲ್ಲಿ ೧೦ ಸಾವಿರ ರೂಪಾಯಿಗಳವರೆಗೆ ಇರುವಂಥ ಸಾಲದ ಡಿಟೇಲ್ಸ್ ಇದೆ. ಆದರೆ ಶಾರ್ಟ್‌ಟರ್ಮ್ ಲೋನ್, ಮಿಡಿಯಮ್‌ಟರ್ಮ್‌ಲೋನ್, ಮತ್ತು ಲಾಂಗ್‌ಟರ್ಮ್‌ಲೋನ್‌ದ್ದು ಮೂರು ಸೇರಿ, ಇದರಲ್ಲಿ ಹೆಚ್ಚು ಶಾರ್ಟ್‌ಟರ್ಮ್ ಲೋನ್ ತೆಗೆದುಕೊಂಡವರದ್ದೇ ವಿವರವಿದೆ. ಏತಕ್ಕೆಂದರೆ ರೈತರು ಕೃಷಿಗಾಗಿ ವರ್ಷವರ್ಷ ಲೋನ್ ತೆಗೆದುಕೊಳ್ಳುತ್ತಿರುತ್ತಾರೆ. ಇದೇ ಹೆಚ್ಚು ಇರುತ್ತದೆ, ಇವತ್ತು ಶಾರ್ಟ್‌ಟರ್ಮ್, ಮೀಡಿಯಮ್ ಟರ್ಮ್ ಪ್ರಿನ್ಸಿಪಲ್ ಅಮೌಂಟ್ ೨೭೮.೯೨ ಕೋಟಿ ಇಂಟರೆಸ್ಟ್ ೪೬.೮೩ ಕೋಟಿ ಇದು ೩೦-೬-೮೯ ರ ಪ್ರಕಾರ ಇವೆರಡುಸೇರಿ ಒಟ್ಟು ೩೨೬ ಕೋಟಿ ರೂಪಾಯಿಗಳಾಗುತ್ತದೆ. ಲಾಂಗ್ ಟರ್ಮ್ ಲೋನ್ ಪ್ರಿನ್ಸಿಪಲ್ ಅಮೌಂಟ್ ೩೨.೦೨ ಕೋಟಿ ಇಂಟರೆಸ್ಟ್ ೩೫ ಲಕ್ಷ ಶಾರ್ಟ್‌ಟರ್ಮ್‌ಲೋನ್, ಮೀಡಿಯಮ್ ಟರ್ಮ್ ಲೋನ್, ಲಾಂಗ್‌ಟರ್ಮ್‌ಲೋನ್ ಸೇರಿ ಒಟ್ಟು ೩೫೯.೧೨ ಕೋಟಿ. ಇನ್ನು ವರ್ಷವರ್ಷೇ ಸಾಲ ಪಡೆಯುವವನು ಎಂದರೆ ಕೃಷಿಗಾಗಿ ವ್ಯವಸಾಯಕ್ಕಾಗಿ ದುಡ್ಡು ಬೇಕು ಎನ್ನುವವರು ಬಡವರೇ ಹೊರತು ಶ್ರೀಮಂತರು ಸಾಲ ತೆಗೆದುಕೊಳ್ಳುವುದಿಲ್ಲ. ಈ ಲೆಕ್ಕದಲ್ಲಿ ಬಡವರು ಎಷ್ಟು, ಶ್ರೀಮಂತರು ಎಷ್ಟು ಎನ್ನುವುದನ್ನು ತಿಳಿದುಕೊಳ್ಳಬೇಕೆಂದರೆ ಟೈಮ್ ತೆಗೆದುಕೊಳ್ಳುತ್ತದೆ. ಇವತ್ತು ಅದರ ವಿವರ ನನ್ನ ಹತ್ತಿರವಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ......

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ. ಮಾನ್ಯ ವಿರೋಧಪಕ್ಷದ ನಾಯಕರು ರೈತರ ಸಾಲ ಮನ್ನಾ ಮಾಡತಕ್ಕ ವಿಚಾರದಲ್ಲಿ ಪ್ರಸ್ತಾಪ ಮಾಡಿ, ನಮ್ಮ ರೈತರ ಸಾಲದ ಹೊರೆ ಎಷ್ಟಿದೆ ಎಂಬುದನ್ನು ಕೇಂದ್ರ ಸರ್ಕಾರಕ್ಕೆ ಮುಟ್ಟಿಸತಕ್ಕ......

ಶ್ರೀ ಡಿ. ಬಿ. ಚಂದ್ರೇಗೌಡ.—ಕಮಿಟ್‌ಮೆಂಟ್ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಕೃಷಿಕರು ಮತ್ತು ಇನ್ನಿತರ ಕಸಬು ಮಾಡತಕ್ಕ ಜನರದ್ದು ಹೇಳಿದೆ. ಕೃಷಿಕರು ಅಂದರೆ ಭೂಮಿ ಇದ್ದವರು ಬರುತ್ತಾರೆ ಮತ್ತು ಭೂಮಿ ಇಲ್ಲದೆ ಕೂಲಿ ಮಾಡುವವರು ಇವರಲ್ಲಿ ಸೇರಿದ್ದಾರೆ. ಮುಖ್ಯಮಂತ್ರಿಗಳು ಹೇಳುವಾಗ ಷಾರ್ಟ್ ಟರ್ಮ್, ಲಾಂಗ್ ಟರ್ಮ್ ಮೀಡಿಯಂ ಟರ್ಮ್ ಲೋನ್ ಬಗ್ಗೆ ಹೇಳಿದ್ದಾರೆ. ಇವತ್ತು ಕೆಲವರಿಗೆ ಸಬ್ಸಿಡಿ ಮುಖಾಂತರ ಹಣವನ್ನು ಕೊಟ್ಟಿದ್ದಾರೆ, ಐ. ಆರ್. ಡಿ. ಪಿ, ಲೋನ್, ಡಿ. ಆರ್. ಲೋನ್ ಎಲ್ಲ ಗೊಟ್ಟಿದ್ದಾರೆ. ಎತ್ತು, ಎಮ್ಮೆ, ಕುರಿ ಕೊಳ್ಳುವುದಕ್ಕೆ ಸಾಲ ಕೊಟ್ಟಿದ್ದಾರೆ. ಕಾರ್ಮಿಕರಿಗೆ ಸಣ್ಣ ಹಿಡುವಳಿದಾರರಿಗೆ ಅತಿ ಸಣ್ಣ ಹಿಡುವಳಿದಾರರಿಗೆ ಕುಶಲಕರ್ಮಿಗಳಿಗೆ ಹಾಗೂ ಜನತಾ ಮನೆಗಳಿಗೆ ಸಾಲ ಕೊಟ್ಟಿದ್ದಾರೆ. ವೀವರ್ಸ್‌ಗೆ ಸಾಲ ಕೊಟ್ಟಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಯನ್ನು ಅವಲಂಬಿಸಿರತಕ್ಕವರಿಗೆ ಕೊಟ್ಟಿರತಕ್ಕ ಅಲ್ಪಾವಧಿ, ಮಧ್ಯಮಾವಧಿ ಮತ್ತು ಇತರೇ ಸಾಲಗಳನ್ನು ಲೆಕ್ಕ ಹಾಕಿ ಕೇಂದ್ರ ಸರ್ಕಾರದಿಂದ ಕೃಷಿ ಕಾರ್ಮಿಕರಿಗೆ, ಸಣ್ಣ ಹಿಡುವಳಿದಾರರಿಗೆ ಮತ್ತು ಅತೀ ಸಣ್ಣ ಹಿಡುವಳಿದಾರರಿಗೆ ಸಿಗುವಂಥ ಎಲ್ಲಾ ಸೌಲಭ್ಯಗಳನ್ನು ಪಡೆಯುವ ಬಗ್ಗೆ ವಾದವನ್ನು ಕೇಂದ್ರ ಸರ್ಕಾರದ ಮುಂದೆ ಇಡಬೇಕು. ಮತ್ತು ಅವರು ಇದನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ತಾವು ಕೊಟ್ಟಿರತಕ್ಕ ಲೆಕ್ಕದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಪಡೆದ ಸಾಲವನ್ನು ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ಪಡೆದಿರತಕ್ಕ ಸಾಲ ಸೇರಿದೆಯೋ ಅಥವಾ ಸಹಕಾರಿ ಕ್ಷೇತ್ರದಲ್ಲಿ ಮಾತ್ರವೋ ಎಂಬುದನ್ನು ದಯಮಾಡಿ ತಿಳಿಸಬೇಕು.

SRI QUMARUL ISLAM.—I welcome the stand of the Hon'ble Chief Minister to stay the recovery from the farmers. Similaray, I want the State Government to consider and stay recovery of loans as far as artisans are concerned. I request the Chief Minister to consider this issue also.

ಒಬ್ಬ ಮಾನ್ಯ ಸದಸ್ಯರು.—ಒಬ್ಬನೇ ರೈತ ಒಂದೆರಡು ಸಹಕಾರ ಸಂಘಗಳಿಂದ ಸಾಲ ತೆಗೆದುಕೊಂಡಂಥ ಸಂದರ್ಭದಲ್ಲಿ ಫ್ಯಾಮಿಲೀಸ್ ಸೀಲಿಂಗ್ ತರುತ್ತೀರಾ ಅಥವಾ ಒಂದೊಂದನ್ನು ಬೇರೆ ಬೇರೆ ಮಾಡುತ್ತೀರಾ ? ಉದಾಹರಣೆಗೆ ವಿ.ಎಸ್.ಐ.ಎಲ್ ನಲ್ಲಿ ಮತ್ತು ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡಿರುತ್ತಾನೆ. ಅವರೆಡನ್ನು ಒಟ್ಟಿಗೆ ಸೇರಿಸುತ್ತೀರೋ ಅಥವಾ ಒಂದೊಂದನ್ನು ಸಹ ಬೇರೆ ಬೇರೆ ಎಂದು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈ ಪ್ರಶ್ನೆ ಮೊನ್ನೆ ಬಂತು. ನಾವು ಬಹಳ ಅವಸರದಲ್ಲಿ ಎಷ್ಟರ ಮಟ್ಟಿಗೆ ಸಾಧ್ಯ ಇತ್ತು ಅಷ್ಟರ ಮಟ್ಟಿಗೆ ಮಾಹಿತಿಯನ್ನು ಸಂಗ್ರಹ ಮಾಡಿದ್ದೇವೆ. ಮುಖ್ಯವಾಗಿ ನಾನು ಹೇಳಿರುವಂಥ ಅಂಕಿ ಸಂಖ್ಯೆಗಳು ನಮ್ಮ ಸಹಕಾರ ಸಂಘಗಳ ಮತ್ತು ಸಹಕಾರಿ ಬ್ಯಾಂಕುಗಳ ಮೂಲಕ ಕೊಟ್ಟಿರತಕ್ಕ ಸಾಲಕ್ಕೆ ಸಂಬಂಧ ಪಟ್ಟಿವೇ ಆಗಿವೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಕೊಟ್ಟಿರತಕ್ಕ ಸಾಲದ ಸವಿಸ್ತಾರವಾದ ವರದಿಯನ್ನು ತರಿಸಿಕೊಳ್ಳುವುದು ಸಾಧ್ಯವಾಗಿಲ್ಲ ಏಕೆಂದರೆ ಅವರಿಗೆ ಬರೆಯಬೇಕು, ಅವರು ಕಳುಹಿಸುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. ಇದೆಲ್ಲ ಸಹಕಾರ ಸಂಘಗಳ ಮೂಲಕ ಕೊಟ್ಟಂತಹ ಸಾಲವೇ ಹೊರತು ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಕೊಟ್ಟಿರತಕ್ಕದ್ದು ಅಲ್ಲ ಅದರ ತಪಶೀಲು ನಮ್ಮ ಹತ್ತಿರ ಇಲ್ಲ.

ಒಬ್ಬ ಮಾನ್ಯ ಸದಸ್ಯರು.—ಉಳಿದ ಎಲ್ಲ ಬ್ಯಾಂಕುಗಳಲ್ಲಿ ರೈತರಿಗೆ ಕೊಟ್ಟಿರತಕ್ಕ ಸಾಲ ಎಷ್ಟಿದೆ ಎಂಬುದನ್ನು ತಿಳಿದು ಉತ್ತರಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ನಮ್ಮಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಇವೆ, ರಾಷ್ಟ್ರೀಕೃತವಾಗದೆ ಇರತಕ್ಕ ಬ್ಯಾಂಕುಗಳು ಇವೆ. ಅವುಗಳಿಲ್ಲ ಎಷ್ಟೆಷ್ಟು ಸಾಲ ಕೊಟ್ಟಿವೆ ಎಂಬುದನ್ನು ಹೆಡ್ ಆಫೀಸ್ ನವರು ತಮ್ಮ ಬ್ರಾಂಚ್ ಆಫೀಸ್‌ಗಳಿಗೆ ಬರೆದು ತಿಳಿದುಕೊಂಡು ನಮಗೆ ಹೇಳಬೇಕಾಗುತ್ತದೆ. ಅದಕ್ಕೆ ಸ್ವಲ್ಪ ಟೈಂ ಹಿಡಿಯುತ್ತದೆ. ಆ ಮಾಹಿತಿಯನ್ನು ಕಲೆಕ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಾನು ಇವತ್ತು ಕೊಟ್ಟಿರತಕ್ಕ ಮಾಹಿತಿ ಸಹಕಾರ ಸಂಘಗಳ ಮೂಲಕ ಕೊಟ್ಟಿರತಕ್ಕ ಸಾಲದ ಬಗ್ಗೆ ಇದೆಯೇ ಹೊರತು ಎರಡನೆಯದು ಇಲ್ಲ. ಮಾನ್ಯ ಸದಸ್ಯರಾದ ಇಸ್ಲಾಂ ಅವರು ಕೇಳಿದ್ದಾರೆ, ಆರ್ಟಿಸಾನ್‌ಗಳಿಗೆ ಸಹಕಾರ ಸಂಘಗಳಿಂದ ಸಾಲ ಕೊಟ್ಟಿದ್ದರೆ ಅದನ್ನು ಕೂಡ ರೈತರ ಸಾಲವನ್ನು ಯಾವ ರೀತಿ ಮುಂದೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರೋ ಅದೇ ರೀತಿ ಮುಂದೆ ಹಾಕಲು ಪ್ರಯತ್ನ ಮಾಡಬೇಕೆಂದು ಹೇಳಿದ್ದಾರೆ. ಅದರ ರಿಕವರಿ ಕೂಡ ಸ್ಟೇ ಮಾಡುತ್ತೇವೆ.

ಶ್ರೀ ಬಾಬುಗೌಡ ಪಾಟೀಲ್.—ರಾಷ್ಟ್ರೀಕೃತ ಬ್ಯಾಂಕು ಮತ್ತು ಕಮರ್ಷಿಯಲ್ ಬ್ಯಾಂಕುಗಳು ಕೊಟ್ಟಿರತಕ್ಕ ಸಾಲವನ್ನು ಕೂಡಿಸಿ ಲೆಕ್ಕ ಮಾಡಬೇಕಾಗಿತ್ತು ಎಂಬುದು ನಮ್ಮ ವಾದ.

ಶ್ರೀ ವೀರೇಂದ್ರ ಪಾಟೀಲ್.—ರಾಷ್ಟ್ರೀಕೃತ ಬ್ಯಾಂಕುಗಳು ನಮ್ಮ ಹತೋಟಿಯಲ್ಲಿಲ್ಲ. ಕೇಂದ್ರ ಸರ್ಕಾರದವರು ಈ ಕೆಲಸ ಮಾಡಬೇಕು. ಅವರು ಈಗಾಗಲೇ ಆ ಕೆಲಸವನ್ನು ತೆಗೆದುಕೊಂಡಿದ್ದಾರೆ. ನಾವೂ ಅದನ್ನು ಮಾಡಬಹುದು. ಆದರೆ ಬಹಳ ಸಮಯ ಹಿಡಿಯುತ್ತದೆ. ಏಕೆಂದರೆ ರಾಷ್ಟ್ರೀಕೃತ ಬ್ಯಾಂಕುಗಳ ಶಾಖೆಗಳು ಎಲ್ಲಾ ಕಡೆ ಇವೆ. ಎಲ್ಲಾ ಬ್ರಾಂಚುಗಳಿಗೆ ಬರೆದು ಮಾಹಿತಿ ಸಂಗ್ರಹಿಸಬೇಕಾಗುತ್ತದೆ. ಇದನ್ನು ಒಂದೆರಡು ವಾರಗಳಲ್ಲಿ ಮಾಡುವುದಕ್ಕಾಗುವುದಿಲ್ಲ. ಆದರೆ ಮಾನ್ಯ ಸದಸ್ಯರು ಹೇಳಿದರೆ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಬರೆದು ವಿವರಗಳನ್ನು ಸಂಗ್ರಹಿಸುವುದಕ್ಕೆ ಪ್ರಯತ್ನ ಮಾಡಬಹುದು.

ಶ್ರೀ ಬನ್ನಿಕೋಡ ಬಸಪ್ಪ ಹನುಮಂತಪ್ಪ.—ಕೇಂದ್ರ ಸರ್ಕಾರದಿಂದಾಗಲೀ ಅಥವಾ ಬ್ಯಾಂಕುಗಳಿಂದಾಗಲೀ ವಿವರ ತರಿಸಿಕೊಂಡು ೧೦ ಸಾವಿರ ರೂಪಾಯಿಗಳವರೆಗೆ ರೈತರ ಸಾಲ ಮನ್ನಾ ಮಾಡಬೇಕು.

ಶ್ರೀ ಎ. ನಾಗರಾಜ್.—ಸನ್ಮಾನ್ಯ ಅಧ್ಯಕ್ಷರೆ, ಈ ಸಭೆಯ ನಾಯಕರೂ ರಾಜ್ಯದ ಮುಖ್ಯ ಮಂತ್ರಿಗಳೂ ಆದ ಶ್ರೀಮಾನ್ ವೀರೇಂದ್ರಪಾಟೀಲರು ೧೦ ಸಾವಿರ ರೂಪಾಯಿವರೆಗಿನ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ೩೬೦ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ರೈತರು ಯಂ.ಎಸ್.ಎಸ್. ಸೊಸೈಟಿಯಿಂದ ೧೦ ಸಾವಿರ ರೂಪಾಯಿ, ಎಸ್.ಎಫ್.ಸಿ. ಯಿಂದ ೧೦ ಸಾವಿರ ರೂಪಾಯಿವರೆಗೂ ಸಾಲ ತೆಗೆದುಕೊಳ್ಳುತ್ತಾರೆ. ಆದರೆ ಪಿ.ಎಲ್.ಡಿ. ಬ್ಯಾಂಕಿನಿಂದ ದೀರ್ಘಾವಧಿ ಸಾಲ ಏನು ಪಡೆಯುತ್ತಾರೆ ಅದು ಮಿನಿಮಂ ೧೨ ಸಾವಿರ ರೂಪಾಯಿ ಇರುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಏನು ಮನವಿ ಮಾಡಿಕೊಳ್ಳುತ್ತೇನೆಂದರೆ ೨೫ನೇ ತಾರೀಖು ಕೇಂದ್ರಕ್ಕೆ ಮನವಿ ಸಲ್ಲಿಸುವಾಗ ೧೦ ಸಾವಿರ ರೂಪಾಯಿ ಇರುವುದನ್ನು ೧೨ ಸಾವಿರ ರೂಪಾಯಿಗೆ ರೈಸ್ ಮಾಡಿದರೆ ರೈತರಿಗೆ ಒಳ್ಳೆಯದಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ನಾವು ಆ ರೀತಿ ಕೇಳುವುದು ತಪ್ಪಾಗುತ್ತದೆ. ಅವರು ಏನು ಕಮಿಟ್‌ಮೆಂಟ್ ಮಾಡಿದ್ದಾರೆ ಅಷ್ಟಕ್ಕೆ ಆನರ್ ಮಾಡಿ ಎಂದು ಕೇಳುವುದಕ್ಕೆ ನಮಗೆ ನೈತಿಕ ಬಲ ಇರುತ್ತದೆ. ಇನ್ನೂ ಹೆಚ್ಚು ಕೇಳುವುದಕ್ಕೆ ಹೋದರೆ ನಮ್ಮ ನೈತಿಕ ಬಲವನ್ನು ಕಳೆದುಕೊಳ್ಳುತ್ತೇವೆ. ಆದ್ದರಿಂದ ಅದನ್ನು ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕೇಂದ್ರ ಸರ್ಕಾರ ಕಳೆದ ಎರಡು ವರ್ಷಗಳ ಹಿಂದೆ ಲೋನ್‌ಮೇಳ ಅಂತ ಮಾಡಿದಾಗ ವಾಣಿಜ್ಯ ಬ್ಯಾಂಕಿನಿಂದ ೫ ಸಾವಿರ ರೂಪಾಯಿಗಳನ್ನು ಬಹಳಷ್ಟು ರೈತರು ಸಾಲವಾಗಿ ತೆಗೆದುಕೊಂಡಿದ್ದಾರೆ. ಅದನ್ನೂ ಸೇರಿಸಿ ಕೇಂದ್ರಸರ್ಕಾರಕ್ಕೆ ಮನವಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—೧೦ ಸಾವಿರ ರೂಪಾಯಿ ಸಾಲವನ್ನು ಮನ್ನಾ ಮಾಡುವ ಬಗ್ಗೆ ೨೫ನೇ ತಾರೀಖು ದೆಹಲಿಗೆ ಹೋಗಿ ಕೇಂದ್ರಸರ್ಕಾರದವರನ್ನು ಕೇಳಿಕೊಂಡು ಬರುತ್ತೇನೆ ಎಂದು ಹೇಳಿದ್ದೀರಿ. ಕೇಂದ್ರಸರ್ಕಾರದವರು ಆ ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ತಾವು ತಮ್ಮ ಸರ್ಕಾರದ ಪರವಾಗಿ ನಮ್ಮ ಜನರಿಗೆ ಏನಾದರೂ ಅನುಕೂಲ ಮಾಡಿ. ತಾವು ೨ ಸಾವಿರ ರೂಪಾಯಿಯಾದರೂ ಮನ್ನಾ ಮಾಡಿ. ಬೇರೆಯವರು ಕೊಟ್ಟ ದುಡ್ಡನ್ನು ನೀವು ಹಂಚುವ ಏಜೆನ್ಸಿ ಆಗಬಾರದು. ವೀರೇಂದ್ರ ಪಾಟೀಲರ ಹೊಸ ಸರ್ಕಾರ ಬಂತು ೨ ಸಾವಿರ ರೂಪಾಯಿ ಸಾಲ ಮನ್ನಾ ಮಾಡಿದರು ಎಂದು ಜನ ಹೇಳಿಕೊಳ್ಳುವಂತೆ ೨ ಸಾವಿರ ರೂಪಾಯಿಯಾದರೂ ಮಾಡಿ, ಆಗ ಒಟ್ಟು ೧೨ ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದಂತಾಗುತ್ತದೆ. ಅವರು ಕೊಟ್ಟ ದುಡ್ಡನ್ನು ನೀವು ಹಂಚಬೇಡಿ. ಇದರ ಬಗ್ಗೆ ನಮ್ಮ ರಾಜ್ಯ ಸರ್ಕಾರದ ನಿಲುವು ಏನು ? ಶೀರಾ ಜಾಸ್ತಿ ಬೇಡ. ೨ ಸಾವಿರ ರೂಪಾಯಿಗಳ ರಿಯಾಯಿತಿ ಕೊಡಿ ಸರ್ಕಾರದ ಪರವಾಗಿ ೨ ಸಾವಿರ ಕೊಡಲಿ ಸಾಕು.

ಅಧ್ಯಕ್ಷರು.—ಅವರಿಗೆ ಅರ್ಥವಾಯಿತು.

ಶ್ರೀ ವಾಟಾಳ್ ನಾಗರಾಜ್.—ಆಯಿತಾ ಸರಿ.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೆ, ನಾನು ಈಗ ಜನರಲ್ ಡಿಬೇಟ್ ಮೇಲೆ ರಿಪ್ಲೈ ಮಾಡುತ್ತೇನೆ.

ಅಧ್ಯಕ್ಷರು.—ಮಾಡಿ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾರ್ಪಣಾ ನಿರ್ಣಯದ ಮೇಲೆ ಅನೇಕ ಮಾನ್ಯ ಸದಸ್ಯರು ತಮ್ಮ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಅದಕ್ಕಾಗಿ ನಾನು ಈ ಚರ್ಚೆಯಲ್ಲಿ ಭಾಗವಹಿಸಿರುವಂಥ ಎಲ್ಲಾ ಮಾನ್ಯ ಸದಸ್ಯರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಪ್ರಥಮದಲ್ಲಿ ಒಂದು ವಿಚಾರ ನಾನು ಸ್ಪಷ್ಟಪಡಿಸ ಬೇಕೆಂದಿದ್ದೇನೆ. ಈ ಅಧಿವೇಶನ ಕರೆದಿರುವಂಥದ್ದು ಸೀಮಿತವಾದ ಒಂದು ಉದ್ದೇಶದಿಂದ. ಏಕೆಂದರೆ ಚುನಾವಣೆ ಫಲಿತಾಂಶ ಹೊರಬಂದ ಮೇಲೆ ಮಾನ್ಯ ಸದಸ್ಯರು ಜನರಿಂದ ಆಯ್ಕೆ ಹೊಂದಿದ ಮೇಲೆ ಪ್ರಮಾಣ ವಚನ ಸ್ವೀಕಾರ ಮಾಡುವುದಕ್ಕೆ ವಿನಾಕಾರಣ ತಡಮಾಡಬಾರದು ಎಂಬ ಉದ್ದೇಶವೇ ನನ್ನದಾಗಿತ್ತು.

೩–೩೦ ಪಿ. ಎಂ

ಅದಕ್ಕಾಗಿ ಅವರು ಆದಷ್ಟು ಜಾಗ್ರತೆಯಾಗಿ ಇಲ್ಲಿಗೆ ಬಂದು ಪ್ರಮಾಣವಚನವನ್ನು ಸ್ವೀಕಾರ ಮಾಡ ಬೇಕೆನ್ನುವ ಉದ್ದೇಶ ದಿಂದ ಈ ಒಂದು ಅಲ್ಪಾವಧಿ ಅಧಿವೇಶನವನ್ನು ಕರೆಯಬೇಕೆಂದು ವಿಚಾರ ಬಂದಾಗ ನನಗೆ ಕಾನೂನು ತಜ್ಞರು ಕಾನೂನು ಪ್ರಕಾರ, ಸಂವಿಧಾನದ ಪ್ರಕಾರ ಚುನಾವಣೆ ಆದಮೇಲೆ ಮೊದಲ ಸಲ ಅಧಿವೇಶನ ಯಾವ ಉದ್ದೇಶಕ್ಕೆ ಕರೆದರೂ ಅದು ಜಂಟೀ ಅಧಿವೇಶನ ಆಗಬೇಕಾದುದು ಅವಶ್ಯಕ ಇದೆ ರಾಜ್ಯ ಪಾಲರು ಆ ಜಂಟೀ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಬೇಕಾಗುತ್ತದೆ ಎಂದು ಸಲಹೆ ಮಾಡಿದರು ಅದಕ್ಕಾಗಿ ನಮ್ಮ ಕಾರ್ಯಕ್ರಮಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡು ಜಂಟೀ ಅಧಿವೇಶನವನ್ನು ರಾಜ್ಯಪಾಲರು ಅಡ್ರಸ್ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಮೇಲೆ ಸಾಂಪ್ರದಾಯಿಕವಾಗಿ ಜಂಟೀ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಿದರು. ರಾಜ್ಯಪಾಲರ ಜಂಟೀ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನಾರ್ಪಣ ನಿರ್ಣಯ ಪಾಸ್ ಮಾಡು ವುದು ಅವಶ್ಯಕವಾಗುತ್ತದೆ. ಅಷ್ಟರಮಟ್ಟಿಗೆ ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ಮಧ್ಯೆ ಅವಶ್ಯಕವಾಗಿ ಮುನಿಸಿಪಾಲಿಟಿಗಳ ಚುನಾವಣೆಗಳು ಬರುತ್ತವೆಯಾದ್ದರಿಂದ ಯಾವುದೇ ವಿವಾದ ಇಲ್ಲದಂತಹ ತಿದ್ದುಪಡಿ ಮಸೂದೆಯನ್ನು ಮಾತ್ರ ತಂದಿದ್ದೇವೆ. ಈ ಮೂರು ನಾಲ್ಕು ದಿವಸಗಳಲ್ಲಿ ಮಾನ್ಯ ಸದಸ್ಯರಿಂದ ಅನೇಕ ಅಂಶಗಳು ವ್ಯಕ್ತವಾಗಿವೆ. ನಾನು ಇಲ್ಲಿ ಮತ್ತು ಕಚೇರಿಯಲ್ಲಿ ಕುಳಿತು ಇಲ್ಲಿನ ಚರ್ಚೆಯನ್ನು ಆಲಿಸಿದಾಗ ನನಗೆ ಒಂದೊಂದು ಸಲ ಅನ್ನಿಸಿದ್ದೇನೆಂದರೆ ಏನು ನಾವು ಇಲ್ಲಿ ಬಹಳ ವರ್ಷ ಗಳಿಂದ ಅಧಿಕಾರದಲ್ಲಿ ಇದ್ದೇವೆಯೋ ಎಂದು. ವಿರೋಧ ಪಕ್ಷದವರು ಗುದ್ದುತ್ತಿದ್ದುದನ್ನು ನೋಡಿದರೆ ನನಗೆ ಹೀಗೆ ಅನ್ನಿಸುತ್ತಿತ್ತು. hamnering the ruling party. ನಾವು ಅಸ್ತಿತ್ವದಲ್ಲಿ ಬಂದು ಬಹುಶಃ ೧೭ ದಿವಸಗಳು ಆದವು. ಅದಕ್ಕಾಗಿ ಒಂದು ವಿಚಾರವನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನನಗೆ ಆಡಳಿತ ನಡೆಸುವುದು ಹೊಸದೇನೂ ಅಲ್ಲ. ಈ ರಾಜ್ಯದಲ್ಲೂ ಬಹಳ ದಿವಸ ಆಡಳಿತ ಮಾಡುವುದಕ್ಕೆ ನನಗೆ ಸುದೈವದಿಂದ ಅವಕಾಶ ಸಿಕ್ಕಿತ್ತು. ಹಾಗೂ ಕೇಂದ್ರದಲ್ಲೂ ಐದೂವರೆ ವರ್ಷ ಆಡಳಿತ ಮಾಡುವ ಅವಕಾಶ ಸಿಕ್ಕಿತ್ತು. ಆದರೆ ಒಂದು ವಿಚಾರವನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನನಗೆ ಕರ್ನಾಟಕದ ಆಡಳಿತದ ಸಂಪರ್ಕ ತಪ್ಪಿ ೧೮ ವರ್ಷಗಳೇ ಆದವು. ಮತ್ತು ನನ್ನ ಸಹೋದ್ಯೋಗಿಗಳ ಬಗ್ಗೆ ಹೇಳುವುದಾದರೆ ಅವರಿಗೆ ಆಡಳಿತ ಸಂಪರ್ಕ ತಪ್ಪಿ ಕನಿಷ್ಟ ೬–೭ ವರ್ಷಗಳು ಆಗಿದೆ. ನಾನಾಗಲೀ, ನನ್ನ ಸಹೋದ್ಯೋಗಿಗಳಾಗಲೀ ಒಂದು ಇಲಾಖೆಯ ಬಗ್ಗೆ ತಿಳಿದುಕೊಳ್ಳ ಬೇಕೆಂದರೆ ಆಯಾ ಇಲಾಖೆಗಳ ಆಡಳಿತ ಜವಾಬ್ದಾರಿಯನ್ನು ಹೊತ್ತಮೇಲೆ ಇಲಾಖೆ ಬಗ್ಗೆ ತಿಳಿದು ಕೊಳ್ಳಬೇಕಾದರೆ ಕನಿಷ್ಟ ೩–೪ ತಿಂಗಳು ಬೇಕಾಗುತ್ತದೆ. ಒಂದೇ ದಿವಸದಲ್ಲಿ ಎಲ್ಲಾ ಕಲಿತುಕೊಳ್ಳುವು ದಕ್ಕಾಗುವುದಿಲ್ಲ. ಇಲಾಖೆಯಲ್ಲಿ ಯಾವ ರೀತಿ ಕೆಲಸ ಆಗುತ್ತವೆ, ಅಲ್ಲಿನ ಆಗುಹೋಗುಗಳು ಏನು, ಅಲ್ಲಿನ ಸಮಸ್ಯೆಗಳೇನು ಎಂದು ತಿಳಿದುಕೊಳ್ಳಬೇಕಾದರೆ ಸಾಕಷ್ಟು ಸಮಯ ನಮಗೆ ಹಿಡಿಯುತ್ತದೆ. ಅದಕ್ಕಾಗಿ ನಾನು ಏನು ಅಪೇಕ್ಷೆ ಮಾಡಿದ್ದೆ ಎಂದರೆ, ಬಹುಶ: ಅನೇಕ ಮಾನ್ಯ ಸದಸ್ಯರು ಆ ಕಡೆ ಇರುವವರು ನಾವು ೭ ವರ್ಷಗಳ ನಂತರ ಈ ಕಡೆ ಬಂದು ಕುತಿರುವುದರಿಂದ ನಮಗೆ ಅನೇಕ ರಚನಾತ್ಮಕ ಸಲಹೆ ಮಾಡುತ್ತಾರೆ, ಬುದ್ಧಿವಾದವನ್ನು ಹೇಳುತ್ತಾರೆ, ಯಾವ ರೀತಿಯಿಂದ ಕೆಲಸ ಕಾರ್ಯ ಮಾಡ ಬೇಕೆಂದು ಹೇಳುತ್ತಾರೆ ಮತ್ತು ಹಿಂದಿನ ಆರು–ಆರೂವರೆ ವರ್ಷಗಳಲ್ಲಿ ಏನು ಲೋಪದೋಷಗಳು ಆಗಿದ್ದವು ಅವುಗಳನ್ನು ಯಾವ ರೀತಿ ಸರಿ ಮಾಡಬೇಕೆಂದು ಮಾರ್ಗದರ್ಶನ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ ಕೆಲವರು ಅದನ್ನು ಮಾಡಿದ್ದಾರೆ ಆದರೆ ಬಹಳ ಜನರು ಅದನ್ನು ಮಾಡಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಅದಕ್ಕಿಂತಲೂ ಹೆಚ್ಚು ಮುಂದೆ ಹೋಗುವುದಕ್ಕೆ ನಾನು ಪ್ರಯತ್ನ ಮಾಡುವುದಿಲ್ಲ. ೧೭ ದಿವಸಗಳ ಇವತ್ತಿನ ನಮ್ಮ ಅಧಿಕಾರ ಇದು. ಇಷ್ಟು ಮಾತ್ರ ಈ ಸ್ಥಾನದಿಂದ ನಾನು ಧೈರ್ಯವಾಗಿ ಹೇಳಬಲ್ಲೆ. ಈ ೧೭ ದಿವಸಗಳಲ್ಲಿ ಚುರುಪಾರು ಒಳ್ಳೆಯ ಕೆಲಸ

ಮಾಡಿದ್ದೇವೆಯೇ ಹೊರತು ನಾವು ಯಾವುದೇ ತಪ್ಪು ಕಾರ್ಯವನ್ನು ಮಾಡಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಜನಸಾಮಾನ್ಯರ ಮನಸ್ಸಿಗೆ ಬಿಂಬಿಸುವಂತಹ, ಅದೇ ರೀತಿಯಿಂದ ನಮ್ಮ ಸದಸ್ಯರಿಗೆ ಬಿಂಬಿಸುವಂತಹ ಮತ್ತು ಈ ಒಂದು ಪಕ್ಷದ ಒಂದು ಮಂತ್ರಿಮಂಡಲ ಏನು ಅಸ್ತಿತ್ವದಲ್ಲಿ ಬಂದಿದೆಯೋ ಅದು ನುಡಿದಂತೆ ನಡೆಯುತ್ತಿದೆ ಎನ್ನುವ ಒಂದು ಭಾವನೆ ಜನರಲ್ಲಿ ಬರಬೇಕಾಗಿದೆ. ಇವತ್ತಿನ ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಕೆಟ್ಟಿದೆ. ಅದಕ್ಕಾಗಿ ಎಷ್ಟು ಸಾಧ್ಯವಾಗುತ್ತದೆ ಅಷ್ಟು ದುಡ್ಡನ್ನು ಉಳಿಸುವುದಕ್ಕೆ ವಿನಾಕಾರಣ ಹಣಪೋಲು ಆಗಲಾರದ ರೀತಿಯಲ್ಲಿ ಖರ್ಚು ಮಾಡುತ್ತಿದ್ದಾರೆನ್ನುವ ಭಾವನೆ ಜನಸಾಮಾನ್ಯರಲ್ಲಿ ಮೂಡಿಸಬೇಕೆನ್ನುವ ಉದ್ದೇಶದಿಂದ ಹೆಲಿಕಾಪ್ಟರ್ ಅನ್ನು ಮೊದಲು ಮಾರಬೇಕೆಂದು ತೀರ್ಮಾನ ಮಾಡಿದ್ದೇವೆ. ಹೆಲಿಕಾಪ್ಟರ್‌ನಿಂದ ನಮಗೆ ಹೆಚ್ಚು ಖರ್ಚು ಬರುತ್ತಿದೆ. ಈ ಹೆಲಿಕಾಪ್ಟರ್ ಅನ್ನು ೮೬ ಲಕ್ಷರೂಪಾಯಿ ಖರ್ಚು ಮಾಡಿ ಮಾನ್ಯ ದೇವರಾಜ ಅರಸ್‌ರವರ ಸರ್ಕಾರದವರು ಆಕಾಲಕ್ಕೆ ತೆಗೆದುಕೊಂಡರು. ಅದರ ಮೇಲೆ ಪ್ರತಿ ವರ್ಷ ೨೭ ರಿಂದ ೩೦ ಲಕ್ಷ ಮೇಂಟೇನೆನ್ಸ್ ಖರ್ಚು ಬರುತ್ತಿದೆ ಹೆಲಿಕಾಪ್ಟರ್‌ನಲ್ಲಿ ಹಾರಾಡಿದರೆ ಒಂದು ಗಂಟೆಗೆ ೧೨ ಸಾವಿರ ಖರ್ಚು ಬರುತ್ತದೆ. ವರ್ಷಕ್ಕೆ ೫೦,೬೦ ಲಕ್ಷ ರೂಪಾಯಿ ಖರ್ಚಾಗುವಂತಹದ್ದನ್ನು ಮೊದಲು ಉಳಿಸಿ ಎಂದು, ಅಧಿಕಾರಿಗಳಿಗೆ ಹೇಳಿದ್ದೇನೆ. ಮತ್ತೊಂದು ವಿಚಾರ ಅದು ತಮಗೆಲ್ಲರಿಗೂ ಗೊತ್ತಿದೆ ಏನೆಂದರೆ ವರ್ಗಾವಣೆ ಅವಶ್ಯವಿದ್ದರೆ ಮಾತ್ರ ಆಗಬೇಕು ಇಲ್ಲದಿದ್ದರೆ ಬೇಡವೆಂದು ತೀರ್ಮಾನ ಮಾಡಿದ್ದೇವೆ. ಒಂದು ಮಂತ್ರಿಮಂಡಲ ಹೋಗುತ್ತದೆ ಮತ್ತೊಂದು ಮಂತ್ರಿಮಂಡಲ ಬರುತ್ತದೆ. ಮಂತ್ರಿಗಳು ಹೊಸದಾಗಿ ಬಂಗಲೆಗಳಿಗೆ ಹೋಗುತ್ತಾರೆ. ಅಂತಹ ಸಂದರ್ಭಗಳಲ್ಲಿ ಲೋಕೋಪಯೋಗಿ ಇಲಾಖೆಯವರು ಹಿಂದಿನ ಪರದೆಗಳನ್ನೆಲ್ಲಾ ತೆಗೆದು ಅಲ್ಲಿ ಹೊಸದನ್ನು ಹಾಕುತ್ತಾರೆ. ಹೊಸದಾಗಿ ಹೋದಾಗ ಎಲ್ಲಾ ಗೋಡೆಗಳಿಗೂ ಬಣ್ಣ ಬಳಿಯಬೇಕು, ಇರತಕ್ಕ ಫರ್ನಿಚರ್‌ಗಳನ್ನು ಒಗೆದು ಹೊಸದು ಹಾಕುವಂತಹ ಸಂಪ್ರದಾಯ ಬೆಳೆದುಕೊಂಡು ಬಂದಿದೆ. ಈಗ ಇಂತಹ ಬದಲಾವಣೆ ಮಾಡಬಾರದೆಂದು ಹೇಳಿದ್ದೇನೆ. ಇದರ ಬಗ್ಗೆ ಕಟ್ಟಪ್ಪಣೆ ಮಾಡಿದ್ದೇನೆ. ಅದಕ್ಕಾಗಿ ಏನೂ ಖರ್ಚು ಮಾಡಬಾರದೆಂದು ಕಟ್ಟಪ್ಪಣೆ ಮಾಡಿದ್ದೇನೆ. ಆ ರೀತಿ ಮಾಡಿದರೆ ಪ್ರತಿಯೊಬ್ಬ ಮಂತ್ರಿಗೂ ೪ ಲಕ್ಷ ರೂಪಾಯಿ ಖರ್ಚು ಬರುತ್ತದೆಂದು ನನ್ನ ಸಹೋದ್ಯೋಗಿಯಾದ ಬಸವಲಿಂಗಪ್ಪನವರು ಹೇಳುತ್ತಿದ್ದಾರೆ. ಬಂಗಲೆಯ ಒಳಗೆ ಅವಶ್ಯವಿದ್ದಲ್ಲಿ ಮಾತ್ರ ಕಡಿಮೆ ಖರ್ಚಿನಲ್ಲಿ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೇವೆ. ಹೀಗೆ ನಮ್ಮ ಪ್ರಯತ್ನ ನಾವು ಮಾಡುತ್ತಿದ್ದೇವೆ. ನಾವು ಯಾವ ದಾರಿಯಲ್ಲಿ ಹೋಗಬೇಕಾಗಿದೆ ಎಂಬುದನ್ನು ಈಗಾಗಲೇ ಜನ ಸಾಮಾನ್ಯರ ಮನಸ್ಸಿನಲ್ಲಿ ಬಿಂಬಿಸುತ್ತಿದ್ದೇನೆ. ಈ ತರಹ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ. ಚುನಾವಣೆಗಳು ಆಗಿವೆ, ಇಷ್ಟೆಲ್ಲಾ ಜನ ನಾವು ಈ ಕಡೆ ಆರಿಸಿ ಬಂದಿದ್ದೇವೆ. ಈ ಚುನಾವಣೆ ಏನು ನಡೆದಿದೆ ಇದು ಎಲ್ಲರೂ ಪಾಠ ಕಲಿಯುವಂತಹ ಚುನಾವಣೆ ಆಗಿದೆ ಈ ಚುನಾವಣೆಯಲ್ಲಿ ನಾನು ಕರ್ನಾಟಕದ ಮತದಾರರನ್ನು ಅಭಿನಂದಿಸಬೇಕಾಗುತ್ತದೆ. ಇಡೀ ರಾಷ್ಟ್ರದ ಮೇಲಿರುವಂತಹ ಒಂದು ಪರಿಪಕ್ವತೆಯನ್ನು ನಮ್ಮ ಮತದಾರ ಹೊಂದಿದ್ದಾನೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಇದರಿಂದ ನಾವು ಪಾಠ ಕಲಿಯಬೇಕಾಗಿದೆ ನನ್ನ ಎದುರು ಕೂತಂತಹ ವಿರೋಧ ಪಕ್ಷದವರು ಬಹಳ ದೊಡ್ಡ ಪಾಠವನ್ನು ಇದರಿಂದ ಕಲಿಯಬೇಕಾಗಿದೆ. ಇದನ್ನು ಹೇಳುವುದರಲ್ಲಿ ಯಾವುದೇ ತರಹ ನಾಚಿಕೆ ಮತ್ತು ಅಳುಕು ನನಗೆ ಇಲ್ಲ. ಈವೊಂದು ಚುನಾವಣೆಯಲ್ಲಿ ಜನತಾಪಕ್ಷ ಮತ್ತು ಜನತಾದಳ ಎರಡೂ ಪಕ್ಷಗಳು ಬಹುಶಃ ಪ್ರತಿಪಕ್ಷದ ನಾಯಕರು ಏನಾದರೂ ಲೆಕ್ಕ ಹಾಕಬಹುದು. ಜನಸಾಮಾನ್ಯರು ಎರಡೂ ಪಕ್ಷಗಳು ಒಂದೇ ಎನ್ನುವ ರೀತಿಯಲ್ಲಿ ಲೆಕ್ಕಹಾಕಿ ಎಂದೆಂದೂ ಮರೆಯಲಾರದ ಸ್ಥಿತಿಗೆ ನಿಮ್ಮನ್ನು ಗುರಿ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರು ನಿಮಗೂ ಇಂತಹ ಶಿಕ್ಷೆ ಸಿಕ್ಕಿತ್ತು ಎಂದು ನಮಗೆ ಹೇಳಬಹುದು. ಹೌದು ಸಿಕ್ಕಿತ್ತು ನಾವು ಜನಸಾಮಾನ್ಯರಿಗೆ ಮನ್ನಣೆ ಕೊಡಬೇಕು ನಾವು ಜನರಿಗೆ ಆಶ್ವಾಸನೆಯನ್ನು ಕೊಟ್ಟು ಜನರನ್ನು ಮರೆತರೆ ನಿಮ್ಮ ಗತಿ ಏನಾಗಿದೆ ಅದು ಇನ್ನು ಐದು ವರ್ಷದಲ್ಲಿ ನಮಗೂ ಆಗಬಹುದು. ಅವರು ಇವತ್ತು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ೧೯೮೫ರಲ್ಲಿ ೧೩೯ ಜನ ಇದ್ದವರು ಇಂದು ೨೪ ಪ್ಲಸ್ ೨ ಒಟ್ಟು ೨೬ ಆಗಿದ್ದಾರೆ. ಅದಕ್ಕಿಂತ ಹೆಚ್ಚಿನ ಸಂಖ್ಯೆ ಬೆಳೆಯುವುದಕ್ಕೆ ಕರ್ನಾಟಕದ ಮತದಾರ ಅವಕಾಶ ಕೊಡಲಿಲ್ಲ. ಇದರಿಂದ ನಾವೆಲ್ಲರೂ ಪಾಠ ಕಲಿಯಬೇಕಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಇದೇ ಮತದಾರ ಕೇಂದ್ರಕ್ಕೆ ಏನು ಮಾಡಿದ್ದಾನೆಂದು ಹೇಳಬಹುದಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನಾನು ಇಲ್ಲಿಯದನ್ನು ಹೇಳುತ್ತಿದ್ದೇನೆ. ಇಲ್ಲಿ ಇಂತಹ ಪಾಠ ಕಲಿಸಿದ್ದಾನೆಂದು ಹೇಳುತ್ತಿದ್ದೇನೆ. ಅದಕ್ಕೂ ಆಕ್ಷೇಪ ಎತ್ತಿದರೆ ೧೯೮೪ರಲ್ಲಿ ಏನಾಯಿತು ಎಂದು ಹೇಳಬೇಕಾಗುತ್ತದೆ. ಆಗ ತಮ್ಮದೇ ದೊಡ್ಡ ವೇವ್ ಇತ್ತು. ೧೯೮೪ರ ಲೋಕಸಭೆಯ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ೨೮ ಸೀಟುಗಳಲ್ಲಿ ನಾವು ೨೪ ಸೀಟುಗಳನ್ನು ಗೆದ್ದಿದ್ದೇವೆ.

ಇವತ್ತು ೨೮ರಲ್ಲಿ ೨೭ ಪಾರ್ಲಿಮೆಂಟ್ ಸೀಟುಗಳನ್ನು ಕರ್ನಾಟಕದಲ್ಲಿ ನಾವು ಗೆದ್ದಿದ್ದೇವೆ. ಆದರೆ ನಾವು ಕರ್ನಾಟಕದ ಬಗ್ಗೆ ಮಾತ್ರ ಕರ್ನಾಟಕ ವಿಧಾನಸಭೆಯಲ್ಲಿ ಕುರಿತು ಮಾತನಾಡೋಣ. ಇಲ್ಲಿ ಪಾರ್ಲಿಮೆಂಟ್ ಬಗ್ಗೆ ಚರ್ಚೆ ಮಾಡಬೇಕಾದ ಅವಶ್ಯಕತೆ ಇಲ್ಲ. ಆ ಅಧಿಕಾರ ನಮಗೆ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ನಾವು ಈಗ ಅಧಿಕಾರಕ್ಕೆ ಬಂದೆವು. ಇವತ್ತು ಪ್ರಾಮಾಣಿಕತೆಯಿಂದ ಹೇಳಬೇಕಾಗಿದ್ದರೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಬರುತ್ತೇವೆ ಎಂದು ನಾನು ಕೂಡ ನಿರೀಕ್ಷೆ ಮಾಡಿರಲಿಲ್ಲ. ನಮ್ಮ ನಿರೀಕ್ಷೆಯನ್ನು ಮೀರಿ ಜನಸಾಮಾನ್ಯರು ನಮ್ಮನ್ನು ಬೆಂಬಲಿಸಿದ್ದಾರೆ, ಆಶೀರ್ವಾದ ಮಾಡಿದ್ದಾರೆ. ಅಂದಮೇಲೆ ಜನ ಬೆಂಬಲ ಎಷ್ಟು ನಮಗೆ ಸಿಕ್ಕಿದೆಯೋ ಅಷ್ಟೇ ನಮ್ಮ ಜವಾಬ್ದಾರಿ ಕೂಡ ಹೆಚ್ಚಾಗಿದೆ, ಹಾಗೂ ಗುರುತರವಾಗಿದೆ. ಜನರು ಬಹಳ ಹೆಚ್ಚು ಜವಾಬ್ದಾರಿಯನ್ನು ನಮ್ಮ ಮೇಲೆ ಹಾಕಿದ್ದಾರೆ. ಆ ಒಂದು ವಿಶ್ವಾಸವನ್ನು ಜನರು ನಮ್ಮ ಮೇಲೆ ಇಂದು ತೋರಿಸಿದ್ದಾರೆ. ಮತ್ತು ನಮ್ಮ ಮೇಲೆ ಹೆಚ್ಚಾದ ಆಶೋತ್ತರಗಳನ್ನು ಕೂಡ ಜನಸಾಮಾನ್ಯರು, ಮತದಾರರು ಇಟ್ಟುಕೊಂಡಿದ್ದಾರೆ. ಈಗ ಪ್ರಶ್ನೆ ಏನು ಎಂದರೆ, ನಾವು ಅಧಿಕಾರಕ್ಕೆ ಬಂದು ೧೨ ದಿವಸಗಳಾಯಿತು, ನಾವು ಏನು 'ಇನ್‌ಹೆರಿಟ್' ಮಾಡಿದ್ದೇವೆ. ಕನ್ನಡದಲ್ಲಿ ಒಳ್ಳೆಯ ಶಬ್ದ ನನ್ನ ಹತ್ತಿರ ಇಲ್ಲ. ಉರ್ದುನಲ್ಲಿ 'ವಿರಾಸತ್' ಅಂತ ಏನು ಹೇಳುತ್ತಾರೆ ಅದು ನಮಗೆ ಸಿಕ್ಕಿದೆ. ಅದನ್ನು ನಿಮ್ಮ ಮುಂದೆ ಹೇಳುವುದು ಬಹಳ ಅವಶ್ಯಕ. ಇಂದು ಬೆಳಿಗ್ಗೆ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಮಾನ್ಯ ಹಣಕಾಸಿನ ಮಂತ್ರಿಗಳು ಸಭೆಯ ಮುಂದಿಟ್ಟಿದ್ದಾರೆ. ಎಷ್ಟು ಜನ ಅದನ್ನು ಓದಿದರೋ ನನಗೆ ಗೊತ್ತಿಲ್ಲ. ಒಂದು ಮಾತನ್ನು ನಿಮಗೆ ಹೇಳಬೇಕಾಗಿದ್ದರೆ ವಿರಾಸತ್‌ನಲ್ಲಿ ನಮಗೆ ಸಿಕ್ಕಿದ್ದು ಬಹಳ ಶಿಥಿಲ ಹೊಂದಿದಂಥ ಒಂದು ಆಡಳಿತ. ಇದನ್ನು ನಾನು ಮುಖ್ಯಮಂತ್ರಿಯಾಗಿ ಕೂಡ ಜವಾಬ್ದಾರಿಯಿಂದ ಹೇಳುತ್ತಿದ್ದೇನೆಯೇ ಹೊರತಾಗಿ ಬೇಜವಾಬ್ದಾರಿಯಿಂದ ಹೇಳುತ್ತಿಲ್ಲ. ಆಡಳಿತ ಶಿಥಿಲ ಆಗುವುದಕ್ಕೆ ಕಾರಣ ಏನು? ಅದನ್ನು ನಾವು ವಿಚಾರ ಮಾಡಬೇಕಾಗಿದೆ, ಏಕೆಂದರೆ ಹೇಳುವುದು ಬಹಳ ಸುಲಭ. ಒಂದು ರೀತಿಯಿಂದ ಏನು ಹೇಳಬಹುದೆಂದರೆ ಡಿಮಾರಲೈಸ್ಡ್ ಬ್ಯುರೋಕ್ರಸಿ. ಅಥವಾ ಬ್ಯೂರೋಕ್ರಸಿಗೆ ಯಾವುದೇ ಕ್ಲಿಯರ್ ಕಟ್ ಡೈರೆಕ್ಷನ್ಸ್ ಕೊಡುವಂಥ ಆಡಳಿತ ಇರಲಿಲ್ಲ. ಆಡಳಿತ ಸೂತ್ರವನ್ನು ಹಿಡಿದುಕೊಂಡಿದ್ದಂಥ ಜನ ಸರಿ ಇರಲಿಲ್ಲ, ಅದಕ್ಕಾಗಿ ಆಡಳಿತ ಶಿಥಿಲ ಹೊಂದಿದೆ. ಅದರಲ್ಲಿ ಬಿಗಿಯನ್ನು ತರುವಂಥ ಒಂದು ದೊಡ್ಡ ಜವಾಬ್ದಾರಿ ನಮ್ಮ ಮುಂದಿದೆ. ಆಡಳಿತ ಶಿಥಿಲ ಹೊಂದುವುದಕ್ಕೆ ಇನ್ನೂ ಅನೇಕ ಕಾರಣಗಳು ಇವೆ. ಒಂದೇ ಕಾರಣ ಎಂದು ನಾನು ಹೇಳುವುದಿಲ್ಲ. ಮತ್ತು ಆಡಳಿತದಲ್ಲಿರುವಂಥ ಅಧಿಕಾರವರ್ಗದವರೇ ಇದಕ್ಕೆ ಜಬಾಬ್ದಾರರು ಎಂದು ನಾನು ಹೇಳುವುದಿಲ್ಲ. ಒಟ್ಟಾರೆ ಪರಿಸ್ಥಿತಿ ಏನು ಎಂದರೆ We have inheriteda demoralised bureaucracy. ಇದಕ್ಕೆ ಕಾರಣಗಳು ಇರಬಹುದು. ಏಕೆಂದರೆ ಅವರ ದಿನಂಪ್ರತಿ ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ಬಹಳ ಮಟ್ಟಿಗೆ ಆಡಳಿತ ಹಸ್ತಕ್ಷೇಪ, ರಾಜಕೀಯ ಹಸ್ತಕ್ಷೇಪ ಆಗಿರಬಹುದು. ಮತ್ತು ಟ್ರಾನ್ಸ್‌ಫರ್‌ದ್ದು ದೊಡ್ಡ ಸುಗ್ಗಿಯಾಗಿತ್ತು ಎಂಬುದು ಎಲ್ಲರಿಗೂ ಗೊತ್ತಿದೆ. ಈಗ ಆಡಳಿತದಲ್ಲಿ ಬಿಗಿ ತರಬೇಕಾದ ಬಹಳ ದೊಡ್ಡ ಅವಶ್ಯಕತೆ ಇದೆ. ಅದನ್ನು ತರುವುದಕ್ಕೆ ನಾವು ಪ್ರಯತ್ನ ಮಾಡೋಣ. ಮತ್ತು ಆಡಳಿತದಲ್ಲಿ ಎಲ್ಲಾ ಹಂತದಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದ್ದರೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ನಾನು ಯಾವುದೇ ಮುಚ್ಚುಮರೆ ಇಲ್ಲದೆ ಇದನ್ನು ಹೇಳುತ್ತಿದ್ದೇನೆ. ಈ ಸದನ ಪವಿತ್ರವಾದಂಥ ಒಂದು ಮನೆ. ಇದರಲ್ಲಿ ಪ್ರಾಮಾಣಿಕವಾಗಿ ನನಗೆ ಏನು ಅನ್ನಿಸುತ್ತದೆ ಅದನ್ನು ನಿಮ್ಮ ಮುಂದಿಡುವ ಅವಶ್ಯಕತೆ ಇದೆ: ನಾನು ತಪ್ಪಿದ್ದರೆ ನೀವು ತಿದ್ದಬಹುದು. ಎಲ್ಲಾ ಹಂತಗಳಲ್ಲೂ ಕರಪ್ಶನ್ ಇದೆ. ನನಗೆ ಒಂದು ಆಶ್ಚರ್ಯ ಆಗುತ್ತದೆ, ಏನೆಂದರೆ ಒಂದೊಂದು ಸಲ ಮೇಲಿನ ಹುದ್ದೆಗಳಲ್ಲಿರುವಂಥ ಅಧಿಕಾರಿಗಳು ಕೂಡ ಇವತ್ತು ಭ್ರಷ್ಟರಾಗಿದ್ದಾರೆ.

ಸ್ವಾಮಿ, ಎಲ್ಲರೂ ಭ್ರಷ್ಟರಾಗುತ್ತಾ ಇದ್ದರೆ, ನಾವೂ ಏಕೆ ಆಗಬಾರದು ಎನ್ನತಕ್ಕಂಥ ಟೆಮ್ಟೇಷನ್ ಬೇರೆಯವರಲ್ಲಿಯೂ ಬರುತ್ತದೆ ಎಂದು ಹೇಳುತ್ತಿದ್ದರು. ಇವತ್ತು ಆಡಳಿತದ ಬಗ್ಗೆ ಅನೇಕ ಸುಧಾರಣೆಗಳನ್ನು ಜಾರಿಗೆ ತರಬೇಕಾಗಿದೆ. ನಾನು ಮುಖ್ಯಮಂತ್ರಿಯಾಗಿ, ಆಡಳಿತದ ಪಕ್ಷದ ನಾಯಕನಾಗಿ, ಇವತ್ತು ಸ್ಪಷ್ಟವಾಗಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಏನೆಂದರೆ, ಆಡಳಿತದಲ್ಲಿರುವಂಥ ಭ್ರಷ್ಟಾಚಾರವನ್ನು ನಾನು ಪೂರ್ತಿಯಾಗಿ ತೆಗೆದುಹಾಕುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಭ್ರಷ್ಟಾಚಾರವನ್ನು ಇಲ್ಲಿಯವರೆಗೆ ಯಾರೂ ಕೂಡ ಸಂಪೂರ್ಣವಾಗಿ ತೊಲಗಿಸುತ್ತೇವೆಂದು ಹೇಳಲಿಲ್ಲ, ಮತ್ತು ಇಲ್ಲಿಯವರೆಗೂ ಇದನ್ನು ಯಾರೂ ಸಾಧಿಸಿಲ್ಲ. ಬಹಳ ಮಟ್ಟಿಗೆ ಇದನ್ನು ಕಡಿಮೆ ಮಾಡಬಹುದು. ಇದು ಇವತ್ತು ಎಷ್ಟರಮಟ್ಟಿಗೆ ಮೇಲೆ ಹೋಗಿದೆಯೋ ಅದನ್ನು ಕಡಿಮೆ ಮಾಡುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ, ಇದನ್ನು

ಮಾಡಬೇಕಾದರೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಯಾರಿಗಾದರೂ, ತಾನು ಭ್ರಷ್ಟ ಎಂದು ತಿಳಿದಾಗ ಎರಡನೆಯವನನ್ನು ನೀನು ಭ್ರಷ್ಟ ಎಂದು ಕಂಡೆಂ ಮಾಡುವುದಕ್ಕೆ ನೈತಿಕ ಬಲ ಇರುವುದಿಲ್ಲ. ಅದೇ ರೀತಿ ಸರ್ಕಾರ ನಡಸುವವರು ಪ್ರಾಮಾಣಿಕವಾಗಿರದಿದ್ದರೆ ಕೆಳಗಿನವರಿಗೆ ಪ್ರಾಮಾಣಿಕ ವಾಗಿರಿ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ನಾವು ಚುನಾವಣಾ ಪ್ರಣಾಳಿಕೆಯ ಮೂಲಕ ಜನತೆಗೆ ಸ್ವಚ್ಛ, ದಕ್ಷ ಹಾಗೂ ಪ್ರಾಮಾಣಿಕ ಆಡಳಿತವನ್ನು ನೀಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಇದನ್ನು ನಾನು ಒಬ್ಬನೇ ವ್ಯಕ್ತಿ ಮಾಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ, ನಿಮ್ಮೆಲ್ಲರ ಸಹಕಾರ ಮತ್ತು ನನ್ನ ಸಹೋದ್ಯೋಗಿಗಳ ಸಹಕಾರವೂ ಇದಕ್ಕೆ ಸಾಕಷ್ಟು ರೀತಿಯಲ್ಲಿ ಸಿಗುತ್ತದೆಂದು ನಾನು ಆಶಯ ಮಾಡುತ್ತೇನೆ. ಮುಖ್ಯಮಂತ್ರಿಯಾಗಿ ಇಂದು ನಾನು ಏನು ನೋಡುತ್ತಿದ್ದೇನೆಂದರೆ, ಬ್ಯುರೋಕ್ರಟಿಕ್ ಎಂಪೈರ್, ಬೆಂಗಳೂರು ಇಂದು ಯಾವ ಗತಿಯಿಂದ ಬೆಳೆದಿದೆಯೋ, ಅದಕ್ಕಿಂತ ಒಂದು ತೂಕ ಇದು ಹೆಚ್ಚು ಬೆಳೆದಿದೆ ಎಂದು ಹೇಳಿದರೆ ತಪ್ಪಾಗಲಾರದು. ಆ ಕಡೆಯ ಕೆಲವು ಮಾನ್ಯ ಸದಸ್ಯರೂ ಮಂತ್ರಿಗಳಾಗಿದ್ದರು, ಅವರಿಗೂ ಇದು ಗೊತ್ತಿದೆ. ಈ ಆಡಳಿತದ ಎಂಪೈರ್ ಏನಿದೆ, ಇದು ಅವ್ಯಾಹತ ಬೆಳೆದುಕೊಂಡು ಹೋಗಿದೆ, ಲಂಗು ಲಗಾಮು ಇಲ್ಲದ ರೀತಿ ಬೆಳೆದುಕೊಂಡು ಹೋಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇಲ್ಲಿ ನಾನು ಕೆಲವು ಅಂಕಿಸಂಖ್ಯೆಗಳನ್ನು ಕೊಡುತ್ತೇನೆ. ನಾನು ಕೆಳಗಿನವರನ್ನು ಮಾತ್ರ ಹೇಳಿದರೆ, ನೀವು ಲೆಕ್ಕ ಹಾಕಬಹುದು. ಮೇಲಿನವರನ್ನು ಹೇಳುವುದೇ ಇಲ್ಲವಲ್ಲ ಎಂದು. ಹಿಂದೆ ನಾನು ಮುಖ್ಯಮಂತ್ರಿಯಾಗಿದ್ದಾಗ, ಒಬ್ಬರು ಚೀಫ್ ಸೆಕ್ರಟರಿ ಇದ್ದರು, ಒಬ್ಬರು ಸೂಪರ್ ಟೈಮ್ ಸ್ಕೇಲ್ ಆಫೀಸರು ಇದ್ದರು, ಇವತ್ತು ಎಷ್ಟು ಜನ ಇದ್ದಾರೆ ಎಂದರೆ. ೧೬ ಜನ ಇದ್ದಾರೆ. ಆಗ ಸೂಪರ್ ಟೈಮ್ ಸ್ಕೇಲ್‌ನಲ್ಲಿ ೧೦ ಜನ ಸೆಕ್ರಟರಿಗಳು ಇದ್ದರು, ಇವತ್ತು ೫೫ ಜನ ಸೆಕ್ರಟರಿಗಳು ಇದ್ದಾರೆ. ಅವತ್ತು ಸೀನಿಯರ್ ಸ್ಕೇಲ್‌ನಲ್ಲಿ ೪೪ ಜನ ಇದ್ದರು, ಇವತ್ತು ೧೧೬ ಜನ ಇದ್ದಾರೆ. ೧೯೬೮ ರಿಂದ ೧೯೭೧ರ ವರೆಗೆ ನಾನು ಮುಖ್ಯಮಂತ್ರಿಯಾಗಿದ್ದಾಗ, ಇಡೀ ಕರ್ನಾಟಕ ರಾಜ್ಯಕ್ಕೆ ಡಿ.ಜಿ.ಪಿ. ಇರಲಿಲ್ಲ. ಒಬ್ಬರು ಐ.ಜಿ.ಪಿ. ಇದ್ದರು. ಆಗ ನಾನೇ ಹೋಮ್ ಮಿನಿಸ್ಟರು, ಚೀಫ್ ಮಿನಿಸ್ಟರು. ಒಬ್ಬರು ಐ.ಜಿ.ಪಿ. ಒಬ್ಬರು ಸೆಕ್ರಟರಿಯನ್ನು ಇಟ್ಟುಕೊಂಡು, ಇಡೀ ರಾಜ್ಯದ ಕಾನೂನು ವ್ಯವಸ್ಥೆಯನ್ನು ನೋಡುತ್ತಿದ್ದೆವು. ಬಹುಶಃ ಜನ ಇವತ್ತಿನವರೆಗೂ ಅದನ್ನು ನೆನಪುತ್ತಾರೆಂದು ತಿಳಿದುಕೊಂಡಿದ್ದೇನೆ. ಆದರೆ ಇವತ್ತಿನ ಕಡೆ ಏನಾಗಿದೆ ಎಂದರೆ, ಡಿ.ಪಿ.ಜಿ.೫ಜನ ಇದ್ದಾರೆ, ಈ ಹಿಂದೆ ಡಿ ಐ.ಜಿ.ಗಳು ೯ ಜನ ಇದ್ದರು, ಇವತ್ತು ೩೫ ಜನ ಇದ್ದಾರೆ.

ಈಗ ನಾನು ಸೀನಿಯರ್ ಸ್ಕೇಲ್ ಆಫೀಸರ್ಸ್ ಬಗ್ಗೆ ಹೇಳುತ್ತಿದ್ದೇನೆ. ಅದೇ ರೀತಿಯಿಂದ ಚೀಫ್ ಎಂಜಿನಿಯರ್ಸ್ ಬಗ್ಗೆ ಹೇಳುತ್ತೇನೆ. ನಾನು ಹಿಂದೆ ಪಿ ಡಬ್ಲ್ಯು.ಡಿ. ಖಾತೆಯ ಮಂತ್ರಿಯಾಗಿದ್ದೆ. ನಾನು ಹಿಂದೆ ಮುಖ್ಯಮಂತ್ರಿಯಾಗಿದ್ದಾಗಲೂ ಬಹಳ ದಿವಸ ಈ ಪಿ.ಬ್ಲ್ಯು.ಡಿ. ನೀರಾವರಿ ಮತ್ತು ವಿದ್ಯುಚ್ಛಕ್ತಿ ಖಾತೆಗಳು ನನ್ನ ಕಡೆಗೇ ಇತ್ತು. ಆ ವೇಳೆಗೆ ಎಂಟು ಜನ ಚೀಫ್ ಎಂಜಿನಿಯರ್ಸ್‌ನ್ನು ಇಟ್ಟುಕೊಂಡು ನಾನು ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೆ. ಲೋಕೋಪಯೋಗಿ ಇಲಾಖೆಯ ಎಲ್ಲ ಕೆಲಸ ಕಾರ್ಯಗಳು ಬಹಳ ಸುಗಮವಾಗಿ ಸಾಗುತ್ತಿದ್ದವು. ಇವತ್ತು ಇವರು ಎಷ್ಟಾಗಿದ್ದಾರೆ ಎಂದರೆ ೩೯ ಜನ ಚೀಫ್ ಎಂಜಿನಿಯರ್ಸ್ ಆಗಿದ್ದಾರೆ. ಹೌಸಿಂಗ್ ಬೋರ್ಡ್‌ಗೆ ಒಬ್ಬ ಚೀಫ್ ಎಂಜನಿಯರ್. ಇವತ್ತು ಒಂದು ರೂಮ್ ಟೆನ್‌ಮೆಂಟ್ ಎರಡು ರೂಮ್ ಟೆನ್‌ಮೆಂಟ್ ಕಟ್ಟುವುದಕ್ಕೆ ಚೀಫ್ ಎಂಜಿನಿಯರ್ ಇಲ್ಲದೆ ಸಾಧ್ಯವೇ ಇಲ್ಲ. ಇವರಿಲ್ಲದೆ ಒಂದು ರೂಮ್ ಇಲ್ಲವೇ ಒಂದು ಮನೆ ಕಟ್ಟುವುದಕ್ಕೆ ಸಾಧ್ಯವೇ ಇಲ್ಲ. ಕಳೆದ ವರ್ಷಗಳಲ್ಲಿ ಬೆಂಗಳೂರು ನಗರ ಹೇಗೆ ಬೆಳೆದಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಅದಕ್ಕಿಂತ ಹೆಚ್ಚು ವೇಗದಿಂದ ಈ ಬ್ಯೂರಾಕ್ರಸಿ ಬೆಳೆದಿದೆ. ಉದಾಹರಣೆಗೆ ಹೇಳ ಬೇಕಾಗಿದ್ದರೆ, ನಾನು ಹಿಂದೆ ಮುಖ್ಯಮಂತ್ರಿ ಆಗಿದ್ದಾಗ ಟೋಟಲ್ ಗೌರ್ನಮೆಂಟ್ ಎಂಪ್ಲಾಯೀಸ್ ಸಂಖ್ಯೆ ೨ ಲಕ್ಷ ೫೬ ಸಾವಿರದ ೩೫. ಇವತ್ತು ಎಷ್ಟಿದೆ ಎಂದರೆ, ೪ ಲಕ್ಷದ ೪೪ ಸಾವಿರ. ಇದರಲ್ಲಿ ಕೆ ಎಸ್. ಆರ್. ಟಿ. ಸಿ., ಕೆ. ಇ, ಬಿ. ನಲ್ಲಿ ಕೆಲಸ ಮಾಡುವ ಒಂದು ಲಕ್ಷ ಜನರನ್ನು ಸೇರಿಸಿದರೆ ಒಟ್ಟು ೫ ಲಕ್ಷದ ೪೪ ಸಾವಿರ. ಒಟ್ಟಿನಲ್ಲಿ ೬ ಲಕ್ಷ ಜನ ಇವತ್ತಿನದಿವಸ ಇದ್ದಾರೆ, ಎಲ್ಲಾಕಡೆ ಇದ್ದಾರೆ ಯಾವ ಡಿಪಾರ್ಟ್‌ಮೆಂಟಿನಲ್ಲಿ ಹೋಗಲಿ ಇದ್ದಾರೆ. ಬ್ಯೂರಾಕ್ರಸಿ ಯಾವ ರೀತಿಯಿಂದ ಬೆಳೆದಿದೆ ಎಂಬುದನ್ನು ವಿಚಾರ ಮಾಡಿ. ಈ ಬ್ಯೂರಾಕ್ರಸಿಗೆ ಬಡ ಬೋರೇಗೌಡನ ದುಡ್ಡನ್ನು ಕೊಡುತ್ತಿದ್ದೇವೆ. ನಿಮ್ಮ ಮುಂದೆ ಹೇಳಬೇಕಾಗಿದ್ದರೆ, ಇದರ ಬಗ್ಗೆ ಅಂಕಿಸಂಖ್ಯೆ ಇಟ್ಟು ಕೊಂಡಿದ್ದೇನೆ. ಇಲ್ಲಿದೆ ನೋಡಿ. ೧೯೮೩–೮೪ರಲ್ಲಿ ಈ ಸಿಬ್ಬಂದಿ ವರ್ಗಕ್ಕೆ ಕೊಟ್ಟಿರುವ ಟಿ.ಎ., ಡಿ.ಎ. ಸಂಬಳ ಎಲ್ಲಾ ಸೇರಿಸಿದರೆ ೪೨೪ ಕೋಟಿ ೫೭ ಲಕ್ಷ ಖರ್ಚಾಗುತ್ತಿತ್ತು. ಈಗ ಲೇಟೆಸ್ಟ್ ೧೯೮೯–೯೦ಕ್ಕೆ, ಇದು ಎಷ್ಟಕ್ಕೆ ಬರುತ್ತದೆ ಎಂದರೆ ೧೭೧೬ ಕೋಟಿ ರೂಪಾಯಿಗಳನ್ನು ನಾವು ಸಿಬ್ಬಂದಿ ಸಂಬಳಕ್ಕೆ ಖರ್ಚು ಮಾಡುತ್ತಿದ್ದೇವೆ, ೧೭೧೬ ಕೋಟಿ; ಇದರಲ್ಲಿ ಸ್ಯಾಲರಿ ಆಗುತ್ತದೆ, ಗ್ರಾಂಟ್ ಇನ್ ಏಡ್

ಕೊಟ್ಟ ಹಣ, ಪೆನ್‌ಷನ್ ಮುಂತಾದ ಎಲ್ಲಾ ಸೇರಿಕೊಂಡು ಇಷ್ಟಾಗುತ್ತದೆ. ಇವತ್ತು ನಮಗೆ ಟ್ಯಾಕ್ಸ್ ರೂಪದಿಂದ ಬರುವಂತಹದು ೩೪೪೯ ಕೋಟಿ ರೂಪಾಯಿಗಳು. ಇದರ ಅರ್ಧದಷ್ಟು ಎಂದರೆ ೧೭೦೭ ಕೋಟಿ ನಾವು ಸಿಬ್ಬಂದಿಯ ಮೇಲೆ ಖರ್ಚು ಮಾಡುತ್ತಿದ್ದೇವೆ. ಅಂದರೆ ನಮ್ಮ ಬ್ಯೂರಾಕ್ರಸಿ ಎಂಪೈರ್ ಎಷ್ಟರ ಮಟ್ಟಿಗೆ ಬೆಳೆದಿದೆ ಎಂಬುದನ್ನು ತಾವು ವಿಚಾರ ಮಾಡಬೇಕು. ಈ ಮಾತು ಹೇಳುವ ಮುನ್ನ ನಾನು ಒಪ್ಪುತ್ತೇನೆ, ಒಂದೇ ದಿವಸ ಇದನ್ನು ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ. ಕಡಿಮೆ ಮಾಡಿದರೆ ಅವರು ನಮ್ಮನ್ನೇ ಓಡಿಸಿಬಿಡುತ್ತಾರೆ, ಅದು ನನಗೆ ಗೊತ್ತಿದೆ. ಆದರೆ, ಇದನ್ನು ಎಷ್ಟು ದಿವಸ ಹೀಗೆ ಕೊಟ್ಟುಕೊಂಡು ಹೋಗುವುದು, ಎಷ್ಟು ದಿವಸ ಇದೇರೀತಿ ಬ್ಯೂರಾಕ್ರಸಿಯನ್ನು ಬೆಳೆಸಿಕೊಂಡು ಹೋಗುವುದು ? ಅಧಿಕಾರಿಗಳು ಅಂದರೆ ಹಿರಿಯ ಅಧಿಕಾರಿಗಳು ಏನು ಅಂದುಕೊಂಡಿದ್ದಾರೆ ಅಂದರೆ "ತನ್ನನ್ನು ಇಲ್ಲಿ ಕೂರಿಸಿದ್ದಾರೆ, ಬರೀ ೩-೪ ಫೈಲ್ ಬಂದರೆ ಸಾಕು ಒಂದು ಗಂಟೆ ಕೆಲಸ ಮಾಡಿದರೆ ಸಾಕು. ಮಧ್ಯಾಹ್ನ ಆರಾಮವಾಗಿ ಮನೆಗೆ ಹೋಗಿ ಮಲಗಿಕೊಂಡು ಬರುತ್ತೇನೆ" ಎಂದು, ಈ ರೀತಿ ಸರ್ಕಾರಕ್ಕೆ ಹೆಚ್ಚಿನ ಸಿಬ್ಬಂದಿ ಇದ್ದು, ಅಧಿಕಾರಿಗಳಿಗೆ ಕೆಲಸ ಕಡಿಮೆಯಾಗಿದೆ, ಇದನ್ನು ಸರಿಮಾಡಲು ಕ್ರಮಕೈಗೊಳ್ಳಬೇಕಾಗಿದೆ. ಇನ್ನು ಆಡಳಿತದಲ್ಲಿ ಭ್ರಷ್ಟಾಚಾರ ತೊಲಗಬೇಕು ಬಹಳ ಜನ ಸಾಕಷ್ಟು ದುಡ್ಡು ಮಾಡಿದ್ದಾರೆ. ಸಾಕಷ್ಟು ಆಸ್ತಿಯನ್ನು ಮಾಡಿದ್ದಾರೆ. ಬಹಳ ಜಾಗರೂಕತೆಯಿಂದ ಮಾಡಿದ್ದಾರೆ. ಬೆನಾಮಿ ಆಸ್ತಿ ಬಹಳ ಹೆಚ್ಚಿದೆ. ಇಂಥಾದ್ದನ್ನು ಹಿಡಿಯುವುದು ಬಹಳ ಕಷ್ಟ. ಆದರೂ ನಾವು ಪ್ರಯತ್ನ ಮಾಡುತ್ತೇವೆ. ಈಗಾಗಲೇ ನಮ್ಮ ಮುಖ್ಯ ಕಾರ್ಯದರ್ಶಿಯವರ ಜೊತೆಯಲ್ಲಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಆಡಳಿತದಲ್ಲಿರತಕ್ಕ ಶಿಥಿಲತೆಯನ್ನು ಹೋಗಲಾಡಿಸಿ ಬಿಗಿ ತರಲು ನಿಮ್ಮೆಲ್ಲರ ಸಹಕಾರವೂ ನನಗೆ ಬೇಕು. ಎಲ್ಲಾ ಅಸ್ತ್ರಗಳು ಮುಗಿದು ಹೋದರೆ, ನಮ್ಮಲ್ಲಿ ಒಂದು ಮಹಾಸ್ತ್ರ ಇದೆ, ಅದರ ಉಪಯೋಗ ಮಾಡುವ ಅವಶ್ಯಕತೆ ಬರಲಿಕ್ಕಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅಧಿಕಾರಿಗಳು ಮತ್ತು ಅಧಿಕಾರೇತರರು ಪೂರ್ಣ ಮನಸ್ಸಿನಿಂದ ಕೆಲಸ ಮಾಡಬೇಕು. ಅವರಿಗೆ ಯಾವುದೋ ಭಯ ಮೂಡಿಸಬೇಕು ಎಂಬ ದೃಷ್ಟಿಯಿಂದ ಈ ವಿಚಾರವನ್ನು ನಾನು ಹೇಳುತ್ತಿಲ್ಲ. ಯಾರು ಯಾರು ಭ್ರಷ್ಟ ಅಧಿಕಾರಿಗಳು ಇದ್ದರೆ, ಅವರನ್ನು ಕಂಪಲ್‌ಸರಿ ಆಗಿ ನಿವೃತ್ತಿ ಮಾಡುವ ಅವಶ್ಯಕತೆ ಇದೆ. ಹಿಂದೆ ನಾನು ಇದನ್ನು ಪ್ರಯೋಗ ಮಾಡಿದ್ದೇನೆ. ಬಹುಶಃ ಅದರ ಅವಶ್ಯಕತೆ ಈಗ ಬರಲಿಕ್ಕಿಲ್ಲವೆಂದು ತಿಳಿದುಕೊಂಡಿದ್ದೇನೆ. ಬದಲಾದ ವಾತಾವರಣವನ್ನು ಅನುಸರಿಸಿಕೊಂಡು ಸರಿಯಾದ ಕಾಲಮಿತಿಯಲ್ಲಿ ಅವರು ಪ್ರಮಾಣಿಕವಾಗಿ ಕೆಲಸಮಾಡಿ ಸರ್ಕಾರದ ಆಡಳಿತದಲ್ಲಿ ಒಳ್ಳೆಯ ಹೆಸರನ್ನು ನನಗೂ ಹಾಗೂ ನನ್ನ ಸಹೋದ್ಯೋಗಿಗಳಿಗೂ ತಂದುಕೊಡುತ್ತಾರೆಂಬ ಭರವಸೆಯನ್ನು ನಾನು ಇಟ್ಟುಕೊಂಡಿದ್ದೇನೆ.

ಇನ್ನು ಹಣಕಾಸಿನ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತೇನೆ. ಹಣಕಾಸಿನ ಮಂತ್ರಿಗಳು ಹೇಳಿದ ಹಾಗೆ ನಾವು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದೇವೆ. ಬಹಳಷ್ಟು ದುಡ್ಡನ್ನು ಯೋಜನೇತರ ಕೆಲಸ ಕಾರ್ಯಗಳಿಗೆ ಖರ್ಚು ಮಾಡುತ್ತಿದ್ದೇವೆ ಯೋಜನೆಗಳಿಗೆ ಖರ್ಚು ಮಾಡಲು ನಮ್ಮ ಹತ್ತಿರ ಸಾಕಷ್ಟು ಹಣವಿಲ್ಲ. ಕೇಂದ್ರ ಸರ್ಕಾರದಿಂದ ನಮಗೆ ಏನು ಸಹಾಯ ಬರುತ್ತದೆ, ಲೋನ್ ಬರುತ್ತದೆ, ಆ ಹಣವು ನಾವು ಅವರಿಂದ ಪಡೆದುಕೊಂಡ ಲೋನ್ ಇಂಟರೆಸ್ಟ್ ಕೊಡುವುದಕ್ಕಾಗಿಯೇ ಹೊರಟು ಹೋಗುತ್ತದೆ. ಅದರಲ್ಲಿ ಏನು ಉಳಿಯುವುದಿಲ್ಲ ನಮ್ಮ ಮುಂದೆ ಬೇಕಾದಷ್ಟು ಯೋಜನೆಗಳಿವೆ. ಆ ಯೋಜನೆಗಳನ್ನು ನಾವು ಇವತ್ತು ಕಾರ್ಯಗತ ಮಾಡಬೇಕಾದರೆ ಬಹಳಷ್ಟು ಹಣ ಬೇಕು. ಹಣಕಾಸಿನ ಮಂತ್ರಿಗಳು ಅವರ ಸ್ಟೇಟ್‌ಮೆಂಟಿನಲ್ಲಿ ಇದರ ಬಗ್ಗೆ ಹೇಳಿದ್ದಾರೆ. ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಎಷ್ಟರಮಟ್ಟಿಗೆ ಹೋಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ೧೯೮೩-೮೪ಕ್ಕೆ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ೯೪೮ ೪೩ ಕೋಟಿಗಳು ಆಗಿದ್ದರೆ ಇವತ್ತು ೧೯೮೯-೯೦ಕ್ಕೆ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಎಷ್ಟಾಗಿದೆ ಎಂದರೆ ೨೬೪೪.೪೪ ಕೋಟಿಗಳು ಈ ರೀತಿ ಕರ್ನಾಟಕದಲ್ಲಿ ದುಡ್ಡು ವ್ಯಯವಾಗುತ್ತಿರುವಾಗ, ಅದಕ್ಕಾಗಿ ಯಾವ ರೀತಿ ಹಣದ ಮೂಲವನ್ನು ಕಂಡುಹಿಡಿಯಬೇಕು ಎಂಬುದನ್ನು ತಾವೇ ಯೋಚನೆ ಮಾಡಿ. ಬ್ಯೂರಾಕ್ರಸಿ ದೊಡ್ಡದಾಗಿದೆ, ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ವಿಪರೀತವಾಗಿ ಬೆಳೆದಿದೆ. ಇದನ್ನು ಒಂದೇ ದಿವಸದಲ್ಲಿ ಹತೋಟಿಗೆ ತರುವುದು ಬಹಳ ಕಷ್ಟವಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಅಭಿವೃದ್ಧಿ ಕೆಲಸಗಳಿಗಾಗಿ ಬಹಳ ಕಡಿಮೆ ದುಡ್ಡು ಇದೆ. ಅದಕ್ಕಾಗಿ ನಾವು ನಮ್ಮ ಸಂಪನ್ಮೂಲವನ್ನು ಕ್ರೋಢೀಕರಿಸಲು ಅನೇಕ ವಿಧವಾಗಿ ಪ್ರಯತ್ನ ಮಾಡುತ್ತಿದ್ದೇವೆ. ಈ ಬಗ್ಗೆ ಮಾನ್ಯ ಸದಸ್ಯರುಗಳು ಸಲಹೆಯನ್ನು ಕೊಟ್ಟರೆ ಅದನ್ನೂ ಪರಿಶೀಲನೆ ಮಾಡಿ ವಿಚಾರ ಮಾಡಲು ನಾವು ತಯಾರಿದ್ದೇವೆ ಒಂದು ಕಡೆ ಯೋಜನೇತರ ಬಾಬುಗಳಿಗೆ ಖರ್ಚು ಹೆಚ್ಚಾಗುತ್ತಿದೆ. ಮತ್ತು ಬಹಳಷ್ಟು ರೀತಿಯಿಂದ ಖಜಾನೆಗೆ ಬರುವಂತಹ ದುಡ್ಡು ಸೋರಿಹೋಗುತ್ತಿದೆ. ಸಾಕಷ್ಟು ಬರುತ್ತಿಲ್ಲ. ಆ ಲೂಪ್‌ಹೋಲ್‌ಗಳನ್ನು ಪ್ಲಗ್ ಮಾಡಿ ಹೆಚ್ಚು ಹಣ ಖಜಾನೆಗಳಿಗೆ ಬರುವಂತಹ ಪ್ರಯತ್ನವನ್ನು ನಾವು ಮಾಡುವುದು ಬಹಳ ಅವಶ್ಯಕವಿದೆ, ಏತಕ್ಕೆಂದರೆ ಅನೇಕ ಯೋಜನೆಗಳು ಇವೆ. ನೀರಾವರಿ

ಯೋಜನೆಗಳು ವಿದ್ಯುತ್ ಯೋಜನೆಗಳು, ಹೀಗೆ ಬೇಕಾದಷ್ಟು ಯೋಜನೆಗಳಿಗೆ ಬಹಳ ದುಡ್ಡು ಬೇಕು. ಆ ದುಡ್ಡನ್ನು ನಾವು ಯಾವ ರೀತಿಯಿಂದ ಒದಗಿಸಿಕೊಳ್ಳಬೇಕು ಎಂಬುದನ್ನು ಯೋಚನೆ ಮಾಡಬೇಕು. ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಹಾಯ ಬರಬಹುದೆಂಬ ಆಸೆಯನ್ನು ನಾನು ಇಟ್ಟುಕೊಂಡಿದ್ದೇನೆ. ಅದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

೪ ಪಿ. ಎಂ.

ಅದೂ ಅಲ್ಲದೆ ನಾವು ಕೂಡ ನಮ್ಮ ಸಂಪನ್ಮೂಲಗಳನ್ನು ಬೆಳಸಿಕೊಳ್ಳತಕ್ಕಂಥ ಪ್ರಯತ್ನ ಮಾಡಬೇಕು. ಮತ್ತು ಆ ಸಂಪನ್ಮೂಗಳನ್ನು ಉಳಿಸಿಕೊಳ್ಳತಕ್ಕಂಥ ಪ್ರಯತ್ನ ಮಾಡಬೇಕು. ಖರ್ಚು ಮಾಡುವುದನ್ನು ನಿಲ್ಲಿಸಿ ಯೋಜನೆಗಳಿಗೆ ಏನಾದರೂ ಒಂದು ಸ್ವರೂಪ ಕೊಡುವಂತಹ ಪ್ರಯತ್ನ ಮಾಡಬೇಕೆನ್ನುವುದು ನನ್ನ ಇಚ್ಛೆ. ಬಹುಶಃ ಇದರಲ್ಲಿ ನಮಗೆ ಎಷ್ಟರ ಮಟ್ಟಿಗೆ ಯಶಸ್ಸು ಸಿಗುತ್ತದೆ ಎನ್ನುವುದನ್ನು ಕಾದು ನೋಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಇಷ್ಟು ಹೇಳಿ ನಾನು ಮೊದಲೇ ಹೇಳಿದಂತೆ ನಮ್ಮಲ್ಲಿ ಅನೇಕ ಸರ್ಕಾರಿ ವಲಯದ ಕಾರ್ಖಾನೆಗಳು ಇವೆ. ಈ ಎಲ್ಲಾ ಕಾರ್ಖಾನೆಗಳು ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ನಾನು ಹೇಳುವುದಿಲ್ಲ. ಕೆಲವು ಕಾರ್ಖಾನೆಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದರೆ ಇನ್ನು ಕೆಲವು ಕಾರ್ಖಾನೆಗಳಲ್ಲಿ ನಮಗೆ ಲಾಸ್ ಆಗುತ್ತದೆ. ಇವುಗಳನ್ನು ಏನು ಮಾಡಬೇಕೆನ್ನುವುದು ಸಧ್ಯಕ್ಕೆ ಗೊತ್ತಿಲ್ಲ. ಈ ಬಗ್ಗೆ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಶ್ರೀಸಾಮಾನ್ಯನ ದುಡ್ಡು ವೃಥಾ ಪೋಲು ಮಾಡಬಾರದೆನ್ನುವ ವಿಚಾರದಿಂದ ಈ ಬಗ್ಗೆ ಸರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಒಂದು ವೇಳೆ ಅದೂ ಸಾಧ್ಯವಾಗದಿದ್ದರೆ ಕೇಂದ್ರ ಸರ್ಕಾರದ ಜವಾಬ್ದಾರಿಗೆ ವಹಿಸಿಕೊಡತಕ್ಕಂಥ ಪ್ರಯತ್ನ ಮಾಡುತ್ತೇನೆ. ಈ ಎರಡರಲ್ಲೂ ಕೂಡ ನಾವು ಸಫಲರಾಗದಿದ್ದರೆ ನಮ್ಮ ಹಾದಿಯನ್ನು ಹಿಡಿಯುವ ಪರಿಸ್ಥಿತಿ ಬಂದರೂ ಬರಬಹುದು ಎಂದು ನನಗನಿಸುತ್ತದೆ. ಇದರ ಬಗ್ಗೆ ನಾವು ಪ್ರಯತ್ನ ಮಾಡುತ್ತೇವೆನ್ನುವ ಮಾತನ್ನು ನಾನು ಈಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಹೆಚ್ಚು ಏನನ್ನು ಹೇಳದೆ ನಾವು ಈಗಾಗಲೇ ಅನೇಕ ಭರವಸೆಗಳನ್ನು ಕೊಟ್ಟಿದ್ದೇವೆ. ಅದೂ ಚುನಾವಣೆ ಪ್ರಣಾಳಿಕೆ ಮುಖಾಂತರ ಕೊಟ್ಟಿದ್ದೇವೆ. ನಮ್ಮ ಭರವಸೆಗಳನ್ನು ನಾನು ಲಘುವಾಗಿ ಕಾಣುತ್ತಿಲ್ಲ. ಕೊಟ್ಟ ಭರವಸೆಗಳನ್ನು ಈಡೇರಿಸಬೇಕೆನ್ನುವ ಉದ್ದೇಶದಿಂದ ಭರವಸೆಗಳನ್ನು ಕೊಟ್ಟಿದ್ದೇವೆ. ಈ ಭರವಸೆಗಳನ್ನು ಈಡೇರಿಸುವ ಸಲುವಾಗಿ ಕೆಲಸಕಾರ್ಯಗಳನ್ನು ಜಾಗ್ರತೆ ಮಾಡಬೇಕಾಗುತ್ತದೆ. ಕೊಟ್ಟ ಭರವಸೆಗಳನ್ನು ಈಡೇರಿಸುವ ಸಲುವಾಗಿ ಈಗಾಗಲೇ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇವುಗಳನ್ನು ಮೇಲಿಂದ ಮೇಲೆ ಪರಿಶೀಲನೆ ಮಾಡಬೇಕೆಂದು ಕ್ಯಾಬಿನೆಟ್ ಉಪಸಮಿತಿಯನ್ನು ನೇಮಕ ಮಾಡಬೇಕೆನ್ನುವ ನಿರ್ಣಯವನ್ನು ಸಹ ಮಾಡಿದ್ದೇನೆ. ಈ ಸಮಿತಿಯವರು ಈ ಭರವಸೆಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುತ್ತದೆಯೇ ಅಥವಾ ಇದರಲ್ಲಿ ಏನು ಕಷ್ಟ ಇದೆ. ಇದನ್ನು ಯಾವ ರೂಪಕ್ಕೆ ತರಬಹುದು ಎನ್ನತಕ್ಕಂಥ ಎಲ್ಲಾ ವಿಚಾರಗಳನ್ನು ಪರಿಶೀಲಿಸಿ ನಮಗೆ ಮೇಲಿಂದ ಮೇಲೆ ಸಲಹೆ ಮಾಡಿ ಎಂದು ಹೇಳಿದ್ದೇನೆ. ಆ ಕೆಲಸವನ್ನು ಅವರು ಮಾಡುತ್ತಾರೆ. ಅಲ್ಲಿಂದ ಇನ್ನೊಂದು ಬಹಳ ಮುಖ್ಯವಾದ ವಿಚಾರ ಎಂದರೆ ಕರ್ನಾಟಕರಾಜ್ಯದ ಜನತೆ ಹಾಗೂ ಎಲ್ಲಾ ರಾಜಕೀಯ ಪಕ್ಷದ ಧುರೀಣರ ಮನಸ್ಸಿನಲ್ಲಿರತಕ್ಕಂಥ ವಿಚಾರವೆಂದರೆ ಈ ವಿದ್ಯಾಸಂಸ್ಥೆಗಳದ್ದು. ಈ ವಿದ್ಯಾ ಸಂಸ್ಥೆಗಳು ಇವತ್ತು ಕರ್ನಾಟಕ ರಾಜ್ಯದಲ್ಲಿ ವ್ಯಾಪಾರಿ ಕೇಂದ್ರಗಳಾಗಿವೆ ಎಂದರೆ ತಪ್ಪಾಗಲಾರದು. ಬಹುಶಃ ಇದು ಒಂದು ದುರ್ದೈವದ ಸಂಗತಿ ಆಗಿದೆ. ಕರ್ನಾಟಕ ರಾಜ್ಯದಲ್ಲಿ ಎಜುಕೇಶನ್ ಹೆಚ್ಚು ಕಮರ್ಷಿಯಲ್ ಆಗಿದೆ. ಇಂಜಿನೀಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಕ್ಯಾಫಿಟೇಶನ್ ಫೀಜನ್ನು ಹೆಚ್ಚು ಬೆಳಸಿಕೊಂಡು ಬಂದಿದ್ದಾರೆ. ಈ ವಿಷಯವನ್ನು ಸಹ ನಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ. ಕ್ಯಾಫಿಟೇಶನ್ ಫೀಜನ್ನು ರದ್ದು ಮಾಡುತ್ತೇವೆಂದು. ಮತ್ತು ಈ ದಿಸೆಯಲ್ಲಿ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇವೆ. ಇದನ್ನು ತವು ವಿಚಾರ ಮಾಡಬಹುದು ಇದೊಂದು ಬಹಳ ಗಹನವಾದ ಪ್ರಶ್ನೆ. ಈ ಬಗ್ಗೆ ಒಂದು ಮಾತನ್ನು ನಾನು ತಮ್ಮ ಮುಂದೆ ಹೇಳಬೇಕಾಗಿದೆ. ಈ ಸಲುವಾಗಿಯೇ ನಾನು ಕ್ಯಾಬಿನೆಟ್ ಉಪಸಮಿತಿಯನ್ನು ನೇಮಕ ಮಾಡಿ, ಯಾವ ರೀತಿ ಈ ಕ್ಯಾಫಿಟೇಶನ್ ಫೀಜ್‌ನ್ನು ರದ್ದು ಮಾಡಲು ಸಾಧ್ಯ ಎನ್ನುವುದನ್ನು ಪರಿಶೀಲನೆ ನಡೆಸಿ ಮೇಲಿಂದ ಮೇಲೆ ಸಲಹೆ ಕೊಡಿ ಎಂದು ಅವರಿಗೆ ಹೇಳಿದ್ದೇನೆ. ಇದೊಂದು ಜಟಿಲವಾದ ಸಮಸ್ಯೆ. ಇದನ್ನು ಬಗೆಹರಿಸುವುದು ಸುಲಭದ ಕೆಲಸವೆಂದು ನಾನು ಹೇಳುವುದಿಲ್ಲ. ಒಂದೇ ಕಲಮಿನಲ್ಲಿ ಒಂದು ಕಾನೂನು ಪಾಸ್ ಮಾಡಿ ಅಥವಾ ಒಂದು ಆರ್ಡರ್ ಮಾಡಿ ಕ್ಯಾಫಿಟೇಶನ್ ಫೀಜನ್ನು ತೆಗೆದು ಹಾಕುವುದಕ್ಕೆ ಆಗುವುದಿಲ್ಲ. ಇದು ತುಂಬಾ ಜಟಿಲ ಸಮಸ್ಯೆ ಆಗಿದೆ. ಈ ಸಂದರ್ಭದಲ್ಲಿ ನನ

ಸ್ನೇಹಿತರಾದ ಶ್ರೀಮಾನ್ ಚಂದ್ರೇಗೌಡರಿಗೆ ಒಂದು ಮಾತು ಹೇಳಿದರೆ ಅವರು ತಪ್ಪು ತಿಳಿದುಕೊಳ್ಳ ಬಾರದು ಅವರ ಕಾಲದಲ್ಲಿ ಅಂದರೆ ೧೯೮೩ ಮತ್ತು ೧೯೮೫ರಲ್ಲಿ ಸ್ಪಷ್ಟವಾಗಿ ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಜನಸಾಮಾನ್ಯರಿಗೆ ಒಂದು ಭರವಸೆಯನ್ನು ಕೊಟ್ಟರು. ನಾನು ಮೊದಲೇ ಹೇಳಿದ್ದೇನೆ. ನಮ್ಮ ಚುನಾವಣೆ ಪ್ರಣಾಳಿಕೆಯೇ ನಮಗೆ ಗೀತಾ' ಬೈಬಲ್ ಕುರಾನ್ ಆಗಬೇಕೆಂದು. ಅವರು ಏನು ಹೇಳಿದ್ದಾರೆಂದರೆ, ನಮಗೆ ಅಧಿಕಾರ ಬಂದರೆ ದುರ್‌ವ್ಯಾಪಾರಿಯಾಗಿರುವ ವಿದ್ಯೆಯನ್ನು ತಡೆಗಟ್ಟುತ್ತೇವೆಂದು. ಈ ವಿಚಾರವನ್ನು ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ಆ ಒಂದು ಪಾಯಿಂಟ್ ಮೇಲೆ ನಾನು ನನ್ನ ಚುನಾವಣೆ ಭಾಷಣದಲ್ಲಿ ಜನತಾದಳ ಸರ್ಕಾರವನ್ನು ಅಟ್ಯಾಕ್ ಮಾಡುತ್ತಿದ್ದೆ.

ನಿಮಗೆ ಕ್ಯಾಪಿಟೇಷನ್ ಫೀಸ್ ಬಗ್ಗೆ ಹೇಳಬೇಕಾದರೆ, ಜನತಾ ಪಕ್ಷ ಅಧಿಕಾರಕ್ಕೆ ಬರುವ ಮುನ್ನ ೩೯ ಇಂಜನೀಯರಿಂಗ್ ಕಾಲೇಜುಗಳು ಇದ್ದವು. ಮತ್ತು ಅದರ ಇನ್‌ಟೇಕ್ ಕೆಪಾಸಿಟಿ ೧೦,೯೬೨ ಇತ್ತು. ಜನತಾ ಪಕ್ಷದವರು ಕಾಲೇಜುಗಳಲ್ಲಿ ನಡೆಯುವ ದುರ್ವ್ಯವಹಾರಗಳನ್ನು ನಿಲ್ಲಿಸುತ್ತೇವೆಂದು ಭರವಸೆ ಕೊಟ್ಟಿದ್ದರು. ಆದರೆ ಅವರು ಅಧಿಕಾರ ಬಿಡುವಾಗ ೩೯ ಖಾಸಗಿ ಇಂಜನೀಯರಿಂಗ್ ಕಾಲೇಜುಗಳು ಇದ್ದದ್ದು ೫೧ ಇಂಜನಿಯರಿಂಗ್ ಕಾಲೇಜುಗಳಾಗಿದ್ದವು. ಅವು ಗಳ ಇನ್‌ಟೇಕ್ ಕೆಪಾಸಿಟಿ ೧೦,೯೬೨ರಿಂದ ೧೬,೦೦೦ಕ್ಕೆ ಏರಿತ್ತು. ಇಂಜನೀಯರಿಂಗ್ ಕಾಲೇಜುಗಳಲ್ಲಿ ಒಬ್ಬೊಬ್ಬ ಹುಡುಗರಿಗೆ ಎಷ್ಟು ಕ್ಯಾಪಿಟೇಷನ್ ಫೀಸ್ ಕೊಡಬೇಕೆಂಬುದನ್ನು ಅವರೇ ಲೆಕ್ಕ ಮಾಡಲಿ. ಆಮೇಲೆ ಪಾಲಿಟೆಕ್ನಿಕ್ ಕಾಲೇಜುಗಳ ಬಗ್ಗೆ ಹೇಳಬೇಕಾದರೆ ಆಶ್ಚರ್ಯ ಆಗುತ್ತದೆ. ಜನತಾ ಪಕ್ಷ ಅಧಿಕಾರಕ್ಕೆ ಬರುವ ಮುನ್ನ ೪೬ ಪಾಲಿಟೆಕ್ನಿಕ್ ಕಾಲೇಜುಗಳು ಇದ್ದವು ನಂತರ ಅವರು ಅಧಿಕಾರ ಬಿಡುವ ಮುನ್ನ ೧೬೨ ಪಾಲಿಟೆಕ್ನಿಕ್ ಕಾಲೇಜುಗಳು ಆಗಿವೆ. ಅವುಗಳಲ್ಲಿ ಎರಡು ಮೂರು ಕಾಲೇಜುಗಳನ್ನು ಬಿಟ್ಟರೆ ಉಳಿದವುಗಳೆಲ್ಲಾ ಪ್ರೈವೇಟ್ ಕಾಲೇಜುಗಳು. ಮೊದಲು ೬,೪೫೦ ಇನ್‌ಟೇಕ್ ಕೆಪಾಸಿಟಿ ಇತ್ತೆಂದು ಅಂಕಿ ಸಂಖ್ಯೆಗಳು ಹೇಳುತ್ತವೆ. ಇದರಲ್ಲಿ ಗೌರ್ನಮೆಂಟ್ ಕಾಲೇಜುಗಳನ್ನು ಸೇರಿಸಿಕೊಂಡು ಹೇಳುತ್ತಿದ್ದೇನೆ. ೬,೪೫೦ ಇನ್‌ಟೇಕ್ ಕೆಪಾಸಿಟಿ ೪೬ ಕಾಲೇಜುಗಳಲ್ಲಿ ಇದ್ದ ಮೇಲೆ ಇವರು ಅಧಿಕಾರ ಬಿಟ್ಟು ಹೋಗುವ ಹೊತ್ತಿಗೆ ೧೬೨ ಪಾಲಿಟೆಕ್ನಿಕ್ ಕಾಲೇಜುಗಳಾದವು ಅವುಗಳ ಇನ್‌ಟೇಕ್ ಕೆಪಾಸಿಟಿ ೨೭,೧೪೮. ಇನ್ನು ಮೆಡಿಕಲ್ ಕಾಲೇಜುಗಳಲ್ಲಿ, ೧೯೮೩ರಲ್ಲಿ ನಮ್ಮ ಕರ್ನಾಟಕದಲ್ಲಿ ೧೦ ಪ್ರವೇಟ ಮೆಡಿಕಲ್ ಕಾಲೇಜುಗಳು ಮತ್ತು ೪ ಗೌರ್ನಮೆಂಟ್ ಕಾಲೇಜುಗಳು ಇದ್ದವು. ಮತ್ತು ಅದರ ಇನ್‌ಟೇಕ್ ಕೆಪಾಸಿಟಿ ಪ್ರೈವೇಟ್ ಕಾಲೇಜುಗಳಲ್ಲಿ ೮೫೫ ಇತ್ತು. ಗೌರ್ನಮೆಂಟ್ ಕಾಲೇಜುಗಳಲ್ಲಿ ೫೫೦ ಇತ್ತು. ಅದೇ ೧೯೮೯–೯೦ರಲ್ಲಿ ಏನಾಯಿತು? ೧೦ ಮೆಡಿಕಲ್ ಕಾಲೇಜುಗಳ ಬದಲು ೧೫ ಮೆಡಿಕಲ್ ಕಾಲೇಜುಗಳು ಆದವು. ಜನತಾ ಪಕ್ಷದ ಅಧಿಕಾರದ ಅವಧಿಯಲ್ಲಿ ಗೌರ್ನಮೆಂಟ್ ಕಾಲೇಜುಗಳು ಹೆಚ್ಚಾಗಲಿಲ್ಲ. ಒಟ್ಟು ೧೫ ಮೆಡಿಕಲ್ ಕಾಲೇಜುಗಳಲ್ಲಿ ಮೊದಲು ಇದ್ದ ೮೫೫ ಇನಟೇಕ್ ಕೆಪಾಸಿಟಿ ಬದಲಿಗೆ ೨,೭೦೦ ಇನ್‌ಟೇಕ್ ಕೆಪಾಸಿಟಿ ಹೆಚ್ಚಾಯಿತು. ಒಂದು ಮೆಡಿಕಲ್ ಕಾಲೇಜಿನ ಸೀಟಿಗೆ ಕ್ಯಾಪಿಟೇಷನ್ ಫೀಸ್ ಎಷ್ಟಿದೆಯೆಂದು ತಮಗೆ ಗೊತ್ತಿದೆ. ಇಂಥ ದಳ್ಳಾಳಿ ಕೆಲಸದಲ್ಲಿ ಯಾರ, ಯಾರ ಕೈ ಕರ್‍ಗೆ ಆಗಿದೆ ಎಂಬುದು ತಮಗೆ ಗೊತ್ತಿದೆ. ನಾನು ಇವತ್ತು ಸ್ಪಷ್ಟವಾಗಿ ತಮಗೆ ಹೇಳಬೇಕಾದರೆ, ಇದನ್ನು ಯಾರೋ ನಾಯಕರು ಮಾಡಿದಗು. ಇವತ್ತು ಕಾರ್ಯಕರ್ತರಾದ ನೀವೆಲ್ಲರೂ ಅನುಭವಿಸುತ್ತಿದ್ದೀರಿ. ಇಷ್ಟು ದೊಡ್ಡ ಪ್ರಮಾಣದಲ್ಲಿ ಇವತ್ತು ವಿದ್ಯಾ ಕ್ಷೇತ್ರದಲ್ಲಿ ದುರ್ವ್ಯವಹಾರ ನಡೆಯುತ್ತಿದೆ. ಇದನ್ನು ನಾವು ನಿಲ್ಲಿಸಬೇಕು. ಇದನ್ನು ನಿಲ್ಲಿಸುವುದು ಅಷ್ಟು ಹಗುರವಾದ ಕೆಲಸವಲ್ಲ. ಅದಕ್ಕಾಗಿ ನಾವು ದೀರ್ಘಾಲೋಚನೆ ಮಾಡುತ್ತಿದ್ದೇವೆ. ಯಾವ ರೀತಿ ಈ ದುರ್ವ್ಯವಹಾರಗಳನ್ನು, ಕ್ಯಾಪಿಟೇಷನ್ ಫೀಸ್‌ಗಳನ್ನು ನಿಲ್ಲಿಸಬೇಕೆಂದು ವಿಚಾರ ಮಾಡುತ್ತಿದ್ದೇವೆ. ಈ ಬಗ್ಗೆ ತಾವುಗಳು ಸಹಾಯ ಸಹಕಾರ ನೀಡುವುದಿದ್ದರೆ ಅದಕ್ಕೂ ನಾವು ಸ್ವಾಗತ ಮಾಡುತ್ತೇವೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇನ್ನೂ ಒಂದು ವಿಚಾರ ಹೇಳಬೇಕಾದರೆ, ಕರ್ನಾಟಕದಲ್ಲಿ ಕನ್ನಡಕ್ಕೆ ಪ್ರಾಧಾನ್ಯತೆ ಕೊಡದೇ ಇದ್ದರೆ ಎರಡನೇ ರಾಜ್ಯದಲ್ಲಿ ಕನ್ನಡಕ್ಕೆ ಪ್ರಾಧಾನ್ಯತೆ ಸಿಗುತ್ತದೆಯೇ ? ಕನ್ನಡಕ್ಕೆ ಪ್ರಾಧಾನ್ಯತೆ ಕೊಡುವುದು ನಮ್ಮ ಧರ್ಮ ಮತ್ತು ಕರ್ತವ್ಯ. ಒಂದು ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಕನ್ನಡವನ್ನು ಬೆಳೆಸಬೇಕಾದರೆ ಕನ್ನಡಕ್ಕೆ ಪ್ರಾಧಾನ್ಯತೆ ಸಿಕ್ಕುವ ವಾತಾವರಣ ಮೂಡಿಸಬೇಕಾದರೆ, ಅದರ ಮೇಲೆ ಒತ್ತಡ ತಂದು ಬೆಳವಣಿಗೆ ಮಾಡುತ್ತೇವೆಂದರೆ ಆಗುವುದಿಲ್ಲ. ಕನ್ನಡದ ಬಗ್ಗೆ ಅಭಿಮಾನ ಬರುವಂಥ ವಾತಾವರಣವನ್ನು ನಾವು ನಿರ್ಮಾಣ ಮಾಡಬೇಕು. ಕನ್ನಡ ಕಲಿತರೆ, ಕನ್ನಡದಲ್ಲಿ ಎಲ್ಲ ವ್ಯವಹಾರಗಳನ್ನು ಮಾಡಿದರೆ ಎಲ್ಲಾ ರೀತಿಯಲ್ಲೂ ಅನುಕೂಲತೆ ಬರುತ್ತದೆ ಎನ್ನುವ ವಾತಾವರಣ ವನ್ನು ಮೂಡಿಸಿದಾಗ ಮಾತ್ರ ಕನ್ನಡ ಬೆಳೆಯುತ್ತದೆ. ಹಿಂದಿ ಭಾಷೆಯನ್ನು ಯಾವ ರೀತಿಯಿಂದಲಾದರೂ ಹೇರಬೇಕೆಂದು ಪ್ರಯತ್ನ ಮಾಡಿದಾಗ ದಕ್ಷಿಣದಲ್ಲಿ ಹಿಂದಿ ಭಾಷೆಗೆ ಆದ ಗತಿ ಕನ್ನಡಕ್ಕೆ ಆಗಬಾರದು.

ಅದಕ್ಕಾಗಿ ಕನ್ನಡದ ಪ್ರಾಧಾನ್ಯತೆಗಾಗಿ ಏನು ಮಾಡಬೇಕೆಂಬ ಬಗ್ಗೆ ನಾನು ವಿಚಾರ ಮಾಡುತ್ತಿದ್ದೇನೆ. ಈಗಾಗಲೇ ಕೆಲವು ಜನ ಸಾಹಿತಿಗಳ ಜೊತೆಗೆ ಮತ್ತು ಲೇಖಕರ ಜೊತೆಗೆ ವಿಚಾರ ವಿಮರ್ಶೆ ಮಾಡಿದ್ದೇನೆ. ಇನ್ನೂ ಹೆಚ್ಚಿಗೆ ಸಮಾಲೋಚನೆ ಮಾಡಿ ಕನ್ನಡದ ಬಗ್ಗೆ ಯಾವರೀತಿಯಲ್ಲಿ ಪ್ರಾಧಾನ್ಯತೆ ಕೊಡಬೇಕೆನ್ನುವುದನ್ನು ವಿಚಾರ ಮಾಡುತ್ತೇನೆ. ಕನ್ನಡದ ಸಲುವಾಗಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವ ಬಗ್ಗೆ ವಿಚಾರ ಮಾಡಿ ಆ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮತ್ತೊಂದು ವಿಚಾರ ಅಂದರೆ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳ ವಿಚಾರ. ನಮ್ಮಲ್ಲಿಯ ಅನೇಕ ಮಾನ್ಯ ಸದಸ್ಯರುಗಳ ಮನಸ್ಸಿನಲ್ಲಿ ಒಂದು ವಿಚಾರ ಇರಬಹುದು. ಅದೇನೆಂದರೆ ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದಿದ್ದಾರೆ, ಜಿಲ್ಲಾ ಪರಿಷತ್ ಮತ್ತು ಮಂಡಳ ಪಂಚಾಯತ್‌ಗಳಲ್ಲಿ ವಿರೋಧ ಪಕ್ಷದವರು ಅಧಿಕಾರದಲ್ಲಿ ಇದ್ದಾರೆ. ಆದಕ್ಕಾಗಿ ಅದನ್ನು ನಾಶ ಮಾಡತಕ್ಕಂಥ ನೀತಿಯನ್ನು ಈ ನಮ್ಮ ಸರಕಾರ ಅನುಸರಿಸಬಹುದು ಎಂಬ ವಿಚಾರವು ಅವರಲ್ಲಿ ಬಂದಿರಬಹುದು. ನಮ್ಮಲ್ಲಿ ಅಂಥ ವಿಚಾರ ಖಂಡಿತಾ ಇಲ್ಲ. ನಾವು ಕೂಡ ಅಧಿಕಾರ ವಿಕೇಂದ್ರೀಕರಣದ ಮೇಲೆ ವಿಶ್ವಾಸವುಳ್ಳವರು. ಅಧಿಕಾರದ ವಿಕೇಂದ್ರೀಕರಣದ ಮೇಲೆ ನಿಮಗೆ ಎಷ್ಟು ವಿಶ್ವಾಸ ಇದೆಯೋ ನಮಗೂ ಅಷ್ಟೇ ವಿಶ್ವಾಸ ಇದೆ. ನಮ್ಮ ಪ್ರಧಾನಮಂತ್ರಿಗಳು ಈ ದೇಶದಲ್ಲಿ ಅಧಿಕಾರದ ವಿಕೇಂದ್ರೀಕರಣ ಇನ್ನೂ ಹೆಚ್ಚಿಗೆ ಮಾಡಬೇಕೆಂದಿದ್ದರು. ಅದಕ್ಕೆ ಕಾನೂನನ್ನು ಕೂಡ ತಂದರು. ಆದರೆ ಪಾರ್ಲಿಮೆಂಟಿನಲ್ಲಿ ದುರ್ದೈವವಶಾತ್ ಅದು ಪಾಸ್ ಆಗಲಿಲ್ಲ. ಹಾಗೆಯೇ ನಗರಪಾಲಿಕೆ ಮತ್ತು ಪಂಚಾಯತ್‌ರಾಜ್ ಸಲುವಾಗಿ ಕೂಡ ಒಂದು ಬಿಲ್‌ನ್ನು ತಂದಿದ್ದರು. ನಮ್ಮ ಉದ್ದೇಶ ಇಷ್ಟೆ: ಈ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಬೇಕು, ಈ ಸಂಸ್ಥೆಗಳ ಮುಖಾಂತರ ಶೋಷಣೆ ಮಾಡುವಂಥ ಕಾರ್ಯ ಆಗಬಾರದು, ಈ ಸಂಸ್ಥೆಗಳಲ್ಲಿ ಸರಿಯಾದ ಹಣದ ಉಪಯೋಗವಾಗಬೇಕು, ಯಾರಾದರೂ ಈ ಸಂಸ್ಥೆಗಳ ಅಧಿಕಾರವನ್ನು ದುರುಪಯೋಗ ಮಾಡುತ್ತಾ ಇದ್ದರೆ, ಆ ರೀತಿ ಮಾಡಿದವರನ್ನು ನಾವು ದೂಷಿಸಬೇಕೇ ಹೊರತು ಆ ಸಂಸ್ಥೆಗಳೇ ಕೆಟ್ಟವು ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಈ ಸಂಸ್ಥೆಗಳಿಗೆ ಧಕ್ಕೆ ಬಾರದಂತೆ, ಅವುಗಳನ್ನು ಯಾವರೀತಿಯಲ್ಲಿ ಶಕ್ತಿಯುತವಾಗಿ ಬಲಯುತವಾಗಿ ಮಾಡಬೇಕೆನ್ನುವ ಬಗ್ಗೆ ಪ್ರಯತ್ನಗಳನ್ನು ಇನ್ನು ಹೆಚ್ಚುಹೆಚ್ಚಾಗಿ ಮಾಡುತ್ತೇವೆಯೇ ಹೊರತಾಗಿ ಅವುಗಳಿಗೆ ಆಘಾತವನ್ನು ಉಂಟು ಮಾಡಬೇಕೆನ್ನುವ ನೀತಿ ಮತ್ತು ಉದ್ದೇಶ ಈ ನಮ್ಮ ಸರಕಾರಕ್ಕೆ ಇಲ್ಲವೆಂದು ಹೇಳಬಯಸುತ್ತೇನೆ.

ಮಾನ್ಯ ಯಡಿಯೂರಪ್ಪನವರು ಹೇಳುತ್ತಾ ಇದ್ದರು. ಏನೆಂದರೆ ರಾಜ್ಯದಲ್ಲಿ ಸಣ್ಣ ಸಣ್ಣ ರೈತರು, ಕೂಲಿಗಾರರು ೧-೨ ಎಕರೆಗಳಷ್ಟು ಸರ್ಕಾರದ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರೆ ಅವರಿಗೆ ಏನು ಮಾಡುತ್ತೀರಿ ಎಂದು ಮತ್ತೆ ಅವರು ಕೇಳಿಯಾರು ಎಂದು ನನ್ನಲ್ಲಿ ನಾನೇ ಊಹಿಸಿಕೊಂಡು ಆ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಇದ್ದೇನೆ. ಈ ಜನರ ಬಗ್ಗೆ ಸಹಾನುಭೂತಿಯಿಂದ ನಡೆದುಕೊಳ್ಳಬೇಕಾದುದು ನಮ್ಮ ಕರ್ತವ್ಯ ಮತ್ತು ಧರ್ಮ ಕೂಡ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲೆಲ್ಲಿ ರೆವಿನ್ಯೂ ಲ್ಯಾಂಡ್ಸ್ ಇದೆ. ಎಲ್ಲೆಲ್ಲಿ ಸಣ್ಣ ಸಣ್ಣ ಹಿಡುವಳಿದಾರರು ಒಂದೆರಡು ಎಕರೆಗಳಷ್ಟು ಒತ್ತುವರಿ ಮಾಡಿಕೊಂಡಿದ್ದಾರೆ ಹಾಗೂ ಅಕ್ರಮ ಸಾಗುವಳಿ ಮಾಡಿಕೊಂಡಿರುವವರು ಇದ್ದಾರೆ, ಅವರ ಬಗ್ಗೆ ನಾವು ವಿಚಾರ ಮಾಡಬಹುದು. ಆದರೆ ನಮಗೆ ಒಂದು ಕಷ್ಟ ಇದೆ. ಒಂದು ವೇಳೆ ಫಾರೆಸ್ಟ್ ಲ್ಯಾಂಡ್ ಇದ್ದಾಗ ಅದು ನಮ್ಮ ಕೈಯಲ್ಲಿಲ್ಲದ ವಿಚಾರವಾಗುತ್ತದೆ. ಇದು ತಮಗೆಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ, ಅದನ್ನು ಬಿಡಿಸಿಕೊಡಲು ಕೇಂದ್ರ ಸರಕಾರದ ಒಪ್ಪಿಗೆ ಬೇಕು. ಅದುವರೆಗೂ ನಮಗೆ ಏನೂ ಮಾಡುವುದಕ್ಕಾಗುವುದಿಲ್ಲ ಇದರ ಬಗ್ಗೆ ನಾನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಚರ್ಚಿಸಿ, ಇದರ ತಪಶೀಲು ತಯಾರು ಮಾಡಿ ಎಂದು ಹೇಳಿದ್ದೇನೆ. ಇಷ್ಟರಲ್ಲಿಯೇ ಕ್ಯಾಬಿನೆಟ್ ಮುಂದೆ ಈ ವಿಚಾರವನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಮಾಡಿದ್ದೇನೆ. ಆ ಬಡವರು ಇದುವರೆಗೂ ತಮಗೆ ಪಟ್ಟಾ ಸಿಗುತ್ತದೆ ಎಂದು ಕಾಯುತ್ತಾ ಕುಳಿತುಕೊಂಡಿದ್ದಾರೆ. ಆದುದರಿಂದ ಅವರ ಕಷ್ಟವನ್ನು ಗಮನಿಸಿ ಆದಷ್ಟು ಶೀಘ್ರವಾಗಿ ಅವರಿಗೆ ಒಂದು ರಿಲೀಫ್ ಕೊಡಬೇಕೆನ್ನುವ ವಿಚಾರ ಸರಕಾರಕ್ಕೆ ಇದೆ. ಮತ್ತು ಆ ಬಗ್ಗೆ ಸೂಕ್ತ ಪ್ರಯತ್ನಗಳನ್ನು ಸಹ ಮಾಡುತ್ತಾ ಇದ್ದೇವೆ

ಇನ್ನು ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಯ ವಿಚಾರ. ಈ ಬಗ್ಗೆ ಅನೇಕ ಮಾನ್ಯ ಸದಸ್ಯರು ಮೇಲ್ಮನೆಯಲ್ಲಿ ಹಾಗೂ ಇಲ್ಲಿ ಸಾಕಷ್ಟು ಚರ್ಚೆ ಮಾಡಿದ್ದಾರೆ. ಹಿಂದಿನ ಸರಕಾರದವರು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಬೇಕೆಂದು ಘೋಷಣೆ ಮಾಡಿದ್ದಾರೆ ಆದರೆ ನಾನು ಈ ವಿಚಾರದಲ್ಲಿ ಇಷ್ಟು ಮಾತ್ರ ಹೇಳಬಲ್ಲೆ. ನಾನು ಹೆಸರಿನಲ್ಲಿ ವ್ಯಾಮೋಹವುಳ್ಳ

ವ್ಯಕ್ತಿ ಅಲ್ಲ. ಬೋರ್ಡ್ ಬಂದ ಕೂಡಲೇ ನಮ್ಮ ಸಮಸ್ಯೆಗಳು ಎಲ್ಲಾ ಬಗೆಹರಿಯುತ್ತವೆ ಎನ್ನುವ ವಿಚಾರ ನಮ್ಮ ತಲೆಗೆ ಬರುವುದಿಲ್ಲ. ಅದಕ್ಕಾಗಿಯೇ ಹಿಂದಿನ ಸರ್ಕಾರದವರು ಬೋರ್ಡ್ ಮಾಡುತ್ತೇವೆ ಎಂದು ಕೂಡಲೆ ನಾನು ಆ ಬಗ್ಗೆ ಹೇಳಿದ್ದೆ. ಈ ಬೋರ್ಡ್ ಮತ್ತು ಕಮಿಟಿಗಳನ್ನು ಮಾಡಿದರೆ ಏನಾಗುತ್ತದೆ ಎಂದು ತಮಗೆಲ್ಲಾ ಗೊತ್ತಿದೆ. ಒಂದು ಗಾದೆಯ ಮಾತಿನಂತೆ ಹೆಸರು ಕ್ಷೀರಸಾಗರ, ಕುಡಿಯಲು ಮಜ್ಜಿಗೆ ಇಲ್ಲ ಎಂದ ಹಾಗೆ ಆಗುತ್ತದೆ. ಇದರಿಂದ ಯಾವುದೇ ರೀತಿಯಿಂದ ಉದ್ಧಾರ ವಾಗುವುದಿಲ್ಲ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್ ಆದಕೂಡಲೇ ಆ ಭಾಗದ ಉದ್ಧಾರ ಆಗುತ್ತದೆಂದು ಯಾರಾದರೂ ತಿಳಿದುಕೊಂಡಿದ್ದಲ್ಲಿ ಅದು ತಪ್ಪು ಎಂದು ಹೇಳಬಯಸುತ್ತೇನೆ ನಿಜಕ್ಕೂ ಆ ಏರಿಯಾ ರಾಜ್ಯದ ಎಲ್ಲಾ ಏರಿಯಾಗಳಿಗಿಂತಲೂ ಅತೀ ಹಿಂದುಳಿದ ಪ್ರದೇಶ. ಎಲ್ಲಾ ಸದಸ್ಯರಿಗೂ ಅಲ್ಲಿಯ ಹಿಂದುಳಿದಿರುವಿಕೆಯ ಬಗ್ಗೆ ಕಲ್ಪನೆ ಇರಲಿಕ್ಕಿಲ್ಲ. ಅಲ್ಲಿಯ ಹಳ್ಳಿಗಳ. ತಾಲ್ಲೂಕಿನ. ಗ್ರಾಮಾಂತರ ಪ್ರದೇಶದ ವಿಚಾರವನ್ನು ನೋಡಿದವರಿಗೆ ಮಾತ್ರ ಇದು ಗೊತ್ತಾಗುತ್ತದೆ ಅಲ್ಲಿಯ ಆಸ್ಪತ್ರೆಗಳು. ರಸ್ತೆಗಳು, ಶಾಲಾ ಕಟ್ಟಡಗಳು. ಕಾಲೇಜುಗಳು, ಇವೇ ಮುಂತಾಗಿ ಎಲ್ಲವೂ ಯಾವ ಪರಿಸ್ಥಿತಿಯಲ್ಲಿ ಇವೆ ಎಂದು ನೋಡಿದವರೇ ಹೇಳಬೇಕಾಗುತ್ತದೆ. ಅಲ್ಲಿನ ಪರಿಸ್ಥಿತಿಯು ಇವೊತ್ತಿಗೂ ಸುಧಾರಿಸುವಂತಿಲ್ಲವಾಗಿದೆ, ನಾನು ಕೂಡ ಅದೇ ಭಾಗದಿಂದ ಬಂದಿದ್ದೇನೆ ಎಂಬ ಕಾರಣಕ್ಕಾಗಿ ಮಾತ್ರ ಈ ಮಾತನ್ನು ಹೇಳುತ್ತಾ ಇಲ್ಲ. ದುರ್ದೈವದ ಸಂಗತಿಯೆಂದರೆ ಕರ್ನಾಟಕ ಏಕೀಕರಣವಾದಾಗ ಆ ಭಾಗದ ೪೦ ಲಕ್ಷ ಜನರು ಈಗ ಕರ್ನಾಟಕದ ಇತರ ಭಾಗಗಳ ಜನರಿಗಿಂತ ಹಿಂದಕ್ಕೆ ಬಿದ್ದಿದ್ದಾರೆ ಅವರ ಉದ್ಧಾರ ಬಾಯಿಮಾತಿನಿಂದ ಆಗುವುದಿಲ್ಲ. ಇದನ್ನು ಬೇರೆ ರೀತಿಯಿಂದ ಮಾಡಬೇಕೆಂದು ನಾನು ವಿಚಾರ ಮಾಡುತ್ತಿದ್ದೇನೆ. ಇದಕ್ಕಾಗಿ ಕೇಂದ್ರದಿಂದ ಏನಾದರೂ ಪ್ರತ್ಯೇಕವಾಗಿ ಹಣ ಪಡೆಯಬಹುದೇ ಎಂದು ನೋಡುತ್ತಿದ್ದೇನೆ. ಜನತಾ ಸರ್ಕಾರ ಇದ್ದಾಗ ಹೆಗಡೆಯವರು ಆ ಭಾಗದ ಅಭಿವೃದ್ಧಿಗಾಗಿ ೧೩೦ ಕೋಟಿ ಬೇಕೆಂದು ಕೇಂದ್ರದಿಂದ ಕೇಳುವುದಾಗಿ ಹೇಳಿದ್ದರು. ಈಗ ಅವರೇ ಪ್ಲಾನಿಂಗ್ ಕಮೀಷನ್‌ನಲ್ಲಿರುವುದರಿಂದ ಅವರ ಹತ್ತಿರವೇ ನಾನು ಹೋಗಿ ೧೩೦ ಕೋಟಿ ಕೊಡಿ ಎಂದು ಕೇಳುತ್ತೇನೆ. ಏನಾದರೂ ದುಡ್ಡು ಬಂದರೆ ಇದಕ್ಕಾಗಿ ಬೋರ್ಡ್ ಮಾಡಬೇಕೋ ಅಥವಾ ಬೇಡವೋ ಎಂದು ನೋಡೋಣ. ದುಡ್ಡು ಇಲ್ಲದೆ ಕೇವಲ ಬೋರ್ಡ್ ಹಾಕಿಕೊಂಡು ಇದ್ದರೆ ಆ ಭಾಗ ಉದ್ಧಾರವಾಗುತ್ತದೆಂದು ಹೇಳುವುದಕ್ಕೆ ನಾನು ತಯಾರಿಲ್ಲ ಇದರ ಬಗ್ಗೆ ದೀರ್ಘ ಚರ್ಚೆ ಮಾಡಬೇಕೆಂದು ಮಾನ್ಯ ಮೊಯ್ಲಿಯವರೂ ಸಹ ಹೇಳಿದ್ದಾರೆ. ಸಂಬಂಧ ಪಟ್ಟ ಶಾಸಕರನ್ನೆಲ್ಲ ಈ ಬಗ್ಗೆ ಕರೆಸಿ ಮೀಟಿಂಗ್ ಮಾಡಲು ನಾನು ತಯಾರಿದ್ದೇನೆ. ಆ ಭಾಗದ ಪ್ರಗತಿ ಹೀಗೇ ಕುಂಠಿತವಾದರೆ ಮುಂದೆ ಕರ್ನಾಟಕದ ಏಕೀಕರಣಕ್ಕೆ ಧಕ್ಕೆ ಬರುತ್ತದೆ. ಆದಕ್ಕಾಗಿ ನನ್ನ ಅಧಿಕಾರಾವಧಿಯಲ್ಲೇ ಇದಕ್ಕಾಗಿ ವಿಶಿಷ್ಟವಾಗಿ ಶ್ರಮಿಸುತ್ತೇನೆ. ಏನು ಕಾರ್ಯಕ್ರಮ ತೆಗೆದುಕೊಳ್ಳ ಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ಕಾರ್ಯಕ್ರಮ ಯಾವರೀತಿ ರೂಪಿಸಬೇಕು. ಯಾವ ರೀತಿ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ವಿಚಾರ ಮಾಡಿ ಎಂದು. ಈಗಾಗಲೇ ಅಧಿಕಾರಿಗಳಿಗೆ ಹೇಳಿದ್ದೇನೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಪ್ರತ್ಯೇಕ ಪ್ಲಾನಿಂಗ್ ಗ್ರೂಪ್ ಮಾಡಿ ಅದರಲ್ಲಿ ಕಾರ್ಯಕ್ರಮ ಪಟ್ಟಿ ತಯಾರು ಮಾಡುವುದಕ್ಕೆ ಹೇಳಿದ್ದೇನೆ ಅದು ಇನ್ನೂ ತಯಾರಾಗಿಲ್ಲ ನಾರ್ಮಲ್ ಬಜೆಟ್‌ನಲ್ಲಿ ಎಷ್ಟು ಹಣ ಒದಗಿಸಲಾಗುತ್ತಿತ್ತೋ ಅದಕ್ಕಿಂತ ಜಾಸ್ತಿ ಒದಗಿಸಿ, ಪ್ಲಾನಿಂಗ್ ಕಮೀಷನ್‌ನಿಂದ ಏನಾದರೂ ದುಡ್ಡು ಬರುತ್ತದೋ ನೋಡಿ ಎಂದು ಹೇಳಿದ್ದೇನೆ.

ಇನ್ನು ಆ ಭಾಗದ ಮಕ್ಕಳಿಗೆ ನೌಕರಿಯೇ ಇಲ್ಲ. ಮೊನ್ನೆ ಪಬ್ಲಿಕ್ ಸರ್ವಿಸ್ ಕಮೀಷನ್ ಚೇರ್ಮನ್ ನನ್ನ ಬಳಿ ಬಂದಾಗ ನಿಮ್ಮಲ್ಲಿ ಅಂಕಿಅಂಶಗಳಿದ್ದರೆ ೧೯೮೦-ರಿಂದ ೧೯೮೯ರವರೆಗೆ ಆ ಭಾಗದ ಮೂರ್ನಾಲ್ಕು ಜಿಲ್ಲೆಗಳಲ್ಲಿ ಕ್ಲಾಸ್ ೩ ಮತ್ತು ಕ್ಲಾಸ್ ಎರಡರಲ್ಲಿ ಎಷ್ಟು ಜನಕ್ಕೆ ಕೆಲಸ ಸಿಕ್ಕಿದೆ ಇಡೀ ಸ್ಟೇಟಿನಲ್ಲಿ ಬೇರೆ ಜಿಲ್ಲೆಗಳಿಗೆ ಎಷ್ಟೆಷ್ಟು ಸಿಕ್ಕಿದೆ ಎಂದು ಪಟ್ಟಿ ಕೊಡಿ ಎಂದು ಹೇಳಿದ್ದೇನೆ. ಸಂಗ್ರಹ ಮಾಡಿಕೊಡುತ್ತೇನೆಂದು ಅವರು ಹೇಳಿದ್ದಾರೆ. ಆದರೆ ನನಗೆ ಗೊತ್ತಿರುವ ಹಾಗೆ ಆ ಭಾಗದವರಿಗೆ ನೌಕರಿ ಇಲ್ಲ. ಏಕೆ ಇಲ್ಲ ಎಂಬುದೇ ಪ್ರಶ್ನೆ ರಿಕ್ರೂಟ್ ಮಾಡುವವರು ಏನು ಹೇಳುತ್ತಾರೆಂದರೆ ನಿಮ್ಮ ಹುಡುಗರು ದಡ್ಡರಿದ್ದಾರೆ, ಅವರಿಗೆ ಹೇಗೆ ನೌಕರಿ ಕೊಡುವುದು ಎಂದು. ಮಾನ್ಯ ಯಡಿಯೂರಪ್ಪನವರು ಆ ಕಡೆಯವರೇನೂ ದಡ್ಡರಲ್ಲವೆಂದು ಆಗಲೇ ಹೇಳಿದರು. ದೇವರು ಬೇರೆ ಕಡೆಯ ಮಕ್ಕಳಿಗೆ ಜಾಸ್ತಿ ಬುದ್ಧಿ ತುಂಬಿ ಆ ಕಡೆಯ ಮಕ್ಕಳಿಗೆ ಕಡಿಮೆ ತುಂಬಿದ್ದಾನೆಂದು ಹೇಳುವುದಕ್ಕೆ ಆಗುತ್ತದೆಯೇ? ಆ ಕಡೆಯ ಶಾಲೆಗಳಲ್ಲಿ ೧೨೦ ಮಕ್ಕಳಿಗೆ ಒಬ್ಬ ಟೀಚರ್ ಅವರು ಮನಸ್ಸಿಗೆ ಬಂದಾಗ ಪಾಠ ಮಾಡುವರು ಇಲ್ಲದಿದ್ದರೆ ಇಲ್ಲ. ಆದರೆ ಈ ಭಾಗದಲ್ಲಿ ಕಾನ್ವೆಂಟ್ ಎಜುಕೇಷನ್. ಈ ಕಾನ್ವೆಂಟ್ ಎಜುಕೇಷನ್ ಮಕ್ಕಳ ಮತ್ತು ಆ ಭಾಗದ ಮಕ್ಕಳ ಮಧ್ಯೆ ಕಾಂಪಿಟೇಷನ್ ತಪ್ಪಿಸಲು ಏನಾದರೂ ಸಾಧ್ಯವೇ

ಎಂದು ಅಧಿಕಾರಿಗಳಿಗೆ ಕೇಳಿದರೆ, ಅದಕ್ಕೆ ಅವರು ಕಾನ್‌ಸ್ಟಿಟ್ಯೂಷನ್ ಅಡ್ಡಿ ಬರುತ್ತದೆ ಎನ್ನುತ್ತಾರೆ. ಆದರೂ ಸಹ ಹೇಗಾದರೂ ಮಾಡಿ ಆ ಕಡೆಯವರಿಗೆ ನೌಕರಿ ಒದಗಿಸಿ ಕೊಡಿ ಎಂದು ಹೇಳಿದ್ದೇನೆ. ಅದರ ಬಗ್ಗೆ ಇನ್ನೂ ಪ್ರಯತ್ನಿಸುತ್ತಿದ್ದೇನೆ.

ಇನ್ನು ಸರ್ಕಾರದ ಸಂಸ್ಥೆಗಳ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ವಿಪರೀತ ಕಾರ್ಪೊರೇಷನ್‌ಗಳನ್ನು ಮತ್ತು ಬೋರ್ಡುಗಳನ್ನು ಏನೇನೋ ಹೆಸರಿಟ್ಟು ಬೆಳೆಸಿದ್ದಾರೆ.

ಎಂಪ್ಲಾಯೀಸ್ ಸಂಖ್ಯೆಯನ್ನು ಬಿಟ್ಟು ಈ ಬಗ್ಗೆ ವಿಚಾರ ಮಾಡಬೇಕು. ಎಷ್ಟು ಅವಶ್ಯಕತೆಯಿದೆ ಅಷ್ಟನ್ನು ಇಟ್ಟುಕೊಂಡು ಬಾಕಿಯದನ್ನು ವೈಂಡ್ ಅಪ್ ಮಾಡಬೇಕಾದಂತಹ ಪರಿಸ್ಥಿತಿ ಬರುತ್ತದೆ. ಅದನ್ನು ವಿಚಾರ ಮಾಡೋಣ. ಅದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇನ್ನು ಗಡಿಯಲ್ಲಿರತಕ್ಕಂತಹ ನಮ್ಮ ಪ್ರದೇಶದಲ್ಲಿ ಎರಡು ಭಾಷೆಗಳನ್ನು ಮಾತನಾಡುತ್ತಾರೆ. ಮಹಾರಾಷ್ಟ್ರ ಗಡಿ ಇರಲಿ, ಕೇರಳ ಗಡಿ ಇರಲಿ ತಮಿಳುನಾಡು ಗಡಿ ಇರಲಿ, ಆ ಗಡಿಯಲ್ಲಿರುವಂತಹ ಪ್ರದೇಶದ ಜನರು ಅಭಿವೃದ್ಧಿಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿ ಹೆಚ್ಚು ಅಭಿವೃದ್ಧಿ ಕಾರ್ಯಕ್ರಮವನ್ನು ಹಾಕಿಕೊಂಡು ಆ ಪ್ರದೇಶದ ಅಭಿವೃದ್ಧಿ ಮಾಡಬೇಕೆಂಬ ವಿಚಾರವನ್ನು ನಾನು ಇಟ್ಟುಕೊಂಡಿದ್ದೇನೆ, ಅದನ್ನು ನಾನು ಮಾಡುತ್ತೇನೆ. ಗಡಿ ಪ್ರದೇಶದ ಅಭಿವೃದ್ಧಿ ಬಗ್ಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕು, ಆ ಭಾಗದ ಜನ ನಾವು ಬೆಂಗಳೂರಿನಿಂದ ಬಹಳ ದೂರದಲ್ಲಿದ್ದೇವೆ, ನೂರಾರು ಮೈಲಿ ದೂರದಲ್ಲಿದ್ದೇವೆ, ವಿಧಾನ ಸೌಧದಲ್ಲಿ ಕೂತಿರತಕ್ಕಂತಹ ಆಡಳಿತ ಸೂತ್ರ ಹಿಡಿದುಕೊಂಡು ಕುಳಿತಿರತಕ್ಕಂತಹ ಜನ ನಮ್ಮನ್ನು ಮರೆತಿದ್ದಾರೆ, ನಮ್ಮ ಪ್ರದೇಶವನ್ನು ಕಡೆಗಾಣಿಸಿದ್ದಾರೆ ಎಂಬ ಭಾವನೆ ಅವರಲ್ಲಿ ಬಾರದಂತೆ ನಾವೆಲ್ಲರೂ ಕನ್ನಡಾಂಬೆಯ ಮಕ್ಕಳಿದ್ದೇವೆ ನಾವು ಎಲ್ಲಿದ್ದರೂ ನಮ್ಮ ಸರಕಾರ ನಮ್ಮ ಕ್ಷೇತ್ರದ ಅಭಿವೃದ್ಧಿಗೆ ಮತ್ತು ನಮ್ಮ ಅಭಿವೃದ್ಧಿಗೆ ಗಮನ ಹರಿಸುತ್ತದೆ ಎನ್ನುವಂತಹ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ನಾವು ಅದಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ, ಅದನ್ನು ಅಳವಡಿಸಿ ಕೊಂಡು ಆ ಕ್ಷೇತ್ರದ ಅಭಿವೃದ್ಧಿಗೆ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ. ಕೊನೆಯದಾಗಿ ಹೇಳುವುದಾದರೆ ಕಾವೇರಿ ನದಿ ನೀರಿನ ಬಗ್ಗೆ ನಿನ್ನೆ ತಮಿಳುನಾಡಿನ ಮುಖ್ಯಮಂತ್ರಿಗಳು ಕೊಟ್ಟಿರುವ ಪತ್ರಿಕಾ ಹೇಳಿಕೆಯನ್ನು ನಾನು ಓದಿದೆ. ಅವರು ಕೇಂದ್ರ ಸರಕಾರಕ್ಕೆ ಪತ್ರ ಬರೆದು ಈ ಪ್ರಶ್ನೆ ಇತ್ಯರ್ಥವಾಗುವ ಹಾಗೆ ಟ್ರಿಬ್ಯೂನಲ್‌ಗೆ ಒಪ್ಪಿಸಬೇಕೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುವ ಹಾಗೆ ಇಲ್ಲ. ಇದನ್ನು ಚರ್ಚೆ ಮಾಡಿ ಇತ್ಯರ್ಥ ಮಾಡುವುದಕ್ಕೆ ಸಾಧ್ಯವಿದೆ. ಟ್ರಿಬ್ಯೂನಲ್‌ಗೆ ಹೋಗಬೇಕಾದಂತಹ ಅವಶ್ಯಕತೆ ಇಲ್ಲ. ಮಾತುಕತೆಯಿಂದ ಇತ್ಯರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಿರುವುದರಿಂದ ಕರ್ನಾಟಕ ರಾಜ್ಯ ಟ್ರಿಬ್ಯೂನಲ್ ಪರ ಇಲ್ಲ. ಟ್ರಿಬ್ಯೂನಲ್‌ಗೆ ಹೋಗಬೇಕೆಂಬ ಇಚ್ಛೆಯನ್ನು ನಾನು ಇಟ್ಟುಕೊಂಡಿಲ್ಲ, ತಮಿಳುನಾಡು ಸರಕಾರದಿಂದ ಕೇಂದ್ರ ಸರ್ಕಾರಕ್ಕೆ ಆ ರೀತಿಯ ರೆಪ್ರೆಸೆಂಟೇಷನ್ ಬಂದಿದ್ದಾಗ ಆ ಬಗ್ಗೆ ವಿಚಾರ ಮಾಡದೆ ಎರಡು ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಸಿ ಚರ್ಚೆ ಮಾಡಿ ಇತ್ಯರ್ಥ ಮಾಡಬಹುದು. ನಾನು ಕರುಣಾನಿಧಿಯವರ ಜೊತೆಯಲ್ಲಿ ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. ಕೇಂದ್ರ ಸರಕಾರ ನಮ್ಮಿಬ್ಬರನ್ನೂ ಕರೆಸಿದರೆ ಚರ್ಚೆ ಮಾಡುವುದಕ್ಕೆ ನಾನು ತಯಾರಿದ್ದೇನೆ. ಅವರು ಬರಬೇಕೆಂದು ಹೇಳಿದಾಗ ಹೋಗಿ ಮಾತನಾಡಿ ಇತ್ಯರ್ಥ ಮಾಡುವುದಕ್ಕೆ ಮತ್ತು ಸಂಪೂರ್ಣವಾದಂತಹ ಸಹಕಾರವನ್ನು ಕೇಂದ್ರ ಸರಕಾರಕ್ಕೆ ಕೊಡುವುದಕ್ಕೆ ನಾನು ತಯಾರಿದ್ದೇನೆ. ಟ್ರಿಬ್ಯೂನಲ್‌ಗೆ ಈ ಪ್ರಶ್ನೆಯನ್ನು ಒಪ್ಪಿಸುವುದಕ್ಕೆ ನಾನು ತಯಾರಿಲ್ಲವೆನ್ನುವ ನಿಲುವನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಇನ್ನು ತೆಲಗು ಗಂಗಾ ಯೋಜನೆಯ ಬಗ್ಗೆ ಹಿಂದಿನ ಸರಕಾರ ಏನು ನಿಲುವನ್ನು ತಾಳಿದೆಯೋ ಅದರಲ್ಲಿ ಯಾವ ತರಹದ ವ್ಯತ್ಯಾಸವೂ ಇಲ್ಲ, ಅದನ್ನೇ ನಾವು ಮುಂದುವರಿಸಿಕೊಂಡು ಹೋಗುತ್ತೇವೆ. ಕೃಷ್ಣಾ ಬೇಸಿನ್ ನೀರಿನ ಹಂಚಿಕೆ ಬಗ್ಗೆ ಬಚಾವತ್ ಟ್ರಿಬ್ಯೂನಲ್ ಅವಾರ್ಡ್ ಸಿಕ್ಕಿದ ಮೇಲೆ ಅದನ್ನು ಅನುಸರಿಸಿ ಯೋಜನೆಗಳು ಆಗಬೇಕೇ ಹೊರತಾಗಿ ಅವಾರ್ಡ್‌ಗೆ ತದ್ವಿರುದ್ಧವಾಗಿ ಯಾವ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಮತ್ತು ಅವಕ್ಕೆ ಮಂಜೂರಾತಿ ಕೊಡುವಂತಹ ಅಧಿಕಾರ ಕೇಂದ್ರಕ್ಕೆ ಕೂಡ ಇಲ್ಲ. ಆದ್ದರಿಂದ ತೆಲುಗು ಗಂಗಾ ಯೋಜನೆಯನ್ನು ಕೈ ಬಿಡಬೇಕೆಂದು ನಾನು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಆಂಧ್ರ ಸರಕಾರದವರು ಕೇಂದ್ರ ಸರಕಾರವನ್ನು ಒತ್ತಾಯಿಸಿದರೆ ಅವರ ಒತ್ತಾಯಕ್ಕೆ ಮಣಿಯಬಾರದು ಮತ್ತು ಅದಕ್ಕೆ ಮಂಜೂರಾತಿ ನೀಡಬಾರದೆಂದು ಕರ್ನಾಟಕದ ಜನತೆಯ ಪರವಾಗಿ ಕೇಂದ್ರ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದಲ್ಲಿ ೫ ವರ್ಷಗಳವರೆಗೆ ಒಬ್ಬರಿಗೊಬ್ಬರು ಸಹಕಾರ ನೀಡಬೇಕು. ಈಗ ಏನು ಚುನಾವಣೆಗಳು ಆದವು, ಅದನ್ನು ಮರೆತು ಸಹಕರಿಸೋಣ ಆ ಪಾರ್ಟಿ ಈ ಪಾರ್ಟಿ ಎಂದು ನೋಡದೆ ನಾವು ಎಲ್ಲೇ ಕುಳಿತಿರಲಿ, ನಮ್ಮಲ್ಲಿ ಏನು ವಾತಾವರಣ ಮೂಡಬೇಕು ಎಂದರೆ ನಾವು ಕೇವಲ ನಮ್ಮ ನಮ್ಮ ಕ್ಷೇತ್ರದ ೨ ಲಕ್ಷದ ಜನರ ಪ್ರತಿನಿಧಿಗಳು ಎಂಬುದನ್ನು ಬಿಟ್ಟು ನಾವು ೪ ಕೋಟಿ ಜನತೆಯ ಪ್ರತಿನಿಧಿಗಳಾಗಿದ್ದೇವೆ.

ಕರ್ನಾಟಕರಾಜ್ಯದ ಜನತೆಯ ಪ್ರತಿನಿಧಿಗಳಾಗಿದ್ದೇವೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕದ ಪ್ರಗತಿ ಬಗ್ಗೆ ಅಭ್ಯುದಯದ ಬಗ್ಗೆ ಹಾಗೂ ಕರ್ನಾಟಕದ ಜನಸಾಮಾನ್ಯರ ಅಭಿವೃದ್ಧಿಗಾಗಿ ಶ್ರಮಿಸುವುದಕ್ಕೆ ಬಂದಿದ್ದೇವೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಪಕ್ಷಗಳನ್ನು ಮತ ಭೇದಗಳನ್ನು ಮರೆತು ನಾವೆಲ್ಲರೂ ಒಂದೇ ಮನೆಯ ಸದಸ್ಯರು ಎನ್ನುವಂತಹ ರೀತಿಯಲ್ಲಿ ಇಲ್ಲಿ ಕೆಲಸ ಮಾಡಲು ಪ್ರಯತ್ನ ಮಾಡಬೇಕು. ನಮ್ಮ ಈ ಪ್ರಯತ್ನ ಕೈಗೂಡಿ ಯಾವ ಒಂದು ಆಶೋತ್ತರಗಳಿಂದ ನಮ್ಮ ಜನತೆ ಈ ಕಡೆ ನೋಡುತ್ತಿದ್ದಾರೋ ಮತ್ತು ಸರ್ಕಾರದ ಕಡೆ ನೋಡುತ್ತಿದ್ದಾರೋ ಆಡಳಿತದ ಕಡೆ ನೋಡುತ್ತಿದ್ದಾರೋ, ಅಂತಹ ಒಂದು ಪ್ರಯತ್ನದಲ್ಲಿ ನಾವೆಲ್ಲರೂ ಒಬ್ಬರಿಗೊಬ್ಬರು ಸಹಕರಿಸಬೇಕು. ಒಂದೇ ಮನಸ್ಸಿನಿಂದ ಒಮ್ಮತದಿಂದ ನಾವು ಆ ಗುರಿಯನ್ನು ಸಾಧನೆ ಮಾಡಿ ನಮ್ಮ ಹಿರಿಯರು, ನಮ್ಮ ನಾಯಕರುಗಳು, ಮತ್ತು ನಮ್ಮ ಸಾಹಿತಿಗಳು ಹೇಳಿದಂತೆ ಕನ್ನಡ ನಾಡನ್ನು ಚಿನ್ನದ ನಾಡನ್ನಾಗಿ ಮಾಡುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡೋಣ, ಅದಕ್ಕೆ ಶಕ್ತಿಯನ್ನು ದೇವರು ದಯಪಾಲಿಸಲಿ ಎಂದು ವಿನಂತಿ ಮಾಡಿಕೊಂಡು ನನ್ನ ಉತ್ತರವನ್ನು ಮುಗಿಸಲು ಮಾನ್ಯ ಸಭಾಧ್ಯಕ್ಷರ ಅಪ್ಪಣೆಯನ್ನು ಪಡೆಯುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಎಲ್ಲದಕ್ಕೂ ಹೋಗುವುದಿಲ್ಲ. ಒಂದು ಸಂತೋಷ ಏನೆಂದರೆ ಐದು ವರ್ಷ ನಾವೆಲ್ಲರೂ ಇಲ್ಲಿ ಕುಳಿತು ಕೆಲಸ ಮಾಡೋಣ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ, ಐದು ವರ್ಷದ ಅವಧಿಯನ್ನು ಖಾಯಂ ಮಾಡಿದ್ದಾರೆ, ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಮೊದಲು ಆಡಳಿತದಲ್ಲಿ ಶಿಥಿಲತೆಯನ್ನು, ಭ್ರಷ್ಟಾಚಾರವನ್ನು ಕಡಿಮೆ ಮಾಡಿ ಉತ್ತಮವಾದ ಕೆಲಸವನ್ನು ಮಾಡುವುದಕ್ಕೆ ನಮ್ಮ ಸಹಕಾರವನ್ನು ಕೇಳಿದ್ದಾರೆ, ನಿಮಗೆ ಈ ಸಹಕಾರ ಅಬಾಧಿತವಾಗಿರುತ್ತದೆ, ಇದರ ಬಗ್ಗೆ ನಮ್ಮ ಪಕ್ಷದಿಂದ ಮತ್ತು ನನ್ನ ಪತಿಯಿಂದ ಆಶ್ವಾಸನೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಆದರೆ ಅಂಕಿಅಂಶಗಳನ್ನು ಕೊಡುವಾಗ ನಮ್ಮ ಒಟ್ಟಾರೆಯ ಖರ್ಚನ್ನು ಮಾತ್ರ ಹೇಳಿದ್ದೀರಿ. ಆದಾಯವನ್ನು ಹೇಳಲಿಲ್ಲ. ಜನಸಂಖ್ಯೆಯ ಏರಿಕೆಯನ್ನು ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಆದಾಯ ಖರ್ಚಿಗಿಂತಲೂ ಕಡಿಮೆ ಇದೆ

ಶ್ರೀ ಡಿ. ಬಿ. ಚಂದ್ರೇಗೌಡ.—ಆದುದರಿಂದ ಜನಸಂಖ್ಯೆಗನುಗುಣವಾಗಿ ಬೆಳೆದಿರತಕ್ಕಂಥ ಆಡಳಿತ ವ್ಯವಸ್ಥೆ ಮತ್ತು ಆಯಾ ಕಾಲಕ್ಕೆ ಇದ್ದಂಥ ಆದಾಯದ ಹೆಚ್ಚುವರಿಗನುಗುಣವಾದ ಒಂದು ರೇಷ್ಯೋ ಬೇಕಾಗುತ್ತದೆ. ನೀವು ಒಟ್ಟು ಲೆಕ್ಕ ಇಷ್ಟೇ ಹೇಳಿದರೂ ನಮಗೆ ಲೆಕ್ಕ ಸರಿಯಾಗಿ ಸಿಗುವುದಿಲ್ಲ. ಆದುದರಿಂದ ತಾವು ದಯಮಾಡಿ ವಿವರಗಳನ್ನು ಪರಸೆಂಟೇಜ್‌ವೈಸ್ ಕೊಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮ್ಮ ನಿಲುಮೆ ಈ ಕಾವೇರಿ ಜಲಾನಯನ ಪ್ರದೇಶದ ಬಗ್ಗೆ ಮತ್ತು ನಮಗೂ ತಮಿಳುನಾಡಿಗೆ ಇರತಕ್ಕಂಥ ವ್ಯಾಜ್ಯದ ವಿಚಾರದಲ್ಲಿಯೇ ಇರಲಿ, ಕರ್ನಾಟಕ ಮತ್ತು ಆಂಧ್ರ ಪ್ರದೇಶಕ್ಕೆ ಇರತಕ್ಕಂಥ ತೆಲುಗುಗಂಗಾ ವಿಚಾರದಲ್ಲಿಯೇ ಇರಲಿ, ನಿಮ್ಮ ನಿಲುವಿಗೆ ನಾವು ಕೂಡಾ ಸಂಪೂರ್ಣವಾಗಿ ಬದ್ಧರಾಗಿದ್ದೇವೆಂದು ಹೇಳುವುದರ ಜೊತೆಗೆ ನಾವೂ ನಿಮ್ಮ ಜೊತೆಗೆ ಇದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ತಮಗೆ ತಿಳಿಸುವುದಕ್ಕೆ ಬಯಸುತ್ತೇನೆ. ಮುಖ್ಯವಾದಂಥ ಒಂದೆರಡು ಅಂಶಗಳನ್ನು ಕುರಿತು ತಮ್ಮಲ್ಲಿ ನಾನು ವಿವರವನ್ನು ಬಯಸುತ್ತಿದ್ದೇನೆ. ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಶಾಲೆಗಳ ಲೆಕ್ಕವನ್ನು ತಾವು ಹೇಳಿದಿರಿ. ನಮ್ಮ ಕಾಲದಲ್ಲಿ ಐದು ಹೊಸ ಕಾಲೇಜುಗಳು ಆಗಿವೆ. ಅದಕ್ಕಿಂತ ಹಿಂದೆ ಕೊಟ್ಟಂಥ ಹತ್ತು ಮೆಡಿಕಲ್ ಕಾಲೇಜು ಕಾಂಗ್ರೆಸ್ ಸರ್ಕಾರದ ಬಳುವಳಿ ಎನ್ನುವುದು ಕೂಡಾ ತಮ್ಮ ನೆನಪಿನಲ್ಲಿ ಇರಬೇಕು. ಇನ್ನೊಂದು ವಿಷಯ ಏನೆಂದರೆ, ಅರಣ್ಯ ಇಲಾಖೆಯ ಒತ್ತುವರಿ ಭೂಮಿಯ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇದು ವಿಶೇಷವಾಗಿ ಮಲೆನಾಡಿನ ಬಗ್ಗೆ ಸೀಮಿತವಾದಂಥ ಜಟಿಲವಾದ ಮತ್ತು ದೊಡ್ಡ ಸಮಸ್ಯೆ. ಬಡವರು ಅರ್ಧ ಎಕರೆ, ಒಂದು ಎಕರೆ, ಎರಡು ಎಕರೆ, ಜಮೀನನ್ನು ಏನು ಒತ್ತುವರಿ ಮಾಡಿಕೊಂಡಿದ್ದಾರೆ, ಇದು ಯಾವುದೋ ೬೦ ೭೦ರ ಸುಮಾರಿನಲ್ಲಿ ಎಂದು ಕಾಣುತ್ತದೆ. ಆಗ ಒಂದು ಭೌಗೋಳಿಕವಾದ ಮ್ಯಾಪನ್ನು ಬೆಂಗಳೂರಿನಲ್ಲಿ ಇಟ್ಟುಕೊಂಡು ಆ ಮ್ಯಾಪ್‌ಗೆ ಆಧಾರವಾಗಿ ಎಲ್ಲ ಜಮೀನನ್ನು ಮೈನರ್ ಫಾರೆಸ್ಟ್ ಎಂದು ಅರಣ್ಯ ಇಲಾಖೆಗೆ ಸೇರಿಸಿಬಿಟ್ಟಿದ್ದಾರೆ. ಹಾಗಾಗಿ ಯಾವುದು ಹೌದು, ಯಾವುದು ಅಲ್ಲ ಎನ್ನತಕ್ಕಂಥದ್ದು ತಿಳಿಯುತ್ತಿಲ್ಲ. ಮೈಸೂರ್ ಪೇಪರ್ ಮಿಲ್‌ನವರು ಒಂದು ಸಲ ಬೇಲಿಯನ್ನು ಹಾಕುತ್ತಾರೆ. ಪಾಲಿಫೈಬರ್‌ನವರು ಬೇಲಿ ಹಾಕುತ್ತಾರೆ. ಅಲ್ಲಿ ಬಡವರು ದೊಡ್ಡ ಹಿಂಸೆಗೆ ಗುರಿಯಾಗಿದ್ದಾರೆ, ಒಟ್ಟು ಇದರ ಒಂದು ಲೆಕ್ಕ ತೆಗೆಸಿ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಹಿಂದೆ ಕೇಂದ್ರ ಸರ್ಕಾರದಲ್ಲಿ ಸಂಸತ್ ಸದಸ್ಯನಾಗಿದ್ದಾಗ ಒಂದು ಸಲಹೆಯನ್ನು ಮಾಡಿದ್ದೆ. ಏನೆಂದರೆ ಇದರ ಸಂಪೂರ್ಣ ಅಧಿಕಾರ ಕೇಂದ್ರದಲ್ಲಿದೆ. ಅದರ ಬದಲು ಒಂದು ಸಮಿತಿಯನ್ನು ನೇಮಕ ಮಾಡಿ. ಆ ಸಮಿತಿಯವರು ಆಯಾ ಕೇಸುಗಳಿಗೆ ಸಂಬಂಧಪಟ್ಟಂತೆ ಪರಿಶೀಲನೆ ಮಾಡಿ ತಕ್ಷಣ ಪರಿಹಾರ ಒದಗಿಸತಕ್ಕ ಒಂದು ವ್ಯವಸ್ಥೆ ಮಾಡಲಿ ಎಂದು ಹೇಳಿದೆ. ದಯಮಾಡಿ ಅಂತಹ ಒಂದು ಸಮಿತಿಯನ್ನು ಸರ್ಕಾರ ರಚನೆ ಮಾಡಿಸಿ, ಒಟ್ಟು ಲೆಕ್ಕ ತೆಗೆದು ಇದನ್ನು ಪರಿಹರಿಸಿ ಕೊಡಿ ಮತ್ತು ಅದಕ್ಕೆ ನಮ್ಮ ಸಹಾಯ ಸಹಕಾರ ಕೊಡುತ್ತೇವೆಂದು ಹೇಳುತ್ತೇನೆ. ನಾನು ಬಿಟ್ಟಿದ್ದ ಒಂದು ವಿಷಯವನ್ನು ಶ್ರೀ ದೇಶಪಾಂಡೆಯವರು ಪ್ರಸ್ತಾಪ ಮಾಡಿದರು. ಏನೆಂದರೆ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಎಂದು ಇತ್ತು, ಅದಕ್ಕೆ ಒಂದು ವಿಶೇಷವಾದ ಕಾರಣ ಏನು? ಇವೊತ್ತಿನ ದಿವಸ ಯಾವುದೇ ಒಂದು ಸ್ಕೀಮನ್ನು ಹಾಕಲಿ, ಅದು ಜವಾಹರ್ ರೋಜ್‌ಗಾರ್ ಯೋಜನೆ ಆಗಲಿ ಅಥವಾ ಬೇರೆ ಯಾವುದೇ ಆಗಲಿ ಅದಕ್ಕೆ ಜನಸಂಖ್ಯೆಯೇ ಆಧಾರ. ಆದರೆ ಮಲೆನಾಡಿನಲ್ಲಿ ಜನಸಂಖ್ಯೆ ಕಡಿಮೆ. ಜನಸಂಖ್ಯೆ ನಾನಾ ಕಾರಣದಿಂದ ಹರಿದು ಹಂಚಿ ಹೋಗಿದೆ, ಅಲ್ಲಿ ವಿವಿಧ ಗುಂಪುಗಳು ಆಗಿವೆ. ಹಾಗಿದ್ದರೆ ಅವುಗಳಿಗೆ ನೀರು ಕೊಡಬೇಕೆಂದರೆ ಹೇಗೆ? ಈ ಒಂದು ವಿಚಾರವಾಗಿ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕು. ಮಲೆನಾಡು ಅಭಿವೃದ್ಧಿ ವಿಷಯದಲ್ಲಿ ವಿಶೇಷವಾಗಿ ಚರ್ಚೆ ಮಾಡುವುದಕ್ಕೆ ಒಂದು ಸಭೆಯನ್ನು ಕರೆದರೆ ಒಳ್ಳೆಯದು. ಯಾವ ಯಾವ ಭಾಗದ ಸದಸ್ಯರು ಇದ್ದಾರೋ ಅವರೆಲ್ಲರನ್ನೂ ಸೇರಿಸಿ ಮಲೆನಾಡಿನ ಅಭಿವೃದ್ಧಿಗೆ ಸಹಾಯವಾಗುವಂತಹ ಒಂದು ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಮಲೆನಾಡಿನ ಸಮಸ್ಯೆಗಳು ಬಗೆಹರಿಯುವುದಿಲ್ಲ. ಈ ಎರಡೂ ವಿಚಾರದಲ್ಲಿ ತಾವು ಉತ್ತರ ಹೇಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಸಭಾಧ್ಯಕ್ಷರೇ. ಮಾನ್ಯ ಮುಖ್ಯಮಂತ್ರಿಗಳು ಆಡಳಿತ ಶಾಹಿ ಸಾಮ್ರಾಜ್ಯ ಬಹಳ ದೊಡ್ಡದಾಗಿ ಬೆಳೆದಿದೆ ಎನ್ನತಕ್ಕ ಮಾತನ್ನು ಹೇಳಿದರು. ಅದು ವಾಸ್ತವವಾಗಿ ಹೌದು. ಇದನ್ನು ಡಿಸ್‌ಮ್ಯಾಂಟಲ್ ಮಾಡತಕ್ಕ ಕೆಲಸವನ್ನು ಮಾಡುತ್ತೇವೆಂದು ಹೇಳಿದ್ದೀರಿ. ಇದನ್ನು ಮೇಲಿನಿಂದ ಮಾಡುತ್ತೀರೋ ಅಥವಾ ಹೇಳಿ ಹಾಗೆಯೇ ಕೈಬಿಡುತ್ತೀರೋ ಎಂಬುದರ ಬಗ್ಗೆ ತಿಳಿಸಬೇಕು. ಎರಡನೆಯದಾಗಿ ಭ್ರಷ್ಟಾಚಾರದ ಬಗ್ಗೆ ಕೂಡ ತಾವು ಮಾತನಾಡಿದ್ದೀರಿ. ಬಹಳ ಸಂತೋಷ. ನೀವು ಇದುವರೆಗೆ ದಿಟ್ಟ ನಿಲುವು ತೆಗೆದುಕೊಂಡಿದ್ದೀರಿ. ಭ್ರಷ್ಟಾಚಾರವನ್ನು ತಡೆ ಹಿಡಿಯತಕ್ಕ ಎಲ್ಲಾ ಪ್ರಯತ್ನ ಮಾಡಿದರೆ ನಮ್ಮ ಪಕ್ಷದ ವತಿಯಿಂದ ಅದಕ್ಕೆ ಸಂಪೂರ್ಣವಾದ ಸಹಕಾರವನ್ನು ಕೊಡುವುದಕ್ಕೆ ನಾವು ತಯಾರು ಇದ್ದೇವೆ. ಈಗ ಪ್ರಚಲಿತವಾಗಿರತಕ್ಕ ಅನೇಕ ಪ್ರಕರಣಗಳು ಇವೆ, ಅದರ ಎಲ್ಲಾ ವ್ಯವಹಾರಗಳನ್ನು ಹೇಳಬೇಕಾಗಿಲ್ಲ. ತಾವು ಅನೇಕ ಸಂದರ್ಭದಲ್ಲಿ ಇದನ್ನು ಜಾರಿಗೊಳಿಸುವಂತಹದರ ಬಗ್ಗೆ ಹೇಳಿದ್ದೀರಿ. ಇದನ್ನೆಲ್ಲಾ ಕಾನೂನು ಪ್ರಕಾರ ಯಾವ ರೀತಿ ಜಾರಿಗೊಳಿಸಲು ಆಲೋಚನೆ ಮಾಡುತ್ತಿದ್ದೀರಿ. ಕಾವೇರಿ ಜಲಾಯನದ ಪ್ರದೇಶದಲ್ಲಿ, ಕೃಷ್ಣಾ ನದಿ ಪ್ರದೇಶದಲ್ಲಿರತಕ್ಕ ಯೋಜನೆಗಳು ಪೂರ್ತಿ ಆಗಬೇಕಾಗಿದ್ದರೆ ಈಗಿನ ಅಂದಾಜು ಪ್ರಕಾರ ಆರು ಸಾವಿರ ಕೋಟಿ ರೂಪಾಯಿ ಬೇಕಾಗಬಹುದೆಂದು ನಾನು ಹೇಳುತ್ತಿದ್ದೇನೆ. ಕಾವೇರಿ ಜಲಾಯನದ ಪ್ರದೇಶದಲ್ಲಿ ನ್ಯಾಯ ಮಂಡಲಿಯನ್ನು ರಚನೆ ಮಾಡುವ ಪ್ರಸ್ತಾಪಕ್ಕೆ ನಮ್ಮ ಸರ್ಕಾರ ತಯಾರು ಇಲ್ಲ. ಅಕಸ್ಮಾತ್ತಾಗಿ ತಮಿಳುನಾಡಿನವರು ಸುಪ್ರೀಂ ಕೋರ್ಟಿಗೆ ಹೋದರೆ ಅಥವಾ ಇದನ್ನು ಟ್ರಿಬ್ಯೂನಲ್‌ಗೆ ರೆಫರ್ ಮಾಡತಕ್ಕದ್ದು ಎಂದು ಹೇಳಿದರೆ, ಆಗ ಕರ್ನಾಟಕದ ಪರಿಸ್ಥಿತಿ ಚಿಂತಾಜನಕವಾಗುತ್ತದೆ. ಅದನ್ನು ತಪ್ಪಿಸುವುದಕ್ಕೋಸ್ಕರ ತೀವ್ರವಾಗಿ ಕಾವೇರಿ ಜಲಾನಯನದ ಪ್ರದೇಶದಲ್ಲಿರತಕ್ಕ ಯೋಜನೆಗಳಿಗೆ ಹೆಚ್ಚಿನ ಹಣ ತೊಡಗಿಸುವ ಅವಶ್ಯಕತೆ ಇದೆ. ಇದರ ಬಗ್ಗೆ ತಾವು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕೆಂದು ನನ್ನ ವಿನಂತಿ. ಗ್ರಾಮಾಂತರ ಪ್ರದೇಶದ ವಿದ್ಯಾಭ್ಯಾಸದ ಪದ್ಧತಿ ಬಗ್ಗೆ ಹೇಳಿದ್ದೀರಿ. ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಹೆಚ್ಚಿನ ಸವಲತ್ತುಗಳನ್ನು ಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ೧೬೦ ಜನ ಮಕ್ಕಳು ಇರುವ ಕಡೆ ಒಬ್ಬರೇ ಒಬ್ಬರು ಉಪಾಧ್ಯಾಯರು ಇದ್ದಂಥ ಪರಿಸ್ಥಿತಿಯಲ್ಲಿ ಓದಿದಂಥ ವಿದ್ಯಾರ್ಥಿಗಳು ಸ್ವಾಭಾವಿಕವಾಗಿ ಪಟ್ಟಣದಲ್ಲಿ ಕಾನ್ವೆಂಟಿನಲ್ಲಿ ಓದಿರತಕ್ಕಂಥ ವಿದ್ಯಾರ್ಥಿಗಳ ಜೊತೆ ಸ್ಪರ್ಧೆ ಮಾಡುವುದಕ್ಕೆ ಖಂಡಿತವಾಗಿ ಸಾಧ್ಯವೇ ಇಲ್ಲ. ಅದು ಭೂಮಿ ಆಕಾಶದಷ್ಟು ವ್ಯತ್ಯಾಸವಿದೆ. ಈ ಒಂದು ನ್ಯೂನತೆಯನ್ನು, ಅನ್ಯಾಯವನ್ನು ಸರಿಪಡಿಸುವುದಕ್ಕೆ ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥಾದ್ದರ ಬಗ್ಗೆ ವಿವರಣೆಯನ್ನು ಕೊಡಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಎಂ. ಹಿಂಡಸಗೇರಿ.—ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಸವಿಸ್ತಾರವಾಗಿ ತಮ್ಮ ವಿವರಣೆಯನ್ನು ಕೊಟ್ಟಿದ್ದಾರೆ. ಪೇಜ್–೭ರಲ್ಲಿ ನೀರಿನ ಪ್ರಶ್ನೆ ಇದೆ. ಕುಡಿಯುವ ನೀರಿನ ಪ್ರಶ್ನೆ ಇದೆ. ಹುಬ್ಬಳ್ಳಿ–ಧಾರವಾಡ ಮಹಾನಗರ ಎರಡನೇ ನಂಬರ್‌ನಲ್ಲಿದೆ.

ನಾಲ್ಕೈದು ವರ್ಷಗಳಿಂದ ಅಲ್ಲಿ ಕುಡಿಯುವ ನೀರಿನ ಅಭಾವ ಇದೆ. ಇದು ಎಲ್ಲರಿಗೂ ಸಹ ಗೊತ್ತಿದೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಆದಷ್ಟು ಬೇಗನೆ ಮಲಪ್ರಭ ಸೆಕೆಂಡ್ ಸ್ಟೇಜನ್ನು ಸ್ಟಾರ್ಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಉತ್ತರವಾದ ಮೇಲೆ ಮೊದಲು ವಿರೋಧಪಕ್ಷದವರಿಗೆ ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿಕೊಟ್ಟು ನಂತರ ಆಡಳಿತ ಪಕ್ಷದವರಿಗೆ ಅವಕಾಶ ಕೊಡುವುದು ಸಂಪ್ರದಾಯವಾಗಿದೆ. ಈಗ ಅದಕ್ಕೆ ತದ್ವಿರುದ್ಧವಾಗುತ್ತಾ ಇದೆ. ಆ ಕಡೆಗೂ ಅವಕಾಶ ಕೊಡಿ, ಆದರೆ ಈ ಕಡೆಯವರಿಗೆ ಹೆಚ್ಚು ಕ್ಲಾರಿಫಿಕೇಷನ್ ಕೇಳುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ಈ ಕಡೆ ಆದಮೇಲೆ ಆ ಕಡೆ ಅವಕಾಶ ಕೊಡಬೇಕು ಎಂದು ನಾನು ತಿಳಿದಿದ್ದೆ. ಅವರಿಗೂ ಅನುಮಾನಗಳು ಬಂದು ಅವರೂ ಕೇಳಲಿ ಎಂದು ಅವಕಾಶ ಕೊಟ್ಟೆ.

ಶ್ರೀ ಎ. ಎಂ. ಹಿಂಡಸಗೇರಿ.—ಡೆವಲಪ್‌ಮೆಂಟ್ ವರ್ಕ್ಸ್ ವಿಚಾರದಲ್ಲಿ ನಾವು ಯಾವುದೇ ಪಕ್ಷದಿಂದ ಆರಿಸಿ ಬಂದರೂ ಸಹ ಅದನ್ನು ಮರೆತು ಕೆಲಸ ಮಾಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ.—ಅದಕ್ಕೋಸ್ಕರ ನಮ್ಮ ಕಡೆ ಇರುವ ಕೆಲವರನ್ನು ಮಂತ್ರಿಗಳನ್ನಾಗಿ ಮಾಡಿಬಿಟ್ಟರೆ ನಮಗೂ ಸಮಾಧಾನವಾಗುತ್ತದೆ.

ಶ್ರೀ ಎ. ಎಂ ಹಿಂಡಸಗೇರಿ.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮಲಪ್ರಭ ಸೆಕೆಂಡ್ ಸ್ಟೇಜನ್ನು ಸ್ಟಾರ್ಟ್ ಮಾಡಬೇಕು. ಮತ್ತು ಈಗ ಸಮ್ಮರ್ ಸೀಸನ್ ಬರುತ್ತಾ ಇದೆ, ಕೂಡಲೇ ಬೋರ್‌ವೆಲ್‌ಗಳನ್ನು ತೆಗೆಸುವುದಕ್ಕೆ ಆಜ್ಞೆ ಮಾಡಬೇಕು. ಆದಷ್ಟು ಬೇಗ ಮಲಪ್ರಭ ಎರಡನೇ ಹಂತದ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು ಎಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಯಡಿಯೂರಪ್ಪನವರು, ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುತ್ತಾ ಇದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ಅಧಿಕಾರದಲ್ಲಿ ಇದ್ದಂಥ ಸಂದರ್ಭದಲ್ಲಿ ಮತ್ತು ಇತ್ತೀಚಿನ ರಾಷ್ಟ್ರಪತಿಯವರ ಆಳ್ವಿಕೆ ಸಂದರ್ಭದಲ್ಲಿ ವ್ಯಾಪಕವಾದ ಭ್ರಷ್ಟಾಚಾರ ಹಾಗೂ ದಿವಾಳಿತನದಿಂದ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿತ್ತು. ಅದನ್ನು ಅಂಕಿಅಂಶಗಳ ಮುಖಾಂತರ ನಮ್ಮ ಗಮನಕ್ಕೆ ತರುವಂಥ ಪ್ರಯತ್ನ ಮಾಡುತ್ತಾ ಇದ್ದೀರಿ. ಆ ಒಂದು ಲೋಪ ದೋಷಗಳನ್ನು ತಿದ್ದುವುದಕ್ಕೆ ಏನು ಕಾರ್ಯಕ್ರಮ ಹಾಕುತ್ತೀರಾ ಅದರಲ್ಲಿ ಯಾವ ರೀತಿ ಯಶಸ್ವಿಯಾಗುತ್ತೀರಾ? ಈ ಬಗ್ಗೆ ಧೈರ್ಯದಿಂದ ದಿಟ್ಟ ಹೆಜ್ಜೆಯನ್ನು ತಾವು ಮುಂದಿಡಬೇಕು ಅದಕ್ಕೆ ನಮ್ಮೆಲ್ಲರ ಸಹಕಾರ ಇದೆ. ಈ ರಾಜ್ಯದ ಕೃಷಿ ಕಾರ್ಮಿಕ ಎದುರಿಸುತ್ತಾ ಇರುವ ಸಮಸ್ಯೆಯೆಂದರೆ ಲಕ್ಷಾಂತರ ಜನ ಕೃಷಿ ಕಾರ್ಮಿಕರು ರೆವಿನ್ಯು ಇಲಾಖೆಗೆ ಸೇರಿದಂಥ ಜಮೀನಿನಲ್ಲಿ ೧೫–೨೦ ವರ್ಷಗಳಿಂದ ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡುತ್ತಾ ಇದ್ದಾರೆ. ರೆವಿನ್ಯೂ ಇಲಾಖೆಗೆ ಸೇರಿದಂಥ ಜಮೀನನ್ನು ಕಡುಬಡವನಿಗೆ ಮಂಜೂರು ಮಾಡುವಂಥ ಕಾರ್ಯಕ್ರಮ ರೂಪಿಸುತ್ತೇವೆ ಎಂದು ತಾವು ಸ್ಪಷ್ಟಮಾಡಿದ್ದೀರಿ. ಅರಣ್ಯ ಇಲಾಖೆಯ ಜಮೀನಿನಲ್ಲಿ ೨೦–೩೦ ವರ್ಷಗಳಿಂದ ವ್ಯವಸಾಯ ಮಾಡುತ್ತಾ ಇರುವ ಬಡವ ಏನಿದ್ದಾನೆ ಅವನು ಅಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾನೆ. ಅಲ್ಲಿ ಅನೇಕ ಊರುಗಳಾಗಿವೆ. ವಿದ್ಯುತ್ ವ್ಯವಸ್ಥೆ ಮಾಡಿದ್ದೇವೆ. ಇಂತಹ ಸಮಯದಲ್ಲಿ ಕೇಂದ್ರ ಸರ್ಕಾರದ ಅನುಮತಿ ಬೇಕು ನಿಜ. ಹಿಂದೆ ಇದ್ದಂಥ ಸರ್ಕಾರದವರು ಎಲ್ಲ ವಿರೋಧಪಕ್ಷದವರ ಜೊತೆಯಲ್ಲಿ ಈ ಬಗ್ಗೆ ಮಾತನಾಡಿದ್ದರು. ಆಗ ಒಂದು ಸಲಹೆ ಬಂದಿತ್ತು. ಅದೇನೆಂದರೆ, ನಮ್ಮ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವಂಥ ರೆವಿನ್ಯೂ ಇಲಾಖೆಗೆ ಸೇರಿದಂಥ ಲಕ್ಷಾಂತರ ಎಕರೆ ಜಮೀನನ್ನು ಉಳುಮೆಗೆ ಉಪಯೋಗವಿಲ್ಲ ಎಂದು ಅದನ್ನು ಸಿ. ಒ. ಡಿ. ಲ್ಯಾಂಡ್ ಎಂದು ಕರೆದು ಅರಣ್ಯ ಇಲಾಖೆಗೆ ಲಕ್ಷಾಂತರ ಎಕರೆ ಜಮೀನನ್ನು ವರ್ಗಾವಣೆ ಮಾಡುತ್ತಾ ಇದ್ದೇವೆ. ಈ ರೀತಿ ನಮ್ಮ ರಾಜ್ಯಕ್ಕೆ ಸೇರಿದಂಥ ಲಕ್ಷಾಂತರ ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುತ್ತಾ ಇರಬೇಕಾದರೆ ಈಗಾಗಲೇ ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡಿರುವಂಥ ಬಡವನ ಜಮೀನನ್ನು ಒಂದು ಸಾರಿ ಕನ್‌ಫರ್ಮ್ ಮಾಡದೇ ಇದ್ದರೆ, ಆ ಅರಣ್ಯವನ್ನು ಒತ್ತುವರಿ ಮಾಡಿಕೊಂಡು ಹೋಗುತ್ತಾ ಇರುವುದು ನಡೆಯುತ್ತಾ ಇದೆ, ಅಲ್ಲಿ ಗೊಂದಲವಾಗುತ್ತಾ ಇದೆ. ಅದಕ್ಕೋಸ್ಕರ ಕೇಂದ್ರ ಸರ್ಕಾರದ ಜೊತೆಗೆ ಮಾತುಕತೆ ಆಡಬೇಕು. ಈಗಾಗಲೇ ಹತ್ತಾರು ವರ್ಷಗಳಿಂದ ಅರಣ್ಯ ಇಲಾಖೆಯ ಜಮೀನನ್ನು ಕಡುಬಡವ ಕಲ್ಟಿವೇಷನ್ ಮಾಡುತ್ತಾ ಇದ್ದಾನೆ. ತಮಗೆ ಗೊತ್ತಿರುವ ಹಾಗೆ ಅದು ರೆವಿನ್ಯೂ ಲ್ಯಾಂಡ್‌ಗೆ ಸೇರಿರತಕ್ಕಂಥದ್ದು ಆದರೂ ಸ್ಥಳ ತನಿಖೆ ಮಾಡದೇನೇ ವರ್ಗಾವಣೆ ಆಗಿಹೋಗಿದೆ.

ಆದಕೋಸ್ಕರ ಹತ್ತಾರು ವರ್ಷಗಳಿಂದ ಬಡವರಿಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆ. ಇದನ್ನು ಮೊದಲು ತಪ್ಪಿಸಬೇಕು. ಇತ್ತೀಚೆಗೆ ಪತ್ರಿಕೆಗಳಲ್ಲಿ ಬಂದಿರುವ ಪ್ರಕಾರ ಶಿವಮೊಗ್ಗ ಜಿಲ್ಲಾಧಿಕಾರಿಗಳು ಸಿ. ಅಂಡ್ ಡಿ ಲ್ಯಾಂಡ್ ಬಗ್ಗೆ ಸ್ಥಳ ತನಿಖೆ ಮಾಡದೆ ಆಜ್ಞೆ ಮಾಡಿದ ಪರಿಣಾಮವಾಗಿ ಅನೇಕ ಬಡವರು ಸಾಗುವಳಿ ಮಾಡಿದ ಜಮೀನು ವರ್ಗಾವಣೆ ಮಾಡಿರುವುದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳು ಅಲ್ಲಿ ನೀಲಗಿರಿ ಗಿಡಗಳನ್ನು ನೆಡುತ್ತಿದ್ದಾರೆ. ಇದರಿಂದ ಅಲ್ಲಿ ದೊಡ್ಡ ಗಲಾಟೆಯಾಗಿದೆ ಇದರ ಬಗ್ಗೆ ರೀಸರ್ವೆ ಮಾಡಿಸಿ, ಬಡವರಿಗೆ ಅನುಕೂಲ ಮಾಡಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ದೊಡ್ಡ ಸಮಸ್ಯೆ ಇದೆ. ಅಲ್ಲಿ ಕುಮ್ಕಿ ಹಕ್ಕು ಎಂದು ೩ ಸೆಂಟ್ ೪ ಸೆಂಟ್ ಹೆಚ್ಚುವರಿ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಈ ಕುಮ್ಕಿ ಜಮೀನಿನ ಹಕ್ಕು ಯಾರಿಗೆ ಸೇರಬೇಕೆಂಬ ಬಗ್ಗೆ ಪರಿಶೀಲನೆ ಮಾಡಿಸಿ ಈ ಸಮಸ್ಯೆಯನ್ನು ತೀರ್ಮಾನ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇನ್ನು ನಿರುದ್ಯೋಗಿ ಯುವಕರಿಗೆ ಉದ್ಯೋಗ ಕೊಡುವ ಬಗ್ಗೆ ಹೇಳಬೇಕಾಗಿದೆ. ನಿರುದ್ಯೋಗ ನಿವಾರಣೆ ಕಡೆ ಹೆಚ್ಚು ಗಮನಕೊಡಬೇಕು. ತಾವು ನಿರುದ್ಯೋಗಿ ಯುವಕರಿಗೆ ಬದುಕುವುದಕ್ಕೆ ಬೇಕಾದ ಭರವಸೆಯನ್ನು ಕೊಡಬೇಕಾಗುತ್ತದೆ. ಇವತ್ತು ಅವರು ತಂದೆ ತಾಯಿಗಳಿಗೆ ಭಾರವಾಗಿ, ಸಮಾಜಕ್ಕೆ ಭಾರವಾಗಿ ಇದ್ದಾರೆ. ಇವರ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಸ್ವಾಮಿ, ಇವತ್ತು ರೈತರಿಗೆ ಎಲ್ಲಿ ನೀರಾವರಿ ಅನುಕೂಲ ಇಲ್ಲ, ಅಂಥ ಕಡೆ ಬೋರ್ ವೆಲ್ ಹಾಕಿಕೊಂಡು ಕಳೆದ ಒಂದೆರಡು ವರ್ಷಗಳಿಂದ ವಿದ್ಯುತ್‌ಗಾಗಿ ಕಾಯುತ್ತಿದ್ದರೂ, ವಿದ್ಯುತ್ ಸರಬರಾಜು ಮಾಡಿಲ್ಲ. ಇದರ ಬಗ್ಗೆ ಸ್ಪಷ್ಟವಾದ ಕಾರ್ಯಕ್ರಮ ಏನು ಎನ್ನುವುದನ್ನು ತಾವು ಹೇಳಿಲ್ಲ. ನೀರಾವರಿ ಅನುಕೂಲಕ್ಕಾಗಿ ಬೋರ್‌ವೆಲ್ ಹಾಕಿಸಿಕೊಂಡಿರುವ ರೈತರಿಗೆ ಮೂರು ತಿಂಗಳೊಳಗಾಗಿ ವಿದ್ಯುತ್ ಕೊಡುತ್ತೇವೆನ್ನುವ ಹೊಸ ತೀರ್ಮಾನವನ್ನು ತಾವು ಘೋಷಣೆ ಮಾಡಬೇಕೆಂದು ಹೇಳಿ ಇದಕ್ಕೆ ತಮ್ಮ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ.

† SRI QUAMARUL ISLAM.—Mr. Speaker Sir, I would tike to ask two or three clarifications. Why we demanded the Board is, that the existing Board is not functioning. The Dharmsingh Committee has also gone into it that Hyderabad-Karnataka people have been continuously getting injustice. The abmition of the people when they joined Karnataka is very well known to the Chief Minister. Here, what we wanted is, the other part of Nizam State, which has gone fo Maharashtra and Andhra Pradhesh. where the Government has gone even to the extent of amending the Constitution and given statutory powers to the Board. What we wanted is, the Statutory Board should be given with sufficient amount say Rs. 200 Crores. We want a very specific reply from the Hon. Chief Minister because he has said that we know the people and the problem of unemployment etc., From our area, the number is very negligible. Even in DLRC level, if there are five hundred posts, people from other Districts come and take away 60% of the post of teachers. This is the position of the Hyderabad-Karnataka. In this regard, I want a specific reply. Secondly, World Bank assistance regarding civic amenities to Bangalore, Hubli-Dharwar and Gulbarga Corporations, three schemes were sanctioned in priniciple. I want to know whether this Government is also interested to take up these schemes in the three Corporation areas; Thirdly in the Governor's address, it is said that the number of Fair Price Shops will be increased. As far as Gulbarga is concerned, there were 60,000 ration cards while there about 25,000 people without ration cards. What I want is, first issue orders to give ration cards to those who are not having and then increase the fairprice shops.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಇದು ನನ್ನ ದುರ್ದೈವ ಎಂದು ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ ನಾನು ನೆನ್ನೆಯ ದಿವಸ ನನ್ನ ಭಾಷಣದಲ್ಲಿ ಏನೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆ, ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಯಾವುದೇ ತರಹ ಬೆಳಕನ್ನು ಚೆಲ್ಲಲಿಲ್ಲ. ಒಂದು ಮಾತನ್ನು ಮುಖ್ಯಮಂತ್ರಿಗಳು ಹೇಳಿದರು. ಏನೆಂದರೆ ಇಂಜಿನಿಯರಿಂಗ್ ಕಾಲೇಜುಗಳು, ಮೆಡಿಕಲ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳು ಯಾವ ಪ್ರಕಾರ ಜನತಾ ರಿಜಿಮ್‌ನಲ್ಲಿ ಹೆಚ್ಚಾಯಿತು ಎಂದು, ಇವುಗಳು ಹೆಚ್ಚಾಗಿದ್ದು ಒಪ್ಪಿಕೊಳ್ಳುತ್ತೇವೆ. ಆದರೆ, ಇದರಲ್ಲಿ ಹಿಂದುಳಿದ ಪ್ರದೇಶದಲ್ಲಿ ಎಷ್ಟು ಮಂಜೂರಾಗಿವೆ, ಗ್ರಾಮಾಂತರ ಪ್ರದೇಶಗಳಲ್ಲಿ, ಎಷ್ಟು ಮಂಜೂರಾಗಿವೆ ಅದರಿಂದ ಬಡ ಜನರ ಮಕ್ಕಳಿಗೆ, ರೈತರ ಮಕ್ಕಳಿಗೆ ಎಷ್ಟು ಅನುಕೂಲವಾಗಿದೆ ಎಂಬುದರ ಬಗ್ಗೆಯೂ ಸ್ವಲ್ಪ ಸ್ಪಷ್ಟೀಕರಣಕೊಡಬೇಕು, ಇವತ್ತು ದಳ್ಳಾಳಿಗಳ ಕಾಟ ಹೋಗಬೇಕು ಎನ್ನುವುದನ್ನು ಒಪ್ಪಿಕೊಳ್ಳುತ್ತೇವೆ, ಆದರೆ ರಾಷ್ಟ್ರಪತಿ ಆಡಳಿದಲ್ಲಿ ರಾಜಭವನದಲ್ಲಿ ಏನೇನು ದಳ್ಳಾಳಿಗಳು ನಡೆಯಿತು, ಏನೇನು ಮಂಜೂರಾಗಿವೆ ಎಂಬುದನ್ನು ನಾವು ಕೇಳಬೇಕಾಗುತ್ತದೆ.

MR. SPEAKER —What is happening in Raj Bhavan cannot be a subject matter of discussion here. ರಾಜಭವನದಲ್ಲಿ ನಡೆದಿರುವಂತಾದ್ದನ್ನು ಇಲ್ಲಿ ಹೇಳುವುದು ಸರಿಯಲ್ಲ. ಆಡಳಿತದಲ್ಲಿ ಎಂದು ಹೇಳಿ, ರಾಜಭವನ ಎಂದು ಹೇಳಬೇಡಿ.

ಶ್ರೀ ಆರ್.ವಿ. ದೇಶಪಾಂಡೆ.—ಅಧ್ಯಕ್ಷರೆ, ರಾಷ್ಟ್ರಪತಿ ಆಡಳಿತದಲ್ಲಿ ಗವರ್ನರ್‌ರವರು ಒಬ್ಬ ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಾರೆ. ಅವರು ಒಳ್ಳೆಯ ಕೆಲಸ ಮಾಡಿದರೆ ಅವರಿಗೆ ಕ್ರೆಡಿಟ್ ಹೋಗುತ್ತದೆ.

MR. SPEAKER.—You are not asking for clarification. You are making fresh charges against one who cannot defend himself here. I only gave you permission to seek clarification.

(Interruption)

MR. SPEAKER.—I can take care of this House. Please resume your seats.

ಶ್ರೀ ಆರ್. ವಿ. ದೇಶಪಾಂಡೆ,—ಅಧ್ಯಕ್ಷರೆ, ನಾನು ಕ್ಲಾರಿಫಿಕೇಷನ್ ಮಾತ್ರ ಕೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಅರಣ್ಯ ಭೂಮಿಯ ಬಗ್ಗೆ ಹೇಳಿದರು. ಬಹಳ ಸಂತೋಷ ಈ ಸಮಸ್ಯೆ ಪರಿಹಾರಕ್ಕೆ ಕೇಂದ್ರ ಸರ್ಕಾರದ ಸಹಕಾರ ಬೇಕಾಗುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳವರ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇವೆ. ಈ ಬಗ್ಗೆ ಈಗಾಗಲೇ ಒಂದು ಸರ್ಕಾರಿ ಆಜ್ಞೆ ಆಗಿದೆ. ಅದೇನೆಂದರೆ, ೧–೪–೧೯೭೮ಕ್ಕೆ ಮುಂಚೆ ಯಾರು ಭೂಮಿಯನ್ನು ಅತಿಕ್ರಮಣ ಮಾಡಿ ವ್ಯವಸಾಯ ಮಾಡುತ್ತಿದ್ದಾರೆ ಆ ಭೂಮಿಯನ್ನು ಅವರಿಗೆ ಮಂಜೂರು ಮಾಡಬೇಕೆಂದು ಸರ್ಕಾರಿ ಆಜ್ಞೆ ಇದೆ. ಈ ಸಮಸ್ಯೆ ಮಲೆನಾಡು ಜಿಲ್ಲೆಯಲ್ಲಿ ಬಹಳಷ್ಟು ಇದೆ. ತಾವು ಸ್ವಲ್ಪ ಪ್ರಾಧಾನ್ಯತೆ ಮೇಲೆ ಇದನ್ನು ತೆಗೆದುಕೊಂಡರೆ ಅದರಿಂದ ಎಷ್ಟೋ ಬಡ ಜನರಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೇ ಪ್ರಕಾರ ಹಂಗಾಮಿಲೀಸ್ ಭೂಮಿ ಏನಿದೆ, ಇದನ್ನು ಲೀಗಲಿ ಇಂಡಕ್ಟ್ ಮಾಡಿದ್ದೀರಿ, ಮಾಜಿ ಮುಖ್ಯ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇದ್ದಾಗ ಈ ಬಗ್ಗೆ ಒಂದು ಸಭೆ ನಡೆದು ತೀರ್ಮಾನವಾಗಿದೆ. ಈ ಭೂಮಿ ವಿಚಾರದಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಅವಶ್ಯಕತೆ ಇಲ್ಲ. ಇದನ್ನು ರಾಜ್ಯ ಮಟ್ಟದಲ್ಲಿಯೇ ತೀರ್ಮಾನ ಮಾಡಲಿಕ್ಕೆ ಸಾಧ್ಯ, ಈ ಕೆಲಸ ಆದಷ್ಟು ಬೇಗ ಆಗಬೇಕು. ಕಳೆದ ೨೦–೩೦ ವರ್ಷಗಳಿಂದಲೂ ಆ ಜನರಿಗೆ ಭೂಮಿ ಮಂಜೂರಾಗದೆ ಅವರಿಗೆ ಸಾಲ ಸಿಕ್ಕುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಇನ್ನೊಂದು ಸದನಕ್ಕೆ ಉತ್ತರವನ್ನು ಕೊಡಲಿಕ್ಕೆ ಹೋಗಬೇಕಾಗಿದೆ, ಅದನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳಬೇಕು,

ಶ್ರೀ ಆರ್.ವಿ. ದೇಶಪಾಂಡೆ.—ಅಧ್ಯಕ್ಷರೆ, ಒಂದು ಜ್ವಲಂತ ಸಮಸ್ಯೆ ಇದೆ. ಅಪೆಕ್ಸ್ ಬ್ಯಾಂಕ್ ಮತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಇನ್‌ಟರ್ನ್ ಸರ್ಕಾರದಿಂದ ಸಬ್ಸಿಡಿ ರಿಲೀಸ್ ಆಗಬೇಕಾಗಿದೆ. ನಾವು ನಬಾರ್ಡ್‌ಗೆ ಒಂದು ಅಂಡರ್‌ಟೇಕಿಂಗ್ ಕೊಟ್ಟಿದ್ದೇವೆ. ಈ ಸಬ್ಸಿಡಿ ಬಗ್ಗೆ NABARD has put a condition that if you don't give subsidy, we will

not refinance. ಹೀಗಾಗಿ ನಬಾರ್ಡ್ ಕಡೆ ಮಾತನಾಡಿ ಡಿಸೆಂಬರ್‌ವರೆಗೆ ಸಮಯ ತೆಗೆದುಕೊಳ್ಳಬೇಕು. ಇಲ್ಲದೇ ಇದ್ದರೆ ಸಬ್ಸಿಡಿ ರಿಲೀಸ್ ಆಗಬೇಕಾಗುತ್ತದೆ. ಇಲ್ಲದಿದ್ದರೆ ಜನವರಿಯಿಂದ ರಾಜ್ಯದಲ್ಲಿ ಎಲ್ಲಾ ರೈತರಿಗೂ ಟೋಟಲ್ ಫೈನಾನ್ಸ್ ಬಂದ್ ಆಗುವ ಸಂಭವ ಇದೆ, ಆದ್ದರಿಂದ, ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಅಧ್ಯಕ್ಷರೆ, ಆ ಕಡೆ ಇರುವವರಿಗೆ ನೀವು ಅವಕಾಶವನ್ನು ಕೊಡುತ್ತಾ ಹೋದರೆ ಈ ಕಡೆ ಇರುವವರಿಗೆ ಅವಕಾಶವೇ ಸಿಕ್ಕುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಆ ಮನೆಗೆ ಹೋಗುತ್ತಾರೆಂದುಹೇಳಿದಿರಿ. ಅವರು ಅಲ್ಲಿಗೆ ಹೋದರೆ ನಮ್ಮ ಸದಸ್ಯರು ಕೇಳಿರತಕ್ಕ ಪ್ರಶ್ನೆಗಳಿಗೆ ಉತ್ತರವೇ ಸಿಕ್ಕುವುದಿಲ್ಲ.

ಶ್ರೀ ಪಿ.ಜಿ.ಆರ್ ಸಿಂಧ್ಯ.— ಮಾನ್ಯ ಅಧ್ಯಕ್ಷರೆ. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನರ್ಪಿಸುವ ಸಂದರ್ಭದಲ್ಲಿ ನಮ್ಮ ಮಾನ್ಯ ಸದಸ್ಯರುಗಳು ಮಾತನಾಡಿದ್ದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾ ಅನೇಕ ಉತ್ತಮ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಈ ಕಡೆ ವಿರೋಧಪಕ್ಷದಲ್ಲಿರತಕ್ಕ ಸದಸ್ಯರಿಂದ ಒಳ್ಳೆಯ ಸಲಹೆಗಳು ಸ್ವಲ್ಪ ಮಾತ್ರ ಬಂದಿವೆ, ಇನ್ನೂ ಹೆಚ್ಚು ಸಲಹೆಗಳು ಬರಬೇಕಾಗಿತ್ತು ಎಂದು ಹೇಳಿದರು. ಸ್ವಾಮಿ, ತಮಗೂ ಗೊತ್ತಿದೆ. ನಾನು ನನ್ನ ಸರದಿಗಾಗಿ ಸುಮಾರು 3 ದಿವಸದಿಂದ ಕಾಯುತ್ತಾ ಕುಳಿತಿದ್ದೇನೆ. ನಾನು ಈಗೆ ಕ್ಲಾರಿಫಿಕೇಷನ್‌ನ್ನು ಕೇಳುವುದಕ್ಕಾಗಿ ಎದ್ದು ನಿಂತಾಗ ಮಾನ್ಯ ಹಿರಿಯ ಸದಸ್ಯರಾದ ಹುಚ್ಚಮಾಸ್ತಿಗೌಡರು ನನಗೆ ಬಹಳವಾಗಿ ಬೇಕಾದವರೂ ಆಗಿದ್ದರೂ ಕೂಡ ನನಗೆ ಅಡ್ಡಿ ಮಾಡುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ನಾನು ಅಡಿ ಮಾಡುತ್ತಿಲ್ಲ...

ಶ್ರೀ ಪಿ.ಜಿ.ಆರ್. ಸಿಂಧ್ಯ.— ಸ್ವಾಮಿ, ನಮ್ಮ ದೇಶದಲ್ಲಿರತಕ್ಕ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದಕ್ಕೆ ದಿಟ್ಟ ನಿಲುವನ್ನು ನಾವು ತೆಗೆದುಕೊಳ್ಳುತ್ತೇವೆಂದು ಅವರು ಹೇಳಿದ್ದಾರೆ. ಅವರು ಈ ರೀತಿ ಮಾಡುವುದಾದರೆ, ನಮ್ಮ ವಿರೋಧಪಕ್ಷದವತಿಯಿಂದ ನಾವು ಸ್ಪಷ್ಟವಾಗಿ ಭರವಸೆಯನ್ನು ಕೊಡುತ್ತೇವೆ, ಮತ್ತು ಎಲ್ಲ ರೀತಿಯ ಬೆಂಬಲವನ್ನೂ ಕೊಡುತ್ತೇವೆ. ಯಾರನ್ನೂ ಕೂಡ ಅಲ್ಲಿಗೆ ವರ್ಗಮಾಡಿ, ಇಲ್ಲಿಗೆ ವರ್ಗಮಾಡಿ ಎಂದು ನಾವಾಗಲಿ, ನಮ್ಮ ಪಕ್ಷದ ಸದಸ್ಯರಾಗಲಿ ಅವರಿಗೆ ಪತ್ರ ಬರೆಯುವುದಿಲ್ಲ. ನಮ್ಮ ರಾಜ್ಯದ ಜನರ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಾಗಲಿಲ್ಲ. ಈಗ ತಾವಾದರೂ ಈ ಬಗ್ಗೆ ಒಂದು ದಿಟ್ಟ ನಿಲುವನ್ನು ತಾಳುವುದಾದರೆ ನಾವು ಬಹಳ ಸಂತೋಷಪಡುತ್ತೇವೆ, ಬೆಂಬಲಿಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು ಕ್ಲಾರಿಫಿಕೇಷನ್ಸ್ ಕೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ನಾನು ಕೇಳುವುದಕ್ಕೆ ನಿಂತಾಗಲೇ ನೀವೂ ಕೇಳಬೇಕೆ? ನಿಮ್ಮ ಹಾಗೆ ಭಾಷಣ ಮಾಡುವುದಕ್ಕೆ ನನಗೆ ಅವಕಾಶ ಸಿಕ್ಕಲಿಲ್ಲ. ಆದ್ದರಿಂದ ನಾನು ಕ್ಲಾರಿಫಿಕೇಷನ್ಸ್ ಮಾತ್ರ ಕೇಳುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೆ. ಕ್ಯಾಪಿಟೇಷನ್ ಫೀ ರದ್ದು ಮಾಡುವ ಬಗ್ಗೆ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡುವ ಬಗ್ಗೆ, ವಿಪರೀತವಾದ ಬೋರ್ಡ್ ಮತ್ತು ಕಾರ್ಪೊರೇಷನ್‌ಗಳನ್ನು ಕಡಿಮೆ ಮಾಡುವ ಬಗ್ಗೆ ನಾವು ಎಷ್ಟೇ ಪ್ರಯತ್ನ ಮಾಡಿದರೂ ಅದು ಸಫಲವಾಗಲಿಲ್ಲ. ಈಗ ನೀವು ಏನು ಮಾಡುತ್ತೀರೆಂದು ನಾವು ನೋಡಬೇಕಾಗಿದೆ. ನೀವು ಇನ್ನು 2 ತಿಂಗಳವರೆಗೆ ಅಧಿವೇಶನವನ್ನು ಕರೆಯುವುದಿಲ್ಲ. ಆದ್ದರಿಂದ ನೀವು ಈಗ ನಮಗೆ ಕ್ಲಾರಿಫಿಕೇಷನ್ ಕೇಳಲು ಅವಕಾಶವನ್ನು ಒದಗಿಸಿಕೊಟ್ಟರೆ ಉತ್ತಮ ಸಲಹೆಗಳನ್ನು ಕೊಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ.

ತಮ್ಮ ಉತ್ತರದಲ್ಲಾಗಲಿ, ಅಥವಾ ಮಾನ್ಯ ರಾಜ್ಯಪಾಲರ ಭಾಷಣದಲ್ಲಾಗಲಿ ಕಾರ್ಮಿಕರಿಗೆ ಅಥವಾ ಹಿಂದುಳಿದ ವರ್ಗದವರಿಗೆ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲ. ಇದರ ಬಗ್ಗೆ ನಾನು ಮಾತನಾಡಬೇಕೆಂದು ಬಂದಿದ್ದೆ. ಆದರೆ ಅವಕಾಶ ಸಿಕ್ಕಲಿಲ್ಲ. ಆದ್ದರಿಂದ ಕಾರ್ಮಿಕರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಹೆಚ್ಚಿನ ಒತ್ತನ್ನು ತಾವು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗದೆ ಕೇವಲ ನಾಲ್ಕು ಪ್ರಮುಖ ಅಂಶಗಳನ್ನು ಮಾತ್ರ ಪ್ರಸ್ತಾಪ ಮಾಡಬಯಸುತ್ತೇನೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರೂ ಮತ್ತ ಇನ್ನೊಬ್ಬ ಮಾನ್ಯ ಸದಸ್ಯರು ಏನು ಹೇಳಿದರೆಂದರೆ ರೈತರು ಪಂಪ ಸೆಟ್ಟಿಗಾಗಿ ವಿದ್ಯುಚ್ಛಕ್ತಿ ತೆಗೆದುಕೊಳ್ಳಲು ಕೇವಲ ಒಂದು ಕಂಬಕ್ಕಾಗಿ ಸುಮಾರು ಒಂದೂವರೆ ಎರಡು ವರ್ಷಗಳಿಂದ ಕಾಯುತ್ತಿ

ದ್ವಾರೆ. ಕಂಬವಿಲ್ಲದೆ ರೈತರಿಗೆ ತೊಂದರೆಯಾಗುತ್ತಿದೆ ಎಂದು. ಸ್ವಾಮಿ, ಕೆ.ಇ.ಬಿ.ಯಲ್ಲಿ ಕೆಳಮಟ್ಟದಲ್ಲಿ ಬಹಳ ಮಟ್ಟಿನ ಭ್ರಷ್ಟಾಚಾರ ನಡೆಯುತ್ತಿದೆ. ಇದನ್ನು ತಡೆಗಟ್ಟಬೇಕಾದರೆ ಅಲ್ಲಿಗೆ ಒಳ್ಳೆಯ ದಕ್ಷ ಅಧಿಕಾರಿ ಯೊಬ್ಬನನ್ನು ನೀವು ನೇಮಕ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರೈತರು ತಾವು ಬೆಳೆದ ಮಾಲನ್ನು ಮಾರಾಟಮಾಡಲು ಎ.ಪಿ.ಎಂ.ಸಿ.ಗೆ ತಂದಾಗ ದಳ್ಳಾಳಿಗಳು ರೈತರ ಸುಲಿಗೆ ಮಾಡುತ್ತಿದ್ದರು. ಇದನ್ನು ಗಮನಿಸಿ ಮಾನ್ಯ ಜಾಲಪ್ಪನವರೂ ಮತ್ತು ನಾವೂ ಬಹಳ ಪ್ರಯತ್ನಪಟ್ಟು ಈ ದಳ್ಳಾಳಿ ತೆಗೆದುಕೊಳ್ಳುವುದನ್ನು ನಿಲ್ಲಿಸಿದ್ದೆವು. ಈಗ ಮತ್ತೆ ಕಮಿಷನ್ ಏಜೆಂಟ್‌ಗಳು ತಲೆ ಎತ್ತಿದ್ದಾರೆಂದು ತಿಳಿದುಬಂದಿದೆ. ಆದ್ದರಿಂದ ಮೊದಲು ಈ ದಳ್ಳಾಳಿಗಳ ಕಮಿಷನ್ ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕು. ಮೂರನೆಯದಾಗಿ ಚಿಕ್ಕಬಳ್ಳಾಪುರ, ಹೊಸಕೋಟೆ ದೇವನಹಳ್ಳಿ, ಈ ಮೂರು ತಾಲ್ಲೂಕುಗಳಲ್ಲಿ ವಿಶೇಷವಾಗಿ ಬೆಳೆದಿರತಕ್ಕಂಥ ಆಲೂಗೆಡ್ಡೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಸುಮಾರು ೪ ಕೋಟಿ ರೂಪಾಯಿಗಳು ಇದರಿಂದ ಲುಕ್ಸಾನಾಗುತ್ತಿದೆ. ಒಬ್ಬ ತೋಟಗಾರಿಕೆ ಇಲಾಖೆಯ ಅಧಿಕಾರಿಯೂ ಕೂಡ ಇದುವರೆಗೆ ಅಲ್ಲಿಗೆ ಹೋಗಿ ನೋಡಿಲ್ಲ. ಅದರ ಕಡೆ ಗಮನ ಕೊಟ್ಟಿಲ್ಲ. ಆದ್ದರಿಂದ ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಕೊನೆಯದಾಗಿ ಚುನಾವಣೆ ಫಲಿತಾಂಶದ ಸಂದರ್ಭದಲ್ಲಿ ಇದ್ದಂಥ ಕಾವು ಏನಿದೆ ಅದು ನಮ್ಮ ಪಕ್ಷದ ಕಾರ್ಯಕರ್ತರಿರಬಹುದು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿರಬಹುದು ಅಥವಾ ಬೇರೆ ಪಕ್ಷದ ಕಾರ್ಯಕರ್ತರಿರಬಹುದು ಈ ಸಂಬಂದದಲ್ಲಿ ಅಲ್ಲಲ್ಲೇ ಇನ್ನೂ ಘರ್ಷಣೆ ನಡೆಯುತ್ತಿದೆ. ಪೋಲೀಸ್ ಅಧಿಕಾರಿಗಳು ಸಹ ಇದುವರೆಗೂ ಕೆಲವು ಕಡೆ ನಿಷ್ಪಕ್ಷಪಾತವಾಗಿ ನಡೆದುಕೊಂಡಿದ್ದರೆ ನಾವು ಎರಡು ಕಡೆಯವರು ಸಂಯಮದಿಂದ ಇರಬೇಕಾಗುತ್ತದೆ. ಆದರೆ ತಮಗೆ ಗೊತ್ತಿರುವ ಹಾಗೆ ಕಾವು ಇರುವುದರಿಂದಾಗಿ ಎಲ್ಲಾ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ನಡೆದುಕೊಳ್ಳಲು ತಾವು ಆದೇಶವನ್ನು ಕೊಡಬೇಕೆಂದು ಹೇಳಿ, ಈ ೪–೫ ವಿಚಾರಗಳು ಕ್ಲಾರಿಫಿಕೇಷನ್‌ಗೆ ಸಂಬಂಧಪಟ್ಟಂತೆ ಇರಬಹುದು ಅಥವಾ ಸಬ್‌ಮಿಶನ್ ಇರಬಹುದು ಅದನ್ನು ಹೇಳಲಿಕ್ಕೆ ತಾವು ಅಪ್ಪಣೆ ಕೊಡಿಸಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ ಮಾನ್ಯ ಸಭಾನಾಯಕರು ಇದನ್ನು ಗಮನಿಸುತ್ತಾರೆಂದು ತಿಳಿದು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರನ್ನು ನಾನು ಕೇಳಿಕೊಳ್ಳುವುದೇನೆಂದರೆ. ಕೇವಲ ಭ್ರಷ್ಟಾಚಾರಕ್ಕಾಗಿ ಈ ಗುಳೆ ಕೀಳಿಸುವ ಕಾರ್ಯಕ್ರಮ ನಡೆಯುತ್ತಿದೆ. ಆದ ಕಾರಣ ಈ ಗುಳೆ ಕೀಳಿಸಬಾರದೆಂದು ಅರಣ್ಯಾಧಿಕಾರಿಗಳಿಗೆ ಸ್ವಲ್ಪ ಸೂಕ್ತ ಎಚ್ಚರಿಕೆಯನ್ನು ಸರ್ಕಾರದಿಂದ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಗುಳೇ ಕೀಳಿಸುತ್ತೇವೆ, ನೀಲಗಿರಿ ಗಿಡಗಳನ್ನು ಹಚ್ಚುತ್ತೇವೆಂದು ಸುಮ್ಮಸುಮ್ಮನೆ ಹೇಳಿ ಲಂಚ ತೆಗೆದುಕೊಳ್ಳುವ ಕಾರ್ಯ ಈಗ ನಡೆಯುತ್ತಿದೆ. ಅತಿಕ್ರಮಣ ಮಾಡಿದಂಥ ಭೂಮಿಯಲ್ಲಿ ನೀಲಗಿರಿ ಹಚ್ಚುತ್ತೇವೆ ಹೋಗಿರಿ ಎಂದು ಹೇಳುತ್ತಾರೆ. ಆ ಮೇಲೆ ೨೦೦.೩೦೦,೪೦೦ ರೂಪಾಯಿಗಳನ್ನು ಲಂಚವಾಗಿ ತೆಗೆದುಕೊಳ್ಳುತ್ತಿರುತ್ತಾರೆ. ಇದನ್ನು ತಪ್ಪಿಸಬೇಕು. ನಂತರ ಅನೇಕ ಸಣ್ಣ ಸಣ್ಣ ಕಾರಣಗಳಿಗೆ ಕರ್ನಾಟಕ ಸರ್ಕಾರದ ರೆಕಾರ್ಡ್ ಆಫ್‌ರೈಟ್ಸ್ ಕೊಡಬೇಕೆಂದು ಕೇಳುತ್ತಾರೆ. ಸಣ್ಣ ಸಣ್ಣ ಕಾರಣಗಳೆಂದರೆ ಮೊದಲಿಂದಲೂ ಆಗ್ರೋ ಇಂಡಸ್ಟ್ರೀಸ್‌ನಿಂದ ಬಾಕಿಯಿತ್ತೆಂದು ಯಾರೋ ಒಬ್ಬರು ವತನ ಭೂಮಿಗೆ ಅರ್ಜಿ ಕೊಟ್ಟಿದ್ದಕ್ಕೆ ಆಧಾರವಿಲ್ಲವೆಂದು ರೆಕಾರ್ಡ್ ಆಫ್‌ರೈಟ್ಸ್ ಕೇಳಿದ್ದಾರೆ. ಇಂಥ ಸಣ್ಣ ಕಾರಣಕ್ಕೆ ಕರ್ನಾಟಕ ಸರ್ಕಾರದ ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಬಹಳ ತೊಂದರೆಯಾಗಿದೆ. ಆ ಕಾರಣದಿಂದ ಕಾನೂನು ತಿದ್ದುಪಡಿ ಮಾಡಿ ಮಾಲೀಕರಿಗೆ ಅನುಕೂಲವಾಗುವಂತೆ ಕೆಲಸ ಮಾಡಬೇಕು. ಅನಂತರ ಎ.ಪಿ.ಎಂ.ಸಿ ಕಾನೂನು ಬದಲಾವಣೆಯಾಗಿದೆ ಎಂದು ಮಾನ್ಯ ಸಿಂಧ್ಯರವರು ಹೇಳಿದರು. ಆದರೆ ಎ.ಪಿ.ಎಂ.ಸಿ. ಕಛೇರಿಗೆ ದಳಾಳರು ಪಟ್ಟಿ ಮಾಡಿ ಮೊದಲು ಜಮಾ ಮಾಡಬೇಕು. ಅನಂತರ ರೈತರಿಗೆ ಚೆಕ್‌ನ ಮುಖಾಂತರ ಪಟ್ಟಿ ತೀರಿಸಬೇಕೆಂಬ ಪದ್ಧತಿ ಜಾರಿಗೆ ಬಂದರೆ ದಳಾಳಿ ಕ್ರಮದ ಪದ್ಧತಿ ಬಂದ್ ಆಗಬಹುದು. ಚೆಕ್‌ನ ಮೂಲಕ ಪಟ್ಟಿ ಮಾಡಿ ತೀರಿಸಬೇಕೆಂದರೆ ಅದರಲ್ಲಿ ದಳಾಳಿ ಮತ್ತು ಅರ್ಕಿಸೂಟ್ ಎನ್ನುವುದನ್ನು ತೆಗೆಯುವಂಥದ್ದು ಸಾಧ್ಯವಿಲ್ಲವೆಂದು ನನ್ನ ತಿಳುವಳಿಕೆ. ಆಮೇಲೆ ಸಹಕಾರಿ ಸಕ್ಕರೆ ಕಾರ್ಖಾನೆಗಳ ವ್ಯವಹಾರ ಬಹಳ ಅಸ್ತವ್ಯಸ್ತವಾಗಿದೆ. ಚುನಾವಣೆ ಬಹುತೇಕ ದೊಡ್ಡ ರಾಜಕೀಯವಾಗಬಹುದು, ನಾಮಿನೇಷನ್ ಪದ್ಧತಿ ಬಂದ್ ಆದರೆ ರಾಜಕೀಯವೇನು ನಡೆಯುವುದಿಲ್ಲ. ಭ್ರಷ್ಟಾಚಾರ ಬಂದ್ ಆಗುತ್ತದೆ ಎನ್ನುವ ವಿಚಾರವಿದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸ್ಪಿನ್ನಿಂಗ್ ಮಿಲ್‌ಗಳಿಗೆ ನಾಮಿನೇಷನ್ ಮಾಡುವಂಥ ಪದ್ಧತಿಯನ್ನು ಬಂದ್ ಮಾಡಿ ಅಲ್ಲಿಯ ಸದಸ್ಯರ ಒಂದು ತೀರ್ಮಾನಕ್ಕೆ ಇದನ್ನು ಬಿಟ್ಟುಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.— ಬಾಬಾಗೌಡರೇ, ಈಗ ಅವರು ಏನು ಉತ್ತರ ಹೇಳಿದರೋ ಅದರ ಮೇಲೆ ಸ್ಪಷ್ಟೀಕರಣ ಕೇಳಬೇಕೇ ಹೊರತು ಹೊಸದಾಗಿ ಪಟ್ಟಿಮಾಡಿಕೊಂಡು ಆದರ ಮೇಲೆ ಸ್ಪಷ್ಟೀಕರಣ ಕೇಳಿದರೆ ಅವರು ಉತ್ತರ ಎಲ್ಲಿಂದ ತಂದುಕೊಡುತ್ತಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.— ಮಾನ್ಯ ಅಧ್ಯಕ್ಷರೆ, ಎ.ಪಿ.ಎಂ.ಸಿ. ಬಗ್ಗೆ ಮಾನ್ಯ ಸಿಂಧ್ಯರವರು ಹೇಳಿದರು. ಅದಕ್ಕೆ ನಾನು ಹೇಳಿದಂತೆ ಮಾಡಿದರೆ ಅನುಕೂಲವಾಗುತ್ತದೆಂದು ಒಂದು ಸೂಚನೆ ಕೊಟ್ಟೆ.

ಅಧ್ಯಕ್ಷರು.— ಸಾಮಾನ್ಯವಾಗಿ ಸ್ಪಷ್ಟೀಕರಣಬೇಕೆಂದರೆ ನಾನು ತಿಳಿದುಕೊಂಡಿರುವಂತೆ ಅವರ ಭಾಷಣದಿಂದ ಉದ್ಭವವಾಗಿರತಕ್ಕಂಥ ವಿಚಾರಗಳ ಮೇಲೆ ಬೆಳಕು ಚೆಲ್ಲಬೇಕಾಗಿದ್ದರೆ ಅದರ ಮೇಲೆ ಸ್ಪಷ್ಟೀಕರಣವೆಂದು ಹೇಳುವುದು.

ಶ್ರೀ ಎಂ. ವೀರಪ್ಪಮೊಯಿಲಿ.— ಮಾನ್ಯ ಅಧ್ಯಕ್ಷರೆ, ಸ್ಪಷ್ಟೀಕರಣಕ್ಕೆ ಉದ್ಭವವಾಗುವ ವಿಚಾರಕ್ಕಿಂತಲೂ ಮೊದಲು ಯಾರು ಸದಸ್ಯರು ಭಾಷಣ ಮಾಡುತ್ತಾರೆ ಅವರಿಗೆ ಸಮರ್ಪಕವಾದ ಉತ್ತರ ಸಿಗಲಿಲ್ಲ, ಅಥವಾ ಉತ್ತರ ಸ್ಪಷ್ಟವಾಗಿಲ್ಲವೆಂದರೆ ಸ್ಪಷ್ಟೀಕರಣ ಕೇಳಬಹುದು. ಇಲ್ಲಿ ಭಾಷಣ ಮಾಡದೆ ಇದ್ದವರಿಗೂ ಸ್ಪಷ್ಟೀಕರಣ ಕೇಳುವಂತ ಪರಂಪರೆ ಇಲ್ಲ. ಆ ಪರಂಪರೆಯಾದರೆ ಬಹಳ ಕಷ್ಟವಾಗುತ್ತದೆ.

(ಗೊಂದಲ)

೫–೦೦ ಪಿ.ಯಂ.

(ಗೊಂದಲ)

ಅಧ್ಯಕ್ಷರು.— ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.— ನಮಗೆ ಭಾಷಣ ಮಾಡಲಿಕ್ಕೆ ಅವಕಾಶ ಸಿಕ್ಕಿಲ್ಲ. ಅದಕ್ಕೆ ಕೇಳುತ್ತಿದ್ದೇನೆ. ಕುಡಿಯುವ ನೀರಿನ ಸಮಸ್ಯೆ ಬಹಳ ದೊಡ್ಡದಾಗಿದೆ. ಬೋರೆವೆಲ್‌ಗಳು ಬೇಕಾದಷ್ಟು ಇವೆ. ಆದರೆ ಅವಕ್ಕೆ ರಿಪೇರಿ ಇಲ್ಲವೆಂಬ ಕಾರಣಕ್ಕಾಗಿ ನೀರಿನ ತೊಂದರೆಯಾಗಿದೆ. ರಿಪೇರಿ ಮಾಡಿದರೆ ಅನುಕೂಲವಾಗುತ್ತದೆ. ಅದಕ್ಕೆ ವಿಶೇಷ ಸಿಬ್ಬಂದಿಯನ್ನು ನೇಮಿಸಿ ರಿಪೇರಿ ಮಾಡಿಸುವ ಕೆಲಸ ನಡೆಯಬೇಕು.

ಅಧ್ಯಕ್ಷರು.— ರಾಣಿಯವರು ಮಾತನಾಡುವುದು.

(ಗೊಂದಲ)

ಅಧ್ಯಕ್ಷರು.— ಇಲ್ಲಿ ಯಾರೂ ಬೇಲಿ ಹಾಕಿಲ್ಲ, ನಿರ್ಬಂಧವೇನು ಇಲ್ಲ. ಯಾರು ಬೇಕಾದರೂ ಮಾತನಾಡಬಹುದು.

ಒಬ್ಬ ಮಾನ್ಯ ಸದಸ್ಯರು.— ಕ್ಲಾರಿಫಿಕೇಷನ್‌ಗೆ ಅವಕಾಶ ಸಿಕ್ಕಲಿಲ್ಲವೆಂದರೆ ನಾವು ಏಕೆ ಇಲ್ಲಿಗೆ ಬರಬೇಕು.

ಅಧ್ಯಕ್ಷರು.— ೨೨೨ ಜನ ಸದಸ್ಯರೂ ಕೇವಲ ೪ ದಿನಗಳಲ್ಲಿ ಭಾಷಣ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ? ನಾವು ಏತಕ್ಕೆ ಬಂದಿದ್ದೇವೆಂದು ನನ್ನನ್ನು ಕೇಳಿದರೆ ಹೇಗೆ ? ಎಲ್ಲರೂ ಬಂದಿರುವುದು ಭಾಷಣ ಮಾಡಲಿಕ್ಕೆ. ಅದಕ್ಕೆ ಮುಂಚೆ ಅವಕಾಶ ಇದೆ.

ಶ್ರೀ ಎಂ. ರಾಮಪ್ಪ.— ಇಲ್ಲಿ ಒಂದು ಪರಂಪರೆ ನಡೆಯುತ್ತಿದೆ. ಶ್ರೀ ಬಣಕಾರರವರು ಇದ್ದಾಗ ಒಬ್ಬರು ಆ ಕಡೆಯವರು, ಒಬ್ಬರು ಈ ಕಡೆಯವರು ಮಾತನಾಡಲಿಕ್ಕೆ ಅವಕಾಶ ಕೊಡುತ್ತಿದ್ದರು. ನಮ್ಮ ಸಂಖ್ಯೆ ಜಾಸ್ತಿ ಇದ್ದಾಗ ಎಲ್ಲರಿಗೂ ಅವಕಾಶ ಸಿಗುತ್ತಿರಲಿಲ್ಲ. ಈಗ ವಿರೋಧ ಪಕ್ಷದವರೆಲ್ಲರೂ ಮಾತನಾಡಬೇಕೆಂದರೆ ನಾವು ಮನೆಗೆ ಹೋಗಬೇಕಾಗುತ್ತದೆ. ೧೭೭ ಜನರಿಗೆ ಏನೂ ಅವಕಾಶ ಸಿಗಬಾರದೆಂಬ ರೀತಿಯಲ್ಲಿ ಹೇಳುವುದಾದರೆ ನಮಗೆ ಆ ಕಡೆ ಅವಕಾಶ ಕೊಡಿ.

ಅಧ್ಯಕ್ಷರು.— ಅದಕ್ಕೆ ನಾನು ರಾಣಿಯವರನ್ನು ಕರೆದೆ.

ಶ್ರೀ ಪ್ರಭಾಕರ್ ಎಸ್. ರಾಣೆ.— ಕೇಂದ್ರ ಸರ್ಕಾರ ಮಂಡಲ ಆಯೋಗದ ವರದಿಯನ್ನು ಜಾರಿಗೆ ತರುತ್ತದೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿರುವ ಸಂದರ್ಭದಲ್ಲಿ ಇವತ್ತು ಆ ವರದಿಯ ಕೆಲವು ಅಂಶಗಳನ್ನು ಜಾರಿಗೆ ತರುವ ದಿಸೆಯಲ್ಲಿ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಬಸವರಾಜ ಪಾಟೀಲ್ (ಅಟ್ಟೂರು).— ಮಾನ್ಯ ಮುಖ್ಯ ಮಂತ್ರಿಗಳು ಅವರ ಭಾಷಣದಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬಗ್ಗೆ ನಿರ್ದಿಷ್ಟವಾದ ಅಭಿಪ್ರಾಯವನ್ನು ಸರ್ಕಾರದವರಪರವಾಗಿ ಹೇಳಿಲಿಲ್ಲ. ಇದಕ್ಕೆ ಕಾರಣ ತಿಳಿಸಬೇಕು. ಹಿಂದೆ ಇದ್ದಂತಹ ಕಾಂಗ್ರೆಸ್ ಸರ್ಕಾರದವರು ಗುಲ್ಬರ್ಗಾ ದಲ್ಲಿ ಒಂದು ಮೀಟಿಂಗ್ ಮಾಡಿ ಹೈದರಾಬಾದ್ ಭಾಗದ ಜಿಲ್ಲೆಗಳಿಗೆ ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡಿದ್ದಾರೆ. ವಿರೇಂದ್ರ ಪಾಟೀಲರ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುತ್ತದೆಂಬ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೇಳಬೇಕು.

ಅಧ್ಯಕ್ಷರು.— ಅದರ ಬಗ್ಗೆ ಅವರು ೧೨ ನಿಮಿಷಗಳ ಕಾಲ ಮಾತನಾಡಿದರು.

ಶ್ರೀ ಬಿ. ಪಿ. ಅಟ್ಟೂರು.— ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗೆ ಬೋರ್ಡ್ ಬಗ್ಗೆ ಮುಖ್ಯ ಮಂತ್ರಿಗಳು ಹೇಳಲಿಲ್ಲ. ಎರಡನೆಯದಾಗಿ ಕೃಷ್ಣ ಜಲಾನಯನ ಪ್ರದೇಶದಲ್ಲಿರತಕ್ಕ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣ ಬಿಡುಗಡೆ ಮಾಡುವ ಬಗ್ಗೆ ತಿಳಿಸಬೇಕು. ಮೂರನೆಯದಾಗಿ ಬೀದರ್ ಜಿಲ್ಲೆಯಲ್ಲಿ ೩೨ ಸಾವಿರ ಬಾವಿಗಳಿವೆ, ಅಲ್ಲಿನ ರೈತರಿಗೆ ವಿದ್ಯುತ್ತಿನ ಅಭಾವ ಹೆಚ್ಚಾಗುತ್ತಿದೆ. ಅದರ ಬಗ್ಗೆ ಸರ್ಕಾರದ ನಿಲುವನ್ನು ಸ್ಪಷ್ಟವಾಗಿ ಸದನಕ್ಕೆ ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್.— ಮುಖ್ಯ ಮಂತ್ರಿಗಳು ಮಾತನಾಡುವಾಗ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಬಗ್ಗೆ ಮಾತನಾಡಿದ್ದಾರೆ, ಸಂತೋಷ. ಕರ್ನಾಟಕ ಏಕೀಕರಣವಾಗದೆ ಇದ್ದರೆ ಕರ್ನಾಟಕದ ಅಭಿವೃದ್ಧಿಗೆ ಧಕ್ಕೆ ಬಂದಿತು ಎಂದು ಕರ್ನಾಟಕದ ಏಕೀಕರಣಕ್ಕೋಸ್ಕರ ನಾಡಿನಲ್ಲಿ ಸಮಗ್ರ ಹೋರಾಟದಲ್ಲಿ ಅವರೂ ಸೇರಿದ್ದಾರೆ. ಅದು ಬೇರೆ ಭಾಗವಾಗಿ ಹೋದೀತು ಎಂಬ ಮಾತನ್ನು ಎಷ್ಟೋ ಸಂದರ್ಭಗಳಲ್ಲಿ ಹೇಳುತ್ತಿದ್ದರು. ಆ ಮಾತನ್ನು ತಾವು ಹೇಳಬೇಡಿ ಅನ್ನುತ್ತಿದ್ದೆವು. ಕರ್ನಾಟಕವನ್ನು ಬೇರೆ ಮಾಡತಕ್ಕ ಪ್ರಶ್ನೆಗೆ ಅವಕಾಶವಾದೀತು ಎಂಬ ಎಚ್ಚರಿಕೆ ಮುಖ್ಯ ಮಂತ್ರಿಗಳಿಂದ ಬರಬಾರದು. ಅಭಿವೃದ್ಧಿ ಬಗ್ಗೆ ಏನೇ ವಾದ ವಿವಾದ ಇರಲಿ. ಆದರೆ ಕರ್ನಾಟಕ ಮಾತ್ರ ಬೇರೆ ಆದೀತು ಎಂಬ ದೊಡ್ಡ, ಕೆಟ್ಟ ಶಬ್ದ, ಅಪಶಬ್ದ ಎಂದೂ ಜವಾಬ್ದಾರಿ ಸ್ಥಾನದಲ್ಲಿರತಕ್ಕ ಮುಖ್ಯ ಮಂತ್ರಿಗಳ ಬಾಯಿಂದ ಬರಬಾರದೆಂದು ತಮ್ಮ ಮೂಲಕ ಅವರಿಗೆ ಹೇಳುತ್ತಿದ್ದೇನೆ. ಅತ್ಯಂತ ನೋವಿನಿಂದ ಇದನ್ನು ಹೇಳುತ್ತಿದ್ದೇನೆ. ಅದರ ಬಗ್ಗೆ ನನಗೆ ಬಹಳ ಗೌರವ ಇದೆ. ಕೆಲವು ವಿಚಾರಗಳನ್ನು ಬಹಳ ದಿಟ್ಟತನದಿಂದ ಅವರು ಹೇಳಿದರು. ಅಧಿಕಾರಿಗಳ ಬಗ್ಗೆ ಹೇಳಿದರು. ಅಧಿಕಾರಿಶಾಹಿ ನಡವಳಿಕೆ ಯಾವ ರೀತಿ ನಡೆದಿದೆ ಎಂದು ಅವರಿಗೆ ಅರ್ಥವಾಗಿದೆ. ಅದರ ಬಗ್ಗೆ ನನ್ನ ತಕರಾರಿಲ್ಲ. ಆದರೆ ಈ ಪ್ರಶ್ನೆ ಬಂದಾಗ ನೋವಾಗಿದೆ. ಗಡಿ ಪ್ರದೇಶಗಳ ಬಗ್ಗೆ ವಿಚಾರ ಮಾಡಿ ತೀರ್ಮಾನ ತೆಗೆದುಕೊಂಡಿದ್ದಾರೆ. ಅದು ಸ್ವಾಗತಾರ್ಹವಾದುದು. ಮತ್ತೊಂದು ಅತಿ ಮುಖ್ಯವಾದ ಸಲಹೆಯನ್ನು ನಾನು ಭಾಷಣ ಮಾಡುವಾಗ ಕೊಟ್ಟೆ. ಇದು ಅವರೂ ಒಪ್ಪಿರತಕ್ಕದ್ದು, ಈ ಕಡೆ ಪಕ್ಷದವರೂ ಒಪ್ಪಿರತಕ್ಕದ್ದು. ಅದೇನೆಂದರೆ ನಾಯಕ ಜನಾಂಗವನ್ನು ಪರಿಶಿಷ್ಟ ಜನಾಂಗ ಎಂದು ಮಾಡತಕ್ಕದ್ದು. ಅದು ಪ್ರಮುಖವಾದ ಪ್ರಶ್ನೆ. ತಮ್ಮ ಗಮನಕ್ಕೂ ಬಂದಿರಬಹುದು. ಚುನಾವಣೆಯಲ್ಲೂ ಈ ವಿಚಾರ ಬಂತು. ಮತ್ತೊಂದು ಸ್ಮಶಾನದ ವಿಚಾರ. ಇದು ಬಹಳ ಸಣ್ಣ ವಿಚಾರ ಇರಬಹುದು. ಆದರೆ ಎರಡು ದಿನ ಹೂಳುವುದಕ್ಕೆ ಸ್ಥಳ ಇಲ್ಲದೆ ಹೆಣ ಇಟ್ಟುಕೊಂಡು ನಂತರ ಎಸ್. ಪಿ. ಬಂದು ತೀರ್ಮಾನ ಮಾಡಿದರು. ಆದ್ದರಿಂದ ಪ್ರತಿಯೊಂದು ಗ್ರಾಮದಲ್ಲೂ ಸ್ಮಶಾನದ ಏರ್ಪಾಡು ಮಾಡಬೇಕು. ೩ ಅಡಿ ೬ ಅಡಿ ಜಾಗ ಕೊಡಿ. ಇದಕ್ಕೇನೂ ಲೆಕ್ಕಚಾರ ಇಲ್ಲ. ಒಂದೊಂದು ಜಾತಿಯವರು ಮೂರು ಅಡಿಯಲೇ ಹುಳುತ್ತಾರೆ, ಇನ್ನೂ ಕೆಲವರು ಆರು ಅಡಿಯಲ್ಲಿ ಹೂಳುತ್ತಾರೆ. ಒಟ್ಟಿನಲ್ಲಿ ೩ ಅಡಿ ೬ ಅಡಿ ಜಾಗ ಕೊಡಬೇಕು. ಈ ವಿಚಾರವನ್ನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿಗೆ ಬಿಡದೆ ಸರ್ಕಾರವೇ ಸಮಗ್ರವಾಗಿ ಎಲ್ಲ ಕಡೆಯಲ್ಲಿ ಸ್ಮಶಾನ ಮಾಡುವ ಏರ್ಪಾಡು ಮಾಡಲಿ. ಮತ್ತೊಂದು ವಿಚಾರ ಮೈಸೂರು ಜಿಲ್ಲೆಯಲ್ಲಿ ಅತೀ ತೊಂದರೆಗೆ ಸಿಕ್ಕಿರತಕ್ಕ ಮೋಲು ಸಕ್ಕರೆ ಶೆಟ್ಟಿ ಜನಾಂಗದ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅವರ ಅಭ್ಯುದಯವನ್ನು ತಾವು ಗಮನಿಸಬೇಕು. ವಿಜಯನಗರದ ಬಗ್ಗೆ ಹಿಂದೆ ಇವರೇ ಮುಖ್ಯ ಮಂತ್ರಿಯಾಗಿದ್ದಾಗ ಪ್ರಧಾನಿ ಇಂದಿರಾಗಾಂಧಿಯವರು ಅಡಿಗಲ್ಲು ಹಾಕಿದರು. ಇವರು ಅಧ್ಯಕ್ಷತೆ ವಹಿಸಿದ್ದರು. ಈಗ ಅಲ್ಲಿ ಉಕ್ಕಿನ ಕಾರ್ಖಾನೆ ಆಗದೆ ಕಾಂಗ್ರೆಸ್ ಹುಲ್ಲು ಬೆಳೆದು ಕಾಂಗ್ರೆಸ್ ಹುಲ್ಲಿನ ಕಾರ್ಖಾನೆಯಾಗಿದೆ. ಅದು ಉಕ್ಕಿನ ಕಾರ್ಖಾನೆ ಆಗುತ್ತದೋ

ಅಥವಾ ಕಾಂಗ್ರೆಸ್ ಹುಲ್ಲಿನ ಕಾರ್ಖಾನೆಯಾಗಂತ್ತದೋ ಗೊತ್ತಿಲ್ಲ. ಉಕ್ಕಿನ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ಆಗದಿದ್ದರೆ ಅದನ್ನೆಲ್ಲಾ ಸೈಟ್ ಮಾಡಿ ಎಲ್ಲರಿಗೂ ಹಂಚಿಬಿಡಿ. ಇನ್ನೊಂದು ಪ್ರಮುಖವಾದ ಪ್ರಶ್ನೆ ಅಂದರೆ ಕನ್ನಡಿಗರ ಉದ್ಯೋಗದ ಬಗ್ಗೆ. ಸರೋಜಿನಿ ಮಹಿಷಿ ಸಮಿತಿಯನ್ನು ಹಿಂದಿನ ಸರ್ಕಾರ ರಚನೆ ಮಾಡಿ ಆ ಸಮಿತಿ ವರದಿಯನ್ನು ಸಹ ಕೊಟ್ಟಿದೆ. ಆ ವರದಿ ಚೆನ್ನಾಗಿದೆ. ಅದು ಒಪ್ಪತಕ್ಕ ವರದಿ. ಆ ವರದಿಯನ್ನು ಈ ಸರ್ಕಾರದವರು ಜಾರಿಗೊಳಿಸುತ್ತಾರೆಯೋ ಹೇಗೆ ? ನನಗೆ ಹೇಳಲು ಇನ್ನೂ ಅನೇಕ ವಿಷಯಗಳಿದ್ದವು. ಆದರೆ ಕಾಲಾವಕಾಶ ಇಲ್ಲದೇ ಇರುವುದರಿಂದ ಇಷ್ಟಕ್ಕೇ ನಿಲ್ಲಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಿದಾಗ ಮೆಲ್ಮಟ್ಟದ ಸಿಬ್ಬಂದಿ ಸಂಖ್ಯೆ ಕಳೆದ ಏಳೆಂಟು ವರ್ಷಗಳಲ್ಲಿ ಬಹಳ ಜಾಸ್ತಿಯಾಗಿದೆ ಎಂದು ಹೇಳಿದರು. ಚೀಫ್ ಇಂಜಿನಿಯರ್‌ಗಳ ಸಂಖ್ಯೆ ೮ ರಿಂದ ೩೪ಕ್ಕೆ ಏರಿದೆ ಎಂದು ಹೇಳಿದ್ದಾರೆ. ಇದಕ್ಕೆ ಕಾರಣ ಇಲಾಖೆಯನ್ನು ಎರಡು ಭಾಗ ಮಾಡಿ ನೀರಾವರಿ ಇಲಾಖೆ ಮತ್ತು ರಸ್ತೆ ಮತ್ತು ಕಟ್ಟಡಗಳ ಇಲಾಖೆ ಎಂದು ಪ್ರತ್ಯೇಕ ಮಾಡಿರುವುದರಿಂದ ಜಾಸ್ತಿ ಆಗಿರಬಹುದೆಂದು ನನ್ನ ಅನುಮಾನ. ಆ ವಿಷಯದಲ್ಲಿ ಆಲೋಚನೆ ಮಾಡಿ ಮತ್ತೆ ಎರಡೂ ಇಲಾಖೆಯನ್ನು ಒಂದುಗೂಡಿಸಿ ಸಿಬ್ಬಂದಿ ಸಂಖ್ಯೆ ಕಡಿಮೆಮಾಡ ುವುದಕ್ಕೆ ಸಾಧ್ಯವೇ ಎಂಬುದನ್ನು ಆಲೋಚನೆ ಮಾಡಬೇಕು

ಶ್ರೀ ಕೌಜಲಗಿ ಶಿವಾನಂದ ಹೇಮಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಕಡೆ ವ್ಯವಸಾಯಕ್ಕೆ ಇವತ್ತು ನೀರು ಕೊಡದೇ ಇದ್ದರೂ ಟ್ಯಾಕ್ಸ್ ವಸೂಲು ಮಾಡುತ್ತಿದ್ದಾರೆ. ಹಿಂದಿನ ಸರ್ಕಾರ ಇದನ್ನು ಸ್ಟೇ ಮಾಡಿದ್ದು ಈಗ ಮತ್ತೆ ಅದನ್ನು ವಸೂಲು ಮಾಡುತ್ತಿದ್ದು ಈ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಹೇಳುತ್ತೇನೆ. ಮತ್ತೆ ಮಲಪ್ರಭಾ ಯೋಜನೆಯ ಅಡಿಯಲ್ಲಿ ಮುಳುಗಡೆಯಾದವರಿಗೆ ಪುನರ್‌ನಿವೇಶನ ಕೊಟ್ಟಿದ್ದರೂ ಅಲ್ಲಿ ಸರಿಯಾದ ಶಾಲೆಯು, ದವಾಖಾನೆಯು, ರಸ್ತೆಯು ವ್ಯವಸ್ಥೆ ಇಲ್ಲ. ಇದನ್ನು ಸರಿ ಮಾಡಬೇಕು, ಇವತ್ತು ಹತ್ತಿಯ ಬೆಲೆ ಕುಸಿದಿದ್ದು, ತಾವು ನಾಳೆ ದೆಹಲಿಗೆ ಹೋಗುತ್ತಿರುವುದರಿಂದ ಸಿಸಿಐ ಅವರ ಜೊತೆ ಮಾತನಾಡಿ ಹತ್ತಿಗೆ ಹೆಚ್ಚು ಬೆಲೆ ಸಿಗುವ ಹಾಗೆ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಎಪಿಎಂಸಿ ಸೆಸ್ ೭ ದಿನದಲ್ಲಿ ತುಂಬಬೇಕೆಂದು ನಿಯಮ ಇದೆ. ಹಾಗೆ ಮಾಡದಿದ್ದರೆ. ೧೩-೧೪ ಪರ್ಸೆಂಟ್ ಇಂಟರೆಸ್ಟ್ ಹಾಕುತ್ತಾರೆ. ಆದ್ದರಿಂದ ಈ ಕಾಲ ನಿಗದಿಯನ್ನು ೧ ತಿಂಗಳವರೆಗೆ ಮುಂದುವರಿಸಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ಈಗ ದೇಶದ ಕೆಲವು ಕಡೆಗಳಲ್ಲಿ ಮೀಸಲಾತಿ ವಿರುದ್ಧ ಚಳುವಳಿ ನಡೆಯುತ್ತಿದೆ. ಮೀಸಲಾತಿ ಬಗ್ಗೆ ಕೇಂದ್ರ ಸರ್ಕಾರದ ಸ್ಪಷ್ಟ ನೀತಿ ಏನೆಂದು ಇವತ್ತು ಗೊತ್ತಾಗುತ್ತಿಲ್ಲ ಒಬ್ಬೊಬ್ಬರು ಒಂದೊಂದು ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ ಇವತ್ತು ಮೀಸಲಾತಿ ಬಗ್ಗೆ ನಾವು ಸ್ಪಷ್ಟ ನೀತಿಯನ್ನು ಹಾಕಿಕೊಳ್ಳಬೇಕಾಗುತ್ತದೆ. ಮೀಸಲಾತಿ ಚಳುವಳಿ ವಿರುದ್ಧ ಸರ್ಕಾರವಾಗಲೀ, ಸಚಿವರಾಗಲೀ ಒಂದು ಸ್ಪಷ್ಟ ನೀತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಹಿಂದೆ ಕರ್ನಾಟಕದಲ್ಲಿ ರೋಸ್ಟರ್ ಸಿಸ್ಟಮ್‌ನಲ್ಲಿ ಯಾವ ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಎಸ್‌ಸಿ, ಎಸ್‌ಟಿಯವರಿಗೆ ಮೀಸಲು ಇಟ್ಟ ಹುದ್ದೆಗಳು ಭರ್ತಿಯಾಗಿಲ್ಲ, ಅಲ್ಲಿ ರೋಸ್ಟರ್ ಪ್ರಕಾರ ಎಷ್ಟು ಪ್ರಮಾಣದಲ್ಲಿ ಮೀಸಲಾತಿ ಸಿಗಬೇಕೋ ಆ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಹಿಂದಿನ ಸರ್ಕಾರದಿಂದ ಏನು ಹರಿಜನ ಗಿರಿಜನ ಹಾಗೂ ದುರ್ಬಲ ವರ್ಗದವರಿಗೆ ಸಹಾಯ ಸಿಕ್ಕಿಲ್ಲವೋ ಅದನ್ನು ಗುರುತಿಸಿ, ಅದನ್ನು ಸರಿ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ.—ಇವತ್ತು ಕೋಲಾರ ಜಿಲ್ಲೆಯಲ್ಲಿನ ಕೆಲವು ಭಾಗಗಳಲ್ಲಿ ಆಲೂಗಡ್ಡೆಗೆ ಚುಕ್ಕೆರೋಗ ಬಂದಿದ್ದು ಸುಮಾರು ೫ ರಿಂದ ೬ ಕೋಟಿ ರೂಪಾಯಿಗಳಷ್ಟು ನಷ್ಟ ಆಗಿದೆ. ಈ ರೀತಿ ನಷ್ಟ ಆಗಿರತಕ್ಕ ರೈತರಿಗೆ ಪರಿಹಾರ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ (ನಾಗಮಾರಪಲ್ಲಿ).—ಮಾನ್ಯ ಮುಖ್ಯಮಂತ್ರಿಗಳು ಹೈದರಾಬಾದ್ ಕರ್ನಾಟಕದ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಮತ್ತೆ ಹಿಂದಿನ ಸರ್ಕಾರ ಜಾರಿಗೊಳಿಸಿದ ಯಾವ ಕಾರ್ಯಕ್ರಮಗಳನ್ನೂ ತೆಗೆದು ಹಾಕುವುದಿಲ್ಲ, ಅವನ್ನು ಜಾರಿಗೊಳಿಸುತ್ತೇನೆಂದು ಹೇಳಿದ್ದಾರೆ. ಇವತ್ತು ಹಸಿರು ಕಾರ್ಡನ್ನು ಎಲ್ಲರಿಗೂ ಕೊಟ್ಟಿಲ್ಲ. ಅದನ್ನು ಎಲ್ಲರಿಗೂ ಕೊಡುವ ವ್ಯವಸ್ಥೆ ಆಗಬೇಕು. ಔರಾದ್ ತಾಲ್ಲೂಕಿನ ಕೆ.ಇ.ಬಿ.ಯಲ್ಲಿ ನೌಕರರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅಲ್ಲಿ ಮಳೆ ಬಂದು ಪಂಪುಸೆಟ್ಟುಗಳೆಲ್ಲಾ ಹಾಳಾಗಿವೆ. ಹಾಗೂ ಕಂಬಗಳು ಮುರಿದು ಬಿದ್ದಿವೆ. ಕೆಲವು ಕಡೆ ಮರದ ಕಂಬಗಳು ಇದ್ದು ಅವು ಕೆಳಕ್ಕೆ ಒರಗಿ ಕಲ್ಲಿನ ಸಪೋರ್ಟ್‌ನಿಂದ ನೆಪ ಮಾತ್ರಕ್ಕೆ ನಿಂತಿವೆ. ಇವತ್ತು ಈ ಬಗ್ಗೆ ಸರ್ಕಾರ ಗಮನಹರಿಸಿ ಕಟ್ಟಿಗೆ ಕಂಬಗಳನ್ನು ನಿಲ್ಲಿಸಿ ವೈರ್ ಸರಿ ಮಾಡಬೇಕಾಗಿದೆ. ಮಾನ್ಯ

ಮುಖ್ಯಮಂತ್ರಿಗಳು ಕಾವೇರಿ ಮತ್ತು ಯುಕೆಪಿ ಬಗ್ಗೆ ಹೇಳಿದ್ದಾರೆ. ಗೋದಾವರಿ ಬೇಸಿನ್‌ನಲ್ಲಿ ೧೭ ಟಿಎಂಸಿ ಅಡಿ ನೀರು ಸರಬರಾಜು ಆಗುತ್ತಿದ್ದು ೧೩ ಟಿಎಂಸಿ ಕಾರಂಜಕ್ಕೆ ಹೋಗುತ್ತಿದ್ದು ಮಿಕ್ಕ ೪ ಟಿಎಂಸಿ ಅಡಿ ನೀರು ಹಾಗೇ ಇದೆ. ಮಾಂಜರಿ ಯೋಜನೆ ಬಗ್ಗೆ ಈ ೪ ಟಿಎಂಸಿ ಅಡಿ ನೀರನ್ನು ಕೇಳಿದ್ದೇವೆ. ಇದರ ಬಗ್ಗೆ ಯೋಜನೆ ಹಾಕಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಚರ್ಚೆಗೆ ನಾನು ಉತ್ತರ ನೀಡಿದ ಮೇಲೆ ಅನೇಕ ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೇಳುತ್ತಾ ಆಡಳಿತ ಸುಧಾರಣೆಗೆ ಸಂಪೂರ್ಣ ಸಹಕಾರ ನೀಡುತ್ತೇವೆಂದು ಹೇಳಿದ್ದಾರೆ. ಅವರುಗಳಿಗೆಲ್ಲ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಭಾರತೀಯ ಜನತಾಪಾರ್ಟಿ ಅಧ್ಯಕ್ಷರಾದ ಮಾನ್ಯ ಯಡಿಯೂರಪ್ಪನವರು ಹಾಗೂ ಉಳಿದ ಮಾನ್ಯ ಸದಸ್ಯರು ಕೂಡ ಅರಣ್ಯ ಭೂಮಿಯನ್ನು ಅಕ್ರಮವಾಗಿ ಬಡವರು ಸಾಗುವಳಿ ಮಾಡುತ್ತಿರುವ ಬಗ್ಗೆ ಕೇಳಿದ್ದಾರೆ. ಈಗಾಗಲೇ ಹಿಂದಿನ ಸರ್ಕಾರ ಈ ಬಗ್ಗೆ ವಿಚಾರ ಮಾಡಿ ಕ್ರಮ ತೆಗೆದುಕೊಂಡಿದೆ ಎಂದು ನನಗನಿಸುತ್ತದೆ. ಈ ಬಗ್ಗೆ ಡಿಸ್ಟ್ರಿಕ್ಟ್ ಆಫೀಸರ್‌ಗಳ ಒಂದು ಕಮಿಟಿ ಮಾಡಿ ಇನ್ನು ಮುಂದೆ ಯಾವರೀತಿ ಕ್ರಮ ತೆಗೆದುಕೊಳ್ಳ ಬೇಕೆಂಬುದನ್ನು ವಿಚಾರ ಮಾಡಲಾಗುತ್ತದೆ. ಅಂತಿಮವಾಗಿ ಆ ಭೂಮಿಗೆ ಪಟ್ಟಾಕೊಡಬೇಕಾದರೆ ಕೇಂದ್ರ ಸರ್ಕಾರದ ಮನ್ನಣೆ ತೆಗೆದುಕೊಳ್ಳಬೇಕಾಗುತ್ತದೆ. ನಮಗೆ ಅಧಿಕಾರವಿದ್ದರೆ ಕೇಂದ್ರಕ್ಕೆ ಹೋಗಬೇಕಾಗಿಲ್ಲ. ಫಾರೆಸ್ಟ್ ಲ್ಯಾಂಡ್‌ಯೆಂದು ಒಂದು ಸಾರಿ ರೆಕಾರ್ಡ್‌ನಲ್ಲಿ ಬಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಅದು ಕೇಂದ್ರ ಸರ್ಕಾರಕ್ಕೆ ಹೋಗಬೇಕಾಗುತ್ತದೆ. ಅದು ಯಾವ ರೀತಿ ಹೋಗಬೇಕೆಂಬುದನ್ನು ಪರಿಶೀಲಿಸುತ್ತೇನೆ, ಮತ್ತೆ ಹೆಚ್ಚುವರಿಯಾಗಿ ಇರತಕ್ಕ ನೌಕರರನ್ನು ಯಾವಾಗ ಕಡಿಮೆ ಮಾಡುತ್ತೀರಿ ಎಂದು ಕೇಳಿದರು, ನಾನು ಉತ್ತರದಲ್ಲಿ ಹೇಳಿದ್ದೇನೆ. ಇವರನ್ನು ಒಂದೇ ವರ್ಷದಲ್ಲಿ ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ. ಬಹಳಷ್ಟು ಹುದ್ದೆಗಳನ್ನು ಕ್ರಿಯೇಟ್ ಮಾಡ ಬಹುದು, ಆದರೆ ಅದನ್ನು ಅಬಾಲಿಷ್ ಮಾಡುವುದಕ್ಕಾಗುವುದಿಲ್ಲ. ಒಂದೆರಡು ಇದ್ದರೆ ಮಾಡ ಬಹುದು. ಎಲ್ಲವನ್ನು ಮಾಡುವುದಕಾಗುವುದಿಲ್ಲ. ಎಷ್ಟರ ಮಟ್ಟಿಗೆ ಎಕಾನಮಿಕ್ ಆಗಿ ಕಡಿಮೆ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ನೋಡಿಕೊಂಡು ಹಂತ ಹಂತವಾಗಿ ಇದನ್ನು ಮಾಡಬಹುದು. ಒಂದೇ ವರ್ಷದಲ್ಲಿ ಮಾಡುವುದಕ್ಕಾಗುವುದಿಲ್ಲ. ಅವರನ್ನು ಪೂರ್ತಿ ಡೀಮಾರಲೈಸ್ ಮಾಡುವುದಕ್ಕಾಗುವುದಿಲ್ಲ. ನಮ್ಮಲ್ಲಿ ಅನೇಕ ಪ್ರಾಮಾಣಿಕರು ದಕ್ಷರು ಆಗಿರತಕ್ಕ ನಮ್ಮ ಅಧಿಕಾರಿ ಗಳಿದ್ದಾರೆ. ಅದರ ಬಗ್ಗೆ ನಾವು ಸಂಶಯಪಡಬೇಕಾಗಿಲ್ಲ, ಇದಕ್ಕೆ ಅವರೆಲ್ಲರ ಸಹಕಾರ ಸಿಗುತ್ತದೆ ಎನ್ನುವ ಭರವಸೆಯನ್ನು ನಾನು ಇಟ್ಟುಕೊಂಡಿದ್ದೇನೆ. ಮಾನ್ಯ ಬೈರೇಗೌಡರು ನೀರಾವರಿಗೆ ಎಷ್ಟು ಹಣ ಬೇಕಾಗುತ್ತದೆಂದು ಕೇಳಿದರು. ನೀರಾವರಿಗೆ ಬಹಳ ಹಣ ಬೇಕು. ಕಾವೇರಿ ಬೇಸಿನ್‌ನಲ್ಲಿ ಕೃಷ್ಣಾ ಬೇಸಿನ್‌ನಲ್ಲಿ ಯೋಜನೆಗಳು ಈಗ ಏನು ಪ್ರಾರಂಭವಾಗಿವೆ, ಅವುಗಳನ್ನು ಮುಗಿಸಬೇಕಾದರೆ ೨೦೦೦ದ ಇಸವಿಯ ಹೊತ್ತಿಗೆ ೨ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವತ್ತು ಮಾನ್ಯ ಹಣಕಾಸಿನ ಸಚಿವರು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸ್ಪಷ್ಟವಾಗಿ ತಮ್ಮ ಮುಂದಿಟ್ಟಿದ್ದಾರೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಹಳ ದುರಾವಸ್ಥೆಯಲ್ಲಿದೆ. ನಾನು ಇಲ್ಲಿ ಕುಳಿತಾಗ ಮಾನ್ಯ ಸದಸ್ಯರು ಆ ಕೆಲಸ ಆಗಬೇಕು ಈ ಕೆಲಸ ಆಗಬೇಕೆಂದು ಮನವಿಯನ್ನು ಕೊಡುತ್ತಾರೆ. ಇದಕ್ಕೆಲ್ಲ ದುಡ್ಡು ಎಲ್ಲಿದೆ ? ಅದಕ್ಕಾಗಿ ನಾನು ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ. ನಮ್ಮಲ್ಲಿ ಬಹಳ ಕೆಲಸ ಕಾರ್ಯಗಳು ಆಗಬೇಕಾಗಿದೆ. ಯೋಜನೆಯ ಕೆಲಸ ಕಾರ್ಯಗಳು ಏನಿವೆ, ಅವುಗಳು ಸಹ ಆಗಬೇಕು. ಅವರಲ್ಲೂ ಹೆಚ್ಚಿನ ಆದ್ಯತೆಯನ್ನು ನೀರಾವರಿ ಮತ್ತು ಪವರ್ ಪ್ರಾಜೆಕ್ಟ್‌ಗಳಿಗೆ ಕೊಟ್ಟು ನಾವು ಕೆಲಸ ಮಾಡಬೇಕು. ನಮ್ಮಲ್ಲಿ ದುಡ್ಡು ಇಲ್ಲ. ಬಹುಶ: ಯಾವ ರೀತಿ ಹಣವನ್ನು ಒದಗಿಸಿಕೊಳ್ಳುವುದಕ್ಕೆ ಸಾಧ್ಯ ಎಂಬುದರ ಕುರಿತು ಚಿಂತನೆಗೆ ಒಳಗಾಗಿದ್ದೇವೆ. ಇಂತಹ ಕನಿಷ್ಟ ಹಣಕಾಸಿನ ಪರಿಸ್ಥಿತಿಯನ್ನು ಕರ್ನಾಟಕ ಸರ್ಕಾರ ಎದುರಿಸುತ್ತಿದೆ. ಅದು ಏನೇ ಇರಲಿ ಆ ಬಗ್ಗೆ ಯಾವ ರೀತಿ ಮಾಡಬೇಕೋ ಅದನ್ನು ಮಾಡುತ್ತೇವೆ. ಹೆಚ್ಚಾಗಿರುವ ನೌಕರರನ್ನು ತೆಗೆಯಲಿಕ್ಕೆ ಒಂದೊಂದು ಸಲ ಸಂವಿಧಾನ ಅಡ್ಡ ಬರುತ್ತದೆ. ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ರಿಕ್ರೂಟ್‌ಮೆಂಟ್ ಕಮಿಟಿಯು ಮುಖಾಂತರ ಅರ್ಜಿಗಳನ್ನು ಕರೆದು-ಖಾಲಿಯಿರುವ ಹುದ್ದೆಗಳನ್ನು ತುಂಬಬೇಕು. ಕೆಲವೊಂದು ರಿಸ್ಟ್ರಿಕ್ಷನ್ಸ್ ಹಾಕಿ ಸ್ಥಾನಿಕರಿಗೇ ನೌಕರಿ ಸಿಗುವ ಹಾಗೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಅದಕ್ಕೆ ತಮ್ಮೆಲ್ಲರ ಮಾರ್ಗದರ್ಶನ ಬೇಕು ಒಮ್ಮೆ ಇದನ್ನು ಮಾಡುವುದಕ್ಕಾಗುವುದಿಲ್ಲ. ಹುಬ್ಬಳ್ಳಿ ಧಾರವಾಡದ ವಾಟರ್ ಸಪ್ಲೈ ಬಗ್ಗೆ ಹೇಳಿದ್ದಾರೆ. ಇನ್ನೂ ಹೆಚ್ಚು ನೀರಿನ ಅನುಕೂಲ ಮಾಡಿಕೊಡುವ ಬಗ್ಗೆ ಒಂದು ಯೋಜನೆ ತಯಾರಾಗಿದೆಯೆಂದು ಕೇಳಿದ್ದೇನೆ. ಅದರ ಬಗ್ಗೆ ಸವಿಸ್ತಾರವಾಗಿ ಗೊತ್ತಿಲ್ಲ, ಈ ಯೋಜನೆ ಕಾರ್ಯ ಗತವಾದರೆ ಹುಬ್ಬಳ್ಳಿ-ಧಾರವಾಡದ ಜನರಿಗೆ ಇನ್ನು ಮುಂದೆ ನೀರಿನ ತೊಂದರೆ ಸರಿಹೋಗಬಹುದೆಂದು

ನನಗೆನಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಭೂಮಿಯ ಬಗ್ಗೆ ಮಾನ್ಯ ಯಡಿಯೂರಪ್ಪನವರು ಹೇಳಿದರು, ಅದು ನನಗೆ ಗೊತ್ತಿಲ್ಲ.

ಏಕೆಂದರೆ ಈಗ ಸುಮಾರು ೧೭ ದಿವಸಗಳಿಂದ ನಾವು ಅಧಿಕಾರದಲ್ಲಿದ್ದೇವೆ. ಎಲ್ಲಾ ವಿಚಾರವನ್ನು ತಿಳಿದುಕೊಳ್ಳದೆ ಹೇಳುವುದು ತಪ್ಪಾಗುತ್ತದೆಯೆಂದು ನನಗನ್ನಿಸುತ್ತದೆ. ಅದೇ ರೀತಿ ನಿರುದ್ಯೋಗದ ಬಗ್ಗೆ...

ಶ್ರೀ ವಿನಯಕುಮಾರ್ ಸೊರಕೆ.—ಕೇರಳ ರಾಜ್ಯ ಪುನರ್ ವಿಂಗಡಣೆಯಾದಾಗ ಮಲಬಾರ್ ಜಿಲ್ಲೆಯಲ್ಲಿ ಕುಮ್ಕಿ ಹಕ್ಕು ಎಂಬುದು ಸಿಕ್ಕಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕುಮ್ಕಿ ಹಕ್ಕು ರೈತರಿಗೆ ಸಿಕ್ಕಿಲ್ಲ. ಈ ಹಕ್ಕು ರೈತರಿಗೆ ತುಂಬಾ ಅವಶ್ಯಕವಾಗಿದೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಮಾಡುವಾಗ ಅರಣ್ಯಭೂಮಿ ಸಿಗುತ್ತದೆ. ಈ ಭೂಮಿ ಸಿಕ್ಕಿದ ಸಂದರ್ಭದಲ್ಲಿ ಅರಣ್ಯಾಧಿಕಾರಿಗಳು ರಸ್ತೆ ಮಾರ್ಗ ಮಾಡುವುದಕ್ಕೆ ತಡೆಯೊಡ್ಡುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್.—ಸಭಾಧ್ಯಕ್ಷರೇ, ಈ ಪ್ರಶ್ನೆ ಇವತ್ತೇನೂ ಉದ್ಭವವಾಗಿಲ್ಲ. ಅನೇಕ ವರ್ಷಗಳಿಂದ ಈ ಪ್ರಶ್ನೆ ಇಡುವ ಹಾಗೆ ಕಾಣುತ್ತದೆ. ಹಿಂದಿನ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿದುಕೊಂಡು, ಮುಂದೆ ಏನು ಮಾಡಬಹುದು ಎಂದು ವಿಚಾರ ಮಾಡಬಹುದು. ಈ ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲಾರದೆ ಇದಕ್ಕೆ ಪರಿಹಾರ ಕಂಡು ಹಿಡಿಯುತ್ತೇವೆ ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟವಾಗುತ್ತದೆ. ಆದಕ್ಕಾಗಿ ನಮಗೆ ಕಾಲಾವಕಾಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎಸ್, ಯಡಿಯೂರಪ್ಪ.—ಕೊನೆಗೆ ಬೋರ್‌ವೆಲ್‌ಗಳಿಗಾದರೂ ಇನ್ನು ಮೂರು ತಿಂಗಳ ಒಳಗೆ ವಿದ್ಯುತ್ ಕೊಡಿ ಎಂದು ಹೇಳುತ್ತಿದ್ದೇನೆ. ಬೋರ್‌ವೆಲ್ ತೆಗೆಸಿದ್ದಕ್ಕೆ ಅವರು ಮಾಡಿರುವ ಸಾಲಕ್ಕೆ ಬಡ್ಡಿ ಕೊಡುತ್ತಿದ್ದಾರೆ. ನಿಮ್ಮ ಒಂದಾದರೂ ಘೋಷಣೆ ಪತ್ರಿಕೆಯಲ್ಲಿ ಬರಲಿ. ರೈತ ಅಷ್ಟಾದರೂ ಸಂತೋಷ ಪಡಲಿ. ನಾವು ಇಷ್ಟೆಲ್ಲಾ ಚೀರಾಡಿ, ಸಭಾತ್ಯಾಗ ಎಲ್ಲ ಮಾಡಿದ್ದಕ್ಕೆ ಆತನಿಗೆ ಅಷ್ಟಾದರೂ ಅನುಕೂಲವಾಗಲಿ.

ಶ್ರೀ ವೀರೇಂದ್ರ ಪಾಟೀಲ್.—ಇವತ್ತು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ ಹೇರಳವಾದ ಕೊರತೆ ಇದೆ. ತಮಗೆ ಸ್ಪಷ್ಟವಾಗಿ ಹೇಳಬೇಕಾಗಿದ್ದರೆ, ಪಂಪುಸೆಟ್ಟುಗಳಿಗೆ ಆದ್ಯತೆ ಕೊಡಬೇಕೆನ್ನುವುದು ಸರ್ಕಾರದ ನೀತಿ. ಎಲ್ಲಾ ಸರ್ಕಾರಗಳು ಕೂಡ ಪಂಪ್‌ಸೆಟ್ಟುಗಳಿಗೆ ಆದ್ಯತೆ ಕೊಡಬೇಕೆಂದು ಇದೆ ಪ್ರತಿ ವರ್ಷವೂ ಇದಕ್ಕಾಗಿ ಒಂದು ಕಾರ್ಯಕ್ರಮ ಹಾಕುತ್ತಿದ್ದೇವೆ, ನಮ್ಮ ಗುರಿ ಮುಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಇವತ್ತು ಪರಿಸ್ಥಿತಿ ಏನಿದೆ ಎಂದರೆ, ಒಂದು ಕಡೆ ಸಾಕಷ್ಟು ವಿದ್ಯುಚ್ಛಕ್ತಿ ನಮ್ಮಲ್ಲಿ ಇಲ್ಲ. ನಾವು ನೆರೆ ರಾಜ್ಯಗಳಿಂದ ವಿದ್ಯುಚ್ಛಕ್ತಿ ಪಡೆದರೂ ಕೂಡ ಆ ವಿದ್ಯುಚ್ಛಕ್ತಿಯನ್ನು ಪಂಪುಸೆಟ್ಟುಗಳಿಗೆ ಒಯ್ದು ಮುಟ್ಟಿಸುವುದಕ್ಕೆ ಬೇಕಾದ ಮೆಟೀರಿಯಲ್ಸ್ ತೆಗೆದುಕೊಳ್ಳುವುದಕ್ಕೆ ಕೂಡ ಸಾಕಷ್ಟು ದುಡ್ಡು ಬೇಕಾಗುತ್ತದೆ. ನಮಗೆ ಈಗ ಬಹಳ ಮಟ್ಟಿಗೆ ದುಡ್ಡಿನ ಕೊರತೆ ಇದೆ. ಅದಕ್ಕಾಗಿ ಸ್ಪಷ್ಟವಾಗಿ ನಿರ್ದಿಷ್ಟವಾಗಿ ಹೇಳಿ ನಂತರ ಏನು ಮಾಡುವುದು ಎಂದು ಹೇಳುವುದಕ್ಕಿಂತ ಅದನ್ನು ವಿಚಾರ ಮಾಡೋಣ ಎಂದು ಹೇಳಿದ್ದೇನೆ. ಇನ್ನು ಕೆಲವು ದಿವಸಗಳಲ್ಲಿ ಬಜೆಟ್ ಅಧಿವೇಶನ ಸೇರುತ್ತದೆ. ಆ ವೇಳೆಗೆ ಅಧಿಕಾರಿಗಳ ಜೊತೆಗೆ ಒಂದೊಂದು ಜಿಲ್ಲೆಯವರೂ ಸೇರಿಕೊಂಡು ಚರ್ಚೆ ಮಾಡಿ ಏನೇನು ಕಾರ್ಯಕ್ರಮ ಕೈಕೊಳ್ಳಬಹುದು. ಎಂದು ತಾವೇ ವಿಚಾರ ಮಾಡಬಹುದು. ಆ ನಂತರವೂ ಕಷ್ಟಗಳು ಇದ್ದರೆ ನಮ್ಮ ಮುಂದೆ ಹೇಳಬಹುದು. ಒಟ್ಟಿನಲ್ಲಿ ಹಣಕಾಸಿನದ್ದೇ ಒಂದು ಕಷ್ಟವನ್ನು ನಾವು ಇವತ್ತು ಮುಖ್ಯವಾಗಿ ಎದುರಿಸುತ್ತಿದ್ದೇವೆ ಎಂದು ಸ್ಪಷ್ಟ ಹೇಳಬೇಕಾಗಿದೆ. ಅದೇ ರೀತಿಯಿಂದ ಇದ್ದ ವಿಚಾರವನ್ನು ಹೇಳಬೇಕಾಗುತ್ತದೆ. ೧೭ ದಿವಸದ ಜೀವ ಈ ಸರ್ಕಾರಕ್ಕೆ ಇರುವುದು. ಈ ೧೭ ದಿವಸಗಳಲ್ಲಿ ನಾವು ಏನು ಕಂಡಿದ್ದೇವೆ ಎಂಬುದನ್ನು ನಿಮ್ಮ ಮುಂದೆ ಹೇಳದೇ ಹೋದರೆ ಅದು ಕರ್ತವ್ಯ ಚ್ಯುತಿ ಆಗುತ್ತದೆ ನಿಜವಾದ ಚಿತ್ರವನ್ನು ನಿಮ್ಮ ಮುಂದೆ ಇಡಬೇಕೆಂಬ ದೃಷ್ಟಿಯಿಂದ ಇಟ್ಟಿದ್ದೇನೆ. ಇದನ್ನು ಯಾವ ರೀತಿ ಸರಿಮಾಡಬೇಕೆಂದು ನಾವು ಕುಳಿತು ವಿಚಾರ ಮಾಡಬೇಕು. ಇದು ಒಂದೇ ದಿವಸಕ್ಕೆ ಸರಿಹೋಗುವುದಿಲ್ಲ. ಎಲ್ಲ ಕೆಲಸವನ್ನು ಒಂದೇ ದಿವಸದಲ್ಲಿ ಮಾಡುತ್ತೇವೆ ಎಂದರೆ ಅದು ಸಾಧ್ಯವೇ ಇಲ್ಲ. ಇವತ್ತಿನ ಹಣಕಾಸಿನ ದುರಾವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲವನ್ನೂ ವಿಚಾರ ಮಾಡಬೇಕಾಗಿದೆ. ಅದೇ ರೀತಿ ಗದಗಿನ ನೀರಿನ ಸಮಸ್ಯೆ ಬಗ್ಗೆ ನನ್ನ ಸ್ನೇಹಿತರಾದ ಶ್ರೀ ಕೆ. ಎಚ್. ಪಾಟೀಲರು ಹೇಳಿದರು. ನನ್ನ ಕಾಲದಲ್ಲಿ ಸ್ಯಾಂಕ್ಷನ್ ಆಗಿದ್ದು ಈಗ ನಡೆಯುತ್ತಿದೆ ಎಂದು ಕೇಳಿದ್ದೇನೆ. ಅದನ್ನು ಆದಷ್ಟು ಜಾಗ್ರತೆ

ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತು ಇದರ ಬಗ್ಗೆ ಸವಿಸ್ತಾರವಾಗಿ ತಿಳಿದುಕೊಂಡು ಅವರಿಗೆ ನಾನು ತಿಳಿಸುತ್ತೇನೆ ಎನ್ನುವ ವಿಚಾರವನ್ನು ಹೇಳುತ್ತೇನೆ.

ಇನ್ನು ಹಿಂದುಳಿದ ವರ್ಗಗಳ ಬಗ್ಗೆ ಒಬ್ಬ ಮಾನ್ಯ ಸದಸ್ಯರು ಕೇಳಿದರು., ನಮ್ಮ ಪಕ್ಷದ ನಿಲುವಿನಂತೆ ಇವತ್ತು ಹಿಂದುಳಿದ ವರ್ಗದವರು, ಹರಿಜನ-ಗಿರಿಜನರು, ಅಲ್ಪಸಂಖ್ಯಾತರು, ದುರ್ಬಲವರ್ಗದವರು ಇದ್ದಾರೆ. ಹಿಂದುಳಿದ ವರ್ಗಗಳ ಬಗ್ಗೆ ಅನುಕಂಪ ಈ ಸರ್ಕಾರಕ್ಕೆ ಇದೆ. ಅವರಿಗೆ ಏನೇನು ಅನುಕೂಲಗಳನ್ನು ಮಾಡಬೇಕಾಗಿದೆಯೋ ಅನುಕೂಲಗಳನ್ನು ಮಾಡಿಕೊಡುತ್ತೇವೆ. ಹಿಂದುಳಿದ ವರ್ಗಗಳ ಬಗ್ಗೆ ಇನ್ನೊಂದು ವಿಚಾರವನ್ನು ಹೇಳಿದರು. ಮಂಡಲ್ ಆಯೋಗದ ಬಗ್ಗೆ ನಮ್ಮ ನಿಲುವು ಏನು ಎಂದು. ನಮ್ಮಲ್ಲಿ ಒಂದು ಆಯೋಗವನ್ನು ರಚನೆ ಮಾಡಿದ್ದೇವೆ, ಅವರು ತಮ್ಮ ವರದಿಯನ್ನು ಇಷ್ಟರಲ್ಲೇ ಸಲ್ಲಿಸಲಿದ್ದಾರೆಂದು ಕೇಳಿದ್ದೇನೆ. ಅವರ ವರದಿ ಬಂದಾಗ ವಿಚಾರ ಮಾಡುತ್ತೇನೆ. ಇವತ್ತು ಬೋಗಸ್ ಬ್ಯಾಕ್‌ವರ್ಡ್ ಕ್ಲಾಸ್ ಹೆಚ್ಚಾಗಿದೆ. ನಿಜವಾದ ಬ್ಯಾಕ್‌ವರ್ಡ್ ಕ್ಲಾಸ್‌ನವರು ಏನಿದ್ದಾರೆ ಅವರಿಗೆ ಅನುಕೂಲವಾಗುವಂಥ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸಹಾನುಭೂತಿಯಿಂದ ವಿಚಾರ ಮಾಡಿ ಹೆಜ್ಜೆ ಇಡುತ್ತೇವೆ ಎಂಬ ಮಾತನ್ನು ಹೇಳುತ್ತೇನೆ. ಔರಾದ್ ತಾಲ್ಲೂಕಿನ ಮಾನ್ಯ ಸದಸ್ಯರು. ಮಂಜರಾ ಇರಿಗೇಷನ್ ಬಗ್ಗೆ ಹೇಳಿದರು, ಇದು ಹಿಂದೆ ನನ್ನ ಕಾಲಕ್ಕೇ ಯೋಜನೆ ತಯಾರು ಮಾಡಿದ್ದು. ಇವತ್ತು ಅದರ ಪರಿಸ್ಥಿತಿ ಏನಾಗಿದೆ ಎಂಬುದು ನನಗೆ ಗೊತ್ತಿಲ್ಲ. ತಿರುಪತಿ ಕ್ಷೌರದಂತೆ, ಸ್ವಲ್ಪ ಸ್ವಲ್ಪ ಮಾಡುವುದು, ಸ್ವಲ್ಪ ಬಿಡುವುದು ಸರಿಯಲ್ಲ. ಮತ್ತು ಅದರಲ್ಲಿ ಯಾವ ಅರ್ಥ ಇಲ್ಲ. ನನ್ನ ಕಾಲಕ್ಕೆ ಪ್ರಾರಂಭ ಮಾಡಿದ ಕಾರಂಜ ಯೋಜನೆ ಇನ್ನೂ ಮುಗಿದಿಲ್ಲ. ಬಹುಶಃ ಇದಕ್ಕಾಗಿ ಇಟ್ಟಿದ್ದ ಅರ್ಧದಷ್ಟು ಹಣವನ್ನೂ ಖರ್ಚು ಮಾಡಿಲ್ಲವೆಂದು ಕೇಳಿದ್ದೇನೆ. ೩ನೇ ತಾರೀಖು ಬೀದರ್‌ಗೆ ಹೋಗುತ್ತೇನೆ. ೪ನೇ ತಾರೀಖು ಕಾರಂಜ ಪ್ರಾಜೆಕ್ಟ್‌ಗೆ ಭೇಟಿ ಕೊಟ್ಟು, ಅಲ್ಲಿ ಅರ್ಧ ಗಂಟೆಯ ಕಾಲ ಇದ್ದು ಅಲ್ಲಿರುವಂಥ ಸಮಸ್ಯೆಗಳನ್ನು ವಿಚಾರ ಮಾಡಿ ಕೆಲಸ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹಾಗೂ ಅಲ್ಲಿಗೆ ಹೆಚ್ಚಿನ ಹಣ ಬೇಕಾಗುತ್ತದೆ ಎಂಬ ಬಗ್ಗೆಯೂ ವಿಚಾರ ಮಾಡಿ, ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ಇದರ ಕೆಲಸ ಮುಗಿದ ನಂತರ ಮುಂದಿನ ಯೋಜನೆಗಳ ಬಗ್ಗೆ ನಾವು ಪರಿಶೀಲನೆ ಮಾಡಬಹುದು. ಶ್ರೀಮಾನ್ ಪಾಟೀಲ್ ನಾಗರಾಜ್ ಅವರು, ನಾನು ಹೇಳಿದ್ದನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ. ಹೈದರಾಬಾದ್ ಕರ್ನಾಟಕವನ್ನು, ರಾಜ್ಯದ ಇನ್ನೊಂದು ರಾಜ್ಯ ಮಾಡಬೇಕೆಂದು ನಾನು ಹೇಳಿಲ್ಲ. ನಾನು ಹೇಳಿದ್ದು ಯಾವ ಭಾಗವೂ ಕರ್ನಾಟಕದಲ್ಲಿ ಹಿಂದುಳಿದ ಪ್ರದೇಶವಾಗಿ ಇರಬಾರದು, ಅದು ಒಳ್ಳೆಯ ಲಕ್ಷಣ ಅಲ್ಲ ಎಂದು ಅದನ್ನು ಈ ಮನೆಯಲ್ಲಿ ಎಲ್ಲರೂ ಒಪ್ಪಿದ್ದಾರೆ. ೧೯೬೨ ರಿಂದ ನಾನು ಈ ವಿಚಾರ ಹೇಳುತ್ತಲೇ ಬಂದಿದ್ದೇನೆ. ಎಲ್ಲಾ ಮಾನ್ಯ ಸದಸ್ಯರು, ವಿರೋಧಪಕ್ಷದವರು, ಇದು ಹಿಂದುಳಿದ ಪ್ರದೇಶ, ಇದರ ಪ್ರಗತಿಯಾಗಬೇಕು, ನಿಜಾಮರು ಕಡೆಗಾಣಿಸಿದಂಥ ಪ್ರದೇಶ, ಅಲ್ಲಿಯೂ ಕನ್ನಡಾಂಬೆಯ ಮಕ್ಕಳು ಇದ್ದಾರೆಂದು ಮಾತನಾಡಿದ್ದಾರೆ. ಮನೆಯಲ್ಲಿ ಒಂದು ಮಗು ಸಶಕ್ತವಾಗಿದ್ದರೆ ಅದರ ಬಗ್ಗೆ ಯಾರೂ ಗಮನ ಕೊಡುವುದಿಲ್ಲ, ಆದರೆ ಒಂದು ಮಗು ಖಾಯಿಲೆ ಇದ್ದರೆ ಅದಕ್ಕೆ ಔಷಧಿ ಕೊಡುವುದಕ್ಕೆ ಎಲ್ಲರೂ ವಿಚಾರ ಮಾಡುತ್ತಾರೆ, ವಿಟಮಿನ್ ಕೊಡುವುದಕ್ಕೆ ವಿಚಾರ ಮಾಡುತ್ತಾರೆ. ಇಂತಹ ಖಾಯಿಲೆ ಪ್ರದೇಶ ಈ ಹೈದರಾಬಾದ್ ಕರ್ನಾಟಕ ಪ್ರದೇಶ, ಅಲ್ಲಿ ೪೫ ಲಕ್ಷ ಜನರಿದ್ದಾರೆ. ಅವರ ಖಾಯಿಲೆ ಹೋಗಬೇಕು, ಅನೇಕ ವರ್ಷಗಳಿಂದ ಏನು ನಿಶ್ಶಕ್ತತೆ ಇದೆ ಅದು ಹೋಗಬೇಕು, ಇದಕ್ಕೆ ವಿಟಮಿನ್ ''ಎ'' ಹೆಚ್ಚಿನ ಪ್ರಮಾಣದಲ್ಲಿ ಬೇಕಾಗಿದೆ. ಈ ದೃಷ್ಟಿಯಿಂದ ನಾನು ಹೇಳಿದ್ದೇನೆಯೇ ಹೊರತು ಆ ಭಾಗವನ್ನು ಎರಡನೇ ರಾಜ್ಯ ಮಾಡಬೇಕೆಂದು ನಾನು ಹೇಳಿಲ್ಲ. ಆದ್ದರಿಂದ ಇದನ್ನು ಈ ರೀತಿ ವಿಚಾರ ಮಾಡುವುದು ತಪ್ಪು. ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದವರು, ಹಿರಿಯರು ಆ ಭಾಗದಲ್ಲಿದ್ದಾರೆ. ಆದ್ದರಿಂದ ನಾವು ಕರ್ನಾಟಕವನ್ನು ಇಬ್ಭಾಗ ಮಾಡುವುದು ಬೇಡ, ಅಂತಹ ಪಾಪದ ಕೆಲಸಕ್ಕೆ ಯಾರೂ ಕೈ ಹಾಕುವುದು ಬೇಡವೆಂದು ಸ್ಪಷ್ಟವಾಗಿ ಹೇಳಿದ್ದೇನೆ. ಇನ್ನು ಮಾನ್ಯ ಪಾಟೀಲ್ ನಾಗರಾಜ್ ಅವರಿಗೆ ಸ್ಪಷ್ಟವಾಗಿ ಹೇಳುತ್ತೇನೆ. ನಾಯಕ ಜನಾಂಗವನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಹಾಕುವುದರ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. ನಾಯಕರಿಗೆ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಹಾಕುವುದಕ್ಕೆ ನಾವು ಎಷ್ಟು ಪ್ರಯತ್ನ ಮಾಡಿದ್ದೇವೆ, ಆ ಪ್ರಯತ್ನವನ್ನು ಯಾರೂ ಮಾಡಿಲ್ಲವೆಂದು ಘಂಟಾ ಘೋಷವಾಗಿ ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ, ನಾನು ಮಂತ್ರಿಯಾಗಿ ಪಾರ್ಲಿಮೆಂಟ್ ಸದಸ್ಯನಾಗಿ ಪ್ರಯತ್ನ ಪಟ್ಟಿದ್ದೇನೆ. ಕೊನೆಯ ಹಂತದಲ್ಲಿ ಇನ್ನೇನು ಆರ್ಡರ್ ಹೊರಡಿಸಬೇಕು. ಎನ್ನುವಾಗ ಚುನಾವಣೆಗಳು ಬಂದವು. ಈ ಬಗ್ಗೆ ಇವತ್ತು ಕರ್ನಾಟಕದ ಮುಖ್ಯಮಂತ್ರಿಯಾಗಿ ಆಗ ಪಾರ್ಲಿಮೆಂಟ್ ಸದಸ್ಯನಾಗಿ ಏನು ಮಾಡಿದ್ದೇನೆ, ಅದನ್ನು ಮುಂದುವರಿಸಿ

ಕೊಂಡು ಹೋಗುತ್ತೇನೆ ಮತ್ತು ಅವಶ್ಯ ಬಿದ್ದರೆ ಕೇಂದ್ರ ಸರ್ಕಾರಕ್ಕೂ ಬರೆಯುತ್ತೇನೆ. ಮತ್ತೆ ದೆಹಲಿಗೆ ಹೋದಾಗ ಇದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ನಿಮ್ಮ ಆಶೀರ್ವಾದದಿಂದ ನಾಯಕ ಜನಾಂಗ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಬಹುದೆಂಬ ಆಶಯ ಹೊಂದಿದ್ದೇನೆ. ಅದೇ ರೀತಿ ಹತ್ತಿ ವಿಚಾರದಲ್ಲಿ ಸಿ. ಸಿ. ಐ. ನವರಿಗೆ ಎಲ್ಲಾ ಅನುಕೂಲತೆಗಳನ್ನೂ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಪರ್ಚೇಸ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ, ಹೆಚ್ಚಿನ ಮಟ್ಟಿಗೆ ನಾವೇ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ಮಾರ್ಕೆಟಿಂಗ್ ಫೆಡರೇಷನ್‌ಗೆ ಸಾಧ್ಯವಾದರೆ ಕಾಟನ್ ಪರ್ಚೇಸ್ ಮಾಡುವುದಕ್ಕೆ ಅನುಕೂಲ ಮಾಡಲು ಯತ್ನ ಮಾಡುತ್ತೇವೆಂದು ಹೇಳುತ್ತೇನೆ ಇನ್ನು ವಿಜಯನಗರ ಉಕ್ಕಿನ ಕಾರ್ಖಾನೆ ವಿಚಾರದಲ್ಲಿ, ಇನ್ನೇನು ಅಪ್ರೂವಲ್ ಆಗಿ ಕ್ಯಾಬಿನೆಟ್ ಮುಂದೆ ಹೋಗುವಂಥ ಸ್ಥಿತಿಯಲ್ಲಿದ್ದಾಗ ಚುನಾವಣೆಗಳು ಬಂದವು. ಇವತ್ತು ಅಧಿಕಾರ ಹೋಗುತ್ತದೆ ಮತ್ತೆ ಬರುತ್ತದೆ. ಆದ್ದರಿಂದ ಇದನ್ನು ಮುಂದುವರಿಸುವುದಕ್ಕೆ ಆಗಲಿಲ್ಲ. ಇದನ್ನು ಇಷ್ಟಕ್ಕೇ ಬಿಡುವುದಿಲ್ಲ, ಹಿಂದೆ ಏನು ಪ್ರಯತ್ನ ಮಾಡಿದ್ದೇವೆ. ಆ ಪ್ರಯತ್ನದ ಫಲವಾಗಿ ವಿ. ಐ. ಎಸ್. ಎಲ್. ನ್ನು ಇವತ್ತು ಕೇಂದ್ರ ಸರ್ಕಾರದವರು ವಹಿಸಿಕೊಂಡಿದ್ದಾರೆ.

೫–೩೦ ಪಿ.ಎಂ.

ಇನ್ನು ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ನಾನು ಹಿಂದಿನ ಪ್ರಧಾನಮಂತ್ರಿಯವರ ಜೊತೆಯಲ್ಲಿ ಮಾತನಾಡಿದಾಗ ಅವರು ಆವೇಶಪೂರಿತವಾಗಿ ನೋಡಿ ಪಾಟೀಲರೇ, ಏನೋ ಕಷ್ಟ ಬಂದು ಇದನ್ನು ಮುಂದೆ ಹಾಕಿದ್ದೇವೆ ಬೇಕು, ನಮ್ಮ ತಾಯಿ ಹಾಕಿರತಕ್ಕ ಅಡಿಗಲ್ಲು ಕಲ್ಲಾಗಿ ಉಳಿಯದಂತೆ ನೋಡಿಕೊಳ್ಳುತ್ತೇನೆ ಎಂದು ಭರವಸೆ ಕೊಟ್ಟಿದ್ದರು. ದುರ್ದೈವ ಅವರು ಇವತ್ತು ಮತ್ತೆ ಪ್ರಧಾನಮಂತ್ರಿಗಳಾಗಲಿಲ್ಲ. ಆದರೆ ಇದಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡಿದ್ದರು. ಅದನ್ನು ಈ ಸರಕಾರ ಮುಂದುವರೆಸಿದರೆ ಇದು ಕಾರ್ಯಗತವಾಗುತ್ತದೆ. ಆ ಕನಸು ನನಸಾಗುತ್ತದೆ ಎಂಬ ಭರವಸೆ ನನಗೆ ಇದೆ. ಇದರ ಸಲುವಾಗಿ ವಾಟಾಳ್‌ನಾಗರಾಜ್‌ರವರು ಎಷ್ಟು ಹೋರಾಡುತ್ತಾರೋ ಅದಕ್ಕೂ ಒಂದು ತೂಕ ಹೆಚ್ಚಾಗಿ ಹೋರಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ರಿಸರ್ವೇಷನ್ ಬಗ್ಗೆ ಶಿವಮೂರ್ತಿಯವರು ಕೇಳಿದರು. ನಾವು ಯಾವತ್ತೂ ರಿಸರ್ವೇಷನ್ ಪರ ಇದ್ದೇವೆಯೇ ಹೊರತು ವಿರುದ್ಧ ಇಲ್ಲ. ಯಾರು ಯಾರಿಗೆ ಹಿಂದೆ ರಿಸರ್ವೇಷನ್ ಸಿಕ್ಕಿಲ್ಲ. ಎಲ್ಲಿ ಬ್ಯಾಕ್ ಲಾಗ್ ಇದೆ, ರೋಸ್ಟರ್ ಫಾಲೋ ಆಗಿಲ್ಲ, ಅದನ್ನು ತುಂಬಬೇಕು. ಇದಕ್ಕೆ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿ ತುಂಬಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಯಾರಿಗೂ ಅನ್ಯಾಯ ಆಗುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಹೇಳುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು, ಸಣ್ಣ ಪುಟ್ಟ ವಿಚಾರಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಎಲ್ಲವನ್ನು ಪ್ರಸ್ತಾಪ ಮಾಡುವುದಕ್ಕೆ ಸಮಯ ಇಲ್ಲ. ಮೇಲ್ಮನೆಗೆ ನಾನು ಹೋಗಬೇಕಾಗಿರುತ್ತದೆ.

ಶ್ರೀ ಎಂ. ಮಹದೇವ್.—ಕಬಿನಿ ಎರಡನೇ ಹಂತದ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು

ಶ್ರೀ ಎಂ. ಪಿ. ವೆಂಕಟೇಶ್.—ಕಬಿನಿ ಎರಡನೇ ಹಂತದ ಬಗ್ಗೆ ಹೇಳಬೇಕು.

ಶ್ರೀ ವೀರೇಂದ್ರಪಾಟೀಲ್.—ನೀರಾವರಿ ಬಗ್ಗೆ ನಾನು ಈಗಲೇ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಸ್ಮಶಾನದ ಜಾಗಗಳನ್ನು ಸರಕಾರ ನಿಗದಿ ಮಾಡಬೇಕು ಇದರಿಂದ ಸರಕಾರಕ್ಕೆ ಹಣಕಾಸಿನ ಹೊರೆ ಆಗುವುದಿಲ್ಲ. ಸರಕಾರ ಹಣಕಾಸು ಕೊಡಬೇಕಾಗಿಲ್ಲ. ಸ್ಮಶಾನದ ಜಾಗಗಳನ್ನು ಸರಕಾರ ನಿಗದಿ ಮಾಡುವುದಕ್ಕೆ ಒಂದು ಯೂನಿ ಫಾರಂ ಆದ ಸಮಗ್ರವಾದ ಒಂದು ಯೋಜನೆಯನ್ನು, ರಾಜ್ಯಾದ್ಯಂತ ಪ್ರತಿ ಹಳ್ಳಿಗೆ ಅನ್ವಯವಾಗುವಂತೆ ಜಾರಿ ಮಾಡಬೇಕು.

ಶ್ರೀ ವೀರೇಂದ್ರಪಾಟೀಲ್.—ಅನೇಕ ಸಲಹೆಗಳನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಪ್ರತಿಯೊಂದರ ಬಗ್ಗೆ ಒಮ್ಮೊಮ್ಮೆಗೆ ಹೇಳುವುದಕ್ಕೆ ಕಷ್ಟ ಇದೆ. ಇನ್ನೂ ತಿಳಿದುಕೊಳ್ಳಬೇಕಾದಂಥ ಪರಿಸ್ಥಿತಿ ಇದೆ. ತಾವೆಲ್ಲರೂ ಹೇಳಿದಂಥಹ ಸಲಹೆಗಳನ್ನು ನಮ್ಮ ಅಧಿಕಾರಿಗಳು ಟಿಪ್ಪಣಿ ಮಾಡಿಕೊಂಡಿದ್ದಾರೆ. ಅದರ ಬಗ್ಗೆ ವಿಚಾರ ಮಾಡಿ ತಮಗೆ ತಿಳಿಸುತ್ತೇನೆ. ಈ ರೀತಿಯಿಂದ ತಾವೆಲ್ಲರು ಒಳ್ಳೆಯ ಸೌಹಾರ್ದಯುತ ವಾತಾವರಣದಲ್ಲಿ ನಾಲ್ಕು ದಿವಸದಿಂದಲೂ ಕೆಲಸ ಮಾಡಿದ್ದೀರಿ. ತಾವು ಸಂಪೂರ್ಣ ಸಹಕಾರವನ್ನು ನೀಡಿದ್ದೀರಿ. ತಮ್ಮೆಲ್ಲರಿಗೂ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿ, ಅಧ್ಯಕ್ಷರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಈಗ ಮಾನ್ಯ ಮುಖ್ಯಮಂತ್ರಿಗಳು ಆಡಳಿತ ಸಂಧಾರಣೆಯ ಬಗ್ಗೆ, ಆಡಳಿತ ವ್ಯವಸ್ಥೆಯು ಬಗ್ಗೆ, ಯಾವರೀತಿ ಬ್ಯೂರಾಕ್ರಸಿ ಹೆಚ್ಚಿದೆ ಎನ್ನುವುದರ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಐ.ಎ.ಎಸ್. ಅಧಿಕಾರಿಗಳು, ಟಾಪ್ ಲೆವೆಲ್ ಅಧಿಕಾರಿಗಳು ನಮ್ಮಲ್ಲಿ ಹೆಚ್ಚಾಗಿ ಇದ್ದಾರೆ ಎಂದು ಅವರು ಹೇಳಿದ್ದಾರೆ. ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರತಕ್ಕಂಥ ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಇನ್ನು ಮುಂದೆ ಮೇಲಧಿಕಾರಿಗಳು ಎಂದರೆ, ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳನ್ನು ಕೇಂದ್ರ ಸರಕಾರದವರು ರೆಕ್ರೂಟ್ ಮಾಡಿ, ನಮ್ಮ ರಾಜ್ಯಕ್ಕೆ ಅವರನ್ನು ಎರಡು ವರ್ಷಕ್ಕೊಮ್ಮೆ ಏನು ಅಲಾಟ್ ಮಾಡುತ್ತಾರೆ. ಆ ರೀತಿ ನಮ್ಮ ರಾಜ್ಯಕ್ಕೆ ಅವರು ಕಳುಹಿಸುವುದು ಬೇಡ ಎಂದು ನಮ್ಮ ಸರಕಾರದ ಪಕ್ಷಿಯಿಂದ ಅವರನ್ನು ಒತ್ತಾಯ ಮಾಡಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ನ್ಯಾಯಾಂಗ ಇಲಾಖೆಯೊಡನೆ ಚರ್ಚೆ ಮಾಡಿ ಕೇಂದ್ರಕ್ಕೆ ಒತ್ತಾಯ ಮಾಡಬೇಕೆಂದು ಈ ಮೂಲಕ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಉಗ ಳು.—ಇದು ಸ್ಪಷ್ಟೀಕರಣ ಅಲ್ಲ, ಸೂಚನೆ ಆಯಿತು.

ಶ್ರೀ ಎಂ. ಮಂಜುನಾಥ್.—ತಿಪಟೂರು ಅರಸಿಕೆರೆ ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ. ಇದರ ಬಗ್ಗೆ ಹೇಳಿ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ

"೧೮ನೇ ಡಿಸೆಂಬರ್ ೧೯೮೯ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ, ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ, ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾ ಪೂರಕವಾದ ವಂದನೆಗಳನ್ನು ಸಲ್ಲಿಸಿ ಅಭಿನಂದನೆಯನ್ನು ಕೋರುತ್ತೇವೆ."

ಪ್ರಸ್ತಾವವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು

ಅಧ್ಯಕ್ಷರು.—ವಂದನಾ ನಿರ್ಣಯದ ಪ್ರಸ್ತಾವಕ್ಕೆ ಈ ಸಭೆಯು ಅನುಮೋದನೆ ದೊರಕಿದೆ. ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

ಸಭಾಧ್ಯಕ್ಷರು.—ಮಾನ್ಯ ಸದಸ್ಯರುಗಳೇ, ಈ ಅಲ್ಪಕಾಲಿನ ಅಧಿವೇಶನದ ಸಭೆಯಲ್ಲಿ ತಾವು ಭಾಗವಹಿಸಿ ನನಗೆ ನೀಡಿರತಕ್ಕ ಸಹಕಾರಕ್ಕಾಗಿ, ಹಾಗೂ ಸೌಹಾರ್ದಕ್ಕಾಗಿ ನಾನು ಆಭಾರಿಯಾಗಿದ್ದೇನೆ. ಮುಂದೆ ನಾವು ಮತ್ತೆ ಸಮಾವೇಶಗೊಳ್ಳುವವರೆಗೆ ತಮಗೆಲ್ಲರಿಗೂ ಶುಭವಾಗಲೆಂದು ಹಾರೈಸಿ ಈ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತೇನೆ.

(ಸದನವು ಸಾಯಂಕಾಲ ೫-೩೦ಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು.)

ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.